ವಿಶ್ವವಾಣಿ
ವಿಶ್ವಾಸವೇ ವಿಶ್ವ

ಟೆಸ್ಟ್ ಪೂಜಾರ ನಿವೃತ್ತಿ

ಟೀಂ ಇಂಡಿಯಾ ಟೆಸ್ಟ್ ಕ್ರಿಕೆಟ್‌ನ ಅಗ್ರ ಆಟಗಾರ ಚೇತೇಶ್ವರ ಪೂಜಾರ ಅವರು ಭಾವನಾತ್ಮಕ ಪೋಸ್ಟ್ ಮಾಡುವ ಮೂಲಕ ಎಲ್ಲ ಮೂರು ಮಾದರಿಯ ಕ್ರಿಕೆಟ್‌ಗೆ ಭಾನುವಾರ ನಿವೃತ್ತಿ ಘೋಷಣೆ ಮಾಡಿದ್ದಾರೆ. ಟೀಂ ಇಂಡಿಯಾದಲ್ಲಿ ಅತಿ ಹೆಚ್ಚು ರನ್ ಗಳಿಸಿದ 8ನೇ ಟೆಸ್ಟ್ ಬ್ಯಾಟರ್. ಒಟ್ಟು 103 ಟೆಸ್ಟ್‌ಗಳನ್ನು ಪಂದ್ಯಗಳನ್ನು ಆಡಿದ್ದು, 43.60 ಸರಾಸರಿಯಲ್ಲಿ 7,195 ರನ್ ಗಳಿಸಿದ್ದಾರೆ.

ಸೊಂಪಾದ ಪುಟಗಳು



ಸಿಎಂ ಹುದ್ದೆಯ ರೇಸಿನಿಂದ ಹಿಂದೆ ಸರಿದವರು

ಮೂರ್ತಿಪೂಜೆ
ಆರ್.ಟಿ.ವಿಠ್ಠಲಮೂರ್ತಿ

ಕಲ್ಲು ಎಸೆದರೆ ಮನೆ ಕಟ್ಟಬಹುದು, ಬಾಂಬ್ ಎಸೆದರೆ...?

ವಿದೇಶವಾಸಿ
ಕಿರಣ್ ಉಪಾಧ್ಯಾಯ ಬಹ್ರೈನ್

ದಾರಿದೀಪೋಕ್ತಿ

ಜೀವನದಲ್ಲಿ ಏನೇ ಆಗಲಿ, ಯಾವ ಸಂದರ್ಭದಲ್ಲೂ ನಿಮ್ಮ ಮನಸ್ಸಿನ ಇಚ್ಛೆಗೆ ವಿರುದ್ಧವಾಗಿ ನಡೆದುಕೊಳ್ಳಬಾರದು. ಅಂಥ ಪ್ರಸಂಗ ಬಂದೇ ಬರುತ್ತದೆ. ಆಗ ಒತ್ತಡಕ್ಕೆ ಒಳಗಾಗಬಾರದು. ನಿಮ್ಮ ಮನಸ್ಸು ಏನನ್ನು ಹೇಳುತ್ತದೋ ಹಾಗೇ ಮಾಡಿ.

ವಕ್ರತುಂಡೋಕ್ತಿ

ಸ್ವಚ್ಛವಾದ ಬಟ್ಟೆಯನ್ನೇ ಧರಿಸಬೇಕು. ಆದರೆ ಈ ಮಾತು ಜೀನ್ಸ್ ಪ್ಯಾಂಟಿಗೆ ಅನ್ವಯಿಸುವುದಿಲ್ಲ.

ಎಲ್‌ಪಿಜಿ ಟ್ಯಾಂಕರ್‌ಗೆ ಬೆಂಕಿ, 7 ದುರ್ಮರಣ

ಹೋಶಿಯಾರ್‌ಪುರ: ಪಂಜಾಬ್ ರಾಜ್ಯದ ಹೋಶಿಯಾರ್‌ಪುರ ಬಳಿ ಹೆದ್ದಾರಿಯಲ್ಲಿ ಎಲ್‌ಪಿಜಿ ಬುಲೆಟ್ ಟ್ಯಾಂಕರ್‌ಗೆ ಬೆಂಕಿ ಹೊತ್ತಿಕೊಂಡಿದ್ದರಿಂದ 7 ಮಂದಿ ದುರ್ಮರಣಕ್ಕೀಡಾಗಿದ್ದಾರೆ. 21 ಮಂದಿ ಗಾಯಗೊಂಡಿದ್ದಾರೆ. ಮಂಡಿಯಾಲ ಅಡ್ಡಾ ಬಳಿ ತರಕಾರಿ ಸಾಗಣೆ ವಾಹನಕ್ಕೆ ಡಿಕ್ಕಿಯಾಗಿದ್ದರಿಂದ ಎಲ್‌ಪಿಜಿ ಬುಲೆಟ್ ಟ್ಯಾಂಕರ್‌ಗೆ ಬೆಂಕಿ ಹೊತ್ತಿಕೊಂಡಿತು. ಟ್ಯಾಂಕರ್‌ನಿಂದ ಗ್ಯಾಸ್ ಸೋರಿಕೆಯಾಗಿದ್ದರಿಂದ ಬೆಂಕಿಯ ಜ್ವಾಲೆ ಸಮೀಪದಲ್ಲೇ ಇದ್ದ 15 ಅಂಗಡಿಗಳು, ನಾಲ್ಕು ಮನೆಗಳಿಗೂ ಕ್ಷಣಮಾತ್ರದಲ್ಲಿ ವ್ಯಾಪಿಸಿತು. ಅವಘಡದಲ್ಲಿ ಮೊದಲಿಗೆ ಇಬ್ಬರು ಸ್ಥಳದಲ್ಲೇ ಸಜೀವ ದಹನವಾದರು.

ಕಛ್ ಬಳಿ 15 ಪಾಕ್ ಮೀನುಗಾರರ ಸೆರೆ

ಭುಜ್: ಗುಜರಾತ್‌ನ ಕಚ್ ಜಿಲ್ಲೆಯ ಭಾರತ-ಪಾಕ್ ಗಡಿಯ ಬಳಿ ಗಡಿ ಭದ್ರತಾ ಪಡೆ 15 ಮಂದಿ ಪಾಕಿಸ್ತಾನಿ ಮೀನುಗಾರರನ್ನು ಬಂಧಿಸಿದೆ. ರಾಜ್ಯದ ಕಚ್ ಪ್ರದೇಶದ ಕೊಲ್ಲಿಯಲ್ಲಿ ಗಡಿ ಔಟ್ ಪೋಸ್ಟ್‌ನ ಸಾಮಾನ್ಯ ಪ್ರದೇಶದಲ್ಲಿ ಪತ್ತೆಯಾದ ಅಪರಿಚಿತ ದೋಣಿಯನ್ನು ಬಿಎಸ್‌ಎಫ್ ಯೋಧರು ತಡೆದು ಶೋಧ ಕಾರ್ಯಾಚರಣೆ ನಡೆಸಿದಾಗ ಪಾಕ್ ದೋಣಿ ಪತ್ತೆಯಾಗಿದೆ. ಶೋಧದ ಸಮಯದಲ್ಲಿ, 15 ಪಾಕಿಸ್ತಾನಿ ಮೀನುಗಾರರನ್ನು ಬಂಧಿಸಿ, ಎಂಜಿನ್ ಅಳವಡಿಸಿದ ಕಂಟ್ರಿ ಬೋಟ್ ಅನ್ನು ವಶಕ್ಕೆ ಪಡೆಯಲಾಗಿದೆ ಎಂದು ಬಿಎಸ್‌ಎಫ್ ತಿಳಿಸಿದೆ.

ಆಸ್ತಿ ಮಾಲೀಕರಿಗೆ ಬಿಬಿಎಂಪಿ ನೋಟಿಸ್

ಭುಜ್: ಬಿಬಿಎಂಪಿಯು ಆಸ್ತಿ ತೆರಿಗೆ ವಿಚಾರದಲ್ಲಿ ಕಠಿಣ ಕ್ರಮಗಳನ್ನು ಕೈಗೊಳ್ಳುತ್ತಿದ್ದು, ಬೆಂಗಳೂರಿನ 31,000ಕ್ಕೂ ಅಧಿಕ ಆಸ್ತಿ ಮಾಲೀಕರಿಗೆ ಬಿಸಿ ಮುಟ್ಟಿಸಿದೆ. ಕಡಿಮೆ ಆಸ್ತಿ ತೆರಿಗೆಯನ್ನು ಘೋಷಿಸಿದ ಆರೋಪದ ಮೇಲೆ 31,000ಕ್ಕೂ ಅಧಿಕ ಜನರಿಗೆ ನೋಟಿಸ್ ಜಾರಿ ಮಾಡಿದೆ. ನೋಟಿಸ್ ಬೆನ್ನಲ್ಲೆ, 4,068 ಆಸ್ತಿ ಮಾಲೀಕರು ಇದನ್ನು ಪ್ರಶ್ನಿಸಿದ್ದಾರೆ. ಜುಲೈ ಅಂತ್ಯ ಹಾಗೂ ಆಗಸ್ಟ್ ತಿಂಗಳಿನಲ್ಲಿ ಬೆಂಗಳೂರಿನಲ್ಲಿ ತಪ್ಪಾಗಿ ಆಸ್ತಿ ಘೋಷಿಸಿಕೊಂಡ 31,000 ಸಾವಿರ ಆಸ್ತಿಗಳಿಗೆ ನೋಟಿಸ್ ಜಾರಿ ಮಾಡಲಾಗಿತ್ತು.

ಫನ್‌ತರಂಗ
- ರಘುಪತಿ ಶೃಂಗೇರಿ -

ಅಡುಗೆ ಎಣ್ಣೆಯಿಂದ ಹಾರಲಿವೆ ವಿಮಾನಗಳು – ಹೊಸ ಸಂಶೋಧನೆ



ಸೂತ್ರಧಾರಿಗಳ ಪತ್ತೆಗೆ ತನಿಖೆ, ಸಮೀರ್ ವಿಚಾರಣೆ, ಉಳಿದವರ ವಿಚಾರಣೆಗೆ ಸಿದ್ಧತೆ
ಧರ್ಮಸ್ಥಳ ಪರ ಮುಂದುವರಿದ ಆಂದೋಲನ, ನಾಯಕರ ದಂಡು, ಕಾರ್ ರ‍್ಯಾಲಿ

ಬುರುಡೆ ಕಥೆ ಉತ್ಖನನ ಆರಂಭ

ವಿಶ್ವವಾಣಿ ಸುದ್ದಿಮನೆ ಬೆಂಗಳೂರು

ರಾಷ್ಟ್ರಮಟ್ಟದಲ್ಲಿ ಸದ್ದು ಮಾಡಿದ್ದ 'ಬುರುಡೆ' ಪ್ರಕರಣದ ಸುಳ್ಳಿನ ಕಥೆಗಳು ಒಂದೊಂದಾಗಿ ಬಹಿರಂಗವಾಗುತ್ತಿದೆ. ಈಗಾಗಲೇ ಮಾಸ್ಕ್‌ಮ್ಯಾನ್ ಚಿನ್ನಯ್ಯನ ವಿಚಾರಣ ನಡೆಸುತ್ತಿರುವ ವಿಶೇಷ ತನಿಖಾ ತಂಡಕ್ಕೆ ಹಲವು ಕುತೂಹಲಕಾರಿ ವಿಷಯಗಳು ಬಹಿರಂಗವಾಗಿದೆ. ಈ ನಡುವೆ 'ಎಐ' ಬಳಸಿಕೊಂಡು ಕೊಲೆ ಪ್ರಕರಣವನ್ನೇ ಸ್ಕ್ರಿಪ್ಟ್ ಮಾಡಿದ್ದ ಯೂಟ್ಯೂಬರ್ ಸಮೀರ ಎಸ್‌ಐಟಿ ಮುಂದೆ ಹಾಜರಾಗಿ, ವಿಚಾರಣೆ ಎದುರಿಸಿದ್ದಾನೆ.

ಬುರುಡೆ ರಹಸ್ಯ

ಧರ್ಮಸ್ಥಳ ಅಪಪ್ರಚಾರ ಪ್ರಕರಣದ ಆರೋಪಿ ಯೂಟ್ಯೂಬರ್ ಮೊಹಮ್ಮದ್ ಡಿ. ಸಮೀರ್ ಭಾನುವಾರ ಬೆಳ್ತಂಗಡಿ ಠಾಣೆಗೆ ಹಾಜರಾಗಿ ವಿಚಾರಣೆ ಎದುರಿಸಿದ್ದಾನೆ. ಆತ ಮಾಡಿದ ವಿಡಿಯೊದ ಸ್ಕ್ರಿಪ್ಟ್ ಅನ್ನು ಕೊಟ್ಟು ಮತ್ತೆ ವಾಯ್ಸ್ ಓವರ್ ಸ್ಯಾಂಪಲ್ ಪಡೆದುಕೊಂಡಿದ್ದಾರೆ. ಎಡಿಟಿಂಗ್‌ಗೆ ಬಳಸಿದ ಕಂಪ್ಯೂಟರ್‌ಗಳನ್ನು ಠಾಣೆಗೆ ಒಪ್ಪಿಸುವಂತೆ ಸೂಚಿಸಿದ್ದಾರೆ. ಭಾನುವಾರ ಮಧ್ಯಾಹ್ನ ಮೂವರು ವಕೀಲರ ಜತೆ ಸಮೀರ್ ಎಂಡಿ ಬೆಳ್ತಂಗಡಿ ಪೊಲೀಸ್ ಠಾಣೆಗೆ ಹಾಜರಾಗಿದ್ದು, ಬೆಳ್ತಗಂಡಿ ಪೊಲೀಸರು ಸಮೀರ್ ಎಂಡಿಗೆ ಮೂರು ಬಾರಿ ನೋಟಿಸ್ ನೀಡಿದ್ದರು. ಬಂಧನ ಭೀತಿಯಲ್ಲಿದ್ದ ಸಮೀರ್ ಮಂಗಳೂರು ಕೋರ್ಟ್ ಮೂಲಕ ನಿರೀಕ್ಷಣಾ ಜಾಮೀನು ಪಡೆದಿದ್ದರು. ಹೀಗಾಗಿ ಪೊಲೀಸರು ಬಂಧನ ಕಾರ್ಯಾಚರಣೆ ನಿಲ್ಲಿಸಿದ್ದರು. ಕೋರ್ಟ್ ನೀಡಿದ ಗಡುವು ಅಂತ್ಯಗೊಳ್ಳುತ್ತಿದ್ದಂತೆ ಸಮೀರ್ ಎಂಡಿ ಬೆಳ್ತಂಗಡಿ ಪೊಲೀಸರ ಮುಂದೆ ಹಾಜರಾಗಿದ್ದಾನೆ.

ಭಾನುವಾರ ಸಮೀರ್ ವಿಚಾರಣೆ ಅಂತ್ಯಗೊಂಡಿದ್ದು, ಸೋಮವಾರ ಮತ್ತೆ ವಿಚಾರಣೆಗೆ ಬರಲು ಸೂಚನೆ ಕೊಟ್ಟಿದ್ದಾರೆ. ಭಾನುವಾರ ದಾಖಲೆಗಳ ಮೂಲಕ ಮಾತ್ರ ವಿಚಾರಣೆ ಮಾಡಲಾಗಿದೆ. ವಿಡಿಯೋ ಎಡಿಟಿಂಗ್ ಬಳಸಿದ ಕಂಪ್ಯೂಟರ್ ಹಾಗೂ ಮೊಬೈಲ್ ವಶಕ್ಕೆ ನೀಡುವಂತೆ ಸೂಚನೆ ಕೊಟ್ಟಿದ್ದಾರೆ ಎಂದು ತಿಳಿದು ಬಂದಿದೆ.

ಬೆಂಗಳೂರಿನ ಫ್ರೀಡಂ ಪಾರ್ಕ್‌ನಲ್ಲಿ ಭಾನುವಾರ ಆಯೋಜಿಸಿದ್ದ ಧರ್ಮ ಸಂರಕ್ಷಣಾ ಸಮಾವೇಶದಲ್ಲಿ ಪಾಲ್ಗೊಂಡಿದ್ದ ಜನಸ್ತೋಮ .

ಕ್ರೆಡಿಟ್ ಪಾಲಿಟಿಕ್ಸ್ ಶುರು

ಧರ್ಮಸ್ಥಳ ಪ್ರಕರಣದಲ್ಲಿ ರಾಜಕೀಯ ಲಾಭ ಪಡೆಯಲು ಕಾಂಗ್ರೆಸ್ ಮತ್ತು ಬಿಜೆಪಿ ನಡುವೆ ಜಿದ್ದಾಜಿದ್ದಿ ನಡೆದಿದೆ. ಬಿಜೆಪಿ ಧರ್ಮಸ್ಥಳ ಜಾಥಾ ನಡೆಸುತ್ತಿದ್ದು ಇದರಲ್ಲಿ ಕಾಂಗ್ರೆಸ್ ಹಿಂದೂ ವಿರೋಧಿ ಎಂದು ಬಿಂಬಿಸಲು ಸಿದ್ಧತೆ ನಡೆಸಿದೆ. ಇತ್ತ ಕಾಂಗ್ರೆಸ್ ಶಾಸಕರಿಂದಲೂ ಧರ್ಮಸ್ಥಳ ಚಲೋ ನಡೆಯುತ್ತಿದೆ. ಪುಣ್ಯ ಕ್ಷೇತ್ರದ ಪರ ನಾವಿದ್ದೇವೆ ಎಂದು ಸಂದೇಶ ಕೊಡುತ್ತಿದ್ದಾರೆ. ಪರಸ್ಪರ ಆರೋಪ, ಪ್ರತ್ಯಾರೋಪ, ಕೆಸರೆರಚಾಟ ಆರಂಭವಾಗಿದೆ.

ಫ್ರೀಡಂ ಪಾರ್ಕ್‌ನಲ್ಲಿ ಧರ್ಮಸ್ಥಳ ಪರ ಆಂದೋಲನ

ಪುಣ್ಯಕ್ಷೇತ್ರ ಸಂರಕ್ಷಣಾ ಸಮಿತಿ ವತಿಯಿಂದ ಭಾನುವಾರ ಆಯೋಜಿಸಿದ್ದ ಧರ್ಮ ರಕ್ಷಣಾ ಸಮಾವೇಶದಲ್ಲಿ, ಧರ್ಮಸ್ಥಳ ದೇವಾಲಯದ ಹಾಗೂ ಧರ್ಮಾಧಿಕಾರಿಗಳ ವಿರುದ್ಧ ಷಡ್ಯಂತ್ರ ನಡೆಸಿದವರ ವಿರುದ್ಧ ಕಠಿಣ ಕ್ರಮ ಕೈಗೊಳ್ಳಬೇಕು. ಸಮಾವೇಶದಲ್ಲಿ ಭಾಗವಹಿಸಿದ್ದ ವಾಗ್ಮಿ ಚಕ್ರವರ್ತಿ ಸೂಲಿಬೆಲೆ ಅವರು ಮಾತನಾಡಿ, ಧರ್ಮಸ್ಥಳ ವಿರುದ್ಧ ನಡೆಯುತ್ತಿರುವ ಷಡ್ಯಂತ್ರ ಬಯಲಾಗಿದೆ. ಮಂಜುನಾಥ ಎಲ್ಲರೂ ನಮ್ಮವರೇ ಎಂದು ಸುಮ್ಮನೆ ಇರಬಹುದು. ಆದರೆ ಅಣ್ಣಪ್ಪ ಸ್ವಾಮಿ ಹಾಗಲ್ಲ. ಧರ್ಮಸ್ಥಳದ ವಿರುದ್ಧ ಷಡ್ಯಂತ್ರ ಬಾಹುಬಲಿ ಬೆಟ್ಟ ದಾಟಿ ಕ್ಷೇತ್ರದ ಕಡೆ ಬರುತ್ತಿದ್ದಂತೆ ಅಣ್ಣಪ್ಪ ಸ್ವಾಮಿ ಮೆಟ್ಟಿಲಲ್ಲೇ ತೀರ್ಮಾನ ಮಾಡಿದ್ದಾನೆ ಎಂದು ಹೇಳಿದ್ದಾರೆ.

ಚಿನ್ನಯ್ಯ ತಂದ ಬುರುಡೆಗೆ ದೆಹಲಿ ನಂಟು?

ಬುರುಡೆ ವ್ಯಕ್ತಿ ಚಿನ್ನಯ್ಯನ ವಿಚಾರಣೆ ವೇಳೆ, ಬುರುಡೆ ಪ್ರಕರಣದ ಧರ್ಮಸ್ಥಳವನ್ನು ಟಾರ್ಗೆಟ್ ಮಾಡಿದ್ದರೂ, ಈ ಸುಳ್ಳಿನ ಕಂತೆಗೆ ನಿರ್ದೇಶನ ದೆಹಲಿಯಲ್ಲಿ ನಡೆದಿತ್ತು ಎನ್ನುವ ಅಂಶ ಬಹಿರಂಗವಾಗಿದೆ. ಚಿನ್ನಯ್ಯ ತಂದಿದ್ದ ಬುರುಡೆ ಧರ್ಮಸ್ಥಳ ಪ್ರವೇಶಿಸುವ ಮುನ್ನವೇ ದೆಹಲಿಗೆ ತಂದಿದ್ದನಂತೆ. ಈ ಷಡ್ಯಂತ್ರದ ಗ್ಯಾಂಗ್ ಚಿನ್ನಯ್ಯನ ಸಮೇತ ಬುರುಡೆಯನ್ನು ದೆಹಲಿಗೆ ತೆಗೆದುಕೊಂಡು ಹೋಗಿ ಅಲ್ಲಿ ಪ್ರತಿಷ್ಠಿತ ವ್ಯಕ್ತಿಗಳನ್ನು ಭೇಟಿಯಾಗಿ ಬುರುಡೆಯನ್ನು ತೋರಿಸಿದ್ದಾನೆ. ಅಲ್ಲಿ ಬುರುಡೆ ಸಮೇತ ಇಡೀ ಪ್ರಕರಣದ ಕತೆಯನ್ನು ಹೇಳಲಾಗಿತ್ತು. ಆದರೆ ಆ 'ಪ್ರಭಾವಿ'ಗಳು ಯಾರು ಎನ್ನುವ ಪ್ರಶ್ನೆಗೆ ಈವರೆಗೆ ಉತ್ತರ ಸಿಕ್ಕಿಲ್ಲ ಎನ್ನಲಾಗಿದೆ.

ಭಾನುವಾರವೂ ಹಲವರಿಂದ ಧರ್ಮಸ್ಥಳ ರ‍್ಯಾಲಿ

ಈ ನಡುವೆ ಧರ್ಮಸ್ಥಳದ ಪರವಾಗಿ ರ‍್ಯಾಲಿ ಮಾಡುವವರ ಸಂಖ್ಯೆ ದಿನದಿಂದ ದಿನಕ್ಕೆ ಹೆಚ್ಚಾಗುತ್ತಿದ್ದು, ಬಿಜೆಪಿ ನಾಯಕರ ಸೂಚನೆ ಮೇರೆಗೆ ಸ್ಥಳೀಯ ಕಾರ್ಯಕರ್ತರೊಂದಿಗೆ ಶಾಸಕರು, ಮಾಜಿ ಶಾಸಕರು ಧರ್ಮಸ್ಥಳ ರ‍್ಯಾಲಿ ಆರಂಭಿಸಿದ್ದಾರೆ. ಕೇವಲ ಬಿಜೆಪಿ ಶಾಸಕರಷ್ಟೇ ಅಲ್ಲದೇ, ವಕೀಲರು ವಿವಿಧ ಕ್ಷೇತ್ರದಲ್ಲಿ ತೊಡಗಿಸಿಕೊಂಡಿರುವ ಅನೇಕರು ತಮ್ಮ ತಮ್ಮ ಗುಂಪು ಮಾಡಿಕೊಂಡು ಧರ್ಮಸ್ಥಳ ಪರವಾಗಿ ರ‍್ಯಾಲಿಗಳನ್ನು ನಡೆಸುತ್ತಿದ್ದಾರೆ. ಭಾನುವಾರವೂ, ಶಾಸಕ ಸಿ.ಕೆ ರಾಮಮೂರ್ತಿ, ಬೆಂಗಳೂರು ವಕೀಲರ ಸಂಘ ಸೇರಿದಂತೆ ವಿವಿಧ ಸಂಘಟನೆಗಳ ನಾಯಕರು ಧರ್ಮಸ್ಥಳ ರ‍್ಯಾಲಿ ನಡೆಸುವ ಮೂಲಕ 'ಬಲ' ಪ್ರದರ್ಶನ ಮಾಡಿದ್ದಾರೆ.

ಬೆಂಗಳೂರಲ್ಲೇ ಸುಜಾತ ಭಟ್ ವಿಚಾರಣೆ?

ಇಡೀ ಪ್ರಕರಣದಲ್ಲಿ ಸದಾ 'ಗೊಂದಲ'ದ ಹೇಳಿಕೆಯಿಂದ ತನ್ನ ಸುಳ್ಳನ್ನು ಬಯಲು ಮಾಡಿರುವ ಸುಜಾತ ಭಟ್ ವಿಚಾರಣೆಗೆ ಎಸ್‌ಐಟಿ ಸಿದ್ಧತೆ ನಡೆಸಿಕೊಂಡಿದೆ. ಆದರೆ ವಯಸ್ಸಿನ ಕಾರಣ ಹಾಗೂ ಭದ್ರತೆಯ ದೃಷ್ಟಿಯಿಂದ ತನಿಖೆಗೆ ಹಾಜರಾ ಗಲು ಸಾಧ್ಯವಾಗಿಲ್ಲವೆಂದು ಸುಜಾತ ಹೇಳಿದ್ದಾರೆ. ಆದ್ದರಿಂದ ಸುಜಾತ ಭಟ್ ನೆಲೆಸಿರುವ ಬನಶಂಕರಿಯ ನಿವಾಸದಲ್ಲಿಯೇ ಇನ್ನೆರೆಡು ದಿನದಲ್ಲಿ ವಿಚಾರಣೆ ನಡೆಸಲು ತೀರ್ಮಾನಿಸಲಾ ಗಿದೆ ಎಂದು ವಿಶೇಷ ತಂಡದ ಮೂಲಗಳು ತಿಳಿಸಿವೆ. ಹಿರಿಯ ನಾಯಕರನ್ನು ಮನೆಯಲ್ಲಿಯೇ ವಿಚಾರಣೆ ನಡೆಸಲು ಅವಕಾಶವಿರುವುದರಿಂದ ಈ ತೀರ್ಮಾನಕ್ಕೆ ಬರಲಾಗಿದೆ ಎಂದು ತಿಳಿದುಬಂದಿದೆ.



ಧರ್ಮಸ್ಥಳದ ವಿಚಾರವಾಗಿ ಈಗಾಗಲೇ ಸಾಕಷ್ಟು ಮಾತನಾಡಿದ್ದೇನೆ. ಬಿಜೆಪಿ ಇದರಲ್ಲಿ ರಾಜಕೀಯ ಮಾಡುತ್ತಿದೆ. ಅವರು ಬಾಯಿ ಮುಚ್ಚಿಕೊಳ್ಳಬೇಕು. ಬಿಜೆಪಿಯಲ್ಲಿ ಎರಡು ಬಣಗಳಿವೆ. ಹೀಗಾಗಿ ಈ ರೀತಿ ಮಾಡುತ್ತಿದ್ದಾರೆ. ಅವರು ತಮ್ಮ ವೈಫಲ್ಯಗಳನ್ನು ನಮ್ಮ ಮೇಲೆ ಹಾಕುವ ಪ್ರಯತ್ನ ಮಾಡುತ್ತಿದ್ದಾರೆ. ನಾವು ಸತ್ಯಾಂಶವನ್ನು ಜನರ ಮುಂದಿಡುತ್ತಿದ್ದೇವೆ.

-ಡಿ.ಕೆ.ಶಿವಕುಮಾರ್, ಉಪಮುಖ್ಯಮಂತ್ರಿ

ಹಿಂದೂ ಧಾರ್ಮಿಕ ಕೇಂದ್ರಗಳನ್ನು ಟಾರ್ಗೆಟ್ ಮಾಡಲಾಗಿದೆ. ಈ ನಿಟ್ಟಿನಲ್ಲಿ ವ್ಯವಸ್ಥಿತ ಷಡ್ಯಂತ್ರಗಳು ನಡೆಯುತ್ತಿವೆ. ಧರ್ಮಸ್ಥಳ ವಿಚಾರದಲ್ಲಿ ಎಸ್‌ಐಟಿ ರಚನೆಯಾದಾಗ ಸಾಕಷ್ಟು ಅನುಮಾನ ಸೃಷ್ಟಿಯಾಗಿತ್ತು. ಎಸ್‌ಐಟಿಗೆ ಎಲ್ಲರೂ ಸ್ವಾಗತ ಮಾಡಿದ್ದರು. ತನಿಖೆ ಕಾಲಮಿತಿಯಲ್ಲಿ ಪೂರ್ಣಗೊಳ್ಳಲಿ ಎಂದಿದ್ದೇವೆ. ಆದರೆ ಸರಕಾರದವರೇ ಒಂದೊಂದು ರೀತಿ ಮಾತಾಡಿದರು.

-ಡಾ.ಸಿ.ಎನ್. ಅಶ್ವತ್ಥನಾರಾಯಣ, ಮಾಜಿ ಉಪಮುಖ್ಯಮಂತ್ರಿ

ಸೆ.3-4ಕ್ಕೆ ಜಿಎಸ್‌ಟಿ ಸಮಿತಿ ಮಹತ್ವದ ಸಭೆ

ದೆಹಲಿ: 'ಸರಕು ಮತ್ತು ಸೇವೆಗಳ ತೆರಿಗೆ' (ಜಿಎಸ್‌ಟಿ) ಮಂಡಳಿಯ 56ನೇ ಸಭೆ ಸೆ.3 ಮತ್ತು 4ರಂದು ದೆಹಲಿಯಲ್ಲಿ ಆಯೋಜನೆಯಾಗಿದ್ದು, ಪ್ರಧಾನಿ ನರೇಂದ್ರ ಮೋದಿ ಅವರು ಈ ಮೊದಲೇ ಸುಳಿವು ನೀಡಿರುವಂತೆ ಮಹತ್ವದ ಪ್ರಕಟನೆ ಹೊರಬೀಳುವ ನಿರೀಕ್ಷೆ ಇದೆ.

ರಾಜ್ಯಗಳ ಹಣಕಾಸು ಸಚಿವರು, ವಾಣಿಜ್ಯ ಖಾತೆ ಸಚಿವರು ಸೇರಿದಂತೆ ಜಿಎಸ್‌ಟಿ ಸಮಿತಿಯ ಸದಸ್ಯರಿಗೆ ಕಳುಹಿಸಲಾಗಿರುವ ನೋಟಿಸ್ ಪ್ರಕಾರ ಎರಡೂ ದಿನ ಬೆಳಗ್ಗೆ 11 ಗಂಟೆಗೆ ಸಭೆಯ ಕಾರ್ಯಕಲಾಪ ಪ್ರಾರಂಭವಾಗುತ್ತವೆ. ಇದಕ್ಕೂ ಮುನ್ನ ಮಹತ್ವದ ಜಿಎಸ್‌ಟಿ ಸಭೆಯ ಸಿದ್ಧತೆಗಾಗಿ ಸೆ.2ರಂದು ದೆಹಲಿಯಲ್ಲಿ ಹಣಕಾಸು ಮತ್ತು ವಾಣಿಜ್ಯ ಸಚಿವಾಲಯಗಳ ಉನ್ನತ ಅಧಿಕಾರಿಗಳ ಸಭೆ ನಡೆಯಲಿದೆ. ಸಭೆಯ ಕಾರ್ಯಸೂಚಿ, ಸ್ಥಳದ ವಿವರ ಮೊದಲಾದ ಮಾಹಿತಿಗಳನ್ನು ಮುಂಬರುವ ದಿನಗಳಲ್ಲಿ ಸದಸ್ಯರ ಜತೆ ಹಂಚಿಕೊಳ್ಳಲಾಗುವುದು ಎಂದು ಸೂಚನಾ ಪತ್ರದಲ್ಲಿ ತಿಳಿಸಲಾಗಿದೆ.

ಬೆಂಗಳೂರು ಸೇರಿದಂತೆ ಹಲವೆಡೆ ಸಂಪರ್ಕ ಸಮಸ್ಯೆ

ಏರ್‌ಟೆಲ್ ಮತ್ತೆ ನಾಟ್‌ರೀಚೆಬಲ್

ದೆಹಲಿ: ಕಳೆದ ಸೋಮವಾರವಷ್ಟೇ ದೇಶದಾದ್ಯಂತ ನೆಟ್‌ವರ್ಕ್ ಸಮಸ್ಯೆ ಎದುರಿಸಿದ್ದ ಏರ್‌ಟೆಲ್ ಗ್ರಾಹಕರು ಭಾನುವಾರ ಮತ್ತೆ ಇದೇ ಸಮಸ್ಯೆ ಎದುರಿಸಿದರು. ಡೌನ್‌ಡೆಕ್ಟರ್ ನಕ್ಷೆಯ ಪ್ರಕಾರ, ಬೆಂಗಳೂರಿನ ಹೊರತಾಗಿ, ಚೆನ್ನೈ, ಹೈದರಾಬಾದ್, ಕೋಲ್ಕತ್ತಾ ಮತ್ತು ಇತರ ಕೆಲವು ನಗರಗಳಲ್ಲಿನ ಬಳಕೆದಾರರು ನೆಟ್‌ವರ್ಕ್ ಸಮಸ್ಯೆಯಿಂದ ಪರದಾಡಿದ್ದಾರೆ. ತಾಂತ್ರಿಕ ಕ್ರ್ಯಾಶ್‌ಗಳನ್ನು ಟ್ರ್ಯಾಕ್ ಮಾಡುವ ವೆಬ್‌ಸೈಟ್ ಡೌನ್‌ಡಿಟೆಕ್ಟರ್ ಪ್ರಕಾರ, ಏರ್‌ಟೆಲ್ ಸಂಪರ್ಕ ಸ್ಥಗಿತದ ಬಗ್ಗೆ ಏಳು ಸಾವಿರಕ್ಕೂ ಹೆಚ್ಚು ದೂರುಗಳು ಬಂದಿವೆ.

ಸಂಪರ್ಕದಲ್ಲಿನ ತಾತ್ಕಾಲಿಕ ಅಡಚಣೆಯಿಂದಾಗಿ ಈ ಸಮಸ್ಯೆ ಉಂಟಾಗಿದೆ. ಒಂದು ಗಂಟೆಯೊಳಗೆ ಸಮಸ್ಯೆ ಬಗೆಹರಿಯುವ ನಿರೀಕ್ಷೆಯಿದೆ ಎಂದು ಕಂಪನಿ ತಿಳಿಸಿದರೂ ಹಲವು ಗಂಟೆಗಳ ಕಾಲ ಸಂಪರ್ಕ ಕಡಿತಗೊಂಡಿತ್ತು. ಈ ಕುರಿತು ಟ್ವೀಟ್ ಮಾಡಿರುವ ಏರ್‌ಟೆಲ್, ಸೇವೆಗಳನ್ನು ಮರು ಸ್ಥಾಪಿಸಲು ಮೊಬೈಲ್ ಫೋನ್ ಸ್ವಿಚ್ ಆಫ್ ಮಾಡಿ ಆನ್ ಮಾಡಲು ತಿಳಿಸಿದೆ. ಅನೇಕ ಬಳಕೆದಾರರು ಸಾಮಾಜಿಕ ಮಾಧ್ಯಮದಲ್ಲಿ ಈ ಅಡಚಣೆಯ ಬಗ್ಗೆ ಪ್ರತಿಕ್ರಿಯಿಸಿದ್ದಾರೆ. ಕೆಲವರು ಕಂಪನಿಯು ಕನಿಷ್ಠ ಪಕ್ಷ ತನ್ನ ಬಳಕೆದಾರರಿಗೆ ಈ ಅಡಚಣೆಯ ಬಗ್ಗೆ ತಿಳಿಸಬೇಕು ಎಂದು ಹೇಳಿದ್ದಾರೆ. ಕಳೆದ 6 ಗಂಟೆಗಳಿಂದ ಏರ್‌ಟೆಲ್ ಪೋಸ್ಟ್‌ಪೇಯ್ಡ್ ಸಂಪರ್ಕ ಕಡಿತಗೊಂಡಿದೆ ಎಂದು ಗ್ರಾಹಕರೊಬ್ಬರು ಅಳಲು ತೋಡಿಕೊಂಡಿದ್ದಾರೆ.

ಅಕ್ರಮ ಬೆಟ್ಟಿಂಗ್ ಪ್ರಕರಣ: ಕಾಂಗ್ರೆಸ್ ಶಾಸಕನಿಗೆ ಗ್ರಿಲ್

14 ದಿನ ಪಪ್ಪಿ ಇಡಿ ವಶಕ್ಕೆ

ಬೆಂಗಳೂರು: ಅಕ್ರಮ ಬೆಟ್ಟಿಂಗ್ ಪ್ರಕರಣದಲ್ಲಿ ಸಿಲುಕಿದ್ದ ಚಿತ್ರದುರ್ಗದ ಕಾಂಗ್ರೆಸ್ ಶಾಸಕ ಕೆ.ಸಿ. ವೀರೇಂದ್ರ ಪಪ್ಪಿ ಅವರನ್ನು ಆ.28ರ ವರೆಗೆ ಜಾರಿ ನಿರ್ದೇಶನಾಲಯದ ವಶಕ್ಕೆ ನೀಡಿ ಬೆಂಗಳೂರಿನ ನ್ಯಾಯಾಲಯ ಆದೇಶ ಹೊರಡಿಸಿದೆ.

ಬೆಟ್ಟಿಂಗ್ ಪ್ರಕರಣದಲ್ಲಿ ತೊಡಗಿರುವ ಆರೋಪದ ಮೇಲೆ ಶಾಸಕ ಕೆ.ಸಿ.ವೀರೇಂದ್ರ ಪಪ್ಪಿ ಇ.ಡಿ ಅಧಿಕಾರಿಗಳು ಆ.22ರಂದು ಸಿಕ್ಕಿಂನ ಗ್ಯಾಂಗ್ಟಕ್‌ನಲ್ಲಿ ಬಂಧಿಸಿದ್ದರು. ಸ್ಥಳೀಯ ನ್ಯಾಯಾಲಯದ ಅನುಮತಿ ಪಡೆದು ಭಾನುವಾರ ಬೆಳಗ್ಗೆ ಇಡಿ ಅಧಿಕಾರಿಗಳು ಪಪ್ಪಿ ಅವರನ್ನು ಬಿಗಿ ಭದ್ರತೆ ನಡುವೆ ಬೆಂಗಳೂರಿಗೆ ಕರೆತಂದರು. ವೀರೇಂದ್ರ ಅವರ ಬಳಿ 25 ಕೋಟಿ ರೂಪಾಯಿಗಳಿಗೆ ಅಧಿಕ ಮೊತ್ತದ ನಗದು, ವಿದೇಶಿ ಕರೆನ್ಸಿ, ಕೆ.ಜಿ.ಗಟ್ಟಲೇ ಚಿನ್ನ ಮತ್ತು ಬೆಳ್ಳಿಯ ಆಭರಣಗಳು ಪತ್ತೆಯಾಗಿವೆ. ಅವರು ವಿದೇಶದಲ್ಲಿ ವ್ಯವಹಾರ ನಡೆಸುತ್ತಿರುವುದು ದೃಢವಾಗಿದೆ. ಅವರನ್ನು 14 ದಿನಗಳ ಕಾಲ ಇಡಿ ವಶಕ್ಕೆ ನೀಡಬೇಕು ಎಂದು ಇಡಿ ಪರ ವಕೀಲರು ನ್ಯಾಯಾಲಯವನ್ನು ಮನವಿ ಮಾಡಿದರು. ಎರಡೂ ಕಡೆಯ ವಾದವನ್ನು ಆಲಿಸಿದ 35ನೇ ಸಿಸಿಎಚ್‌ನ ನ್ಯಾಯಾಧೀಶ ಸೈಯದ್ ಬಿ. ರೆಹಮಾನ್, ವೀರೇಂದ್ರ ಅವರನ್ನು ಅ.28ರ ವರೆಗೆ ಇಡಿ ವಶಕ್ಕೆ ನೀಡಿ ಆದೇಶ ಹೊರಡಿಸಿದರು.

ಹೇಮಾವತಿ ನಾಲೆಗೆ ಬಿದ್ದ ಕಾರು: ಇಬ್ಬರು ನಾಪತ್ತೆ

ಹಾಸನ: ಹೊಳೆನರಸೀಪುರ ತಾಲೂಕಿನ ಹರಳಹಳ್ಳಿ ಗ್ರಾಮದ ಬಳಿ ಹೇಮಾವತಿ ಎಡದಂಡೆ ನಾಲೆಗೆ ಕಾರು ಬಿದ್ದ ದಾರುಣ ಘಟನೆಯಲ್ಲಿ ಇಬ್ಬರು ಸಾವನ್ನಪ್ಪಿರುವ ಶಂಕೆ ವ್ಯಕ್ತವಾಗಿದೆ.

ಪ್ರೇಮಕುಮಾರ್ ಆ.17ರಿಂದ ನಾಪತ್ತೆಯಾಗಿದ್ದು, ಅವರ ತಂದೆ ತಿಮ್ಮೇಗೌಡರು ಶಾಂತಿಗ್ರಾಮ ಪೊಲೀಸ್ ಠಾಣೆಯಲ್ಲಿ ದೂರು ದಾಖಲಿಸಿದ್ದಾರೆ. ಈಗ ಕಾರು ಹೇಮಾವತಿ ಎಡದಂಡೆ ನಾಲೆಯಲ್ಲಿ ಪತ್ತೆಯಾದ ಹಿನ್ನೆಲೆಯಲ್ಲಿ ಪ್ರೇಮಕುಮಾರ್ ಈ ದುರ್ಘಟನೆಯಲ್ಲಿ ಸಾವಿಗೀಡಾಗಿರಬಹುದು ಎನ್ನಲಾಗಿದೆ. ಆ.23, 2025ರ ರಾತ್ರಿ

ಪ್ರೇಮಕುಮಾರ್

ಹರಳಹಳ್ಳಿ ಗ್ರಾಮದ ಸಮೀಪದ ಹೇಮಾವತಿ ಎಡದಂಡೆ ನಾಲೆಗೆ ಕಾರೊಂದು ಆಕಸ್ಮಿಕವಾಗಿ ಬಿದ್ದಿದೆ ಎಂದು ಶಂಕಿಸಲಾಗಿದೆ. ಸ್ಥಳೀಯರು ಕಾರಿನ ಹಿಂಭಾಗವನ್ನು ನಾಲೆಯಲ್ಲಿ ಕಂಡು, ತಕ್ಷಣವೇ ಹೊಳೆನರಸೀಪುರ ನಗರ ಪೊಲೀಸ್ ಠಾಣೆಗೆ ಮಾಹಿತಿ ನೀಡಿದ್ದಾರೆ. ಘಟನಾ ಸ್ಥಳಕ್ಕೆ ದೌಡಾಯಿಸಿದ ಪೊಲೀಸರು ಮತ್ತು ಅಗ್ನಿಶಾಮಕ ದಳದ ಸಿಬ್ಬಂದಿ, ಸ್ಥಳೀಯರ ಸಹಕಾರದೊಂದಿಗೆ ಕಾರನ್ನು ನಾಲೆಯಿಂದ ಮೇಲಕ್ಕೆ ಎತ್ತಿದ್ದಾರೆ. ಮೇಲಕ್ಕೆತ್ತಿದ ಕಾರನ್ನು ಪರಿಶೀಲಿಸಿದ ಪೊಲೀಸರು, ಕಾರು ಕೊಂತಗೋಡನಹಳ್ಳಿ ಗ್ರಾಮದ ಪ್ರೇಮಕುಮಾರ್ ಅವರಿಗೆ ಸೇರಿದ್ದು ಎಂದು ಗುರುತಿಸಲಾಗಿದೆ. ಪ್ರೇಮಕುಮಾರ್‌ಗಾಗಿ ಪೊಲೀಸರು ಮತ್ತು ಅಗ್ನಿಶಾಮಕ ದಳದ ಶೋಧ ಕಾರ್ಯವನ್ನು ತೀವ್ರಗೊಳಿಸಿದ್ದಾರೆ.

ಡಿಆರ್‌ಡಿಒ ನಿರ್ಮಿತ ಸಮಗ್ರ ವೈಮಾನಿಕ ರಕ್ಷಣಾ ವ್ಯವಸ್ಥೆಯ ಪರೀಕ್ಷೆ ಯಶಸ್ವಿ

ಭಾರತದ ವಾಯುಸೀಮೆಗೆ ಸ್ವದೇಶಿ ಕವಚ

- ಒಡಿಶಾ ಕರಾವಳಿಯಲ್ಲಿ ಮೊದಲ ಕ್ಷಿಪಣಿ ಪ್ರಯೋಗ ಯಶಸ್ವಿ
- ಇಸ್ರೇಲ್‌ನ ಐರನ್ ಡೋಮ್, ರಷ್ಯಾದ ಎಸ್-400 ಮಾದರಿ
- ಶತ್ರು ಕ್ಷಿಪಣಿ, ಡ್ರೋನ್ ಆಕಾಶದಲ್ಲಿದ್ದಾಗಲೇ ಪೂರ್ಣನಾಶ

ದೆಹಲಿ: 'ಆತ್ಮನಿರ್ಭರ ಭಾರತ'ದ ಪರಿಕಲ್ಪನೆಯಲ್ಲಿಯೇ ಭಾರತ ತನ್ನ ರಕ್ಷಣಾ ವ್ಯವಸ್ಥೆಯಲ್ಲಿ ದೊಡ್ಡ ಹೆಜ್ಜೆಗಳನ್ನು ಇಡುತ್ತಿದೆ. ಒಡಿಶಾ ಕರಾವಳಿ ಯಲ್ಲಿ ಭಾನುವಾರ ದೇಶೀಯವಾಗಿಯೇ ಅಭಿವೃದ್ಧಿಪಡಿಸಿದ 'ಸಮಗ್ರ ವಾಯು ರಕ್ಷಣಾ ಶಸ್ತ್ರಾಸ್ತ್ರ ವ್ಯವಸ್ಥೆ' (ಐಎಡಿಡಬ್ಲ್ಯುಎಸ್)ಯ ಪ್ರಯೋಗಾರ್ಥ ಪರೀಕ್ಷೆ ಯಶಸ್ವಿಯಾಗಿದೆ.

ವೈಮಾನಿಕ ದಾಳಿಯಿಂದ ರಕ್ಷಿಸಿಕೊಳ್ಳುವಲ್ಲಿ ರಷ್ಯಾದ ಎಸ್-400 ಸಮಗ್ರ ವಾಯು ರಕ್ಷಣಾ ವ್ಯವಸ್ಥೆಯನ್ನು ಅವಲಂಬಿಸಿರುಬ ಭಾರತ ಇದೀಗ ತನ್ನದೇ ಇಂಟಿಗ್ರೇಟೆಡ್ ಏರ್ ಡಿಫೆನ್ಸ್ ವೆಪನ್ ಸಿಸ್ಟಮ್ ರೂಪಿಸುವಲ್ಲಿ ಮುಂದಡಿ ಇಟ್ಟಿದೆ. ಶತ್ರು ರಾಷ್ಟ್ರದ ಕ್ಷಿಪಣಿ, ಡ್ರೋನ್‌ಗಳನ್ನು ಆಕಾಶದಲ್ಲಿರುವಾ ಗಲೇ ನಾಶಪಡಿಸುವ ಕ್ಷಿಪಣಿಯ ಮೊದಲ ಪರೀಕ್ಷೆ ಯಶಸ್ವಿಯಾಗಿದೆ. ಆ ಮೂಲಕ ಶತ್ರುದೇಶಗಳ ವೈಮಾನಿಕ ದಾಳಿಗಳಿಂದ ದೇಶವನ್ನು ಪೂರ್ಣವಾಗಿ ರಕ್ಷಿಸಬಲ್ಲ ಸಮರಾಸ್ತ್ರ ವ್ಯವಸ್ಥೆಯ ಸಾಮರ್ಥ್ಯವನ್ನು ಖಾತರಿಪಡಿಸಿಕೊಂಡಂತಾಗಿದೆ. ಈ ಹೊಸ ಅಸ್ತ್ರ ಶತ್ರುಗಳ ದಾಳಿ ತಡೆಯುವುದು ಮಾತ್ರವಲ್ಲ, ಪ್ರತಿದಾಳಿ ಮೂಲಕ ಶತ್ರುಗಳ ಶಸ್ತ್ರಾಸ್ತ್ರಗಳನ್ನು ನಾಶ ಮಾಡಲಿದೆ. → 4

ರಾಜನಾಥ್ ಸಿಂಗ್ ಅಭಿನಂದನೆ

'ಐಎಡಿಡಬ್ಲ್ಯುಎಸ್' ಪ್ರಯೋಗ ಮೊದಲ ಯತ್ನದಲ್ಲೇ ಯಶ ಕಂಡಿರುವುದಕ್ಕೆ ರಕ್ಷಣಾ ಸಚಿವ ರಾಜನಾಥ್ ಸಿಂಗ್ ಅವರು ಡಿಆರ್‌ಡಿಒ ಮತ್ತು ವಿಜ್ಞಾನಿಗಳನ್ನು ಅಭಿನಂದಿಸಿದ್ದಾರೆ. 'ಐಎಡಿಡಬ್ಲ್ಯುಎಸ್'ನ ಯಶಸ್ವಿ ಅಭಿವೃದ್ಧಿಗಾಗಿ ಡಿಆರ್‌ಡಿಒ, ಭಾರತೀಯ ಸಶಸ್ತ್ರ ಪಡೆಗಳು ಮತ್ತು ರಕ್ಷಣಾ ಕ್ಷೇತ್ರದ ಉದ್ಯಮಗಳನ್ನು ಹೃತ್ಪೂರ್ವಕವಾಗಿ ಅಭಿನಂದಿಸುವೆ' ಎಂದು ರಾಜನಾಥ್ ಸಿಂಗ್ 'ಎಕ್ಸ್' ಸಂದೇಶದಲ್ಲಿ ಬರೆದಿದ್ದಾರೆ.

ಸಮಾಚಾರ ಸಣ್ಣದಲ್ಲ

ಶಿಕ್ಷಣದೊಂದಿಗೆ ಕೌಶಲ, ಜ್ಞಾನ ಅಗತ್ಯ

ಹಳಿಯಾಳ: ಶಿಕ್ಷಣ ಪಡೆಯುವುದು ಕೇವಲ ಉದ್ಯೋಗಕ್ಕಷ್ಟೇ ಸೀಮಿತವಾಗಬಾರದು, ಬದಲಿಗೆ ಕೌಶಲ ಮತ್ತು ಜ್ಞಾನವನ್ನು ವೃದ್ಧಿಸಿಕೊಳ್ಳುವುದು ಅಗತ್ಯ ಎಂದು ಪ್ರಾಚಾರ್ಯ ಡಾ. ದತ್ತಾತ್ರೇಯ ಗಾಂವ್ಕರ್ ಹೇಳಿದರು.

ಅವರು ಹಳಿಯಾಳದ ಕೆ.ಎಲ್.ಎಸ್. ಪದವಿ ಮಹಾವಿದ್ಯಾಲಯದಲ್ಲಿ ನಡೆದ 'ಲಕ್ಷ್ಯ-2025' ಕಾರ್ಯಕ್ರಮದಲ್ಲಿ ಮಾತನಾಡಿದರು. ಇತರ ಪ್ರಾಣಿಗಳಿಗೆ ಇಲ್ಲದ ಒತ್ತಡಗಳು ಮಾನವನಿಗಿವೆ. ವೇಗವಾಗಿ ಬದಲಾಗುತ್ತಿರುವ ಇಂದಿನ ಜಗತ್ತಿನಲ್ಲಿ, ಪಾರಂಪರಿಕ ಕಲಿಕೆಯೊಂದಿಗೆ ಹೊಸ ಕೌಶಲಗಳನ್ನು ರೂಢಿಸಿಕೊಳ್ಳುವುದು ಅನಿವಾರ್ಯ. ಆನಂದಮಯ ಜೀವನಕ್ಕಾಗಿ ಉತ್ತಮ ಹವ್ಯಾಸಗಳನ್ನು ಬೆಳೆಸಿಕೊಳ್ಳಿ, ಎಂದು ವಿದ್ಯಾರ್ಥಿಗಳಿಗೆ ಕಿವಿಮಾತು ಹೇಳಿದರು.

ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದ ಕಾಲೇಜಿನ ಪ್ರಾಚಾರ್ಯರಾದ ಶ್ರೀನಿವಾಸ ಪ್ರಭು ಮಾತನಾಡಿ, ವಿದ್ಯಾರ್ಥಿಗಳು ಕಾಲೇಜು, ಪೋಷಕರು ಮತ್ತು ಸಮಾಜಕ್ಕೆ ವಿಧೇಯರಾಗಿ, ಉಜ್ವಲ ಭಾರತದ ಭವಿಷ್ಯಕ್ಕೆ ಕೊಡುಗೆ ನೀಡಬೇಕು ಎಂದರು.

ಈ ಸಂದರ್ಭದಲ್ಲಿ, 2024-25ರ ಬಿಸಿಎ ಕೋರ್ಸ್‌ನಲ್ಲಿ ಅತಿ ಹೆಚ್ಚು ಅಂಕ ಗಳಿಸಿದ ವಿದ್ಯಾರ್ಥಿಗಳಾದ ಪ್ರೀತಿ ಗೌಡ (92%), ಮೇಘಾ ತೋರಸ್ಕರ ಮತ್ತು ಸವಿತಾ ಯಕ್ಕುಂಡಿ ಅವರಿಗೆ ನಗದು ಪುರಸ್ಕಾರ ನೀಡಿ ಗೌರವಿಸಲಾಯಿತು. ಅಲ್ಲದೆ, ಎಲ್ಲ ಸೆಮಿಸ್ಟರ್‌ಗಳಲ್ಲಿ ಉತ್ತಮ ಸಾಧನೆ ಮಾಡಿದ ವಿದ್ಯಾರ್ಥಿಗಳಿಗೂ ನಗದು ಬಹುಮಾನ ವಿತರಿಸಲಾಯಿತು.

ಉಪನ್ಯಾಸಕರು ಮತ್ತು ಸಿಬ್ಬಂದಿ ವರ್ಗದವರು ಸೇರಿದಂತೆ ಮಾಧವ ಸುರತ್ಕರ, ಮೇಹ್ತಾಬ ಶೇಖ, ಪ್ರಗತಿ ಲಕ್ಕುಂಡಿ, ಹನುಮಂತಿ ಪವಾರ, ಅನುಷಾ ನಾಯ್ಕವಾಡ, ನಾಗೇಂದ್ರ ಖಂಡೇಕರ, ಅಕ್ಷತಾ ಹುಲಿಕೇರಿ, ಲೀಲಾ ಅಂಬಿಗ ಮತ್ತು ಶೀತಲ ತೋರಸ್ಕರ ಉಪಸ್ಥಿತರಿದ್ದರು.

ಶೈಕ್ಷಣಿಕ ಸಂಯೋಜಕಿ ದೀಪಾ ನಾಯ್ಕ ಸ್ವಾಗತಿಸಿದರು. ವಿದ್ಯಾರ್ಥಿಗಳಾದ ನಿಜ್ಬಾ ಶೇಖ, ತಿರ್ಥಾ ದೊಡ್ಡಮನಿ ಮತ್ತು ಭೂಮಿಕಾ ಜರಾಲಿ ಕಾರ್ಯಕ್ರಮ ನಿರೂಪಿಸಿದರು. ತುಳಸಿ ಸ್ವಾದಿ ಪ್ರಾರ್ಥಿಸಿದರು. ಪ್ರತಿಜ್ಞೆ ಸರೇಕರ ವಂದಿಸಿದರು.

ದೇಶಭಕ್ತಿ ಗೀತೆಗಳ ಗಾಯನ ಸ್ಪರ್ಧೆ

ಕಾರವಾರ: ನಗರದ ರೋಟರಿ ಶತಾಬ್ದಿ ಭವನವು ಕಾರವಾರ ತಾಲೂಕಿನ ವಿವಿಧ ಪ್ರೌಢಶಾಲೆಗಳ ವಿದ್ಯಾರ್ಥಿಗಳು ಪ್ರಸ್ತುತಪಡಿಸಿದ ಮನೋಜ್ಞ ದೇಶಭಕ್ತಿ ಗೀತೆಗಳ ಗಾಯನ ಸ್ಪರ್ಧೆಗೆ ಸಾಕ್ಷಿ ಯಾಯಿತು. ರೋಟರಿ ಕ್ಲಬ್ ಕಾರವಾರ, ರೋ. ಕೃಷ್ಣಾನಂದ ಬಾಂದೇಕರ್ ಅವರ ಪ್ರಾಯೋಜಕತ್ವ ದಲ್ಲಿ, ಅವರ ದಿವಂಗತ ಪೋಷಕರಾದ ಸುಮನ್ ಮತ್ತು ಪುರಸಪ್ಪ ಬಾಂದೇಕರ್ ಅವರ ಸ್ಮರಣಾರ್ಥ ಈ ಕಾರ್ಯಕ್ರಮವನ್ನು ಆಯೋಜಿಸಲಾಗಿತ್ತು. ಅತ್ಯಂತ ತೀವ್ರ ಪೈಪೋಟಿಯಿಂದ ಕೂಡಿದ ಈ ಸ್ಪರ್ಧೆಯಲ್ಲಿ, ಶಿವಾಜಿ ಬಾಲಮಂದಿರದ ವಿದ್ಯಾರ್ಥಿನಿ ತನುಶ್ರೀ ಬೋಯಿ ಪ್ರಥಮ ಬಹುಮಾನ ಪಡೆದರೆ, ಸೇಂಟ್ ಜೋಸೆಫ್ ಹೈಸ್ಕೂಲ್‌ನ ಕುಮಾರಿ ಶ್ರೀಗುರು ಶೆಟ್ಟಿ ದ್ವಿತೀಯ ಸ್ಥಾನ ಗಳಿಸಿದರು. ಕೆಪಿಎಸ್ ಶಿರವಾಡದ ಕುಮಾರಿ ನಕ್ಷಿತಾ ಗೌಡ ಮತ್ತು ಯೂನಿಟಿ ಹೈಸ್ಕೂಲ್‌ನ ಕುಮಾರಿ ಶಬನಮ್ ಬುಕಿತಗಾರ ತೃತೀಯ ಬಹುಮಾನವನ್ನು ಹಂಚಿಕೊಂಡರು. ಕಾರ್ಯಕ್ರಮದ ಆರಂಭದಲ್ಲಿ ರೋಟರಿ ಕ್ಲಬ್ ಕಾರವಾರದ ಅಧ್ಯಕ್ಷ ರೋ. ಡಾ. ಅರ್ಜುನ್ ಉಪಾಧ್ಯಾಯ ಸ್ವಾಗತಿಸಿದರು. ರೋ. ಕೃಷ್ಣಾನಂದ ಬಾಂದೇಕರ್ ಅವರು ಕಾರ್ಯಕ್ರಮದ ಪ್ರಾಮುಖ್ಯತೆ ಕುರಿತು ಮಾತನಾಡಿದರು. ಕಾರ್ಯಕ್ರಮದ ನಿರೂಪಣೆಯನ್ನು ರೋ. ಫ್ರಾನ್ಸಿಸ್ ಫರ್ನಾಂಡಿಸ್ ನಿರ್ವಹಿಸಿದರೆ, ಕಾರ್ಯದರ್ಶಿ ವಿನೋದ ಕೊಟರಕರ್ ವಂದನಾರ್ಪಣೆ ಮಾಡಿದರು.ಈ ಕಾರ್ಯಕ್ರಮದಲ್ಲಿ ಇನ್ನರ್ ವೀಲ್ ಕ್ಲಬ್ ಅಧ್ಯಕ್ಷೆ ರೊಸಲೀನಾ ಫರ್ನಾಂಡಿಸ್, ಕ್ಲಬ್ ಸರ್ವಿಸ್ ನಿರ್ದೇಶಕ ರೋ. ಮೋಹನ್ ನಾಯ್ಕ್ ಮತ್ತು ಇತರ ಗಣ್ಯರು ಉಪಸ್ಥಿತರಿದ್ದರು. ಪ್ರೀಮಿಯರ್ ಕಾಲೇಜಿನ ಪ್ರಾಂಶುಪಾಲರಾದ ರೋ. ಗೋವಿಂದಪ್ಪ ಮತ್ತು ಹಿಂದೂ ಹೈಸ್ಕೂಲ್‌ನ ಕಲಾ ಶಿಕ್ಷಕಿ ವರ್ಷಾ ಶೇಟ್ ಅವರು ತೀರ್ಪುಗಾರರಾಗಿ ಭಾಗವಹಿಸಿದ್ದರು. ರೋಟರಿ ಸದಸ್ಯರು, ಸ್ಪರ್ಧಾಳುಗಳ ಪೋಷಕರು ಮತ್ತು ಶಿಕ್ಷಕರು ಹಾಜರಿದ್ದು, ವಿದ್ಯಾರ್ಥಿಗಳ ಪ್ರತಿಭೆಯನ್ನು ಪ್ರೋತ್ಸಾಹಿಸಿದರು.

ಬೇಡ್ತಿ-ವರದಾ ನದಿ ಜೋಡಣೆ | ಕಾಸರಗೋಡ ವಾಣಿಜ್ಯ ಬಂದರು ಯೋಜನೆ: ರವೀಂದ್ರ ನಾಯ್ಕ ಹೇಳಿಕೆ

ವೈಜ್ಞಾನಿಕ ಅಧ್ಯಯನದ ಆಧಾರದ ಮೇಲೆ ನಿರ್ಧಾರ

ಶಿರಸಿ: ಉತ್ತರ ಕನ್ನಡ ಜಿಲ್ಲೆಯಲ್ಲಿ ಈಗಾಗಲೇ ಗ್ರೀನ್ ಫೀಲ್ಡ್ ಮತ್ತು ಕಾಸರಗೋಡ ವಾಣಿಜ್ಯ ಬಂದರು, ಶರಾವತಿ ಪಂಪ್ಡ್ ಸ್ಟೋರೇಜ್ ಯೋಜನೆ ಹಾಗೂ ಬೇಡ್ತಿ ವರದಾ ನದಿ ಜೋಡಣೆ ಬೃಹತ್ ಯೋಜನೆಗಳಿಗೆ ಕೇಂದ್ರ ಸರ್ಕಾರ ಪರವಾನಗಿ ಪಡೆದ ನಂತರದ ಕಾರ್ಯ ಯೋಜನೆಯ ಸಂಧರ್ಭದಲ್ಲಿ ಉಂಟಾದ ತೀವ್ರ ವಿರೋಧಕ್ಕೆ, ಸರ್ಕಾರವು ಜನಾಭಿಪ್ರಾಯ ಮತ್ತು ಜಿಲ್ಲೆಯ ಭೌಗೋಳಿಕ ಧಾರಣ ಸಾಮರ್ಥ್ಯ ಪರಿಗಣಿಸಿ, ವೈಜ್ಞಾನಿಕ ಅಧ್ಯಯನದ ಆಧಾರದ ಮೇಲೆ ಸೂಕ್ತ ತೀರ್ಮಾನವನ್ನು ತೆಗೆದುಕೊಳ್ಳಬೇಕೆಂದು ಸಾಮಾಜಿಕ ಹೋರಾಟಗಾರ ರವೀಂದ್ರ ನಾಯ್ಕ ಆಗ್ರಹಿಸಿದ್ದಾರೆ.

ಉತ್ತರ ಕನ್ನಡ ಜಿಲ್ಲೆಯಲ್ಲಿ ಅಂಕೋಲಾದ ಕೇಣಿಯಲ್ಲಿ ಗ್ರೀನ್ ಫೀಲ್ಡ್ ಮತ್ತು ಹೊನ್ನಾವರದ ಕಾಸರಗೋಡನಲ್ಲಿ ವಾಣಿಜ್ಯ ಬಂದರ್ ಹಾಗೂ ಗೇರುಸೊಪ್ಪದಲ್ಲಿ ಶರಾವತಿ ಪಂಪ್ಡ್ ಸ್ಟೋರೇಜ್ ಯೋಜನೆ ಮತ್ತು ಯಲ್ಲಾಪುರ ತಾಲೂಕಿನಲ್ಲಿ ಬೇಡ್ತಿ-ವರದಾ ನದಿ ಜೋಡಣೆ ಯೋಜನೆಯಿಂದ ಜಿಲ್ಲೆಯಾದ್ಯಂತ ವಿರೋಧ ಮತ್ತು ಪರ ಧ್ವನಿಗಳು ಎತ್ತಿರುವ ಹಿನ್ನಲೆಯಲ್ಲಿ ಅವರು ಮೇಲಿನಂತೆ ಹೇಳಿದರು.

ಉತ್ತರಕನ್ನಡ ಜಿಲ್ಲೆ ದಟ್ಟ ಅರಣ್ಯ, ನದಿ, ಸಮುದ್ರ ಕಿನಾರೆ ವಿಭಿನ್ನ ಸಂಸ್ಕೃತಿಯನ್ನು ಹೊಂದಿರುವ ಜಿಲ್ಲೆಯಲ್ಲಿ ಈಗಾಗಲೇ 5 ಹೈಡ್ರೋ ಪ್ರೊಜೆಕ್ಟ್, ಕೈಗಾ ಅಣುಸ್ಥಾವರ, ಸೀಬರ್ಡ, ಕೊಂಕಣ ರೈಲ್ವೇ ಯೋಜನೆಗಳು ಹಮ್ಮಿಕೊಂಡಿದ್ದು ಮುಂತಾದ ರಾಷ್ಟ್ರೀಯ ಯೋಜನೆಗಳಿಗೆ ತ್ಯಾಗ ಮಾಡಿದ ಜಿಲ್ಲೆ ಉತ್ತರ ಕನ್ನಡ. ಕಾಳಿ ಟೈಗರ್ ಝೋನ್, ಅಭಯಾರಣ್ಯ, ಸಿಂಗಳಿಕ, ಸಿಆರ್‌ಝಡ್ ಮುಂತಾದ ಪರಿಸರ ಪೂರಕ ರಾಷ್ಟ್ರೀಯ ಯೋಜನೆಯಿಂದ ಜನ ಜೀವನದ ಮೇಲೆ ಗಂಭೀರ ಪರಿಣಾಮ ಉಂಡುಮಾಡಿದೆ. ಅಲ್ಲದೇ ಮುಂಬರುವ ದಿನಗಳಲ್ಲಿ ಅಭಿವೃದ್ಧಿ ದಿಸೆಯಲ್ಲಿ ವಿಮಾನ ನಿಲ್ದಾಣ, ಹುಬ್ಬಳ್ಳಿ-ಅಂಕೋಲಾ ರೈಲ್ವೇಗೂ ಸಹ ಕೇಂದ್ರ ಸರ್ಕಾರದಿಂದ ಅನುಮೋದನೆ ಸಿಕ್ಕಿದೆ. ಈ ಎಲ್ಲ ಯೋಜನೆಗಳಿಗೆ ಜಿಲ್ಲೆಯ ಜನ ತ್ಯಾಗ ಮಾಡಿರುವುದು ವಿಶೇಷ ಎಂದು ಅವರು ತಿಳಿಸಿದರು.



ಪರ, ವಿರೋಧ

ಕೇಂದ್ರ ಸರ್ಕಾರವು ಇತ್ತೀಚಿಗೆ ಪರವಾನಗಿ ನೀಡಿದ ನಂತರ ನಡೆಯುತ್ತಿರುವ ವಿರೋಧ ಹೋರಾಟಗಳು ರಾಜ್ಯದಲ್ಲಿ ಅಧಿಕಾರದಲ್ಲಿ ಇದ್ದಾಗ ಧುರೀಣರು ಮೌನವಹಿಸುವುದು ಹಾಗೂ ವಿರೋಧ ಪಕ್ಷಕ್ಕೆ ಸ್ಥಳಾಂತರಗೊಂಡಾಗ ಧುರೀಣರು ವಿರೋಧ ವ್ಯಕ್ತಪಡಿಸುವುದು ಜನ ಸಾಮಾನ್ಯರಿಗೆ ಗೊಂದಲಕ್ಕೆ ಕಾರಣವಾಗಿದೆ. ಪರವಾನಗಿ ನೀಡಿದ ಪಕ್ಷದ ಸದಸ್ಯರೇ ವಿರೋಧ ವ್ಯಕ್ತ ಪಡಿಸುತ್ತಿರುವುದು ಅಚ್ಚರಿಯ ಸಂಗತಿ ಎಂದು ರವೀಂದ್ರ ನಾಯ್ಕ ಅಭಿಪ್ರಾಯ ವ್ಯಕ್ತಪಡಿಸಿದರು.

ಜಿಲ್ಲೆಯಲ್ಲಿ ಇತ್ತೀಚಿಗೆ ಚರ್ಚಿತವಾಗುತ್ತಿರುವ 4 ಯೋಜನೆಗಳಿಗೆ ಕೇಂದ್ರ ಸರ್ಕಾರವು ಪರವಾನಿಗೆ ನೀಡುವ ಪೂರ್ವದಲ್ಲಿ ಜನರ ವಿಶ್ವಾಸ ಮತ್ತು ಜಿಲ್ಲೆಯ ಭೌಗೋಳಿಕ ಧಾರಣ ಸಾಮರ್ಥ್ಯವನ್ನು ಪರಿಗಣಿಸದೇ ಯೋಜನೆಗಳಿಗೆ ಏಕಮುಖವಾಗಿ ನಿರ್ಧರಿಸಿರುವುದರಿಂದ ತೀವ್ರತರವಾದ ವಿರೋಧ ವ್ಯಕ್ತವಾಗಿದೆ ಎಂದು ಈ ಸಂಧರ್ಭದಲ್ಲಿ ಅವರು ಹೇಳಿದ್ದಾರೆ. ಜಿಲ್ಲೆಯ ಒಟ್ಟು ಭೌಗೋಳಿಕವಾಗ 10.25 ಲಕ್ಷ ಹೆಕ್ಟೇರ್‌ಗಳಲ್ಲಿ 8.28 ಲಕ್ಷ ಹೆಕ್ಟೇರ್‌ಗಳು ಅರಣ್ಯ ಪ್ರದೇಶ ಹೊಂದಿದೆ. ಕೇವಲ 1.2 ಲಕ್ಷ ಹೆಕ್ಟೇರ್ ಭೂ ಭಾಗ ಅಂದರೆ, ಶೇ.10 ರಷ್ಟು ಕೃಷಿ ಮತ್ತು ತೋಟಗಾರಿಕೆಗೆ ಜನ ಬಳಕೆ ಮಾಡುತ್ತಿದ್ದಾರೆ. ಇದರಿಂದ, ವಿರೋಧಕ್ಕೆ ಹೆಚ್ಚಿನ ಮಹತ್ವ ಬರಲು ಕಾರಣವಾಗಿದೆ ಎಂದು ಅವರು ಹೇಳಿದರು.

ಜಿಲ್ಲೆಯ 14 ಲಕ್ಷ ಜನ ಸಂಖ್ಯೆ ಇಂತಹ ಯೋಜನೆಗಳಿಂದ ಜಿಲ್ಲೆಯ ಮೂಲ ಚಿತ್ರಣ ಬದಲಾಗುತ್ತಿರುವುದು, ಈ ಹಿಂದಿನ ಯೋಜನೆಗಳಿಂದ ನಿರೀಕ್ಷಿತ ಉದ್ಯೋಗ ಅವಕಾಶ ದೊರಕದಿರುವುದರಿಂದ, ಜಿಲ್ಲೆಯ 140 ಕಿ.ಮೀ ಕರಾವಳಿ ಪ್ರದೇಶದಲ್ಲಿ ಮೀನುಗಾರಿಕೆಯಿಂದ ವಂಚಿತರಾಗುವ ಭೀತಿ ಉಂಟಾಗಿರುವುದರಿಂದ, ಜೀವನ ಅವಲಂಬಿತವಾಗಿರುವ ಪ್ರದೇಶವನ್ನು ತ್ಯಾಗ ಮಾಡುವ ಪ್ರಸಂಗ ಬಂದಿರುವುದ ವಿರೋಧ ವ್ಯಕ್ತವಾಗುತ್ತಿದೆ. ಯೋಜನಾ ಅನುಷ್ಠಾನ ಪೂರ್ವದಲ್ಲಿ ಜನಾಭಿಪ್ರಾಯ ಮತ್ತು ಯೋಜನೆಯ ಪರವಾಗಿರುವ ಅಂಶವನ್ನು ಜನರಿಗೆ ಮನವರಿಕೆ ಮಾಡದೇ ಕೇಂದ್ರ ಸರ್ಕಾರವು ಯೋಜನೆಗಳಿಗೆ ಅನುಮೋದನೆ ನೀಡಿರುವದನ್ನು ಸಾರ್ವಜನಿಕರಿಂದ ಪ್ರಶ್ನಿಸಲಾಗುತ್ತದೆ ಅವರು ಹೇಳಿದ್ದಾರೆ.

ಪಿಒಪಿ ಗಣೇಶ ಮೂರ್ತಿ: ಡಿಜೆ ಬಳಕೆಗೆ ಅವಕಾಶವಿಲ್ಲ

ಕಾರವಾರ: ಜಿಲ್ಲೆಯಲ್ಲಿ ಗೌರಿ-ಗಣೇಶ ಹಬ್ಬವನ್ನು ಪರಿಸರ ಸ್ನೇಹಿಯಾಗಿ ಆಚರಿಸುವ ನಿಟ್ಟಿನಲ್ಲಿ ಸಾರ್ವಜನಿಕರು, ಗಣೇಶನ ಮಣ್ಣಿನ ಮೂರ್ತಿಗಳನ್ನು ಪ್ರತಿಷ್ಠಾಪಿಸಿ, ಪೂಜಿಸಿ ಕೆರೆ, ಬಾವಿ ಹಾಗೂ ಇನ್ನಿತರೆ ನೈಸರ್ಗಿಕ ಜಲ ಮೂಲಗಳಿಗೆ ವಿಸರ್ಜಿಸುವಂತೆ ಹಾಗೂ ಡಿ.ಜೆ. ಯನ್ನು ಬಳಸದಂತೆ ಜಿಲ್ಲಾ ಪರಿಸರ ಅಧಿಕಾರಿಗಳು ತಿಳಿಸಿದ್ದಾರೆ.

ಉಚ್ಚ ನ್ಯಾಯಾಲಯ ಆದೇಶ ಮತ್ತು ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಯ ಅಧಿಸೂಚನೆ ತಿಳಿಸಿರುವಂತೆ ಸದರಿ ಹಬ್ಬದ ಆಚರಣೆಯಿಂದ ನೈಸರ್ಗಿಕ ಜಲ ಮೂಲಗಳನ್ನು ರಕ್ಷಿಸುವ ನಿಟ್ಟಿನಲ್ಲಿ ಪ್ಲಾಸ್ಟರ್ ಆಫ್ ಪ್ಯಾರಿಸ್ ಮತ್ತು ಬಣ್ಣ ಲೇಪಿತವಾದ ಮೂರ್ತಿಗಳನ್ನು ರಾಜ್ಯದ ಯಾವುದೇ ಕೆರೆ ಮತ್ತು ಇತರೇ ಜಲ ಮೂಲಗಳಲ್ಲಿ ವಿಸರ್ಜಿಸುವುದನ್ನು ನಿಷೇಧಿಸಲಾಗಿದೆ. ಜಿಲ್ಲೆಯಲ್ಲಿ ಆಚರಿಸಲಾಗುತ್ತಿರುವ ಗಣೇಶ ಚತುರ್ಥಿ ಹಬ್ಬದ ಸಮಯದಲ್ಲಿ ಗಣೇಶ ವಿಗ್ರಹಗಳನ್ನು ತಯಾರು ಮಾಡಲಾಗುತ್ತಿದ್ದು, ವಿಗ್ರಹಗಳ ತಯಾರಿಕೆಗೆ ಪರಿಸರಕ್ಕೆ ಹಾನಿಯಾಗುವಂತಹ ವಸ್ತುಗಳು ಮತ್ತು ಬಣ್ಣಗಳನ್ನು ಉಪಯೋಗಿಸುವುದರಿಂದ, ನೀರಿನ ಮೂಲಗಳಾದ ಕೆರೆ, ಬಾವಿ, ನದಿ ಇತ್ಯಾದಿಗಳಲ್ಲಿ ನೀರು ಕಲುಷಿತಗೊಂಡು ಪರಿಸರ ಹಾಗೂ ನೀರು ಹಾಳಾಗುವ ಸಂದರ್ಭಗಳು ಹೆಚ್ಚಾಗಿರುತ್ತವೆ.

ಗೌರಿಗಣೇಶ ಹಬ್ಬದ ಸಂದರ್ಭದಲ್ಲಿ ಸಾರ್ವಜನಿಕರು ಬಣ್ಣರಹಿತ ಮಣ್ಣಿನ ಗಣೇಶ ಮೂರ್ತಿಗಳೊಂದಿಗೆ ಹಬ್ಬ ಆಚರಿಸಿ ತದನಂತರ ಸ್ಥಳೀಯ ಸಂಸ್ಥೆಗಳು ನಿಗಧಿಪಡಿಸಿದ ಸ್ಥಳಗಳಲ್ಲಿಯೇ ಮೂರ್ತಿಗಳನ್ನು ವಿಸರ್ಜಿಸಬೇಕು.

ಮಣ್ಣಿನ ಗಣೇಶ ಮೂರ್ತಿಗಳ ವಿಸರ್ಜನೆ ಸಂದರ್ಭದಲ್ಲಿ ಮೊಬೈಲ್ ಟ್ಯಾಂಕ್‌ಗಳಲ್ಲಿ, ಕಲ್ಯಾಣಿಗಳ ಪಕ್ಕದಲ್ಲಿ ಹಸಿ ಕಸ (ಹೂವು, ಹಣ್ಣು, ಬಾಳೆಕಂಬ, ಮಾವಿನ ತೋರಣ, ಇತ್ಯಾದಿ) ಪ್ರತ್ಯೇಕಿಸಿ ಮೂರ್ತಿಯೊಂದಿಗೆ ನೀರಿಗೆ ವಿಸರ್ಜಿಸದೆ ಪ್ರತ್ಯೇಕವಾಗಿ ವಿಂಗಡಿಸಿ ಸ್ಥಳೀಯ ಸಂಸ್ಥೆಗಳಿಗೆ ವಿಲೇವಾರಿಗಾಗಿ ನೀಡಬೇಕು.

ಗಣೇಶ ಹಬ್ಬದ ಸಂದರ್ಭದಲ್ಲಿ ಬಳಸುವ ಧ್ವನಿವರ್ಧಕಗಳಿಂದ (DJ, Loud speaker, Mike etc) ಹೊರಸೂಸುವ ಶಬ್ದಮಾಲಿನ್ಯದಿಂದ ಚಿಕ್ಕ ಮಕ್ಕಳಿಗೆ, ಹಿರಿಯ ನಾಗರಿಕರಿಗೆ, ಪ್ರಾಣಿ ಪಕ್ಷಿಗಳಿಗೆ ತೊಂದರೆಯಾಗದಂತೆ ಶಬ್ಧಮಾಲಿನ್ಯವನ್ನು ತಡೆಗಟ್ಟಲು Noise Pollution (Regulation and Control) Rules, 2000 2000 ರಲ್ಲಿನ ಮಾರ್ಗಸೂಚಿಗಳನ್ನು ಪಾಲಿಸಬೇಕು. ಧ್ವನಿವರ್ಧಕಗಳಿಂದ ಹೊರಹೊಮ್ಮುವ ಶಬ್ದವು ಪರಿವೇಷ್ಠಕ ಶಬ್ದದ ಗುಣಮಟ್ಟವು ಆಯಾ ವಲಯಗಳಿಗೆ (ನಿಶ್ಯಬ್ಧ ವಲಯ, ಜನವಸತಿ ವಲಯ, ವಾಣಿಜ್ಯ ವಲಯ ಮತ್ತು ಕೈಗಾರಿಕಾ ವಲಯ) ನಿಗದಿಪಡಿಸಲಾಗಿದ್ದು, ಅದರಂತೆ ಧ್ವನಿವರ್ಧಕಗಳನ್ನು ಬಳಸಲು ಈ ಮೂಲಕ ತಿಳಿಸಲಾಗಿದೆ. ರಾತ್ರಿ 10 ರಿಂದ ಬೆಳಗ್ಗೆ 6 ಗಂಟೆಯ ತನಕ ಯಾವುದೇ ತರಹದ ಧ್ವನಿವರ್ಧಕಗಳ ಬಳಕೆ ನಿಷೇಧಿಸಿದೆ.

ಮುಂದಿನ ಪೀಳಿಗೆಗೆ ಜಾನಪದ ಅತ್ಯವಶ್ಯ

ಶಿರಸಿ: ವಿಶ್ವ ಜಾನಪದ ದಿನಾಚರಣೆ ಅಂಗವಾಗಿ ಕರ್ನಾಟಕ ಜಾನಪದ ಪರಿಷತ್ ವತಿಯಿಂದ ಶಿರಸಿಯ ನೆಮ್ಮದಿ ಕುಟೀರದಲ್ಲಿ ಜಾನಪದ ಕಾರ್ಯಕ್ರಮ ನಡೆಯಿತು.

ಯಕ್ಷಗಾನ ಅರ್ಥದಾರಿಗಳು ವಿಮರ್ಶಕ ಗಣಪತಿ ಭಟ್ಟ ವರ್ಗಾಸರ ಪ್ರಸ್ತಾವಿಕ ಮಾತನಾಡಿ, ಜಾನಪದದ ಅರ್ಥ, ಶಿಷ್ಟ ಮತ್ತು ಸಾಂಪ್ರದಾಯಿಕ ಬಗೆಗಳು, ಮುಂದಿನ ಪೀಳಿಗೆಗೆ ನಮ್ಮ ಹಳೆಯ ಜೀವನ ಮೌಲ್ಯಗಳನ್ನು ಜಾನಪದ ಹೇಗೆ ತಿಳಿಸಿಕೊಡುತ್ತದೆ ಎಂಬುದನ್ನು ತಿಳಿಸಿದರು.

ನಿವೃತ್ತ ಪ್ರಾಧ್ಯಾಪಕ ಸುರೇಶ ಕಡೆಮನಿ ಮಾತನಾಡಿ, ಉತ್ತರ ಕರ್ನಾಟಕದ ಜಾನಪದ ಗೀತೆಗಳು ಹೇಗೆ ನಿಜ ಸಂಗತಿಯೊಂದಿಗೆ ಬೆಸೆದುಕೊಂಡಿದ್ದವು ಎಂಬುದನ್ನು ವಿವರಿಸಿ ಜಾನಾಪದವನ್ನು ಉಳಿಸಿ ಬೆಳೆಸಿದ ಏಣಗಿ ಬಾಳಪ್ಪನವರ ಒಂದೆರಡು ಗೀತೆಗಳನ್ನು ಪ್ರಸ್ತುತಿ ಪಡಿಸಿದರು.

ನಂತರ ಹನುಮಂತ ಸಾಲಿ, ಎಸ್.ಎಂ. ಹೆಗಡೆ, ದಾಕ್ಷಾಯಿಣಿ ಪಿಸಿ, ಶೋಭಾ ಭಟ್, ಡಿ.ಎಸ್ ಹೆಗಡೆ, ಸುರೇಶ ಕಡೆಮನಿ, ರಾಜು ನರಸಿಂಹ ಉಗ್ರಾಣಕರ, ಮಂಜುನಾಥ ಹುಡ್ಲಮನೆ ಪ್ರಸನ್ನಕುಮಾರಿ ಭಟ್, ಜಾನಪದ ಗೀತೆಯನ್ನು ಹಾಡಿದರು.

ಗಂಗಾ ಕೆ ಹೆಗಡೆ ಮತ್ತು ವಾಣಿ ಹೆಗಡೆ ಸಾಂಪ್ರದಾಯಿಕ ಹಾಡುಗಳನ್ನು ಹಾಡಿದರೆ ವಿಮಲಾ ಭಾಗ್ವತ್ ಮತ್ತು ಸುವರ್ಣ ಭಟ್ ಭಕ್ತಿಗೀತೆ, ಸರೋಜಿನಿ ಹೆಗಡೆ ಹಳ್ಳಿ ಹಾಡನ್ನು ಹಾಡಿದರು.

ವಿಶೇಷ ಕಾರ್ಯಕ್ರಮವಾಗಿ ಸುಮಾ ಹೆಗಡೆ ಗಡಿಗೆಹೊಳೆ, ಸಹನಾ ಜೋಶಿ ತಾಳಮದ್ದಳೆಯ ರಾವಣ ಮತ್ತು ಅತಿಕಾಯರ ನಡುವೆ ನೆಡೆದ ಸಂಭಾಷಣೆಯ ಪ್ರಸಂಗವನ್ನು ಪ್ರಸ್ತುತಿ ಪಡಿಸಿದರು.

ಅಧ್ಯಕ್ಷತೆ ವಹಿಸಿದ್ದ ಕರ್ನಾಟಕ ಜಾನಪದ ಪರಿಷತ್ ಶಿರಸಿಯ ಅಧ್ಯಕ್ಷ ಕೃಷ್ಣ ಪದಕಿ ಜಾನಪದದ ಹುಟ್ಟು ಇತಿಹಾಸ ಅಂತಾರಾಷ್ಟ್ರೀಯವಾಗಿ ಜಾನಪದದ ಮಹತ್ವವನ್ನು ತಿಳಿಸಿದರು.

ರಂಗಭೂಮಿ ಕಲಾವಿದ ಚಂದ್ರು ಉಡುಪಿ ಸ್ವಾಗತಿಸಿದರು. ಎಸ್.ಎಂ. ಹೆಗಡೆ ಪ್ರಾರ್ಥಿಸಿದರು. ಜಾನಪದ ಪರಿಷತ್ ಶಿರಸಿ ಖಜಾಂಚಿ ರಾಜು ನರಸಿಂಹ ಉಗ್ರಾಣಕರ ನಿರೂಪಿಸಿದರು. ಸಿ.ಎಸ್. ಹೆಗಡೆ ವಂದನಾರ್ಪಣೆ ಸಲ್ಲಿಸಿದರು.

ಸ್ವಯಂ ಪ್ರೇರಿತ ಬೃಹತ್ ರಕ್ತದಾನ ಶಿಬಿರ

ಯಲ್ಲಾಪುರ : ಪಟ್ಟಣದ ಸರಕಾರಿ ಆಸ್ಪತ್ರೆಯಲ್ಲಿ ರಾಜಯೋಗಿನಿ ದಾದಿ ಪ್ರಕಾಶಮಣಿ ಜೀ ಅವರ ಪವಿತ್ರ ಸ್ಮರಣಾರ್ಥ ವಿಶ್ವಬಂಧುತ್ವ ದಿನದ ಅಂಗವಾಗಿ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ, ತಾಲೂಕು ಆಸ್ಪತ್ರೆ, ಯಲ್ಲಾಪುರ ಪ್ರಜಾಪಿತ ಬ್ರಹ್ಮಾಕುಮಾರಿ ಈಶ್ವರೀಯ ವಿಶ್ವವಿದ್ಯಾಲಯ ಯಲ್ಲಾಪುರ, ಗ್ರೀನ್ ಕೇರ್ ಸಂಸ್ಥೆ, ಶಿರಸಿ, ಲಯನ್ಸ್ ಕ್ಲಬ್, ಯಲ್ಲಾಪುರ, ಐ.ಎಂ.ಎ. ಲೈಫ್‌ಲೈನ್ ರಕ್ತ ಕೇಂದ್ರ, ಪಂಡಿತ ಸಾರ್ವಜನಿಕ ಆಸ್ಪತ್ರೆ, ಶಿರಸಿ ಮತ್ತು ರಕ್ತ ಶೇಖರಣಾ ಘಟಕ, ತಾಲೂಕು ಆಸ್ಪತ್ರೆ, ಯಲ್ಲಾಪುರ ಇವರ ಸಹಯೋಗದಲ್ಲಿ ಸ್ವಯಂ ಪ್ರೇರಿತ ಬೃಹತ್ ರಕ್ತದಾನ ಶಿಬಿರ ಏರ್ಪಡಿಸಲಾಗಿತ್ತು.

ಕಾರ್ಯಕ್ರಮವನ್ನು ಗಣ್ಯರು ದೀಪ ಬೆಳಗಿಸಿ ಉದ್ಘಾಟಿಸಿದರು. ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದ ಸರ್ಕಾರಿ ಆಸ್ಪತ್ರೆ ನೇತ್ರ ತಜ್ಞೆ ಡಾ. ಸೌಮ್ಯ ಕೆ.ವಿ ರಕ್ತದಾನದ ಉದ್ದೇಶ ಮತ್ತು ಮಹತ್ವದ ಬಗ್ಗೆ ವಿವರಿಸಿದರು.

ಕಾರ್ಯಕ್ರಮದ ಮುಖ್ಯ ಅತಿಥಿಗಳಾಗಿ ಲಯನ್ಸ್ ಕ್ಲಬ್ ಅಧ್ಯಕ್ಷ ಶೇಷಗಿರಿ ಪ್ರಭು, ಪ್ರಜಾಪಿತ ಬ್ರಹ್ಮಕುಮಾರಿ ಈಶ್ವರಿ ವಿಶ್ವವಿದ್ಯಾಲಯ ಮುಖ್ಯಸ್ಥೆ ಬಿ.ಕೆ. ಶಿವಲೀಲಾ, ಬಿ.ಕೆ.ವಾಣಿಶ್ರೀ, ಸರಕಾರಿ ಪ್ರಥಮ ದರ್ಜೆ ಕಾಲೇಜು ಪ್ರಾಂಶುಪಾಲ ಡಾ. ಆರ್. ಡಿ. ಜನಾರ್ದನ್, ಗ್ರೀನ್ ಕೇರ್ ಸಂಸ್ಥೆಯ ಪ್ರಧಾನ ಕಾರ್ಯದರ್ಶಿ ಜಿತೇಂದ್ರ ಕುಮಾರ್ ಆರ್. ಎಂ, ಯಲ್ಲಾಪುರ ಲಯನ್ಸ್ ಕ್ಲಬ್ಬಿನ ಜೋನಲ್ ಚೇರ್ ಪರ್ಸನ್ ಸುರೇಶ ಬೋರ್ಕರ್ ಮತ್ತು ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನ ಯುವ ರೆಡ್ ಕ್ರಾಸ್‌ನ ಸಂಚಾಲಕ ಶೇಷಗಿರಿ ಉಪಸ್ಥಿತರಿದ್ದರು.

ತಾಲೂಕು ಆಸ್ಪತ್ರೆಯ ಹಿರಿಯ ಆರೋಗ್ಯ ನಿರೀಕ್ಷಣಾಧಿಕಾರಿ ಮಹೇಶ್ ತಾಳಿಕೋಟೆ ನಿರೂಪಿಸಿದರು. ಶಿಬಿರದಲ್ಲಿ 43 ದಾನಿಗಳು ರಕ್ತದಾನ ಮಾಡಿದರು.

ಕ್ರೀಡಾಕೂಟದಲ್ಲಿ ವಿಶ್ವದರ್ಶನ ವೀರಾಗ್ರಣಿ ಪ್ರಶಸ್ತಿ

ಯಲ್ಲಾಪುರ: ಕ್ಷೇತ್ರ ಶಿಕ್ಷಣಾಧಿಕಾರಿಗಳ ಕಾರ್ಯಾಲಯ ಮತ್ತು ವಿಶ್ವದರ್ಶನ ಕನ್ನಡ ಮಾಧ್ಯಮ ಪ್ರೌಢಶಾಲೆಯ ಸಹೋಯೋಗದಲ್ಲಿ ನಡೆದ ಪ್ರೌಢಶಾಲಾ ವಿದ್ಯಾರ್ಥಿಗಳ ವಲಯ ಮಟ್ಟದ ಕ್ರೀಡಾಕೂಟದಲ್ಲಿ ವಿಶ್ವದರ್ಶನ ಕನ್ನಡಮಾಧ್ಯಮ ಪ್ರೌಢಶಾಲೆ ವೀರಾಗ್ರಣಿ ಪ್ರಶಸ್ತಿ ಪಡೆದಿದೆ.

ಶುಕ್ರವಾರ ಮತ್ತು ಶನಿವಾರ ನಡೆದ ಕ್ರೀಡಾಕೂಟದಲ್ಲಿ ಜಾವಲಿನ್ ಎಸೆತದಲ್ಲಿ ಪುನೀತ್ ಮರಾಠಿ, ಯೋಗದಲ್ಲಿ ಮುಕ್ತಾ ಭಟ್, ರಿದಮಿಕ್ ಯೋಗದಲ್ಲಿ ಸಂಪದಾ ಭಟ್ ಮತ್ತು ಶ್ಲೋಕಾ ನಾಯ್ಕ, ಬಾಲಕರ ಯೋಗ ರಿದಮಿಕ್ ಸಿಂಗಲ್ಸ್‌ನಲ್ಲಿ ಅಜಯ್ ಹೊರಣೆ, ಬಾಲಕಿಯರ ಯೋಗ ರಿದಮಿಕ್ ಸಿಂಗಲ್ಸ್‌ನಲ್ಲಿ ಮೇಘಾ ಮರಾಠಿ, 200ಮೀ ಓಟದಲ್ಲಿ ಭುವನ ಪಟಗಾರ, ಉದ್ದ ಜಿಗಿತ, 400ಮೀ.ಓಟ ಮತ್ತು 400ಮೀ. ಹರ್ಡಲ್ಸ್‌ಗಳಲ್ಲಿ ಗಣೇಶ್ ಭಟ್, ತ್ರಿವಿದ ಜಿಗಿತದಲ್ಲಿ ತೇಜಸ್ ಹರಿಕಂತ್ರ, ಎತ್ತರ ಜಿಗಿತ ಮತ್ತು ಪೋಲ್ ವಾಲ್ಟ್‌ಗಳಲ್ಲಿ ಶ್ರೀನಿವಾಸ್ ಸೋಮಾಪುರಕರ, 110 ಮೀ. ಹರ್ಡಲ್ಸ್ ಮತ್ತು ಚಕ್ರ ಎಸೆತಗಳಲ್ಲಿ ಸಂಕೇತ್ ನಾಯ್ಕ್, ಬಾಲಕರ ರಿಲೇ ಮತ್ತು ವಾಲಿಬಾಲ್ ತಂಡಗಳು ಮತ್ತು ಚೆಸ್‌ನಲ್ಲಿ ಮಹೇಶ್ ಶಿಂಧೆ ಮತ್ತು ಚೈತ್ರಾ ದೀಕ್ಷಿತ್ ಪ್ರಥಮ ಸ್ಥಾನ ಪಡೆದರು.

3000 ಮೀ. ಓಟದಲ್ಲಿ ಆಶಾ ಲಮ್ಮಣಿ, ಹ್ಯಾಮಾರ್ ಎಸೆತದಲ್ಲಿ ನಿಧಾ ಖಾನ್, ಪೋಲ್ ವಾಲ್ಟ್ ಮತ್ತು 1500 ಮೀ ಓಟದಲ್ಲಿ, ಆದಿತ್ಯ ಮರಾಠಿ, 200ಮೀ. ಓಟದಲ್ಲಿ ಭೂಮಿಕಾ ಗೌಡ, ನಡಿಗೆಯಲ್ಲಿ ವಿಕ್ರಂ ಜೋರೆ, ಎತ್ತರ ಜಿಗಿತದಲ್ಲಿ ಸಂಕೇತ್ ಪೇಡನೇಕರ್, 110ಮೀ. ಹರ್ಡಲ್ಸ್ ಅಲ್ಲಿ ಇಂಚರ ದ್ವಿತೀಯ ಸ್ಥಾನ ಪಡೆದು ತಾಲೂಕಾ ಮಟ್ಟಕ್ಕೆ ಆಯ್ಕೆಯಾಗಿದ್ದಾರೆ.

ಬಾಲಕರ ಖೋಖೋ, ಬಾಲಕರ ಮತ್ತು ಬಾಲಕಿಯರ ಥ್ರೋಬಾಲ್ ತಂಡಗಳು, ಬಾಲಕರ 400ಮೀ ರಿಲೇ ದ್ವಿತೀಯ ಮತ್ತು ಹ್ಯಾಮರ್ ಥ್ರೋ ಮುಕ್ತಾ ಭಟ್, 1500ಮಿ ಓಟದಲ್ಲಿ ಹೇಮಂತ್ ವಾಲ್ಮೀಕಿ, ಲಾಂಗ್ ಜಂಪ್‌ನಲ್ಲಿ ಸಂಕೇತ ನಾಯ್ಕ, 400 ಮೀ ಓಟದಲ್ಲಿ ವಿನಯ ನೀರಲಗಿ, 400 ಮೀ ಓಟದಲ್ಲಿ ನಾಗಶ್ರೀ ಪಡ್ತಿ, ಹರ್ಡಲ್ಸ್‌ನಲ್ಲಿ ಶ್ರೀನಿವಾಸ್ ಸೋಮಾಪುರಕರ, ಎತ್ತರ ಜಿಗಿತದಲ್ಲಿ ಪ್ರೀತಿ ಆಚಾರಿ ತೃತೀಯ ಸ್ಥಾನ ಪಡೆದು ಉತ್ತಮ ಸಾಧನೆ ಮಾಡಿದ್ದಾರೆ.

ಗಣೇಶ ಭಟ್ ಬಾಲಕರ ವಿಭಾಗದಲ್ಲಿ ವೈಯಕ್ತಿಕ ವೀರಾಗ್ರಣಿ ಪ್ರಶಸ್ತಿ ಪಡೆದಿದ್ದಾನೆ.

ವಿದ್ಯಾರ್ಥಿಗಳ ಸಾಧನೆಗೆ ಸಂಸ್ಥೆಯ ಅಧ್ಯಕ್ಷರ ಹರಿಪ್ರಕಾಶ ಕೋಣೆಮನೆ, ಮುಖ್ಯಾಧ್ಯಾಪಕಿ ಮುಕ್ತಾ ಶಂಕರ್ ಮೆಚ್ಚುಗೆ ವ್ಯಕ್ತಪಡಿಸಿದ್ದಾರೆ.

ಕ್ರೀಡೆಯಿಂದ ದೇಹಕ್ಕೆ ಶಕ್ತಿ, ಮನಸ್ಸಿಗೆ ನೆಮ್ಮದಿ

ಸಿದ್ದಾಪುರ: ಕ್ರೀಡೆ ನಮಗೆ ದೈಹಿಕವಾಗಿ ಶಕ್ತಿ ನೀಡುವುದರ ಜತೆಗೆ ಮಾನಸಿಕ ನೆಮ್ಮದಿ ನೀಡುತ್ತದೆ. ಕ್ರೀಡೆಯನ್ನು ಸ್ಪರ್ಧಾ ಮನೋಭಾವದಿಂದ ನೋಡಿದಾಗ ಅದನ್ನು ಆಸ್ವಾದಿಸಲು ಸಾಧ್ಯವಾಗುತ್ತದೆ. ಆಟದಲ್ಲಿ ಸೋಲು ಗೆಲುವಿಗಿಂತ ಭಾಗವಹಿಸುವುದು ಮುಖ್ಯವಾಗುತ್ತದೆ. ಮಕ್ಕಳು ಪಠ್ಯದ ಜತೆಗೆ ಕ್ರೀಡೆ, ಸಾಂಸ್ಕೃತಿಕ ಮುಂತಾದ ಪಠ್ಯೇತರ ಚಟುವಟಿಕೆಗಳಲ್ಲೂ ತೊಡಗಿಸಿಕೊಳ್ಳಬೇಕು ಎಂದು ತಾಲೂಕು ಗ್ಯಾರಂಟಿ ಸಮಿತಿ ಅಧ್ಯಕ್ಷ ಕೆ ಜಿ ನಾಗರಾಜ ಹೇಳಿದರು. ಅವರು ಪಟ್ಟಣದ ತಾಲೂಕು ಕ್ರೀಡಾಂಗಣದಲ್ಲಿ ಜಿಲ್ಲಾ ಪಂಚಾಯತ್, ಕ್ಷೇತ್ರ ಶಿಕ್ಷಣಾಧಿಕಾರಿಗಳ ಕಾರ್ಯಾಲಯ ಸಿದ್ದಾಪುರ, ಶ್ರೀ ಶಕುಂತಲಾ ವಿದ್ಯಾ ಸಂಸ್ಥೆ ಮುಟುಗುಪ್ಪೆ ಹಾಗೂ ಬಂಕೇಶ್ವರ ಪ್ರೌಢಶಾಲೆ ಹೊಸೂರ್ ಇವರ ಸಹಯೋಗದಲ್ಲಿ ಹಾಳದಕಟ್ಟಾ ವಲಯ ಮಟ್ಟದ 17 ವರ್ಷ ವಯೋಮಿತಿಯ ವಿದ್ಯಾರ್ಥಿಗಳ ಕ್ರೀಡಾಕೂಟ ಉದ್ಘಾಟಿಸಿ ಮಾತನಾಡಿದರು. ಶ್ರೀ ಶಕುಂತಲಾ ವಿದ್ಯಾ ಸಂಸ್ಥೆಯ ಅಧ್ಯಕ್ಷ ಅಜ್ಜಪ್ಪ ಕೆ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದರು. ವಕೀಲರಾದ ಪಿ ಬಿ ಹೊಸೂರ್, ಕ್ಷೇತ್ರ ಶಿಕ್ಷಣಾಧಿಕಾರಿ ಎಂ. ಎಚ್ ನಾಯ್ಕ, ಮುಖ್ಯ ಶಿಕ್ಷಕ ದೇವೇಂದ್ರ ನಾಯ್ಕ ಕಾರ್ಯಕ್ರಮದಲ್ಲಿ ಉಪಸ್ಥಿತರಿದ್ದರು. ದೈಹಿಕ ಪರಿವೀಕ್ಷಕ ಎಂ.ವಿ. ನಾಯ್ಕ್ ಎರಡು ದಿನಗಳ ಕ್ರೀಡಾಕೂಟವನ್ನು ನಡೆಸಿಕೊಟ್ಟರು. ಶಿಕ್ಷಕ ಟಿ.ಸಿ. ನಾಯ್ಕ್ ಸ್ವಾಗತಿಸಿದರು. ಶಿಕ್ಷಕ ವಿ.ಟಿ. ನಾಯ್ಕ ವಂದಿಸಿದರು. ಬಂಕೇಶ್ವರ ಪ್ರೌಢಶಾಲೆಯ ಶಿಕ್ಷಕರು, ಸಿಬ್ಬಂದಿ ಸಹಕರಿಸಿದರು.

ಕ್ರೀಡಾಕೂಟದಲ್ಲಿ ಸರಕಾರಿ ಪ್ರೌಢಶಾಲೆ ಹಾಳದಕಟ್ಟಾದ ವಿದ್ಯಾರ್ಥಿಗಳು ಸಮಗ್ರ ವೀರಾಗ್ರಣಿ ಪ್ರಶಸ್ತಿ ಪಡೆದುಕೊಂಡರೆ, ಜನತಾ ವಿದ್ಯಾಲಯ ಬೇಡ್ಕಣಿಯ ವಿದ್ಯಾರ್ಥಿಗಳು ದ್ವಿತೀಯ ಸ್ಥಾನವನ್ನು ಪಡೆದುಕೊಂಡರು.

ಶಾಲಾ ವಿದ್ಯಾರ್ಥಿಗಳಿಗೆ ನೋಟ್‌ಬುಕ್ ವಿತರಣೆ

ಶಿರಸಿ: ಹಳ್ಳಿಯಲ್ಲಿ ಹುಟ್ಟಿ ಶಿಕ್ಷಣ ಪಡೆದು ಬೆಂಗಳೂರಿನಲ್ಲಿ ಬದುಕನ್ನು ಕಟ್ಟಿಕೊಂಡ ತಾಲೂಕಿನ ಮಾಡನಕೇರಿ ಮೂಲದ ಅರ್ಜುನ ನಾಯ್ಕ ಅವರು ತಾನು ಕಲಿತ ಸರಕಾರಿ ಹಿರಿಯ ಪ್ರಾಥಮಿಕ ಶಾಲೆ ಮಾಡನಕೇರಿಯ ಎಲ್ಲಾ ವಿದ್ಯಾರ್ಥಿಗಳಿಗೆ ನೋಟ್ ಬುಕ್ ಹಾಗೂ ಪೆನ್ನನ್ನು ತನ್ನ ಮಗಳ ಜನ್ಮ ದಿನದಂದು ನೀಡುವ ಮೂಲಕ ವಿದ್ಯಾಭಿಮಾನ ಮೆರೆದಿದ್ದಾರೆ.

ದೂರದ ಬೆಂಗಳೂರಿನಲ್ಲಿ ನೆಲೆಸಿದ್ದರೂ ತಮ್ಮೂರ ಸರಕಾರಿ ಶಾಲೆಯ ಮಕ್ಕಳಿಗೆ ಲೇಖನ ಸಾಮಗ್ರಿ ಜತೆಗೆ ಸಿಹಿ ಭೋಜನದ ವ್ಯವಸ್ಥೆ ಮಾಡಿದ್ದು, ಎಲ್ಲರ ಮೆಚ್ಚುಗೆಗೆ ಪಾತ್ರವಾಗಿದೆ. ಅವರ ಕೊಡುಗೆಗೆ ಎಸ್.ಡಿ.ಎಂ.ಸಿ. ಅಧ್ಯಕ್ಷ ಅಣ್ಣಪ್ಪ ಎಂ. ನಾಯ್ಕ, ಉಪಾಧ್ಯಕ್ಷೆ ರೇಖಾ ಶಿವಕುಮಾರ ಗೌಡರ್ ಹಾಗೂ ಮುಖ್ಯ ಶಿಕ್ಷಕ ಎನ್.ಎಸ್. ಭಾಗ್ವತ್ ಕೃತಜ್ಞತೆ ಸಲ್ಲಿಸಿದ್ದಾರೆ.

ಮೊಬೈಲ್ ಕ್ಯಾಂಟೀನ್ ಖರೀದಿಸಲು ಅರ್ಜಿ

ಕಾರವಾರ: ಪ್ರವಾಸೋದ್ಯಮ ಇಲಾಖೆಯ ವತಿಯಿಂದ 2024-25 ನೇ ಸಾಲಿನಲ್ಲಿ ಎಸ್.ಸಿ.ಪಿ./ಟಿ.ಎಸ್.ಪಿ. ಯೋಜನೆ ಅಡಿಯಲ್ಲಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಸಣ್ಣ ಉದ್ಯಮಿದಾರರನ್ನು ಉತ್ತೇಜಿಸಲು ಕೌಶಲಾಭಿವೃದ್ಧಿ Enterprenuership Programme (EP) ತರಬೇತಿ ಹಾಗೂ ಪ್ರವಾಸಿ ತಾಣಗಳಲ್ಲಿ ಸಹಾಯಧನದೊಂದಿಗೆ ಮೊಬೈಲ್ ಕ್ಯಾಂಟೀನ್ ಖರಿದಿಸಲು ಅರ್ಜಿ ಆಹ್ವಾನಿಸಲಾಗಿದೆ.

ಪರಿಶಿಷ್ಟ ಜಾತಿ ಸೇರಿದ 5 ಅಭ್ಯರ್ಥಿಗಳಿಗೆ ಹಾಗೂ ಪರಿಶಿಷ್ಟ ಪಂಗಡಕ್ಕೆ ಸೇರಿದ 3 ಅಭ್ಯರ್ಥಿಗಳಿಗೆ ರೂ.5 ಲಕ್ಷಗಳ ಸಹಾಯಧನದೊಂದಿಗೆ ಮೊಬೈಲ್ ಕ್ಯಾಂಟೀನ್ ವಾಹನವನ್ನು ನೀಡುವ ಕಾರ್ಯಕ್ರಮ ವನ್ನು ಜಾರಿಗೊಳಿಸಲಾಗಿರುತ್ತದೆ.

ಆಸಕ್ತ ಪರಿಶಿಷ್ಟ ಜಾತಿ ಮತ್ತು ಹಾಗೂ ಪರಿಶಿಷ್ಟ ಪಂಗಡದ ಅಭ್ಯರ್ಥಿಗಳು ಆ.30 ರೊಳಗಾಗಿ ಅರ್ಜಿ ಸಲ್ಲಿಸಬೇಕು. ಹೆಚ್ಚಿನ ಮಾಹಿತಿಗಾಗಿ ಉಪ ನಿರ್ದೇಶಕರ ಕಚೇರಿ, ಜಿಲ್ಲಾಧಿಕಾರಿಗಳ ಕಾರ್ಯಾಲಯ, 1 ನೇ ಮಹಡಿ, ಕೋಠಡಿ ಸಂಖ್ಯೆ:24 ಕಾರವಾರ -581301. ದೂರವಾಣಿ ಸಂಖ್ಯೆ: 08382-221172 ಗೆ ಸಂಪರ್ಕಿಸುವಂತೆ ಪ್ರವಾಸೋದ್ಯಮ ಇಲಾಖೆಯ ಉಪ ನಿರ್ದೇಶಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಹಳಿಯಾಳ ವಿಡಿಐಟಿ ಪ್ರಾಧ್ಯಾಪಕರ ಸಾಧನೆ

ಹಳಿಯಾಳ: ಕೆ ಎಲ್ ಎಸ್ ವಿ ಡಿ ಐ ಟಿ ಹಳಿಯಾಳದ ಪ್ರಾಧ್ಯಾಪಕರು ಪೇಟೆಂಟ್ ದಾಖಲಿಸಿದ್ದಾರೆ. ಎಲೆಕ್ಟ್ರಾನಿಕ್ಸ್ ಮತ್ತು ಕಮ್ಯೂನಿಕೇಶನ್ ವಿಭಾಗದ ಮುಖ್ಯಸ್ಥ ಡಾ. ಮಹೇಂದ್ರ ದೀಕ್ಷಿತ್, ಪ್ರೊ. ಅಲ್ಲಮಪ್ರಭು ಕೊಳಕಿ, ಪ್ರೊ. ದೀಪಕ್ ಶರ್ಮ, ಪ್ರೊ. ನಿಖಿಲ್ ಕುಲಕರ್ಣಿ, ಕುಮಾರಿ. ಗಿರಿಜಾ ಯರಗುಂಟಿ ಆಧುನಿಕ ತಂತ್ರಜ್ಞಾನ ಬಳಸಿ ಕಾಡು ಸಂರಕ್ಷಣೆ ಕುರಿತಾದ ಯೋಜನಾ ಕಾರ್ಯ ವನ್ಯರಕ್ಷಕದ ಮೇಲೆ ಪೇಟೆಂಟ್ ದಾಖಲಿಸಿದ್ದಾರೆ.

ಮೆಕ್ಯಾನಿಕಲ್ ವಿಭಾಗದ ಡಾ. ಶಂಕರ್ ಬಡಿಗೇರ್, ಡಾ. ಅನಂತ ಜೋಶಿ, ಡಾ. ಗುರುರಾಜ ಹಟ್ಟಿ, ಪ್ರೊ. ನವೀನ್ ಹಿರೇಮಠ ಇವರುಗಳು ಆ ಮಾಡಿಫೈಡ್ ಇನ್ವರ್ಸ್ ದಿಫ್ಯೂಷನ್ ಫ್ಲೇಮ್ ಜಟ್ ಬರ್ನರ್ ವಿಥ್ 90 ಡಿಗ್ರಿ ಫ್ಯೂಲ್ ಜೇಟ್ಸ್ ವಿಷಯದ ಮೇಲೆ ಪೇಟೆಂಟ್ ದಾಖಲಿಸಿದ್ದಾರೆ.

ರಿಸರ್ಚ್ ಆನ್ ಇಂಜಿನಿಯರಿಂಗ್ ಸ್ಟ್ರಕ್ಚರ್ ಅಂಡ್ ಮಟೀರಿಯಲ್ಸ್ ಪತ್ರಿಕೆಯ ಜುಲೈ ತಿಂಗಳಿನ ಹಿರಿಯ ಪ್ರತಿಷ್ಠಿತ ವಿಮರ್ಶಕರ ಪಟ್ಟಿಯಲ್ಲಿ ಮಹಾವಿದ್ಯಾಲಯದ ಡೀನ್ ಅಕಾಡೆಮಿಕ್ ಡಾ. ಗುರುರಾಜ್ ಹಟ್ಟಿ ಅವರ ಸೇರ್ಪಡೆಯಾಗಿದೆ. ತಾಂತ್ರಿಕ ಸಂಶೋಧನಾ ಪ್ರಬಂಧಗಳನ್ನು ಉತ್ತಮ ರೀತಿಯಲ್ಲಿ ವಿಮರ್ಶಿಸಿದ ಇವರ ಕಾರ್ಯವನ್ನು ಗುರುತಿಸಿ ಪ್ರತಿಷ್ಠಿತ ವಿಮರ್ಶಕರ ಪಟ್ಟಿಯಲ್ಲಿ ಇವರ ಹೆಸರನ್ನು ಸೇರ್ಪಡಿಸಲಾಗಿದೆ.

ಮೆಕ್ಯಾನಿಕಲ್ ವಿಭಾಗದ ಮುಖ್ಯಸ್ಥ ಡಾ. ಕೆ ಎಸ್ ಪೂಜಾರ್, ಪ್ರೊ. ನರಸಿಂಹ ದೀಕ್ಷಿತ್ ಕರ್ನಾಟಕ ಸರ್ಕಾರವು ಬೆಳಗಾವಿಯ ಸುವರ್ಣಸೌಧದಲ್ಲಿ ಇತ್ತೀಚೆಗೆ ಆಯೋಜಿಸಿದ್ದ ಟೆಕ್ಲರೇಷನ್ 2025 ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು. ನೂತನವಾಗಿ ಉದ್ಯಮ ಪ್ರಾರಂಭಿಸುವ ಸ್ಟಾರ್ಟ್ ಅಪ್ ಗಳಿಗೆ ಸರ್ಕಾರ ಒದಗಿಸುವ ಸೌಲಭ್ಯಗಳ ಕುರಿತಾಗಿ ಈ ಕಾರ್ಯಕ್ರಮದಲ್ಲಿ ಮಾಹಿತಿ ನೀಡಲಾಯಿತು.

ಬೆಳಗಾವಿಯ ಗೋಗಟೆ ತಾಂತ್ರಿಕ ಮಹಾವಿದ್ಯಾಲಯವು ಆಗಸ್ಟ್ 18 ರಿಂದ 22ರವರೆಗೆ ಎನ್ವಿಡಿಯ ಸಂಸ್ಥೆಯ ಸಹಭಾಗಿತ್ವದಲ್ಲಿ ನೂತನ ಗ್ರಾಫಿಕ್ಸ್ ತಂತ್ರಜ್ಞಾನದ ಕುರಿತಾಗಿ ಮಾಹಿತಿ ನೀಡಲು ಆಯೋಜಿಸಿದ್ದ ಕಾರ್ಯಾಗಾರದಲ್ಲಿ ಪ್ರೊ. ಪ್ರಾಣೇಶ್ ಕುಲಕರ್ಣಿ ಹಾಗೂ ಪ್ರೊ. ರಾಘವೇಂದ್ರ ನಾಗರಹಳ್ಳಿ ಭಾಗವಹಿಸಿದ್ದರು. ಮಹಾವಿದ್ಯಾಲಯದ ಪ್ರಾಧ್ಯಾಪಕರನ್ನು ಈ ಸಾಧನೆಗಾಗಿ ಆಡಳಿತ ಮಂಡಳಿ ಅಧ್ಯಕ್ಷ ಪ್ರಶಾಂತ ಕುಲಕರ್ಣಿ ಮತ್ತು ಪ್ರಾಚಾರ್ಯ ಡಾ. ವಿ ಎ ಕುಲಕರ್ಣಿ ಅಭಿನಂದಿಸಿದ್ದಾರೆ. ಪ್ರಾಧ್ಯಾಪಕರ ಈ ತಾಂತ್ರಿಕ ಪ್ರಗತಿ ವಿದ್ಯಾರ್ಥಿ ಗಳಿಗೆ ಮುಂಬರುವ ದಿನಗಳಲ್ಲಿ ಉಪಯೋಗ ವಾಗಲಿದೆ ಎಂದು ವಿಶ್ವಾಸ ವ್ಯಕ್ತ ಪಡಿಸಿದ್ದಾರೆ.

ಮಾನ್ಯ ಗೌರವಾನ್ವಿತ ಸಿವಿಲ್ ಮತ್ತು ಜೆ.ಎಂ.ಎಫ್.ಸಿ.ನ್ಯಾಯಾದೀಶರವರ ನ್ಯಾಯಾಲಯ, ಹರಪನಹಳ್ಳಿ
ಕ್ರಿಮಿನಲ್ ಮಿಸ್ ಸಂಖ್ಯೆ: 593/2025

ಅರ್ಜಿದಾರರು:- ಶ್ರೀ ಜಿಟ್ಟಿನಕಟ್ಟಿ ಸಿದ್ದಪ್ಪ ತಂದೆ ಲೇಟ್ ಈಶ್ವರಪ್ಪ, ವಯಸ್ಸು: 75ವರ್ಷ ವೃತ್ತಿ: ವ್ಯವಸಾಯ, ವಾಸ:12ನೇ ವಾರ್ಡ್‌ಕುರುಬಗೇರಿ, ಹರಪನಹಳ್ಳಿ ಪಟ್ಟಣ ಹರಪನಹಳ್ಳಿ ತಾಲೂಕು,ವಿಜಯನಗರ ಜಿಲ್ಲೆ.

-: ವಿರುದ್ಧ :-

ಎದುರುದಾರು:-
ಮಾನ್ಯ ತಹಶಿಲ್ದಾರರು ತಾಲೂಕು ಕಛೇರಿ ಹರಪನಹಳ್ಳಿತಾಲೂಕು, ವಿಜಯನಗರ

ಸಾರ್ವಜನಿಕ ಪತ್ರಿಕಾ ಪ್ರಕಟಣೆ

ಅರ್ಜಿದಾರನ ತಾಯಿಯಾದ ಶಿವಮ್ಮ ಗಂಡ ಲೇಟ್ ಈಶ್ವರಪ್ಪ ಇವರು ದಿನಾಂಕ: 01.04.1966 ರಂದು ಹರಪನಹಳ್ಳಿ ತಾಲೂಕು ಜಿಟ್ಟಿನಕಟ್ಟಿ ಗ್ರಾಮದಲ್ಲಿ ಮರಣ ಹೊಂದಿದ್ದು, ಪೋತಿ ಖಾತೆ ಮಾಡಿಸಿಕೊಳ್ಳುವ ಸಲುವಾಗಿ ಅವರ ಮರಣಪತ್ರ ಕೋರಿ ಹರಪನಹಳ್ಳಿ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ ನ್ಯಾಯಾಲಯದಲ್ಲಿ ಪ್ರಕರಣವನ್ನು ದಾಖಲು ಮಾಡಿದ್ದು, ಸದರಿ ಪ್ರಕಣವು ದಿನಾಂಕ: 15.09.2025 ರಂದು ಇರುತ್ತದೆ. ಮೇಲ್ಕಂಡ ವಿಚಾರದಲ್ಲಿ ಸಂಬಂಧಪಟ್ಟ ಯಾರಾದರೂ ತಕರಾರು ಸಲ್ಲಿಸಲು ಆಸಕಿ ಇದ್ದರೆ ಅಂತಹವರು ಮೇಲ್ಕಂಡ ದಿನಾಂಕ ದಂದು ಬೆಳಗ್ಗೆ 11-00 ಗಂಟೆಗೆ ಮೇಲ್ಕಂಡ ನ್ಯಾಯಾಲಯದಲ್ಲಿ ಖುದ್ದಾಗಿ ಅಥವಾ ವಕೀಲರ ಮೂಲಕ ಹಾಜರಾಗಿ ತಮ್ಮ ತಕರಾರು ಸಲ್ಲಿಸಬಹುದು ಇಲ್ಲವಾದಲ್ಲಿ ಯಾವುದೇ ತಕರಾರು ಇಲ್ಲವೆಂದು ಪರಿಣಿಸಿ ಅರ್ಜಿಯನ್ನು ಮಾನ್ಯ ಘನ ನ್ಯಾಯಾಲಯದಲ್ಲಿ ಏಕಪಕ್ಷೀಯವಾಗಿ ತೀರ್ಮಾನಿಸಿಲಾಗುತ್ತದೆ.

ನ್ಯಾಯಾಲಯದ ಆದೇಶದ ಮೇರೆಗೆ
ಶಿರಸ್ತೆದಾರರು, ಸಿವಿಲ್ ಜಡ್ಜ್ ಮತ್ತು ಜೆ.ಎಂ. ಎಫ್.ಸಿ.ನ್ಯಾಯಾಲಯ ಹರಪನಹಳ್ಳಿ.

ಅರ್ಜಿದಾರರ ಪರ ವಕೀಲರು
ಶ್ರೀ. ಮಂಜುನಾಥ್,ವಕೀಲರು
ದಿನಾಂಕ: 22.08.2025
ಸ್ಥಳ: ಹರಪನಹಳ್ಳಿ

ಮಾನ್ಯ ಕೌಟುಂಬಿಕ ನ್ಯಾಯಾಧೀಶರವರ ನ್ಯಾಯಾಲಯದಲ್ಲಿ, ದಾವಣಗೆರೆ
ಸಿ.ಆರ್.ಮಿಸ್ ನಂ. 421/2024

ಅರ್ಜಿದಾರರು:- ಶ್ರೀಮತಿ ಹೆಚ್.ವನಿತಾ
ಹಾಗೂ ಇನ್ನೊಬ್ಬರು

-: ವಿರುದ್ಧ :-

ಎದುರುದಾರು:-
ಹಾಲೇಶ್.ವೈ. ನೋಟಿಸ್ ದಾರರು ಬಿನ್ ಲೇಟ್ **ತಾಳೇದಹಳ್ಳಿ ಗೋಣೆಪ್ಪ,** ವಯಸ್ಸು ಸುಮಾರು 46 ವರ್ಷ,ಉದ್ಯೋಗ : ಕಿರಾಣಿ ಅಂಗಡಿಯಲ್ಲಿ ಕೆಲಸ ಹಾಗೂ ವ್ಯವಸಾಯ, ವಾಸ : ಮಾಡಗೆರೆ ಗ್ರಾಮ, ನಾಗತಿಬಸಾಪುರ ಅಂಚೆ,ಹರಪನಹಳ್ಳಿ ತಾಲ್ಲೂಕು, ವಿಜಯನಗರ ಜಿಲ್ಲೆ

ಅರ್ಜಿದಾರರ ಪರ ನೀಡಲಾದ ಪ್ರಕಟಣಾ ನೋಟೀಸು

ಮೇಲ್ಕಂಡ ಪ್ರಕರಣವನ್ನು ಅರ್ಜಿದಾರರು ಎದುರುದಾರರ ವಿರುದ್ಧ ಜೀವನಾಂಶ ಕೋರಿ ಮಾನ್ಯ ಘನ ನ್ಯಾಯಾಲಯದಲ್ಲಿ ಸಲ್ಲಿಸಿರುತಾರೆ. ಸದರಿ ಪ್ರಕರಣದಲ್ಲಿ ನೀವು ಎದುರುದಾರರಾಗಿದ್ದು, ನ್ಯಾಯಾಲಯವು ನಿಮ್ಮ ವಿರುದ್ಧ ನ್ಯಾಯಾಲಯದಿಂದ ಸಮನ್ ಅನ್ನು ನೋಂದಾಯಿತ ಅಂಚೆಯ ಸಹಾ ಅವ್ರೆ ನಿಮಗೆ ಜಾರಿಯಾಗಿರುವುದಿಲ್ಲ. ಮೂಲಕ ಕಾರಣ ನಿಮ್ಮ ಹಾಜರಾತಿಗಾಗಿ ದಿನಾಂಕ: 04.10.2025 ರಂದು ಬೆಳಿಗ್ಗೆ 11:00 ಗಂಟೆಗೆ ಮುದ್ದತು ವಕೀಲರ ನಿಗಧಿಯಾಗಿದ್ದು, ದಿನ ನೀವು ಖುದ್ದಾಗಿಯಾಗಲೀ ಅಥವಾ ಮುಖಾಂತರವಾಗಲೀ ಪ್ರಕರಣದಲ್ಲಿ ಹಾಜರಿದ್ದು, ತಕರಾರು ಇದ್ದಲ್ಲಿ ಸಲ್ಲಿಸತಕ್ಕದ್ದು. ತಪ್ಪಿದಲ್ಲಿ ನಿಮ್ಮ ವಿರುದ್ಧ ಏಕಪಕ್ಷಿಯ ತೀರ್ಮಾನ ತೆಗೆದುಕೊಳ್ಳಲಾಗುವುದು ತಿಳಿಯಿರಿ.

ನ್ಯಾಯಾಲಯದ ಮೊಹರು ಹಾಗೂ ಸಹಿಯೊಂದಿಗೆ, ದಿನಾಂಕ:22.08.2025 ರಂದು ಕೊಡಲ್ಪಟ್ಟಿದೆ,

ನ್ಯಾಯಾಲಯದ ಆದೇಶದ ಮೇರೆಗೆ
ಶಿರಸ್ತೇದಾರರು
ಮಾನ್ಯ ಕೌಟುಂಬಿಕ ನ್ಯಾಯಾದೀಶರು, ದಾವಣಗೆರೆ

ಅರ್ಜಿದಾರರ ಪರ ವಕೀಲರು
(ಎನ್.ಪರಶುರಾಮಪ್ಪ)

ಸಮಾಚಾರ ಸಣ್ಣದಲ್ಲ

ಪಿಎಸ್‌ಟಿ ಮರು ಹೊಂದಾಣಿಕೆ ಅನ್ಯಾಯ

ರಟ್ಟೀಹಳ್ಳಿ: ಪ್ರಸ್ತುತ ವರ್ಷ ನಡೆಯುತ್ತಿರುವ ಶಿಕ್ಷಕರ ಹೆಚ್ಚುವರಿ ಪ್ರಕ್ರಿಯೆಯಲ್ಲಿ ಹೆಚ್ಚುವರಿ ಎಂದು ಗುರುತಿಸಲಾದ ಪಿಎಸ್‌ಟಿ ಇಂಗ್ಲಿಷ್ ಶಿಕ್ಷಕರಿಗೆ ಮರು ಹೊಂದಾಣಿಕೆ ಮಾಡುವಾಗ ತಾಲೂಕಿನಲ್ಲಿ ಖಾಲಿ ಇರುವ ಪಿಎಸ್‌ಟಿ ಇಂಗ್ಲಿಷ್ ಹುದ್ದೆಗಳನ್ನು ಮೀಸಲಿಡಬೇಕು ಎಂದು ಇಂಗ್ಲಿಷ್ ಶಿಕ್ಷಕರು ಮನವಿ ಸಲ್ಲಿಸಿದರು. ಪಿಎಸ್‌ಟಿ ಇತರೆ ಹೆಚ್ಚುವರಿ ಶಿಕ್ಷಕರಿಗೆ ಇಂಗ್ಲಿಷ್ ಹುದ್ದೆಗಳನ್ನು ಮರು ಹೊಂದಾಣಿಕೆ ಮಾಡಬಾರದು. ಮರು ಹೊಂದಾಣಿಕೆ ಮಾಡಿದರೆ ಪಿಎಸ್‌ಟಿ ಇಂಗ್ಲಿಷ್ ಶಿಕ್ಷಕರಿಗೆ ಅನ್ಯಾಯ ವಾಗುತ್ತದೆ ಎಂದು ತಾಲೂಕಿನ ಪಿಎಸ್‌ಟಿ ಇಂಗ್ಲಿಷ್ ಶಿಕ್ಷಕರು ಬಿಇಒ ಎನ್,.ಶ್ರೀಧರ್ ಅವರಿಗೆ ಮನವಿ ಮಾಡಿದರು.

ಸಚಿವರ ವೀಕ್ಷಣೆ ಕಾಟಾಚಾರಕ್ಕೆ ಸೀಮಿತ

ನವಲಗುಂದ: ವಿಧಾನಸಭಾ ಕ್ಷೇತ್ರದಲ್ಲಿ ಜಿಲ್ಲಾ ಉಸ್ತುವಾರಿ ಸಚಿವರು ಹಾಗೂ ಶಾಸಕರು ಜಿಲ್ಲಾಧಿಕಾರಿಗಳ ನೇತೃತ್ವದ ಅಧಿಕಾರಿಗಳ ತಂಡ ಇತ್ತೀಚಿಗೆ ಸುರಿದ ಭಾರಿ

ಮಳೆಗೆ ಬೆಳೆ ಹಾನಿ ನೆರೆ ಹಾವಳಿಯಿಂದ ಆದ ಬೆಳೆ ಹಾನಿ, ಮನೆಗಳ ಹಾನಿ, ಕುರಿತು ವೀಕ್ಷಣೆ ಮಾಡಿ ವಿಳಂಬ ಮಾಡದೆ ತಕ್ಷಣ ಪರಿ ಹಾರ ಒದಗಿಸಬೇಕು. ಕೇಂದ್ರ ಸರಕಾರದ ಕಡೆ ಬೊಟ್ಟು ಮಾಡುವುದನ್ನು ಬಿಟ್ಟು ರಾಜ್ಯ ಸರಕಾರದಿಂದ ಸಿಗಬೇಕಾದ ಪರಿಹಾರವನ್ನು ಕೊಡಿಸುವಲ್ಲಿ ಪ್ರಾಮಾಣಿಕ ಪ್ರಯತ್ನ ಮಾಡಬೇಕು ಎಂದು ನವಲಗುಂದ ವಿಧಾನ ಸಭಾ ಕ್ಷೇತ್ರದ ಬಿಜೆಪಿ ಮುಖಂಡರಾದ ದೇವರಾಜ್ ಬ. ದಾಡಿಬಾವಿ ರವರು ಪಕ್ಷದ ಮುಖಂಡರು ಆಗ್ರಹ ಪಡಿಸಿದ್ದಾರೆ. ಕಳೆದ ಜೂನ್ ತಿಂಗಳಲ್ಲಿ ಬಾರಿ ಮಳೆಗೆ ಬೆಣ್ಣೆ ಹಳ್ಳ, ತುಪ್ಪರಿಹಳ್ಳ ಮುಂತಾದ ಹಳ್ಳಗಳಿಂದ ಅಪಾರ ಪ್ರಮಾಣದಲ್ಲಿ ಬೆಳೆಹಾನಿ ಆದಾಗ ಸಚಿವರು, ಶಾಸಕರು, ಭೇಟಿಕೊಟ್ಟು ಪರಿಹಾರ ದೊರಕಿಸಿ ಕೊಡುವುದಾಗಿ ಭರವಸೆ ಕೊಟ್ಟಿದ್ದರು. ವಿಮೆ ಕಂಪನಿಯವರ ಬೆಳೆ ಸಮೀಕ್ಷೆಯಲ್ಲಿನ ನಿಯಮ ಸಡಿಲಗೊಳಿಸಲು ವಿಮೆ ಕಂಪನಿಯವರಿಗೆ ಆದೇಶ ಮಾಡಬೇಕು ಎಂದು ತಿಳಿಸಿದ್ದಾರೆ.

ಎನ್‌ಎಂಎಂಎಸ್ ತಯಾರಿ ಕಾರ್ಯಾಗಾರ

ಧಾರವಾಡ: ಸರಕಾರಿ ಆದರ್ಶ ವಿದ್ಯಾಲಯ ಸಾಧನೆಯಲ್ಲಿ ಧಾರವಾಡ ಶಹರ ಹಾಗೂ ಧಾರವಾಡ ಗ್ರಾಮೀಣ ವಿದ್ಯಾರ್ಥಿಗಳಿಗಾಗಿ ಎನ್‌ಎಂಎಂಎಸ್ ಪರೀಕ್ಷಾ ಪೂರ್ವ ತಯಾರಿ ಕಾರ್ಯಾಗಾರವನ್ನು ಏರ್ಪಡಿಸಲಾಗಿತ್ತು. ಈ ಕಾರ್ಯಕ್ಕೆ ಸುಮಾರು 130 ಕ್ಕೂ ವಿದ್ಯಾರ್ಥಿಗಳು ಹಾಜರಾಗಿದ್ದರು. ಪಾಲಕರ ಸಭೆಯಲ್ಲಿ ಶಿಕ್ಷಣ ಇಲಾಖೆಯ ಹಿರಿಯ ಅಧಿಕಾರಿಗಳಾದ, ಗಿರೀಶ್ ಪದಕಿ, ಹೊಡೆದ್ಮನಿ, ಉಮೇಶ್ ಬೊಮ್ಮಕ್ಕನವರ್, ಶ್ರೀನಿವಾಸ ಸವಣೂರು ಓಇಊನ ಅಶ್ವಿನ್ ಬೋಸಾರೆ, ಸುಭೋದಯ ಶಿಕ್ಷಣ ಸಮಿತಿ ಅಧ್ಯಕ್ಷರು ಗಿರಿಧರ್ ಕಿನ್ನಾಳ, ವಿನಾಯಕ್ ಜೋಶಿ, ರಮೇಶ್ ಉಳ್ಳಾಗಡ್ಡಿ, ಅಂಗಡಿ, ರಾಚಯ್ಯ ಹಿರೇಮಠ, ಕೀರ್ತಿ ನಾಡಿಗೆ ಇವರು ಪಾಲಕರನ್ನು ಉದ್ದೇಶಿಸಿ NMMS ಪರೀಕ್ಷೆ ಉದ್ದೇಶ ಹಾಗೂ ಪಾಲಕರ ಪಾತ್ರ ಕುರಿತು ಮಾತನಾಡಿದರು. ಈ ಕಾರ್ಯಕ್ರಮವು ಇವರ ಸಂಯೋಗದೊಂದಿಗೆ ಧಾರವಾಡದ ಸೇವಾಸಕ್ತ ಸಂಸ್ಥೆಗಳಾದ ಕರ್ನಾಟಕ ಇನ್ಕ್ಯೂಬೇಷನ್ ಫೌಂಡೇಷನ್, ಧಾರವಾಡ, ಸುಭೋದ ಶಿಕ್ಷಣ ಸಮಿತಿ, ಧಾರವಾಡ, ರೋಟರಿ ಸೆವನ್ ಹಿಲ್ಸ್, ಧಾರವಾಡ, ಎಸ್.ಆರ್. ತಲ್ಲೂರ ಫೌಂಡೇಷನ್, ಧಾರವಾಡ, ಎಂಜಿನಿಯರ್ಸ್ ಅಸೋಸಿಯೇಷನ್, ಧಾರವಾಡ, ಚನ್ನವೀರಗೌಡಾ ಅಣ್ಣಾ ಪಾಟೀಲ್ ಟ್ರಸ್ಟ್, ಧಾರವಾಡ, ಅಮೃತ ಅಕ್ಯಾಡಾಮಿ, ಧಾರವಾಡ ಉಪಸ್ಥಿತರಿದ್ದರು.

ವಿಶ್ವ ಬಂಧುತ್ವ ದಿನ: ರಕ್ತದಾನ ಅಭಿಯಾನ

ನರಗುಂದ: ದೇವರಂತೆ ಕಾಣುವ ವೈದ್ಯರು ಆಸ್ಪತ್ರೆಗೆ ಬರುವ ರೋಗಿಗಳನ್ನು ಪ್ರೀತಿಯಿಂದ ಕಂಡು ಅವರ ರೋಗ ಗುಣಪಡಿಸಿದರೆ ಪರಮಾತ್ಮನ ಆಶೀರ್ವಾದ ವೈದ್ಯರಿಗೆ ಸಿಗುತ್ತದೆ, ಆ ಕಾರಣದಿಂದ ದೇವರ ಸ್ವರೂಪಿಯಾದ ವೈದ್ಯರು ಹಣವನ್ನು ನೋಡದೆ ರೋಗಿಗಳನ್ನು ಗುಣಪಡಿಸುವತ್ತ ಗಮನಕೊಡಬೇಕು ಎಂದು ಈಶ್ವರೀಯ ವಿವಿ ಸಂಚಾಲಕಿ ಬ್ರ.ಪ್ರಭಕ್ಕನವರು ನುಡಿದರು. ಇಲ್ಲಿನ ಈಶ್ವರೀಯ ವಿಶ್ವವಿದ್ಯಾಲಯದಲ್ಲಿ ಇಂದು ಪ್ರಜಾಪಿತ ಬ್ರಹ್ಮಾಕುಮಾರಿ ಈಶ್ವರೀಯ ವಿಶ್ವವಿದ್ಯಾಲಯ ಮತ್ತು ತಾಲೂಕಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ಆಶ್ರಯದಲ್ಲಿ ರಾಜಯೋಗಿನಿ ದಾದಿ ಪ್ರಕಾಶಮಣಿ ಜೀ ಅವರ ಸ್ಮರಣಾರ್ಥ ವಿಶ್ವ ಬಂಧುತ್ವ ದಿನದ ಅಂಗವಾಗಿ ನಡೆದ ಬೃಹತ್ ರಕ್ತದಾನ ಶಿಬಿರದಲ್ಲಿ ಮಾತನಾಡಿದರು. ರಕ್ತದಾನ ಅಭಿಯಾನವನ್ನು ವೈದ್ಯರಾದ ಡಾ.ಎಸ್.ಎಚ್.ಹುರಳಿ ಹಾಗೂ ಡಾ.ಎ.ಐ.ಹುಯಿಲಗೋಳ ಅವರು ಉದ್ಘಾಟಿಸಿದರು. ನಂತರ ಡಾ.ಎಸ್.ಎಚ್.ಹುರಳಿ, ಡಾ.ವಿ.ಎಸ್. ಪಾಟೀಲ, ಡಾ.ಹಸಬಿ, ಡಾ.ಎಫ್.ಕೆ. ಸವದತ್ತಿ, ಡಾ.ಸುಮಂಗಲಾ ಸವದತ್ತಿ, ಡಾ.ಆರ್.ಸಿ. ಕೊರವನವರ, ಡಾ.ಸಿ.ಎಸ್.ಅಸೂಟಿ ಇದ್ದರು.

{ಸಾರಾ ಮಹೇಶ್ } ಮಾಜಿ ಸಚಿವ

ಧಾರ್ಮಿಕ, ದಾಸೋಹ, ಶಿಕ್ಷಣ, ಮಹಿಳೆಯರ ಸ್ವಾವಲಂಬನೆಗೆ ಸಾಲ ಕೊಡುವುದು, ದೇವಸ್ಥಾನಗಳ ಅಭಿವೃದ್ಧಿಗೆ ಧರ್ಮಸ್ಥಳ ನೆರವು ನೀಡುತ್ತಿದೆ. ನನ್ನ ಕ್ಷೇತ್ರದ ದೇವಾಲಯಗಳನ್ನು ಧರ್ಮಸ್ಥಳದ ಸಂಸ್ಥೆ ನೆರವು ನೀಡಿ ಅಭಿವೃದ್ಧಿಪಡಿಸಿದೆ. ಅಂತಹ ಕ್ಷೇತ್ರದ ಮೇಲೆ ಇತ್ತೀಚೆಗೆ ಷಡ್ಯಂತ್ರದಿಂದ ಆರೋಪ ಹೊರಿಸಲಾಗಿತ್ತು.

ಅಶೋಕೆಯಲ್ಲಿ ಸ್ವಭಾಷಾ ಚಾತುಮಾಸ್ಯ 44ನೇ ದಿನ | ಶ್ರೀಮಜ್ಜಗದ್ಗುರು ಶಂಕರಾಚಾರ್ಯ ರಾಘವೇಶ್ವರ

ಮಾತೃಭಾಷೆಗೆ ಪರ್ಯಾಯ ಇಲ್ಲ

ಗೋಕರ್ಣ: ಅಮ್ಮನ ಸಂಬಂಧ ಮತ್ತು ಉಪ್ಪಿನ ರುಚಿಗೆ ಪರ್ಯಾಯ ಇಲ್ಲ; ಅಂತೆಯೇ ಎಷ್ಟೇ ಭಾಷೆಗಳಿದ್ದರೂ ಮಾತೃಭಾಷೆಗೆ ಪರ್ಯಾಯವಾಗಲಾರದು ಎಂದು ಶ್ರೀಮಜ್ಜಗದ್ಗುರು ಶಂಕರಾಚಾರ್ಯ ಶ್ರೀರಾಘವೇಶ್ವರಭಾರತೀಮಹಾಸ್ವಾಮೀಜಿ ನುಡಿದರು.

ಅಶೋಕೆಯಲ್ಲಿ ಸ್ವಭಾಷಾ ಚಾತುಮಾಸ್ಯ ವ್ರತ ಕೈಗೊಂಡಿರುವ ಶ್ರೀಗಳು 44ನೇ ದಿನವಾದ ಶುಕ್ರವಾರ ಉಪ್ಪಿನಂಗಡಿ ಮಂಡಲದ ಪುತ್ತೂರು, ಬೆಟ್ಟಂಪಾಡಿ, ಪಂಜ, ಚೊಕ್ಕಾಡಿ, ಬೆಳ್ಳಾರೆ ಮತ್ತು ಧರ್ಬೆ ವಲಯಗಳ ಶಿಷ್ಯರಿಂದ ಸರ್ವಸೇವೆ ಸ್ವೀಕರಿಸಿ ಆಶೀರ್ವಚನ ಅನುಗ್ರಹಿಸಿದರು.

ಭಾರತೀಯ ಭಾಷೆಗಳು ವಾಗ್ದೇವತೆ ಸರಸ್ವತಿಯ ಪ್ರೇರಣೆಯಿಂದ ಬಂದದ್ದು. ತಾಯಿ, ತಾಯ್ನಾಡು ಮತ್ತು ವಾಗ್ದೇವತೆಗೆ ಗೌರವ ನೀಡುವುದು ನಮ್ಮ ಕರ್ತವ್ಯ. ನಮ್ಮ ಭಾಷೆಯ ಪಾವಿತ್ರ್ಯವನ್ನು ನಾವು ಕಾಪಾಡಿಕೊಳ್ಳಬೇಕು. ಆದ್ದರಿಂದ ಇದೇ ಪರಕೀಯ ಶಬ್ದಗಳನ್ನು ವಿಸರ್ಜಿಸುವ ಪ್ರತಿಜ್ಞೆ ಕೈಗೊಂಡು ಭಾಷೆಯ ಶುದ್ಧತೆಗೆ ಗಮನ ಹರಿಸೋಣ ಎಂದು ಕರೆ ನೀಡಿದರು.

ಶಂಕರರು ಸಹಸ್ರ ವರ್ಷಗಳ ಹಿಂದೆ ಬೆಳಗಿದ ದೀಪದ ಬೆಳಕಿನಲ್ಲಿ ನಮ್ಮತನದತ್ತ ಮರಳೋಣ. ಪರಕೀಯತೆ ಬಿಟ್ಟು ಸ್ವಂತಿಕೆಯತ್ತ ನಡೆಯೋಣ ಎಂದು ಆಶಿಸಿದರು.

ದಿನಕ್ಕೊಂದು ಆಂಗ್ಲಪದ ತ್ಯಾಗ ಅಭಿಯಾನದಲ್ಲಿ ಇಂದು ವ್ಯಾಪಕವಾಗಿ ಬಳಕೆಯಲ್ಲಿರುವ ಸರ್, ಮೇಡಂ ಪದಗಳನ್ನು ಬಿಡೋಣ. ಇದು ಗುಲಾಮಗಿರಿಯ ಸಂಕೇತ. ಕನ್ನಡದಲ್ಲಿ ಗೌರವಸೂಚಕ, ಸಂಬಂಧ ಸೂಚಕ ಪದಗಳು ಹೇರಳವಾಗಿದ್ದು, ಅದನ್ನು ಮತ್ತೆ ಚಾಲ್ತಿಗೆ ತರೋಣ ಎಂದರು.

ಗೌರವಾನ್ವಿತರನ್ನು ಮಹೋದಯ, ಮಹಾನುಭಾವ ಎಂದು ಸಂಬೋಧಿಸಬೇಕು. ಅಂತೆಯೇ ನಮ್ಮ ಆಡು ಭಾಷೆಯಲ್ಲಿ ಬಂದ ಅತಿಥಿಗಳ ವಯಸ್ಸನ್ನು ನೋಡಿಕೊಂಡು ಅಣ್ಣ, ಅಕ್ಕ, ತಮ್ಮ, ತಂಗಿ, ಅಜ್ಜ, ಮಾವ, ಭಾವ ಹೀಗೆ ಆತ್ಮೀಯತೆಯನ್ನು ಸೂಚಿಸುವ ಹಲವು ಪದಗಳನ್ನು ಬಳಸುತ್ತೇವೆ. ಮಕ್ಕಳನ್ನು ಕೂಡಾ ಪುಟ್ಟ, ಪುಟ್ಟಿ, ಮಗ, ಮಗಳು ಎಂದು ಸಂಬೋಧಿಸುವ ಕ್ರಮ ಇದೆ. ಆದರೆ ಇಂಗ್ಲಿಷ್‌ನ ಅಂಕಲ್, ಆಂಟಿ ಎಂಬ ಪದಗಳು ಎಲ್ಲ ಸಂಬಂಧಗಳನ್ನು ನುಂಗಿಹಾಕುವಂಥವು. ಸಂಬಂಧ ಸೂಚಕ, ವೈವಿಧ್ಯಮಯ ಪದಗಳನ್ನು ಬಳಸುವ ಮೂಲಕ ಸಂಬಂಧ ಬೆಸೆಯುವ ಕಾರ್ಯ ಮಾಡೋಣ ಎಂದು ಸೂಚಿಸಿದರು.

ದಕ್ಷಿಣ ಕನ್ನಡ ಬಿಜೆಪಿಯ ಹಿರಿಯ ಮುಖಂಡರಾದ ಮುರಳಿ ಹಸಂತಡ್ಕ, ಅರುಣ್ ಕುಮಾರ್ ಪುತ್ತಿಲ ಶ್ರೀಗಳಿಂದ ಆಶೀರ್ವಾದ ಪಡೆದರು. ಹವ್ಯಕ ಮಹಾಮಂಡಲ ಅಧ್ಯಕ್ಷ ಹರಿಪ್ರಸಾದ್ ಪೆರಿಯಪ್ಪು, ವಿವಿವಿ ಹಿರಿಯ ಲೋಕಸಂಪರ್ಕಾಧಿಕಾರಿ ಜಿ.ಕೆ.ಹೆಗಡೆ, ಉಪ್ಪಿನಂಗಡಿ ಮಂಡಲ ಅಧ್ಯಕ್ಷ ಅರವಿಂದ ಧರ್ಬೆ, ಚಾತುರ್ಮಾಸ್ಯ ತಂಡದ ಮಂಜುನಾಥ ಸುವರ್ಣಗದ್ದೆ, ಶ್ರೀಕಾಂತ ಪಂಡಿತ, ಎನ್.ಆರ್.ರಾಘವೇಂದ್ರ, ಎಂಜಿನಿಯರ್ ವಿಷ್ಣು ಬನಾರಿ, ವೇದಮೂರ್ತಿ ಗುರು ಭಟ್ಟರು, ಜಿ.ಎಲ್.ಹೆಗಡೆ ಉಪಸ್ಥಿತರಿದ್ದರು. ವೇದಮೂರ್ತಿ ಪರಮೇಶ್ವರ ಮಾರ್ಕಂಡೇಯವರ ಅಧ್ವರ್ಯದಲ್ಲಿ ಗೋಕರ್ಣದ ಭದ್ರಕಾಳಿ ಮಂದಿರದಲ್ಲಿ ಚಂಡಿಕಾ ಹವನ ನಡೆಯಿತು. ಬಳಿಕ ಶ್ರೀಗಳು ಭದ್ರಕಾಳಿ ದೇವಾಲಯದಲ್ಲಿ ವಿಶೇಷ ಪೂಜೆ ಸಲ್ಲಿಸಿದರು.

ವೇದಮೂರ್ತಿ ಪರಮೇಶ್ವರ ಮಾರ್ಕಂಡೆಯವರ ಅಧ್ವರ್ಯದಲ್ಲಿ ಗೋಕರ್ಣದ ಭದ್ರಕಾಳಿ ಮಂದಿರದಲ್ಲಿ ಚಂಡಿಕಾ ಹವನ ನಡೆಯಿತು. ರಾಘವೇಶ್ವರ ಶ್ರೀ ಉಪಸ್ಥಿತರಿದ್ದರು.

> **ವಿಶ್ವದ ಯಾವುದೇ ಭಾಷೆಗಳಿಗಿಂತ ಸಮೃದ್ಧ ಭಾಷೆ ಕನ್ನಡ. ಕನ್ನಡದಲ್ಲಿ ಶಬ್ದ ದಾರಿದ್ರ್ಯ ಅಥವಾ ಶಬ್ದಗಳಿಗೆ ಬಡತನ ಇಲ್ಲ. ಆದಾಗ್ಯೂ ಪರಕೀಯ ಶಬ್ದಗಳಿಂದ ನಮ್ಮ ತಾಯ್ನಾಡನ್ನು ಕಲುಷಿತಗೊಳಿಸದೇ ಭಾಷೆಯ ಶುದ್ಧತೆಯನ್ನು ಕಾಪಾಡಿಕೊಳ್ಳುವುದು ನಮ್ಮೆಲ್ಲರ ಹೊಣೆ.**
>
> -ರಾಘವೇಶ್ವರ ಶ್ರೀ

ಶ್ರೀಮದ್ ಭಾಗವತ 6ನೇ ಸ್ಕಂದ ಪ್ರವಚನ

ಸವಣೂರು: ಪ್ರತಿಯೊಂದು ಜೀವ ಹಾಗೂ ನಿರ್ಜೀವ ವಸ್ತುಗಳಲ್ಲಿಯೂ ಭಗವಂತನ ಸನ್ನಿಧಾನ ಇರುತ್ತದೆ. ಅದನ್ನು ಅರಿಯುವ ಶ್ರೇಯೋಮಾರ್ಗವನ್ನು ಅನುಸರಿಸಬೇಕು ಎಂದು ಅಧ್ಯಾಪಕ ವಿದ್ವಾನ್ ರಾಮಾಚಾರ್ಯ ತಿಳಿಸಿದರು.

ಸವಣೂರಿನ ಶ್ರೀಸತ್ಯಬೋಧಸ್ವಾಮಿಗಳ ಮೂಲ ಬೃಂದಾವನ ಸನ್ನಿಧಾನದಲ್ಲಿ ರವಿವಾರ ಜರುಗಿದ ಶ್ರವಣ ಯಜ್ಞದ ಅಡಿ ಶ್ರೀಮದ್ ಭಾಗವತದ ಆರನೇ ಸ್ಕಂದದ ಪ್ರವಚನವನ್ನು ಅವರು ನೀಡಿದರು.

ವೇದಗಳ ಅನುಸರಣೆ ಶಾಸ್ತ್ರಸಮ್ಮತವಾದ ಧರ್ಮವಾಗಿದ್ದು, ನಮ್ಮ ಮನಸ್ಸನ್ನು ಭಗವಂತನ ಪಾದಗಳಲ್ಲಿ ನೆಲೆಗೊಳಿಸಬೇಕು. ಹರಿನಾಮಸ್ಮರಣೆ ನಿರಂತರವಾಗಿರಬೇಕು ಎಂದರು.

ಭಾಗವತದ ವೃತ್ತಾಸುರನ ಉತ್ಪತ್ತಿ, ವಜ್ರಾಯುಧದ ಸೃಷ್ಟಿ, ನಹುಶನ ದುರಹಂಕಾರ, ಮರುತ್ ದೇವತೆಗಳ ಜನ್ಮದ ವೃತ್ತಾಂತವನ್ನು ತಿಳಿಸಿದರು. ಪರ್ಯಾಯಸ್ಥರಾದ ಅವಿನಾಶ ಆಚಾರ್ಯ, ಅನೂಪ್ ಆಚಾರ್ಯ ಹಾಗೂ ಅಭಿಷೇಕ್ ಆಚಾರ್ಯ ರಾಯಚೂರು ಶ್ರವಣ ಯಜ್ಞದ ನೇತೃತ್ವ ವಹಿಸಿದ್ದರು.

ಅರ್ಚಕರಾದ ರಂಗಾಚಾರ ರಾಯಚೂರು, ಗಲಗಲಿ ಆಚಾರ್ಯರು, ಪ್ರವೀಣ್ ಆಚಾರ್ಯ ಆಯಿ, ಪ್ರವೀಣ ಕುಲಕರ್ಣಿ ಉಪಸ್ಥಿತರಿದ್ದರು.

ಶ್ರೀಮಠದಲ್ಲಿ ಅಲಂಕಾರ, ಹಸ್ತೋದಕ, ತೀರ್ಥ ಪ್ರಸಾದ ವಿತರಣೆ ಕಾರ್ಯಕ್ರಮಗಳು ಜರುಗಿದವು

> **ಲೌಕಿಕ ವಿಷಯದಲ್ಲಿ ಮುಳುಗಿದ್ದ ಅಜಾಮಿಳನ ವೃತ್ತಾಂತ, ಅಂತ್ಯಕಾಲದಲ್ಲಿ ಮಾಡಿದ ಭಗವಂತನ ಸ್ಮರಣೆಯ ಫಲಶ್ರುತಿ, ಸ್ವಾಯಂಭು ಮನು, ಪ್ರಚೇತಸರ ಕಥೆ, ಹರಿಯಶ್ವರು, ಶಬಲಾಶ್ವರ ಹಾಗೂ ನಾರದರ ಸಂವಾದ, ಗಂಗಾವತರಣದ ಪ್ರಸಂಗ, ಇಂದ್ರ ಹಾಗೂ ವಿಶ್ವರೂಪ ಆಚಾರ್ಯರ ನಡುವಿನ ಕಥೆಯನ್ನು ವಿವರಿಸಿದ ಅವರು, ಗುರುಗಳ ಪ್ರಸನ್ನತೆಯ ಮಹತ್ವ.**
>
> – ವಿದ್ವಾನ್ ರಾಮಾಚಾರ್ಯ, ಅಧ್ಯಾಪಕ

ಸವಣೂರಿನ ಶ್ರೀಮಠದಲ್ಲಿ ಶ್ರವಣ ಯಜ್ಞದ ಅಂಗವಾಗಿ ವಿದ್ವಾನ್ ರಾಮಾಚಾರ ಅಧ್ಯಾಪಕ ಭಾಗವತದ ಪ್ರವಚನ ಕೈಗೊಂಡಿರುವುದು.

ಮಕ್ಕಳಲ್ಲಿ ಪುಸ್ತಕ ಓದಿನ ಆಸಕ್ತಿ ಮೂಡಿಸಿ

ನರಗುಂದ: ಮೊದಲು ಮಕ್ಕಳ ಎದುರು ಮೋಬೈಲ್ ಬಳಕೆ ಕಡಿಮೆ ಮಾಡಿ ಮಕ್ಕಳಿಂದ ಮೋಬೈಲ್ ದೂರವಿಡಿ. ಮೋಬೈಲ್ ಬದಲಾಗಿ ಪುಸ್ತಕ ಕೊಡಿ, ಓದುವ ಆಸಕ್ತಿ ಮೂಡಿಸಿ ಇಲ್ಲದೆ ಹೋದರೆ ಮುಂದೊಂದು ದಿನ ಹೊಸ ಎಐ ತಂತ್ರಜ್ಞಾನ ಮಕ್ಕಳ ಜೀವನವನ್ನು ಕಸಿದುಕೊಳ್ಳುತ್ತದೆ ಎಂದು ಸಮರ್ಥ ಶಿಕ್ಷಣ ಸಂಸ್ಥೆ ಅಧ್ಯಕ್ಷ ರಾಜು ಕಲಾಲ ಎಚ್ಚರಿಸಿದರು.

ಇಲ್ಲಿನ ಸಮರ್ಥ ಶಿಕ್ಷಣ ಸಂಸ್ಥೆಯ ನವೋದಯ ಕೋಚಿಂಗ್ ಸೆಂಟರ್‌ನಲ್ಲಿ ವಿವಿಧ ವಸತಿ ಶಾಲೆಗೆ ಆಯ್ಕೆಯಾದ ಮಕ್ಕಳಿಗೆ ಅಭಿನಂದನಾ ಸಮಾರಂಭದ ಅಧ್ಯಕ್ಷತೆವಹಿಸಿ ಮಾತನಾಡಿದರು.

ಮುಖ್ಯ ಅತಿಥಿಗಳಾಗಿ ಪುರಸಭೆ ಸದಸ್ಯ ಅಪ್ಪಣಗೌಡ ನಾಯ್ಕರ ಮಾತನಾಡಿ, ಶಿಕ್ಷಣ ಪ್ರೇಮಿಗಳಿಂದ ಮಾತ್ರ ಶಿಕ್ಷಣ ಸಂಸ್ಥೆ ಬೆಳೆಯಲು ಸಾಧ್ಯ, ರಾಜು ಕಲಾಲ ಅವರು ಸಂಸ್ಥೆಯನ್ನು ಹುಟ್ಟು ಹಾಕಿ ಮಕ್ಕಳ ಶ್ರೇಯೋಭಿವೃದ್ಧಿಗೆ ಶ್ರಮಿಸುತ್ತಿದ್ದಾರೆ ಎಂದರು.

ಶಿಕ್ಷಕ ಎಫ್.ಐ.ಹದಲಿ ಮಾತನಾಡಿ, ಎರಡು ವರ್ಷದಲ್ಲಿ ತೋರಿದ ಸಾಧನೆಯನ್ನು ವಿವರಿಸಿದ ಅವರು ವಿದ್ಯಾರ್ಥಿಗಳು ನವೋದಯ ತರಬೇತಿ ಕೇಂದ್ರದ ಸೌಲಭ್ಯಗಳನ್ನು ಪಡೆದುಕೊಂಡು ವಿವಿಧ ವಸತಿ ನಿಲಯದ ಪರೀಕ್ಷೆಯಲ್ಲಿ ಪಾಸಾಗಿ ಸಂಸ್ಥೆಗೆ ಮತ್ತು ಪಾಲಕರಿಗೆ ಕೀರ್ತಿ ತಂದಿದ್ದಾರೆ. ಆಳ್ವಾಸ್‌ನಲ್ಲಿ 20, ಸೈನಿಕ ಶಾಲೆಗೆ ಮತ್ತು ಮುರಾರ್ಜಿ ಶಾಲೆಗೆ 12 ವಿದ್ಯಾರ್ಥಿಗಳು ಆಯ್ಕೆಯಾಗಿದ್ದಾಗಿ ತಿಳಿಸಿದರು. ನವೋದಯ ವಸತಿ ಶಾಲೆಗೆ ಗ್ರಾಮೀಣ ಮಕ್ಕಳಿಗೆ ಹೆಚ್ಚು ಅವಕಾಶವಿದ್ದು ಉಳಿದ ವಸತಿ ಶಾಲೆಗೆ ನಗರ ಪ್ರದೇಶದ ಮಕ್ಕಳಿಗೆ ಅವಕಾಶ ಸಿಗಲಿದೆ ಎಂದರು.

ಅತಿಥಿಗಳಾದ ಶಿವರಡ್ಡಿ ಕಿಲಬನೂರ, ಎಸ್.ಬಿ.ದೊಡಮನಿ ಮಾತನಾಡಿದರು, ಈ ಸಂದರ್ಭದಲ್ಲಿ ವಿವಿಧ ವಸತಿ ಶಾಲೆಗಳಿಗೆ ಆಯ್ಕೆಯಾದ ಮಕ್ಕಳನ್ನು ಸನ್ಮಾನಿಸಲಾಯಿತು. ಮಕ್ಕಳು ಮತ್ತು ಪಾಲಕರಿಂದ ಸಂಸ್ಥೆಯ ಅಧ್ಯಕ್ಷರು, ಶಿಕ್ಷಕರನ್ನು ಸನ್ಮಾನಿಸಿದ್ದು ಗಮನ ಸೆಳೆಯಿತು. ಪಾಲಕರಾದ ಸುರೇಶ ಹಡಪದ, ವೈ.ಎಸ್.ಮರಿಗೌಡ್ರ, ರೋಜಾಬಾನು ತಹಸೀಲ್ದಾರ, ಕೆಂಗಾರಕರ, ಮಕ್ಕಳಾದ ರಮೇಶ ಕೆಂಗಾರಕರ, ಶಶಾಂಕ ಮರಿಗೌಡ್ರ, ಶ್ರಮಿಕ ಜಾಮದಾರ ಅನುಭವ ಹಂಚಿಕೊಂಡರು. ಮುಖ್ಯ ಶಿಕ್ಷಕ ಪಿ.ವಿ.ಶಿರುಂದಮಠ ಸ್ವಾಗತಿಸಿದರು, ಶಿಕ್ಷಕಿ ನೀಲಮ್ಮ ನಿರೂಪಿಸಿದರು, ಪಿ.ವಿ.ಕೆಂಚನಗೌಡ್ರ ವಂದಿಸಿದರು.

ನರಗುಂದದ ಸಮರ್ಥ ಶಿಕ್ಷಣ ಸಂಸ್ಥೆಯಿಂದ ವಿವಿಧ ವಸತಿ ಶಾಲೆಗೆ ಆಯ್ಕೆಯಾದ ಮಕ್ಕಳನ್ನು ಸಂಸ್ಥೆಯ ರಾಜು ಕಲಾಲ ಸನ್ಮಾನಿಸಿದರು.

> **ಗುಣಮಟ್ಟದ ಶಿಕ್ಷಣದ ಜತೆಗೆ ಉತ್ತಮ ವಸತಿ ವ್ಯವಸ್ಥೆ, ಮಕ್ಕಳ ಆರೋಗ್ಯದತ್ತ ಗಮನ ಹರಿಸಿ ಅವರನ್ನು ಸ್ಪರ್ಧಾತ್ಮಕ ಪರೀಕ್ಷೆಗೆ ಸಿದ್ಧಪಡಿಸುವಲ್ಲಿ ಶಿಕ್ಷಕರು ಉತ್ತಮ ತರಬೇತಿ ನೀಡಿ ಶಿಸ್ತನ್ನು ಕಲಿಸುತ್ತಿದ್ದು ಬರುವ ಪರೀಕ್ಷೆಯಲ್ಲಿ ಶೇ.60ರಷ್ಟು ಫಲಿತಾಂಶ ಪಡೆಯವು ನಿಟ್ಟಿನಲ್ಲಿ ಕಲಿಕೆಗೆ ಒತ್ತು ನೀಡಲಾಗಿದೆ.**
>
> **- ರಾಜು ಕಲಾಲ,** ಸಮರ್ಥ ಶಿಕ್ಷಣ ಸಂಸ್ಥೆ ಅಧ್ಯಕ್ಷ

ಶ್ರಾವಣಮಾಸ: ದಾನಮ್ಮ ದೇವಿಗೆ ಪೂಜೆ

ಕಲಘಟಗಿ: ತಾಲೂಕಿನ ಬೆಲವಂತರ ಗ್ರಾಮದಲ್ಲಿ ಶ್ರೀ ಚನ್ನಬಸವೇಶ್ವರ ಶಿವಯೋಗಿಗಳ ಹಿರೇಮಠದಲ್ಲಿ ಶ್ರಾವಣಮಾಸದ ನಿಮಿತ್ತ ಒಂದು ತಿಂಗಳಕಾಲ ಗುಡ್ಡಾಪುರದ ಶ್ರೀ ದಾನಮ್ಮದೇವಿಯ ಆರಾಧನೆ ಹಾಗೂ ಪುರಾಣ ಪ್ರವಚನ ಕಾರ್ಯಕ್ರಮ ನೆರವೇರಿಸಲಾಯಿತು.

ಪ್ರತಿವರ್ಷ ಶ್ರಾವಣಮಾಸದ ಒಂದು ತಿಂಗಳಕಾಲ ಈ ಮಠದಲ್ಲಿ ಪುರಾಣ ಹಾಗೂ ಪ್ರವಚನ ನಡೆಯುತ್ತಾ ಬಂದಿದ್ದು ಮಠದ ಸೇವಕರಾದ ಗಂಗಾಧರ ಹಿರೇಮಠ ರವರು ಈ ಒಂದು ಪುರಾಣ ಪ್ರವಚನ ಹೇಳುತ್ತಾ ಬಂದಿರುತ್ತಾರೆ. ಶ್ರಾವಣ ಮಾಸದ ಅಂಗವಾಗಿ ಮಠದಲ್ಲಿ ಪ್ರತಿ ನಿತ್ಯ ವಿಶೇಷ ಪೂಜೆ ಹಾಗೂ ಭಕ್ತರಿಗೆ ತರ ತರಹದ ಅಡುಗೆಯ ಅನ್ನ ದಾಸೋಹ ಏರ್ಪಡಿಸಲಾಗುತ್ತದೆ. ಅದೇ ರೀತಿ ಶ್ರಾವಣ ಮಾಸದ ಕೊನೆಯ ದಿನವಾದ್ದರಿಂದ ಮಠದಲ್ಲಿ ದಾನಮ್ಮ ದೇವಿಯ ಆರಾಧನೆ ಹಾಗೂ ಗ್ರಾಮದ ಪ್ರಮುಖ ಬೀದಿಗಳಲ್ಲಿ ಕುಂಭ ಮೇಳ ಏರ್ಪಡಿಸಲಾಗಿತ್ತದೆ.

ದಾಸೋಹಕ್ಕೆ ಹತ್ತು ಸಾವಿರ ಹೋಳಿಗೆ ತಯಾರಿಸಿದ ಗ್ರಾಮದ ಮಹಿಳೆಯರು

ಮುಖ್ಯವಾಗಿ ದಾನಮ್ಮ ದೇವಿಯ ಇಷ್ಟಾರ್ಥ ನೈವೇದ್ಯ ವಾದ ಹೋಳಿಗೆಯನ್ನು ಗ್ರಾಮದ ಮಹಿಳೆಯರು ಕೂಡಿಕೊಂಡು ಇಲ್ಲಿ ಬರುವ ಭಕ್ತರ ದಾಸೋಹಕ್ಕಾಗಿ ಸುಮಾರು ಹತ್ತು ಸಾವಿರ ಹೋಳಿಗೆ ತಯಾರಿಸುತ್ತಿರುವ ದೃಶ್ಯ ವಿಶೇಷವಾಗಿತ್ತು.

ಪವಾಡ ಪುರುಷ ಶ್ರೀ ಚನ್ನಬಸವೇಶ್ವರ ಶಿವಯೋಗಿಗಳು

ಗ್ರಾಮದ ಶ್ರೀ ಚನ್ನಬಸವೇಶ್ವರ ಶಿವಯೋಗಿಗಳ ಮಠದ ಮಹಿಮೆ 90 ವರ್ಷಗಳ ಇತಿಹಾಸ ಇದೆ ಅಂದಿನ ಕಾಲದಲ್ಲಿ ಸ್ವಾಮಿಗಳು ಪವಾಡ ಪುರುಷರಾಗಿದ್ದರು ಎಂದು ಇಲ್ಲಿಗೆ ಬರುವ ಭಕ್ತರು ತಿಳಿಸಿದ್ದಾರೆ. ಈ ಮಠಕ್ಕೆ ರಾಜ್ಯದ ಹಲವಾರು ಭಾಗಗಳಿಂದ ಭಕ್ತರು ಆಗಮಿಸಿ ದರ್ಶನ ಪಡೆಯುತ್ತಾರೆ. ಈ ಒಂದು ಗ್ರಾಮ ಕಲಘಟಗಿ ತಾಲೂಕಿನಲ್ಲಿ ಶ್ರೀ ಕ್ಷೇತ್ರ ಗ್ರಾಮವಾಗಿರೋದು ವಿಶೇಷವಾಗಿದೆ.

ರೇಮಠದಲ್ಲಿ ಶ್ರಾವಣಮಾಸದ ನಿಮಿತ್ತ ಒಂದು ತಿಂಗಳಕಾಲ ಗುಡ್ಡಾಪುರದ ಶ್ರೀ ದಾನಮ್ಮದೇವಿಯ ಆರಾಧನೆ ಹಾಗೂ ಪುರಾಣ ಪ್ರವಚನ ಕಾರ್ಯಕ್ರಮ ನೆರವೇರಿತು.

ಪ್ರತಿ ವರ್ಷ ಈ ಕ್ಷೇತ್ರದಲ್ಲಿ ಜರುಗುವ ಅದ್ದೂರಿ ಜಾತ್ರೆ

ಈ ಮಠದಲ್ಲಿ ಪ್ರತಿ ವರ್ಷ ವಿಜೃಂಭಣೆಯಿಂದ ಶ್ರೀ ಚನ್ನಬಸವೇಶ್ವರ ಶಿವಯೋಗಿಗಳ ಜಾತ್ರೆಕೂಡ ಜರಗುವುದು ವಿಶೇಷವಾಗಿದೆ. ಜಾತ್ರೆಯಲ್ಲಿ ಬರುವ ಭಕ್ತರಿಗೆ ದಾಸೋಹಕ್ಕೆ ಸುಮಾರು ಮೂವತ್ತೈದು ಕಿಂಟಲ್ ಮಾದಲಿ ಮಾಡಲಾಗುತ್ತದೆಯಂತೆ.

ಮಾದಕ ವಸ್ತುಗಳ ದುಷ್ಪರಿಣಾಮ ಬಗ್ಗೆ ಜಾಗೃತಿ

ಹಾವೇರಿ: ಜಿಲ್ಲೆಯ ಎಲ್ಲ ಪದವಿ, ಡಿಪ್ಲೊಮಾ, ವೈದ್ಯಕೀಯ ಹಾಗೂ ಎಂಜನಿಯರ್ ಕಾಲೇಜುಗಳಲ್ಲಿ ವಿದ್ಯಾರ್ಥಿಗಳಿಗೆ ಮಾದಕವಸ್ತುಗಳ ಸೇವನೆಯಿಂದ ಉಂಟಾಗುವ ದುಷ್ಪರಿಣಾಮಗಳ ಹಾಗೂ ಕಾನೂನು ಕ್ರಮಗಳ ಕುರಿತು ಜಾಗೃತಿ ಮೂಡಿಸಬೇಕು ಎಂದು ಅಧಿಕಾರಿಗಳಿಗೆ ಜಿಲ್ಲಾಧಿಕಾರಿ ಡಾ.ವಿಜಯಮಹಾಂತೇಶ ದಾನಮ್ಮನವರ ಸೂಚನೆ ನೀಡಿದರು.

ಜಿಲ್ಲಾಧಿಕಾರಿಗಳ ಕಚೇರಿ ಸಭಾಂಗಣದಲ್ಲಿ ಜರುಗಿದ ನಾರ್ಕೊ ಸಮನ್ವಯ ಕೇಂದ್ರ (ಫೌಇಣ್ಣಕೀ) ಸಭೆಯಲ್ಲಿ ಮಾತನಾಡಿದ ಅವರು, ಪ್ರಸ್ತುತ ದಿನಮಾನಗಳಲ್ಲಿ ಭವಿಷ್ಯದ ಹಿತದೃಷ್ಟಿಯಿಂದ ಯುವ ಸಮೂಹಕ್ಕೆ ಮಾದಕ ವಸ್ತುಗಳಿಂದ ಉಂಟಾಗುವ ತೊಂದರಗಳ ಬಗ್ಗೆ ಅರಿವು ಮೂಡಿಸಲು ಹೆಚ್ಚಿನ ಗಮನ ಹರಿಸಬೇಕು. ಜಿಲ್ಲೆಯಲ್ಲಿ ಪರಿಣಾಮಕಾರಿಯಾಗಿ ಅನುಷ್ಠಾನವಾಗಬೇಕು ಎಂದು ಸಂಬಂಧಪಟ್ಟ ಇಲಾಖೆ ಅಧಿಕಾರಿಗಳಿಗೆ ಸೂಚನೆ ನೀಡಿದರು.

ನಿಗಾ ವಹಿಸಿ: ಮಾದಕ ವಸ್ತುಗಳ ಬಳಕೆ ಕುರಿತು ವೃತ್ತಿಪರ ಕೋರ್ಸ್ ಕಾಲೇಜುಗಳು ಹಾಗೂ ವಿದ್ಯಾರ್ಥಿ ನಿಲಯಗಳಲ್ಲಿ, ಜಿಮ್‌ಗಳು, ಕ್ಲಬ್ ಹಾಗೂ ಬಾರ್‌ಗಳು, ಪಿಕ್‌ನಿಕ್ ಸ್ಥಳಗಳಲ್ಲಿ ಹೆಚ್ಚಿನ ನಿಗಾ ವಹಿಸಬೇಕು. ಅದೇ ರೀತಿ ಕೋರಿಯರ್ ಕೆ.ಎಸ್.ಆರ್.ಟಿ.ಸಿ. ಪಾಸ್ಸ್‌ಗಳ ಪರಿಶೀಲನೆ ಮಾಡಬೇಕು ಎಂದು ಸಂಬಂಧಪಟ್ಟ ಅಧಿಕಾರಿಗಳಿಗೆ ಸೂಚನೆ ನೀಡಿದರು.

ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಯಶೋಧಾ ವಂಟಗೋಡಿ ಮಾತನಾಡಿ, ನಾನು ಜಿಲ್ಲೆಗೆ ಬಂದಮೇಲೆ ಎರಡು ಪ್ರಕರಣಗಳಲ್ಲಿ ಮೂರು ಕಾಲ ಕೆ.ಜಿ.ಗಾಂಜಾ ವಶಪಡಿಸಿಕೊಳ್ಳಲಾಗಿದೆ. ಹಾಗಾಗಿ ಮಾದಕ ವಸ್ತುಗಳ ಸಾಗಾಣಿಕೆ ಹಾಗೂ ಮಾದಕ ವ್ಯಸನಿಗಳ ಪತ್ತೆಗೆ ಪೊಲೀಸ್ ಇಲಾಖೆಯೊಂದಿಗೆ ಇತರೆ ಇಲಾಖೆಗಳ ಹಾಗೂ ಸಾರ್ವಜನಿಕ ಸಹಕಾರ ಅಗತ್ಯವಾಗಿದೆ ಎಂದರು.

ಸಭೆಯಲ್ಲಿ ಅರಣ್ಯ, ಕೃಷಿ, ಅಬಕಾರಿ, ವೈದ್ಯಕೀಯ ಕಾಲೇಜು, ಪದವಿ ಪೂರ್ವ ಶಿಕ್ಷಣ ಇಲಾಖೆ ಸೇರಿದಂತೆ ವಿವಿಧ ಇಲಾಖೆ ಅಧಿಕಾರಿಗಳು ಉಪಸ್ಥಿತರಿದ್ದರು.

ಜಿಲ್ಲಾಧಿಕಾರಿಗಳ ಕಚೇರಿ ಸಭಾಂಗಣದಲ್ಲಿ ನಾರ್ಕೊ ಸಮನ್ವಯ ಕೇಂದ್ರ (NCORD) ಸಭೆಯಲ್ಲಿ ಡಾ.ವಿಜಯಮಹಾಂತೇಶ ದಾನಮ್ಮನವರ ಮಾತನಾಡಿದರು.

ಆ್ಯಪ್ ಬಳಕೆಗೆ ಸಲಹೆ

ಮಾದಕ ವಸ್ತುಗಳ ಬಳಕೆ ನಿಯಂತ್ರಿಸಲು 'ಡ್ರಗ್ಸ್‌ಫ್ರೀ ಕರ್ನಾಟಕ ಆ್ಯಪ್' ಬಿಡುಗಡೆ ಮಾಡಲಾಗಿದೆ. ಗೂಗಲ್ ಪ್ಲೇ ಸ್ಟೋರ್‌ನಲ್ಲಿ ಡೌನ್‌ಲೋಡ್ ಮಾಡಿಕೊಳ್ಳಬಹುದು. ಪ್ರತಿಯೊಬ್ಬರು ಇದನ್ನು ತಮ್ಮ ಮೊಬೈಲ್‌ಗಳಲ್ಲಿ ಡೌನ್‌ಲೋಡ್ ಮಾಡಿಕೊಳ್ಳಬೇಕು. ಮಾದಕ ಕಳ್ಳಸಾಗಾಣಿಕೆ ಹಾಗೂ ಮಾದಕ ವ್ಯಸನಿಗಳು ಕಂಡು ಬಂದಲ್ಲಿ ಆ್ಯಪ್‌ನಲ್ಲಿ ದಾಖಲಿಸಿದರೆ, ಈ ಸಂದೇಶ ಪೊಲೀಸ್ ಇಲಾಖೆಗೆ ರವಾನೆಯಾಗುತ್ತದೆ.

ವೈವಿಧ್ಯತೆಯಿಂದ ಕೂಡಿದ ಕೊಂಕಣಿ

ಧಾರವಾಡ: ಮುಂದಿನ ಜನಾಂಗಕ್ಕೆ ಸಂಸ್ಕೃತಿ ಉಳಿಯಲು ಭಾಷೆ ಬಹಳ ಪ್ರಾಮುಖ್ಯತೆ ಹೊಂದಿದೆ. ಕೊಂಕಣಿ ವೈವಿಧ್ಯತೆಯಿಂದ ಕೂಡಿದ ಭಾಷೆ, ಭಾಷೆಯ ಪರಸ್ಪರ ಕೊಡಿ, ತೆಗೆದುಕೊಳ್ಳುವಿಕೆ ಮತ್ತು ಅನುವಾದದಿಂದ ಹೆಚ್ಚು ಶ್ರೀಮಂತವಾಗಲು ಸಹಾಯಕವಾಗುತ್ತದೆ ಎಂದು ಕರ್ನಾಟಕ ವಿವಿ ಕುಲಪತಿ ಡಾ.ಎ.ಎಮ್ ಖಾನ್ ಹೇಳಿದರು. ಅವರು ಕರ್ನಾಟಕ ವಿವಿ ಕೊಂಕಣಿ ಅಧ್ಯಯನ ಪೀಠ ಮತ್ತು ಪಂ.ಪುಟ್ಟರಾಜ ಗವಾಯಿಗಳ ಕಲಾ ಪ್ರತಿಷ್ಠಾನ, ಧಾರವಾಡ ಇವರ ಸಂಯುಕ್ತ ಆಶ್ರಯದಲ್ಲಿ ಕನ್ನಡ ಅಧ್ಯಯನ ಪೀಠದ ಸಭಾಭವನದಲ್ಲಿ ಏರ್ಪಡಿಸಿದ್ದ ಕೊಂಕಣಿ ಮಾನ್ಯತಾ ದಿವಸ -25 ಅಂಗವಾಗಿ ಉಪನ್ಯಾಸ, ಪ್ರತಿಭಾಪುರಸ್ಕಾರ ಮತ್ತು ಮನೋರಂಜನಾ ಕಾರ್ಯಕ್ರಮಕ್ಕೆ ಚಾಲನೆ ನೀಡಿದರು. ಅಧ್ಯಕ್ಷತೆ ವಹಿಸಿದ್ದ ಅಧ್ಯಯನ ಪೀಠದ ಸಂಯೋಜಕ ಡಾ.ಉದಯ ರಾಯಕರ ಮಾತನಾಡಿದರು. ಉದ್ಯಮಿ ಮಂಜುನಾಥ ಪಿ ಸಾನು, ಪ್ರತಿಷ್ಠಾನದ ಅಧ್ಯಕ್ಷ ಎಮ್.ಎಸ್.ಫರಾಸ, ನ್ಯಾ. ಸುಶಾಂತ ವೇಣೇಕರ, ಇಂ. ಸುನೀಲ ಬಾಗೇವಾಡಿ, ಸುಂದರರಾವ ಸುವರ್ಣಕರ ಮಾತನಾಡಿದರು. ಅಧ್ಯಯನ ಪೀಠದ ಸದಸ್ಯ ಡಾ.ಸಂಗೀತಾ ಸುಶಾಂತ ಕೊಲ್ವೇಕರ ಸ್ವಾಗತಿಸಿದರು, ಸಾಹಿತಿ ಮಾರ್ತಾರ್ಗ ಡಪ್ಪ ಕತ್ತಿ ನಿರೂಪಿಸಿದರು. ಡಾ.ಉದಯ ರಾಯಕರ ವಂದಿಸಿದರು. ಕಲಾಶಕ್ತಿ ಪೌಂಡೇಷನ, ದೈವಜ್ಞ ಸಮಾಜ ಮಹಿಳಾ ಮಂಡಲಿ, ಹುಬ್ಬಳ್ಳಿ, ನವನಗರ ಸಾಂಸ್ಕೃಕ ಕಾರ್ಯಕ್ರಮಗಳು ಸಭಿಕರ ಮನಸೂರೆ ಗೊಳಿಸಿದವು. 96% ಕ್ಕೂ ಹೆಚ್ಚು ಅಂಕ ಪಡೆದ ವಿದ್ಯಾರ್ಥಿ ಗಳಿಗೆ ಪ್ರತಿಭಾ ಪುರಸ್ಕಾರ ನೀಡಿ ಗೌರವಿಸಲಾಯಿತು.

ಗಣೇಶ, ಈದ್ ಮಿಲಾದ್ ಶಾಂತಿಯಿಂದ ಆಚರಿಸಿ

ಅಣ್ಣಿಗೇರಿ: ಗಣೇಶ ಚತುರ್ಥಿ ಹಾಗೂ ಈದ್ ಮಿಲಾದ್ ಹಬ್ಬವನ್ನು ಶಾಂತಿ ಸೌಹಾರ್ದತೆಯೊಂದಿಗೆ ಧಾರ್ಮಿಕ ಭಾವನೆಗಳಿಗೂ ಧಕ್ಕೆಯಾಗದಂತೆ ಆಚರಿಸಿ ಎಂದು ಪಿಎಸ್ಐ ಉಮಾದೇವಿ ಹೇಳಿದರು. ನಗರದಲ್ಲಿ ಶಾಂತಿ ಸಭೆ ನಡೆಸಿ ಮಾತನಾಡಿದ ಅವರು, ಹಬ್ಬದ ಸಂಭ್ರಮದಲ್ಲಿ ಯಾರೂ ಡಿ.ಜೆ ಬಳಕೆ ಮಾಡಬಾರದು. ಸಾರ್ವಜನಿಕ ಸ್ಥಳಗಳಲ್ಲಿ ಗಣೇಶ ಮೂರ್ತಿ ಪ್ರತಿಷ್ಠಾಪನೆ ಮಾಡುವವರು ಕಡ್ಡಾಯವಾಗಿ ಸ್ಥಳೀಯ ಆಡಳಿತದಿಂದ ಅನುಮತಿ ಪಡೆಯಬೇಕು ಎಂದರು. ಮುಖಂಡರಾದ ಷಣ್ಮುಖ ಗುರಿಕಾರ, ಚಂಬಣ್ಣ ಸುರಕೋಡ, ಭಗವಂತಪ್ಪ ಪುಟ್ಟಣ್ಣವರ, ಗ್ಯಾರಂಟಿ ಸಮಿತಿ ಅಧ್ಯಕ್ಷ ಮಂಜುನಾಥ ಮಾಯಣ್ಣವರ, ಬಸವರಾಜ ಕೋಳಿವಾಡ, ಐ.ಜಿ. ಸಮುದ್ರಿ, ಫಕ್ರುವಲಿ ಲೋಕಾಪುರಿ ಇದ್ದರು.

ಗಣೇಶೋತ್ಸವ: ಪಟಾಕಿ ಮಾರಾಟಕ್ಕೆ ಸ್ಥಳ ನಿಗದಿ

ಹಾವೇರಿ: ಆ.27 ರಂದು ಗಣೇಶ ಚತುರ್ಥಿ ಹಬ್ಬದ ಪ್ರಯುಕ್ತ ಮದ್ದು ಮಾರಾಟವನ್ನು ಸಾರ್ವಜನಿಕ ಸುರಕ್ಷತೆ ಹಿತದೃಷ್ಠಿಯಿಂದ ಹಾಗೂ ಅಹಿತಕರ ಘಟನೆಗಳನ್ನು ತಪ್ಪಿಸುವ ಸಲುವಾಗಿ ಮುಂಜಾಗ್ರತಾ ಕ್ರಮ ಕೈಕೊಳ್ಳುವ ನಿಟ್ಟಿನಲ್ಲಿ ಜಿಲ್ಲೆಯ ನಗರ,ಪಟ್ಟಣ, ಗ್ರಾಮೀಣ ಪ್ರದೇಶಗಳಲ್ಲಿ ಅಧಿಕೃತವಾಗಿ ಪರವಾನಿಗೆ ಪಡೆದ ಮಾರಾಟಗಾರರು ಮಾತ್ರ ಕೇವಲ ಹಸಿರು ಪಟಾಕಿಗಳನಷ್ಟೇ ತಾತ್ಕಾಲಿಕ ಶೆಡ್ಡುಗಳನ್ನು ಅಗ್ನಿಶಾಮಕ ಇಲಾಖೆಯ ನಿರ್ದೇಶನದಂತೆ ನಿರ್ಮಿಸಿಕೊಂಡು ಹಾಗೂ ಸುರಕ್ಷತೆಯ ಎಲ್ಲ ವ್ಯವಸ್ಥೆಗಳನ್ನು ಅಳವಡಿಸಿ ಕೊಂಡು, ಆಯಾ ನಗರಸಭೆ, ಪುರಸಭೆ, ಪಪಂ ಹಾಗೂ ಗ್ರಾಪಂ ಅವ ರಿಂದ ಪ್ರತ್ಯೇಕ ಅನುಮತಿ ಹಾಗೂ ನಿರಾಕ್ಷೇಪಣಾ ಪತ್ರ ಪಡೆದುಕೊಂಡು ಸೆ.8ರವರೆಗೆ ಜಿಲ್ಲೆಯಲ್ಲಿ ಹಾವೇರಿ ತಾಲೂಕಿನ ಮುನ್ಸಿಪಲ್ ಹೈಸ್ಕೂಲ್ ಮೈದಾನ, ಹಾವೇರಿ. ಗುತ್ತಲದ ಗುತ್ತಲ ಗ್ರಾಮ ಜಾಗ, ಹೊಸರಿತ್ತಿ ಗ್ರಾಮದ ಗ್ರಾ ಪಂ ರಾಣೆಬೆನ್ನೂರು ತಾಲೂ ಕು ಕ್ರೀಡಾಂಗಣ ಮತ್ತು ಹಲಗೇರಿ ಗ್ರಾಮದ ಬಯಲು ಜಾಗ, ಅರೇ ಮಲ್ಲಾಪುರ ಗ್ರಾಮದ ಬ್ಯಾಡಗಿಯ ಶ್ರೀಜಗದ್ಗುರು ಜಯದೇವ ತಾಲೂಕು ಕ್ರೀಡಾಂಗಣ, ಹಿರೇಕೆರೂರ ತಾಲೂಕಿನ ಪೊಲೀಸ್ ಮೈದಾನದ ಬಯಲು ಪ್ರದೇಶ ಹೀಗೆ ನಿಗದಿಪಡಿಸಿದ ಸ್ಥಳಗಳಲ್ಲಿ ಮದ್ದು ಸಂಗ್ರಹಣೆ ಹಾಗೂ ಮಾರಾಟ ಮಾಡಬೇಕು ಈ ಆದೇಶವನ್ನು ಉಲ್ಲಂಘನೆ ಮಾಡಿದ ಲೈಸನ್ಸ್‌ದಾರರ ಮೇಲೆ ಕಾನೂನು ಕ್ರಮ ಜರುಗಿಸಲಾಗುವುದು ಎಂದು ಜಿಲ್ಲಾಧಿಕಾರಿಗಳು ಆದೇಶಿಸಿ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಸ್ನಾತಕೋತ್ತರ ಪದವಿ ಪ್ರವೇಶಕ್ಕೆ ಅರ್ಜಿ

ಧಾರವಾಡ: ಕರ್ನಾಟಕ ವಿಶ್ವವಿದ್ಯಾಲಯ ಪತ್ರಿಕೋದ್ಯಮ ಮತ್ತು ಸಮೂಹ ಸಂವಹನದ ಸ್ನಾತಕೋತ್ತರ ಪದವಿ ಪ್ರವೇಶ ಅರ್ಜಿ ಸಲ್ಲಿಸಲು ದಿನಾಂಕದಂದು ವಿಸ್ತರಿಸಲಾಗಿದೆ. ಸೆ.7 ನಿಗದಿತ ಅರ್ಜಿ ಸಲ್ಲಿಸಲು ಕೊನೆಯ ದಿನಾಂಕವಾಗಿದ್ದು, ಸೆ.9 ರಂದು 12.15 ರಿಂದ 1.30ರ ವರೆಗೆ ಪ್ರವೇಶ ಪರೀಕ್ಷೆ ಪತ್ರಿಕೋದ್ಯಮ ಮತ್ತು ವಿಭಾಗದಲ್ಲಿ ಜರುಗಲಿದೆ. ಪ್ರಸ್ತುತ ವಿಭಾಗವು 40 ವರ್ಷಗಳಿಂದ ಮಾಧ್ಯಮ ಕ್ಷೇತ್ರದ ಆಸಕ್ತ ವೃತ್ತಿಪರರಿಗೆ ಅತ್ಯಾಧುನಿಕ ಸ್ಟುಡಿಯೋ ತಂತ್ರಜ್ಞಾನದ ಮೂಲಕ ನೂತನ ಪಠ್ಯಕ್ರಮದ ಅನುಸಾರ ಮುದ್ರಣ ಮಾಧ್ಯಮ, ವಿದ್ಯುನ್ಮಾನ ಹಾಗೂ ಡಿಜಿಟಲ್ ಮಾಧ್ಯಮ ಸೇರಿದಂತೆ ಸಾರ್ವಜನಿಕ ಸಂಪರ್ಕ, ಜಾಹಿರಾತು, ಟೆಕ್ನಿಕಲ್ ಕಂಟೆಂಟ್ ರೈಟಿಂಗ್, ಸಿನೆಮಾ, ಧಾರಾವಾಹಿ ನಿರ್ಮಾಣ ಸೇರಿದಂತೆ ವಿದ್ಯಾರ್ಥಿಯ ಆಸಕ್ತಿ ಅನುಗುಣವಾಗಿ ನುರಿತ ವಿದ್ಯಾರ್ಥಿಗಳಿಂದ ವಿದ್ಯಾರ್ಥಿ ಕೇಂದ್ರಿತ ತರಬೇತಿ ನೀಡಲಾಗುತ್ತಿದೆ. ಕರ್ನಾಟಕ ವಿವಿ ಪತ್ರಿಕೋದ್ಯಮ ಮತ್ತು ಸಮೂಹ ಸಂವಹನ ವಿಭಾಗದಿಂದ 500ಕ್ಕಿಂತ ಹೆಚ್ಚು ಪತ್ರಕರ್ತರನ್ನು ರೂಪಿಸಿದ್ದು, ರಾಜ್ಯ ಮತ್ತು ದೇಶದ ಮಹಾನಗರಗಳಲ್ಲಿ ಪತ್ರಿಕೆ, ರೇಡಿಯೋ, ಟೆಲಿವಿಷನ್, ಡಿಜಿಟಲ್ ಮಾಧ್ಯಮ, ಸಾರ್ವಜನಿಕ ಸಂಪರ್ಕ, ಜಾಹಿರಾತು ಸಿನಿಮಾ, ಮನರಂಜನಾ ಉದ್ಯಮದಲ್ಲಿ ಅತ್ಯುತ್ತಮ ಸ್ಥಾನದಲ್ಲಿ ಕಾರ್ಯ ನಿರ್ವಹಿಸುತ್ತಿದ್ದಾರೆ. ವಿದ್ಯಾರ್ಥಿಗಳು ಹೆಚ್ಚಿನ ಮಾಹಿತಿಗಾಗಿ ಡಾ. ಸಂಜುಕುಮಾರ ಮಾಲಗತ್ತಿ, ಮೊಬೈಲ್ ಸಂ. 9481013993 ಮುಖ್ಯಸ್ಥರನ್ನು ಸಂಪರ್ಕಿಸಬಹುದಾಗಿದೆ.

ಸಮಾಚಾರ ಸಣ್ಣದಲ್ಲ

ಹಾವೇರಿ: ಸಾವಿನಲ್ಲೂ ಒಂದಾದ ದಂಪತಿ

ಹಾವೇರಿ: ಪತಿ ಅಂತ್ಯಕ್ರಿಯೆ ವೇಳೆ ಪತ್ನಿಯೂ ಸಾವನ್ನಪ್ಪಿದ ಘಟನೆ ರಾಣೆಬೆನ್ನೂರಿನ ನಂದಿಹಳ್ಳಿ ಗ್ರಾಮದಲ್ಲಿ ನಡೆದಿದೆ. ಇಷ್ಟು ದಿನ ಅನ್ಯೂನ್ಯವಾಗಿದ್ದ ದಂಪತಿ ಸಾವಿನಲ್ಲೂ ಒಂದಾಗಿದ್ದಾರೆ. ವೀರಬಸಪ್ಪ ಗೋಣಗೇರ (70) ಅನಾರೋಗ್ಯದಿಂದ ಭಾನುವಾರ ಬೆಳಗ್ಗೆ ಸಾವನ್ನಪ್ಪಿದ್ದರು. ಪತಿ ಅಂತ್ಯಕ್ರಿಯೆಗೆ ಹೋದ ಪತ್ನಿ ಬಸಮ್ಮ ವೀರಬಸಪ್ಪ ಗೋಣಗೇರ (60) ಅವರಿಗೆ ಲೋ ಬಿಪಿಯಾಗಿ ಮೃತಪಟ್ಟಿದ್ದಾರೆ. ಪತಿ, ಪತಿಯನ್ನು ಇಬ್ಬರನ್ನು ಅಂತ್ಯಕ್ರಿಯೆಯನ್ನು ಒಂದೇ ಚಿತೆಯಲ್ಲಿ ನಡೆಸಿದ್ದಾರೆ. ಸಾವಿನಲ್ಲೂ ಒಂದಾದ ಆದರ್ಶ ದಂಪತಿಯ ಅಂತ್ಯಸಂಸ್ಕಾರವನ್ನು ಗ್ರಾಮಸ್ಥರು ನೆರವೇರಿಸಿದ್ದಾರೆ.

ಬಸ್‌ಗೆ ಕಾರು ಡಿಕ್ಕಿ: ತೆಕ್ಕೆನ್ನವರ ನಿಧನ

ಬಾಗಲಕೋಟೆ: ವಾಹನ್ ಓವರ್ ಟೇಕ್ ಮಾಡಲು ಹೋಗಿ ಎದುರಿಗೆ ಬಂದ ಕೆಎಸ್‌ಆರ್‌ಟಿಸಿ ಬಸ್‌ಗೆ ಕಾರು ಡಿಕ್ಕಿ ಹೊಡೆದು ಪಂಚ ಗ್ಯಾರಂಟಿ ಅನುಷ್ಠಾನ ಪ್ರಾಧಿಕಾರದ ಜಿಲ್ಲಾಧ್ಯಕ್ಷ ಸಾಗರ ತೆಕ್ಕೆನ್ನವರ ಸಾವನ್ನಪ್ಪಿದ ಘಟನೆ ಬಾದಾಮಿ ತಾಲೂಕಿನ ಹೂಲಗೇರಿ ಗ್ರಾಮದ ಬಳಿ ನಡೆದಿದೆ. ಹೂಲಗೇರಿ ಗ್ರಾಮದ ಹುಬ್ಬಳ್ಳಿ-ವಿಜಯಪುರ ರಾಷ್ಟ್ರೀಯ ಹೆದ್ದಾರಿಯಲ್ಲಿ ಗದ್ದನಕೇರಿಯಿಂದ ಕೆರೂರಿಗೆ ತೆರಳುತ್ತಿದ್ದ ಸಾಗರ ತೆಕ್ಕೆನ್ನವರ ಚಲಾಯಿಸುತ್ತಿದ್ದ ಕಾರು, ಓವರ್ ಟೇಕ್ ಮಾಡುವ ಸಂದರ್ಭದಲ್ಲಿ ಹುಬ್ಬಳ್ಳಿಯಿಂದ ವಿಜಯಪುರಕ್ಕೆ ತೆರಳುತ್ತಿದ್ದ ಕೆಎಸ್ ಆರ್‌ಟಿಸಿ ಬಸ್‌ಗೆ ಡಿಕ್ಕಿ ಹೊಡೆದಿದೆ. ಡಿಕ್ಕಿ ಹೊಡೆತಕ್ಕೆ ಕಾರು ಸಂಪೂರ್ಣ ನುಚ್ಚುಗುಜ್ಜಾಗಿದೆ. ಬಸ್ ನಲ್ಲಿದ್ದ ಪ್ರಯಾಣಿಕರಿಗೆ ಸಣ್ಣ ಪುಟ್ಟ ಗಾಯಗಳಾಗಿವೆ. ಕೆರೂರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

5,000 ದೀಪಗಳಿಂದ ಗಣೇಶ ಆಕೃತಿ ರಚನೆ

ಕೊಪ್ಪಳ: ವಿಘ್ನನಿವಾರಕ, ಆದಿವಂದಿತ ಗಣೇಶನ ಹಬ್ಬ ಸಮೀಪಿಸುತ್ತಿದ್ದು, ಈ ಹಿನ್ನೆಲೆ ಕೊಪ್ಪಳದ ಗಂಗಾವತಿ ತಾಲೂಕಿನ ಶ್ರೀರಾಮನಗರದ ವಿದ್ಯಾನಿಕೇತನ ಪಬ್ಲಿಕ್ ಶಾಲೆಯ ಮಕ್ಕಳು ವಿನಾಯಕನ ಹಬ್ಬವನ್ನು ವಿಭಿನ್ನ ರೀತಿಯಲ್ಲಿ ಸ್ವಾಗತಿಸುವ ಮೂಲಕ ಗಮನ ಸೆಳೆದಿದ್ದಾರೆ. ಶಾಲೆಯಲ್ಲಿ ವ್ಯಾಸಂಗ ಮಾಡುತ್ತಿರುವ ವಿದ್ಯಾರ್ಥಿಗಳ ಪೈಕಿ ನಾಲ್ಕು ಸಾವಿರ ಮಕ್ಕಳು ಬೃಹತ್ ಆಕಾರದ ರೇಖಾ ಚಿತ್ರದ ಮೂಲಕ ಮೂಡಿಸಲಾದ ಗಣೇಶನ ಮೂರ್ತಿ ರೂಪಕದಲ್ಲಿ ಐದು ಸಾವಿರ ದೀಪಗಳನ್ನು ಬೆಳಗಿಸಿದ್ದಾರೆ. ಈ ಮನಮೋಹಕ ದೃಶ್ಯವನ್ನು ಸುಮಾರು ಐನೂರು ಮೀಟರ್ ಎತ್ತರದಿಂದ ಡ್ರೋನ್ ಕ್ಯಾಮೆರಾ ಮೂಲಕ ಸೆರೆ ಹಿಡಿಯಲಾಗಿದೆ.

ಅನುಚಿತ ವರ್ತನೆ: ಅರ್ಚಕನಿಗೆ ಥಳಿತ

ತುಮಕೂರು: ಕುಂಕುಮ ಇಡುವ ವೇಳೆ ಮಹಿಳೆಯೊಂದಿಗೆ ಅನುಚಿತ ವರ್ತನೆ ತೋರಿಸಿದ ಆರೋಪ ಹಿನ್ನೆಲೆಯಲ್ಲಿ ತುಮಕೂರಿನ ದೇವರಾಯನದುರ್ಗ ಅರ್ಚಕನ ಮೇಲೆ ಯುವಕರು ಹಲ್ಲೆ ಮಾಡಿರುವ ಘಟನೆ ನಡೆದಿದೆ. ಅರ್ಚಕ ನಾಗಭೂಷಣಾಚಾರ್ಯಗೆ ಮಹಿಳೆ ಯರು, ಇಬ್ಬರು ಯುವಕರು ಸೇರಿಕೊಂಡು ಕೋಲುನಿಂದ ಹಿಗ್ಗಾಮುಗ್ಗಾ ಥಳಿಸಿದ್ದಾರೆ. ನಾಲ್ಕು ದಿನದ ಹಿಂದೆಯೇ ಈ ಘಟನೆ ನಡೆದಿದ್ದು ತಡವಾಗ ಬೆಳಕಿಗೆ ಬಂದಿದೆ. ಸದ್ಯ ಸಾಮಾಜಿಕ ಜಾಲತಾಣದಲ್ಲಿ ವಿಡಿಯೊ ವೈರಲ್ ಆಗಿದ್ದು ನೆಟ್ಟಿಗರು ಆಕ್ರೋಶ ವ್ಯಕ್ತಪಡಿಸಿದ್ದಾರೆ.

ಉತ್ತಂಬಳ್ಳಿ ಮೇಲ್ಸೇತುವೆ ತಡೆಗೋಡೆ ಕುಸಿತ

ಚಾಮರಾಜನಗರ: ಸಂಚಾರಕ್ಕೆ ಮುಕ್ತಗೊಂಡು ವರ್ಷ ತುಂಬುವ ಮೊದಲೇ ಮೇಲ್ಸೇತುವೆಯ ತಡೆಗೋಡೆ ಕುಸಿದ ಘಟನೆ ಕೊಳ್ಳೇಗಾಲ ತಾಲೂಕಿನ ಉತ್ತಂಬಳ್ಳಿ ಹೊರವಲಯದಲ್ಲಿ ನಡೆದಿದೆ. ಕೊಳ್ಳೇಗಾಲ ತಾಲೂಕಿನ ಉತ್ತಂಬಳ್ಳಿ ಮೇಲ್ಸೇತುವೆ ತಡೆಗೋಡೆ ಇದ್ದಕ್ಕಿದ್ದಂತೆ ಭಾನುವಾರ ಮಧ್ಯಾಹ್ನ ಕುಸಿದು ಬಿದ್ದಿದೆ. ಚಾಮರಾಜನಗರ, ಬೆಂಗಳೂರು, ಮಲೆ ಮಹದೇಶ್ವರ ಬೆಟ್ಟ ಹಾಗೂ ತಮಿಳುನಾಡಿಗೆ ಸಂಪರ್ಕಿಸುವ ರಾಷ್ಟ್ರೀಯ ಹೆದ್ದಾರಿ ಇದಾಗಿದ್ದು, ಸಂಚಾರಕ್ಕೆ ಮುಕ್ತಗೊಂಡು ಒಂದು ವರ್ಷ ಕಳೆಯುವುದಕ್ಕೂ ಮುನ್ನವೇ ಕುಸಿದಿದೆ. ಮೇಲ್ಸೇತುವೆ ಕುಸಿದ ವಿಚಾರ ತಿಳಿದ ಕೂಡಲೇ ಕೊಳ್ಳೇಗಾಲ ಶಾಸಕ ಎ.ಆರ್.ಕೃಷ್ಣಮೂರ್ತಿ ಸ್ಥಳಕ್ಕೆ ಭೇಟಿ ನೀಡಿ ಪರಿಶೀಲನೆ ನಡೆಸಿದರು. ಬಳಿಕ ಮಾತನಾಡಿ ಅವರು, ಸಂಚಾರಕ್ಕೆ ಮುಕ್ತಗೊಂಡು ವರ್ಷ ಕಳೆಯುವ ಮುನ್ನವೇ ಉತ್ತಂಬಳ್ಳಿ ಮೇಲ್ಸೇತುವೆ ಕುಸಿದಿದ್ದು, ಇದು ಕಳಪೆ ಕಾಮಗಾರಿಯಾಗಿದೆ ಎಂದರು. ಹಲವು ವರ್ಷಗಳ ಕನಸು ನನಸಾಯಿತು ಎಂದುಕೊಂಡಿದ್ದೆವು. ಆದರೆ, ಕಾಮಗಾರಿ ಕಳಪೆಯಿಂದ ಕೂಡಿದ್ದು, ಕೇಂದ್ರ ಸರ್ಕಾರದ ವ್ಯಾಪ್ತಿಗೆ ಈ ರಸ್ತೆ ಕಾಮಗಾರಿ ಒಳಪಟ್ಟಿದೆ. ಕೇಂದ್ರ ಸಚಿವ ನಿತಿನ್ ಗಡ್ಕರಿ ಅವರು ರಸ್ತೆ ಗುಣಮಟ್ಟವನ್ನು ಪರಿಶೀಲಿಸಿ ಗುತ್ತಿಗೆದಾರನಿಗೆ ಹಣ ಕೊಡಬೇಕು. ಜೊತೆಗೆ, ಸೇತುವೆಯ ಮರು

ಯಾರೋ ಕಟ್ಟಿದ ಗೂಡಲ್ಲಿ ರಾಜ್ಯಭಾರ

ಜೆಡಿಎಸ್ ಸದಸ್ಯತ್ವ ನೋಂದಣಿ ಅಭಿಯಾನ | ಸಿಎಂ ಸಿದ್ದರಾಮಯ್ಯ ವಿರುದ್ಧ ನಿಖಿಲ್ ಆಕ್ರೋಶ

ದೇವನಹಳ್ಳಿ: ಸಿದ್ರಾಮಣ್ಣ ನಿಮ್ಮ ಮೇಲೆ ಗೌರವ ಇದೆ. ಯಾರೋ ಕಟ್ಟಿದ ಗೂಡಲ್ಲಿ ಕೂತು ನೀವು ಅಧಿಕಾರ ಮಾಡುತ್ತಿದ್ದೀರಾ ಎಂದು ಜೆಡಿಎಸ್ ಯುವ ಘಟಕದ ರಾಜ್ಯಾಧ್ಯಕ್ಷ ನಿಖಿಲ್ ಕುಮಾರಸ್ವಾಮಿ ಗುಡುಗಿದರು.

ಬೆಂಗಳೂರು ಸಮೀಪದ ದೇವನಹಳ್ಳಿ ಸರಕಾರಿ ಪದವಿಪೂರ್ವ ಕಾಲೇಜು ಮೈದಾನದಲ್ಲಿ ಹಮ್ಮಿಕೊಂಡಿದ್ದ ಜನರೊಂದಿಗೆ ಜನತಾದಳ-ಜೆಡಿಎಸ್ ಪಕ್ಷದ ಸದಸ್ಯತ್ವ ನೋಂದಣಿ ಅಭಿಯಾನದ ಉದ್ಘಾಟಿಸಿ ಮಾತನಾಡಿದರು.

ಸಿಎಂ ಸಿದ್ದರಾಮಯ್ಯ ಅವರು ಅಧಿವೇಶನದ ಕೊನೆ ದಿನ ಜೆಡಿಎಸ್ ಪಕ್ಷದ ಬಗ್ಗೆ ಲಘುವಾಗಿ ಮಾತನಾಡಿದ್ದಾರೆ. ಇದಕ್ಕೆ ನಾಡಿನ ಜನ ಮುಂಬರುವ ದಿನಗಳಲ್ಲಿ ತಕ್ಕ ಉತ್ತರ ಕೊಡ್ತಾರೆ. ರಾಜ್ಯದಲ್ಲಿ ಕಾಂಗ್ರೆಸ್‌ನನ್ನ ಸಂಪೂರ್ಣವಾಗಿ ತಿರಸ್ಕಾರ ಮಾಡ್ತಾರೆ. ರಾಜಕಾರಣದಲ್ಲಿ ಸಿಎಂ ಸಿದ್ದಮಯ್ಯ ಅವರು ಯಾವ ಪಕ್ಷದಿಂದ ಬೆಳೆದು ಬಂದರು. ಆ ದಾರಿಯನ್ನು ಮರೆತ್ತಿದ್ದಾರೆ. ಅಂದಿನ ಕಾಲದಲ್ಲಿ ದೊಡ್ಡ ದೊಡ್ಡ ನಾಯಕರು ಜೆಡಿಎಸ್ ಪಕ್ಷದಲ್ಲಿದ್ದರು. ಅಂದು ದೇವೇಗೌಡರು ಅವರನ್ನು ಹಣಕಾಸು ಸಚಿವರಾಗಿ ಮಾಡಿದರು. ಆದರೆ ಇಂದು ಜೆಡಿಎಸ್ ಪಕ್ಷವನ್ನೇ ಮರೆತಿದ್ದಾರೆ ಎಂದು ವ್ಯಂಗ್ಯವಾಡಿದರು.

2018ರ ಚುನಾವಣೆ ಫಲಿತಾಂಶದ ಬಳಿಕ ಪಂಚೆ, ಜುಬ್ಬಾ ಹಾಕಿ ಕೈ ಕಟ್ಟಿಕಂಡು ಸಿದ್ರಾಮಯ್ಯ ಅವರು ನಮ್ಮ ಜತೆ ಸರಕಾರ ಮಾಡಿ ಎಂದು ದೇವೇಗೌಡರು ಮನೆ ಬಾಗಿಲಿಗೆ ಬಂದಿದ್ದರು. ದೇವೇಗೌಡರು ಕುಮಾರಣ್ಣ ನಿಮ್ಮ ಮನೆ ಬಾಗಿಲಿಗೆ ಬಂದಿದ್ದರಾ? ಯಾರು ಬಂದಿದ್ದರು ಎಂದು ಆಕ್ರೋಶ ವ್ಯಕ್ತಪಡಿಸಿದರು.

ಕುಮಾರಣ್ಣ ಅವರಪ್ಪನಾಣೆ ಮುಖ್ಯಮಂತ್ರಿ ಆಗಲ್ಲ ಅಂತ 2018ರಲ್ಲಿ ಇದೇ ಸಿದ್ದರಾಮಯ್ಯ ಅವರು ಹೇಳಿದ್ರು. ಆಗ ಕುಮಾರಣ್ಣ ಮುಖ್ಯಮಂತ್ರಿ ಯಾದರು, ಸಿದ್ರಾಮಣ್ಣ ಹೇಳಿದ್ದೆಲ್ಲಾ ಉಲ್ಟಾನೆ ಆಗಿದೆ. ಯಾರೋ ಕಟ್ಟಿದ ಗೂಡಲ್ಲಿ ವಾಸ ಮಾಡುತ್ತಿರುವುದು ನೀವು. ನಮಗೆ ಸವಾಲು ಎಸೆದಿದ್ದೀರಿ ಆ ಸವಾಲನ್ನು ಸ್ವೀಕಾರ ಮಾಡುತ್ತೇನೆ ಎಂದು ನಿಖಿಲ್ ಕುಮಾರಸ್ವಾಮಿ ಅವರು ಹೇಳಿದರು.

ಸಿದ್ರಾಮಣ್ಣ ಮುಖ್ಯಮಂತ್ರಿ ಕುರ್ಚಿ ಭದ್ರವಾಗಿರುವವರೆಗೂ ಕಾಂಗ್ರೆಸ್ ಪಕ್ಷ . ಕಾಂಗ್ರೆಸ್ಸಲ್ಲಿರುವ ಮಂತ್ರಿಗಳು ವಾಸ್ತವಂಶ ಮಾತನಾಡುವ ಹಾಗೆ ಇಲ್ಲ. ವಾಸ್ತವಂಶ ಏನಾದರೂ ಮಾತಾಡಿದರೆ ಪಕ್ಷದಿಂದಲೇ ವಜಾ ಮಾಡುತ್ತಾರೆ.ಕಾಂಗ್ರೆಸ್ ಪಕ್ಷದ ಡೆಮಾಕ್ರಸಿ ಸಿಸ್ಟಮ್ ಇಲ್ಲ ಎಂದು ವಾಗ್ದಾಳಿ ನಡೆಸಿದರು.

ಈ ಸಂದರ್ಭದಲ್ಲಿ ಶಾಸಕಾಂಗ ಪಕ್ಷದ ನಾಯಕರಾದ ಸುರೇಶ್ ಬಾಬು ಸಿ.ಎಸ್. ಪುಟ್ಟರಾಜು, ಶಾಸಕ ಬಿ.ಎನ್. ರವಿಕುಮಾರ್, ಮಾಜಿ ಶಾಸಕ ನಿಸರ್ಗ ನಾರಾಯಣಸ್ವಾಮಿ, ಶ್ರೀನಿವಾಸ್ ಮೂರ್ತಿ, ಮಾಜಿ ವಿಧಾನಪರಿಷತ್ ಸದಸ್ಯ ರಮೇಶ್ ಗೌಡ , ಚೌಡರೆಡ್ಡಿ, ಮಹಿಳಾ ರಾಜ್ಯಾಧ್ಯಕ್ಷೆ ರಶ್ಮಿ ರಾಮೇಗೌಡ, ಜಿಲ್ಲಾಧ್ಯಕ್ಷ ಬಿ. ಮುನೇಗೌಡ, ಅಧ್ಯಕ್ಷ ಆರ್.ಮುನೇಗೌಡಸೇರಿದಂತೆ ಸ್ಥಳೀಯ ಮುಖಂಡರು, ಪಕ್ಷದ ಪದಾಧಿಕಾರಿಗಳು ಹಾಗೂ ಕಾರ್ಯಕರ್ತರು ಉಪಸ್ಥಿತರಿದ್ದರು.



ಬೆಂಗಳೂರು ಸಮೀಪದ ದೇವನಹಳ್ಳಿಯಲ್ಲಿ ಹಮ್ಮಿಕೊಂಡಿದ್ದ ಜೆಡಿಎಸ್ ಸದಸ್ಯತ್ವ ನೋಂದಣಿ ಅಭಿಯಾನದಲ್ಲಿ ಜೆಡಿಎಸ್ ಯುವ ಘಟಕದ ರಾಜ್ಯಾಧ್ಯಕ್ಷ ನಿಖಿಲ್ ಕುಮಾರಸ್ವಾಮಿ ಅವರು ರ‍್ಯಾಲಿ ನಡೆಸಿದರು.

ಧರ್ಮಸ್ಥಳಕ್ಕೆ ಕಳಂಕ ತರುವ ಕೆಲಸ

ಪುಣ್ಯ ಕ್ಷೇತ್ರ ಧರ್ಮಸ್ಥಳಕ್ಕೆ ವಿಶ್ವ ವ್ಯಾಪಿ ಭಕ್ತರಿದ್ದಾರೆ ಅದರಲ್ಲಿ ನಾನೂ ಒಬ್ಬ. ಇತ್ತೀಚೆಗೆ ಮಾಸ್ಕ್ ಮ್ಯಾನ್ ಹೇಳಿದ ಎಂದು ಎಸ್‌ಐಟಿ ರಚಿಸಿದ್ದಾರೆ. ಎಲ್ಲಾ ಕಡೆ ಸರ್ಚ್ ಮಾಡಿ ಏನೂ ಇಲ್ಲ ಎನ್ನುವುದು ಗೊತ್ತಾಗಿದೆ. ಆತನ ಬಣ್ಣ ಬಯಲಾದಮೇಲೆ ಧರ್ಮಸ್ಥಳಕ್ಕೆ ಕಳಂಕ ತರುವ ಕೆಲಸ ಮಾಡಬೇಕಿತ್ತಾ ಈ ರಾಜ್ಯ ಸರಕಾರ? ಯಾರೋ ಒಬ್ಬ ಹೇಳಿದ ಮಾತ್ರಕ್ಕೆ ಇಡೀ ಶ್ರೀ ಕ್ಷೇತ್ರದತ್ತ ಅನುಮಾನದಿಂದ ನೋಡುವಂತಾಗಿದೆ. ರಾಜ್ಯದ ಜನರಿಗೆ ಅನುಮಾನ ಮೂಡಿಸುವಂತೆ ಮಾಡಿದ್ದು ರಾಜ್ಯ ಸರಕಾರವೇ ಎಂದು ನಿಖಿಲ್ ಕುಮಾರಸ್ವಾಮಿ ಆಕ್ರೋಶ ವ್ಯಕ್ತಪಡಿಸಿದರು.

ಕುಮಾರಣ್ಣ ಆರೋಗ್ಯವಾಗಿದ್ದಾರೆ

ಕುಮಾರಣ್ಣ ಆರೋಗ್ಯ ಸರಿ ಇಲ್ಲ ಅಂತ ರಾಜ್ಯದಲ್ಲೆಡೆ ಚರ್ಚೆಗಳು ಶುರುವಾಗಿದೆ, ಅವರ ತಂದೆ ತಾಯಿ ಆಶೀರ್ವಾದ, ಭಗವಂತನ ಕೃಪೆ, ನಿಮ್ಮೆಲ್ಲರ ಪ್ರೀತಿಯ ಹಾರೈಕೆಯಿಂದ ಕುಮಾರಣ್ಣ ಆರೋಗ್ಯವಾಗಿದ್ದಾರೆ. ಯಾವುದೇ ಸಮಸ್ಯೆ ಇಲ್ಲ, ಯಾರು ಕೂಡ ಆತಂಕ ಪಡುವ ಅಗತ್ಯವಿಲ್ಲ. ನಾನು 80 ಕ್ಷೇತ್ರಗಳಲ್ಲಿ ಸುತ್ತಾಡಿ ಅವರ ಜವಾಬ್ದಾರಿಯನ್ನು ನಾನು ಹೊರುತ್ತಿದ್ದೇನೆ. ಪ್ರತಿನಿತ್ಯ ನಾನು ನನ್ನ ಆಯಸ್ಸು ನನ್ನ ತಂದೆಗೆ ಕೊಡಬೇಕು ಅಂತ ದೇವರಲ್ಲಿ ಪ್ರಾರ್ಥನೆ ಮಾಡ್ತಿದ್ದಿನಿ. ಕುಮಾರಣ್ಣ ಆರೋಗ್ಯದಲ್ಲಿ ಸಣ್ಣಪುಟ್ಟ ಏರುಪೇರಾಗಿದೆ ಆದರೆ ಯಾವುದೇ ಆತಂಕ ಪಡುವ ಅಗತ್ಯವಿಲ್ಲ.ಮತ್ತೆ ಅವರು ಚೇತರಿಕೆ ಕಾಣುತ್ತಿದ್ದಾರೆ. ಶೀಘ್ರದಲ್ಲೇ ಸಂಪೂರ್ಣ ಗುಣಮುಖರಾಗುತ್ತಾರೆ ಎಂದು ನಿಖಿಲ್ ಕುಮಾರಸ್ವಾಮಿ ತಿಳಿಸಿದ್ದಾರೆ.

> ಕಾಂಗ್ರೆಸ್‌ನವರೇ ದಯಮಾಡಿ ಎಚ್ಚರಿಕೆಯಿಂದ ಇರಿ. ಸಿದ್ದರಾಮಣ್ಣವರ ರಾಜಕಾರಣದ ಇತಿಹಾಸ ನಿಮಗೆಲ್ಲರಿಗೂ ಗೊತ್ತಿದೆ. ಅವರು ಉಂಡ ಮನೆಗೆ ದ್ರೋಹ ಬಗೆಯುತ್ತಾರೆ. ನೀವೇನಾದ್ರೂ ಮುಖ್ಯಮಂತ್ರಿ ಕುರ್ಚಿ ಸ್ವಲ್ಪ ಅಲುಗಾಡುತ್ತಿದೆ ಅಂದರೆ ಅಲ್ಲಾಡಿಸಿ ಮಲಗ್ಸಿ ಸಿದ್ರಾಮಯ್ಯ ಹೊರಟು ಹೋಗ್ತಾರೆ.
>
> -ನಿಖಿಲ್ ಕುಮಾರಸ್ವಾಮಿ ಜೆಡಿಎಸ್ ಯುವ ಘಟಕದ ರಾಜ್ಯಾಧ್ಯಕ್ಷ

ಕಾಫಿ ತೋಟದಲ್ಲಿ ಕಾಡಾನೆಗಳ ರೌಂಡ್ಸ್

ಚಿಕ್ಕಮಗಳೂರು : ಭಾನುವಾರಬೆಳಗ್ಗೆ ಜಿಲ್ಲೆಯ ಎನ್.ಆರ್. ಪುರ ತಾಲೂಕಿನ ಬಾಳೆಹೊನ್ನೂರು ಪಟ್ಟಣದ ವಿವೇಕ ನಗರದಲ್ಲಿರೋ ಕಾಫಿ ತೋಟದಲ್ಲಿ ಕಾಡಾನೆಗಳು ಸುತ್ತಾಡಿವೆ. ಅಲ್ಲದೇ, ಕಾಫಿ ತೋಟದಲ್ಲಿ ಕಾಡಾನೆಗಳು ಬೀಡು ಬಿಟ್ಟಿರುವುದರಿಂದ ಕಾಫಿ ತೋಟದ ಕಾರ್ಮಿಕರು, ಮಾಲೀಕರು ಹಾಗೂ ಸುತ್ತಮುತ್ತಲ ಗ್ರಾಮಸ್ಥರು ಸೇರಿದಂತೆ ಸ್ಥಳೀಯರಲ್ಲಿ ಆತಂಕ ಉಂಟು ಮಾಡಿದೆ. ಜಿಲ್ಲೆಯ ಮಲೆನಾಡು ಭಾಗದಲ್ಲಿ ಪ್ರತಿನಿತ್ಯ ಕಾಡಾನೆಗಳ ಹಾವಳಿ ಮಿತಿ ಮೀರಿ ಹೋಗುತ್ತಿದೆ. ಪ್ರತಿನಿತ್ಯ ಒಂದಲ್ಲ ಒಂದು ಭಾಗದಿಂದ ಸಂಚರಿಸುತ್ತಾ ಹೋಗುತ್ತಿರುವ ಈ ಕಾಡಾನೆಗಳು ಸಂಪೂರ್ಣ ಬೆಳೆಗಳನ್ನು ನಾಶ ಮಾಡುತ್ತಿವೆ. ಈ ವರ್ಷ ಈಗಾಗಲೇ ಹಲವು ಕೂಲಿ ಕಾರ್ಮಿಕರನ್ನು ಬಲಿ ಪಡೆದಿರುವ ಕಾಡಾನೆಗಳು, ಈಗ ಮತ್ತೆ ತೋಟಗಳಿಗೆ ನುಗ್ಗಿ ದಾಂಧಲೆ ಎಬ್ಬಿಸುತ್ತಿವೆ.

ಗಂಡನ ಕೊಂದ ಪತ್ನಿಗೆ ಗಲ್ಲು ಶಿಕ್ಷೆ

ಶಿವಮೊಗ್ಗ: ಪ್ರೀತಿಸಿ ಮದುವೆಯಾದ ಪತಿಯನ್ನು ಕಬ್ಬಿಣದ ರಾಡ್‌ನಿಂದ ಹೊಡೆದು ಕೊಂದು ಇನ್ನಿಬ್ಬರ ಸಹಾಯದಿಂದ ಮೃತದೇಹವನ್ನು ನದಿಗೆ ಎಸೆದ ಪ್ರಕರಣದಲ್ಲಿ ಪತ್ನಿ ಹಾಗು ಆಕೆಗೆ ಸಹಾಯ ಮಾಡಿದ ಒಬ್ಬನಿಗೆ ಮರಣದಂಡನೆ ಹಾಗೂ ಶವ ಸಾಗಿಸಲು ನೆರವಾದ ಇನ್ನೊಬ್ಬನಿಗೆ 7 ವರ್ಷ ಕಾರಾಗೃಹ ಶಿಕ್ಷೆ ವಿಧಿಸಿ ಭದ್ರಾವತಿಯ 4ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ ತೀರ್ಪು ನೀಡಿದೆ. ಭದ್ರಾವತಿ ಪಟ್ಟಣದಲ್ಲಿ 2016ರಲ್ಲಿ ನಡೆದ ಘಟನೆಯಲ್ಲಿ ಶಿಕ್ಷೆಗೆ ಒಳಗಾಗಿರುವ ಲಕ್ಷ್ಮಿ ಅವರು ಇಮ್ತಿಯಾಜ್ ಅಹಮದ್ ಎಂಬವರನ್ನು ಗುಲ್ಬರ್ಗಾದಲ್ಲಿ ಪ್ರೀತಿಸಿ ಮದುವೆಯಾಗಿದ್ದರು. ಆದರೆ ಲಕ್ಷ್ಮಿಗೆ ಕೃಷ್ಣಮೂರ್ತಿ ಎಂಬವರ ಜತೆ ಸಂಬಂಧವಿತ್ತು. ಇದರಿಂದಾಗಿ ಪ್ರಿಯಕರ ಕೃಷ್ಣಮೂರ್ತಿ ಜತೆ ಇಮ್ತಿಯಾಜ್ ಅಹಮದ್‌ರನ್ನು ಕಬ್ಬಿಣದ ರಾಡ್‌ನಿಂದ ಹೊಡೆದು ಕೊಲೆ ಮಾಡಿದ್ದರು. ನಂತರ ಕೃಷ್ಣಮೂರ್ತಿ ತನ್ನ ಸ್ನೇಹಿತ ಶಿವರಾಜ್ ಜೊತೆ ಸೇರಿ ಇಮ್ತಿಯಾಜ್ ಅಹಮದ್ ಶವವನ್ನು ನದಿಗೆ ಎಸೆದಿದ್ದರು. ಈ ಕುರಿತು ಮೃತನ ಸಹೋದರ ಎಜಾಜ್ ಅಹಮದ್ ಭದ್ರಾವತಿಯ ನ್ಯೂ ಟೌನ್ ಪೊಲೀಸ್ ಠಾಣೆಯಲ್ಲಿ 2016ರಲ್ಲಿ ದೂರು ದಾಖಲಿಸಿದ್ದರು.

ಮಾಜಿ ಸಚಿವರ ಮನೆಯಲ್ಲಿ ಕಳ್ಳತನ: ಮೂವರು ಬಂದನ

ಚಿಕ್ಕಮಗಳೂರು: ಕೊಪ್ಪ ತಾಲೂಕಿನಲ್ಲಿರುವ ದಿ।ಮಾಜಿ ಸಚಿವ ಗೋವಿಂದೇಗೌಡ ಅವರ ಮನೆಯಲ್ಲಿ ಕಳ್ಳತನ ಮಾಡಿ ಪರಾರಿಯಾಗಿದ್ದ ಅಂತಾರಾಷ್ಟ್ರೀಯ ಕಳ್ಳರನ್ನು ಬಂಧಿಸುವಲ್ಲಿ ಕೊನೆಗೂ ಚಿಕ್ಕಮಗಳೂರು ಪೊಲೀಸರು ಯಶಸ್ವಿಯಾಗಿದ್ದಾರೆ. ಮನೆಕಳ್ಳತನ ಪ್ರಕರಣದಲ್ಲಿ ನೇಪಾಳಿ ಮೂಲದ ಮೂವರು ಆರೋಪಿಗಳನ್ನು ಬಂಧಿಸಲಾಗಿದೆ. ಬಂಧಿತರಿಂದ ಒಂದೂವರೆ ಕೋಟಿ ಮೌಲ್ಯದ ಚಿನ್ನಾಭರಣ ಹಾಗೂ ಕೃತ್ಯಕ್ಕೆ ಬಳಸಿದ ಎರಡು ಕಾರು ಸೇರಿದಂತೆ ಅಂದಾಜು ಒಟ್ಟು 1,75,00,00 ರು. ಮೌಲ್ಯದ ಸ್ವತ್ತುಗಳನ್ನು ಪೊಲೀಸರು ವಶಪಡಿಸಿ ಕೊಂಡಿದ್ದಾರೆ. ಆ.21 ರಂದು ಬೆಳಗಿನ ಜಾವ 02.55ರ ಗಂಟೆ ಸುಮಾರಿಗೆ ಕೊಪ್ಪ ಪೊಲೀಸ್ ಠಾಣಾ ವ್ಯಾಪ್ತಿಯ ಹರಂದೂರು ಗ್ರಾಮದ ಮಣಿಪುರ ಎಸ್ಟೇಟ್‌ನ, ಮಾಜಿ ಸಚಿವ ಗೋವಿಂದೇಗೌಡ ಅವರ ಪುತ್ರ ಹಾಗೂ ಎಸ್ಟೇಟ್ ಮಾಲೀಕ ಎಚ್.ಜಿ. ವೆಂಕಟೇಶ್ ಮನೆಯಲ್ಲಿ 6 ಲಕ್ಷ ನಗದು ಮತ್ತು 37,50,000 ಮೌಲ್ಯದ ಚಿನ್ನ, ಬೆಳ್ಳಿ ಆಭರಣಗಳನ್ನು ಕದ್ದು ಆರೋಪಿಗಳು ಪರಾರಿಯಾಗಿದ್ದರು. ಕೊಪ್ಪ ಪೊಲೀಸ್ ಠಾಣೆಯಲ್ಲಿ ಗೋವಿಂದೇಗೌಡ ಅವರ ಪುತ್ರ ವೆಂಕಟೇಶ್ ಪ್ರಕರಣ ದಾಖಲು ಮಾಡಿದ್ದರು.

ಶಾಸಕ ಯತ್ನಾಳ್ ವಿರುದ್ಧ ಅವಹೇಳನ: ಯುವಕನ ಸೆರೆ

ಕೊಪ್ಪಳ: ಉಚ್ಚಾಟಿತ ಶಾಸಕ ಬಸನಗೌಡ ಪಾಟೀಲ್ ಯತ್ನಾಳ್ ವಿರುದ್ಧ ಅವಹೇಳನಕಾರಿಯಾಗಿ ವಿಡಿಯೊ ಮಾಡಿ ಸೋಷಿಯಲ್ ಮೀಡಿಯಾದಲ್ಲಿ ಹರಿಬಿಟ್ಟಿದ್ದ ಯುವಕನನ್ನು ಕೊಪ್ಪಳ ಜಿಲ್ಲೆ ಕನಕಗಿರಿ ಪೊಲೀಸರು ಬಂಧಿಸಿದ್ದಾರೆ. ಆರೋಪಿ ಮುಸಲಾಪುರ ಗ್ರಾಮದ ಯುವಕ ಹುಸೇನಿಯನ್ನು ಬಂಧಿಸಲಾಗಿದೆ. ವಿಧಾನ ಸಭೆಯ ಅಧಿವೇಶನದಲ್ಲಿ ಶಾಸಕ ಬಸನಗೌಡ ಪಾಟೀಲ ಯತ್ನಾಳ್ ಅಜಾನ್ ಕುರಿತಾಗಿ ಪ್ರಸ್ತಾಪಿಸಿದ್ದಕ್ಕೆ ಆಕ್ರೋಶಗೊಂಡ ಯುವಕ ವಿಡಿಯೊ ಮಾಡಿ ಶಾಸಕರ ವಿರುದ್ಧ ಅವಹೇಳನಕಾರಿ ಮಾತುಗಳನ್ನಾಡಿದ್ದನು. ಈ ವಿಡಿಯೊ ವೈರಲ್ ಆಗುತ್ತಿದ್ದಂತೆ ಯತ್ನಾಳ್ ಬೆಂಬಲಿಗರು ಆಕ್ರೋಶ ವ್ಯಕ್ತಪಡಿಸಿದ್ದು ಆರೋಪಿಯನ್ನು ಬಂಧಿಸುವಂತೆ ಆಗ್ರಹಿಸಿದ್ದರು. ಈ ಹಿನ್ನೆಲೆಯಲ್ಲಿ ಕನಕಗಿರಿ ಪೊಲೀಸರು ಆರೋಪಿಯನ್ನು ಬಂಧಿಸಿದ್ದಾರೆ.

ವಿಡಿಯೊದಲ್ಲಿ ಏನಿದೆ?: ನೀನು ಬೂಟು ನೆಕ್ಕಿದ ವಂಶಸ್ಥ ಎಂದು ಯುವಕ ಹುಸೇನಿ ನಾಲಿಗೆ ಹರಿಬಿಟ್ಟಿದ್ದನು. ಈ ವಿಡಿಯೊಗೆ ತೀವ್ರ ಆಕ್ರೋಶ ವ್ಯಕ್ತವಾಗಿತ್ತು. ಯತ್ನಾಳ್ ಬೆಂಬಲಿಗರು ಮುಸಲಾಪುರ ಗ್ರಾಮದಲ್ಲಿ ಜಮಾವಣೆಗೊಂಡು ಆರೋಪಿಯ ವಿರುದ್ಧ ಕ್ರಮಕ್ಕೆ ಒತ್ತಾಯಿಸಿದ್ದರು. ಈ ಕುರಿತು ಹುಸೇನಿ ಕ್ಷಮೆ ಕೂಡ ಕೇಳಿದ್ದಾನೆ.

ಅಪ್ಸರಕೊಂಡ ಕಡಲತೀರದಲ್ಲಿ ಅಪರೂಪದ ತಿಮಿಂಗಿಲ ಪತ್ತೆ

ಉತ್ತರ ಕನ್ನಡ: ಉತ್ತರ ಕನ್ನಡ ಜಿಲ್ಲೆಯ ಪ್ರಸ್ತಾವಿತ ಅಪ್ಸರಕೊಂಡ ಸಮುದ್ರ ಅಭಯಾರಣ್ಯದ ಬಳಿಯ ಮಂಕಿ ಕಡಲತೀರದಲ್ಲಿ ಅತ್ಯಂತ ಅಪರೂಪದ ಶಾರ್ಟ್-ಫಿನ್ಡ್ ಪೈಲಟ್ ತಿಮಿಂಗಿಲ ಪತ್ತೆಯಾಗಿದೆ. ಕರ್ನಾಟಕದಲ್ಲಿ ಮೊದಲ ಭಾರಿಗೆ ಸಮುದ್ರ ತೀರಕ್ಕೆ ಬಂದಿರುವ ಈ ಪ್ರಭೇದದ ತಿಮಿಂಗಲ ಸಮುದ್ರ ತಜ್ಞರನ್ನು ಗೊಂದಲಕ್ಕೀಡು ಮಾಡಿದೆ. ಸುಮಾರು 4 ಮೀಟರ್ ಉದ್ದದ ಈ ತಿಮಿಂಗಿಲದ ದೇಹದ ಮೇಲೆ ಯಾವುದೇ ಗಾಯಗಳಿಲ್ಲ, ಆದರೆ ಒಂದೇ ಒಂದು ತಿಮಿಂಗಿಲ ಸಿಕ್ಕಿ ಬಿದ್ದಿರುವುದು ಆಶ್ಚರ್ಯಕರವಾಗಿದ್ದು ಹತ್ತಿರದಲ್ಲಿ ಇತರ ತಿಮಿಂಗಿಲ ಗಳು ಇರುವ ಸಾಧ್ಯತೆಯಿದೆ ಎಂದು ಧಾರವಾಡದ ಕರ್ನಾಟಕ ವಿಶ್ವವಿದ್ಯಾಲಯದ ಸಮುದ್ರ ಜೀವಶಾಸ್ತ್ರದ ಮುಖ್ಯಸ್ಥ ಪ್ರೊ. ಶಿವ ಕುಮಾರ್ ಹರಗಿ ಹೇಳಿದರು.ಚಿ ಶಾರ್ಟ್-ಫಿನ್ಡ್ ಪೈಲಟ್ ತಿಮಿಂಗಿಲವನ್ನು ಭಾರತೀಯ ನೀರಿನಲ್ಲಿ ಅಪರೂಪದ ತಿಮಿಂಗಿಲ ಪ್ರಭೇದ ಗಳಲ್ಲಿ ಒಂದೆಂದು ಪರಿಗಣಿಸಲಾಗಿದೆ. 2016ರಲ್ಲಿ ತಮಿಳುನಾಡಿನ ಮನಪಾಡ್‌ನಲ್ಲಿ ತೀರದಲ್ಲಿ ಈ ಜಾತಿಯ ತಿಮಿಂಗಲ ಪತ್ತೆಯಾಗಿತ್ತು. ಈ ವರ್ಷದ ಆರಂಭದಲ್ಲಿ, ಅದೇ ಜಾತಿಯ ತಿಮಿಂಗಿಲವನ್ನು ಕೇರಳದ ಕೋಝಿಕ್ಕೋಡ್ ಬಳಿಯ ಮೀನುಗಾರರು ರಕ್ಷಿಸಿದ್ದಾರೆ ಎಂದು ತಿಳಿಸಿದ್ದಾರೆ.

ಕೇಂದ್ರ ಸಚಿವ ಸೋಮಣ್ಣ ರಾಜಕೀಯ ನಿವೃತ್ತಿ ಮಾತು

ತುಮಕೂರು: ದೇವರು ಬಂದು ಹೇಳಿದರು ಮುಂದಿನ ಬಾರಿ ಚುನಾವಣೆಗೆ ಸ್ಪರ್ಧೆ ಮಾಡುವುದಿಲ್ಲ ಎಂದು ಕೇಂದ್ರ ಸಚಿವ ವಿ.ಸೋಮಣ್ಣ ಹೇಳಿದ್ದಾರೆ. ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಮುಂದಿನ ಚುನಾವಣೆಯಲ್ಲಿ ನಾನು ಸ್ಪರ್ಧೆ ಮಾಡುವುದಿಲ್ಲ. ರಾಜಕೀಯ ನಿವೃತ್ತಿ ಹೊಂದಲಿದ್ದೇನೆ ಎನ್ನುವ ಮಾತನ್ನು ಮತ್ತೊಮ್ಮೆ ಅವರು ಪುನರುಚ್ಚರಿಸಿದ್ದಾರೆ. ಸ್ವತಃ ದೇವರೇ ಹೇಳಿದ್ರೂ ನಾನು ಮತ್ತೆ ಚುನಾವಣೆಗೆ ನಿಲ್ಲಲ್ಲ ಎಂದರು. ಬೆಂಗಳೂರು ನಾಲ್ಕು ಪಥದ ರೈಲ್ವೆ ಸರ್ವೇ ಆಯ್ತು ಡಿಪಿಆರ್ ಶುರು ಮಾಡಿಸಿದ್ದೀನಿ. ಇದರ ಜತೆಗೆ ನ್ಯಾಷನಲ್ ಹೈವೆ 4 ತಿಮ್ಮರಾಜನಹಳ್ಳಿ ಅಭಿವೃದ್ಧಿ ಆಗುತ್ತದೆ. ಕೆಐಡಿಬಿಯವರ ಜತೆ ಮಾತನಾಡಿದ್ದೇನೆ. ಇದೆಲ್ಲಾ ನಿಮ್ಮ ಅಭಿವೃದ್ಧಿ. ನಾನು ಇನ್ನು ಐವತ್ತು ವರ್ಷ ಇರ್ತೀನಾ. ಇಲ್ಲ ಇರೋದಿಲ್ಲ. ನಾನು ಮತ್ತೆ ಎಲೆಕ್ಷನ್‌ಗೆ ನಿಂತ್ಕೊ ಅಂತ ದೇವರು ಹೇಳಿದರೂ ಕೇಳುವವನಲ್ಲ. ನನ್ನ ಭಾವನೆ ಹಂಗಿದೆ. ಇದೆಲ್ಲಾ ಒಂದೊಂದು ಹೆಜ್ಜೆ ಗುರುತು ಎಂದರು.

ಪರಿಸ್ಥಿತಿ ಬದಲಾದರೂ ಕೈ ಮನಸ್ಥಿತಿ ಬದಲಾಗಿಲ್ಲ: ಸಿ.ಟಿ. ರವಿ ಟೀಕೆ

ಗದಗ: ಪರಿಸ್ಥಿತಿ ಬದಲಾಗಿದೆ. ಆದರೆ, ಕಾಂಗ್ರೆಸ್‌ನ ಮನಸ್ಥಿತಿ ಬದಲಾಗಿಲ್ಲ. ಕಾಂಗ್ರೆಸ್ ಪಕ್ಷ ತನ್ನ ಸ್ವಾರ್ಥಕ್ಕಾಗಿ ಅತಿಹೆಚ್ಚು ಬಾರಿ ಸಂವಿಧಾನಕ್ಕೆ ತಿದ್ದುಪಡಿ ಮಾಡಿದೆ. ತುರ್ತುಪರಿಸ್ಥಿತಿ ಸಂದರ್ಭದಲ್ಲಿ ಗಾಂಧೀಜಿ, ಬಿ.ಆರ್.ಅಂಬೇಡ್ಕರ್ ಬದುಕಿದ್ದರೆ ಇವರು ಅವರನ್ನೂ ಜೈಲಿಗಟ್ಟುತ್ತಿದ್ದರು' ಎಂದು ವಿಧಾನ ಪರಿಷತ್ ಸದಸ್ಯ ಸಿ.ಟಿ.ರವಿ ಟೀಕಿಸಿದರು.

ಬಯಲು ಸಂಸ್ಥೆ ಆಶ್ರಯದಲ್ಲಿ ನಗರದಲ್ಲಿ ಭಾನುವಾರ ನಡೆದ ಸಂವಿಧಾನ: 42ನೇ ತಿದ್ದುಪಡಿ' ವಿಚಾರ ಸಂಕಿರಣದಲ್ಲಿ ಮಾತನಾಡಿ, ಕಾಂಗ್ರೆಸ್ಸಿಗರಿಗೆ ನಿಜವಾಗಿಯೂ ಸಂವಿಧಾನದ ಬಗ್ಗೆ ಗೌರವ ಇದ್ದರೆ ನ್ಯಾಯಾಲಯದ ತೀರ್ಪನ್ನು ನ್ಯಾಯಾಲಯದಲ್ಲೇ ಪ್ರಶ್ನಿಸುತ್ತಿದ್ದರು. ಆದರೆ, ಅದನ್ನು ಅಧಿಕಾರದ ಅಹಂಕಾರದ ಮೂಲಕ ಎದುರಿಸುವ ದುಸ್ಸಾಹಸ ಮಾಡಿದರು' ಎಂದು ಆರೋಪ ಮಾಡಿದರು.

ತುರ್ತು ಪರಿಸ್ಥಿತಿ ಸಂದರ್ಭದಲ್ಲಿ ವಿರೋಧ ಪಕ್ಷದ ನಾಯಕರನ್ನೆಲ್ಲಾ ಜೈಲಿಗಟ್ಟಿದರು. ಇಡೀ ದೇಶವೇ ಬಂಧೀಖಾನೆ ಆಯಿತು. ಸಂವಿಧಾನವೇ ಸರ್ವಾಧಿಕಾರಿಯ ಕಪಿಮುಷ್ಟಿಯಲ್ಲಿ ಸಿಲುಕಿತ್ತು. ಬಿ.ಆರ್. ಅಂಬೇಡ್ಕರ್ ಬರೆದ ಸಂವಿಧಾನವನ್ನು ಮನಸೋ ಇಚ್ಛೆ ಬದಲಿಸಿದರು. ಯಾವುದನ್ನೂ ಪ್ರಶ್ನಿಸಲೇ ಬಾರದು ಎಂದು 42ನೇ ತಿದ್ದುಪಡಿ ಮಾಡಿದರು. ಈ ಮೂಲಕ ಇಂದಿರಾ ಗಾಂಧಿ ಪ್ರಜಾಪ್ರಭುತ್ವದ ಕತ್ತುಹಿಸುಕಿದರು' ಎಂದು ಕಿಡಿಕಾರಿದರು.

> **ಮಲ್ಲಿಕಾರ್ಜುನ ಖರ್ಗೆ, ಎಚ್.ಕೆ.ಪಾಟೀಲ ತುರ್ತು ಪರಿಸ್ಥಿತಿ ವಿರುದ್ಧ ಧ್ವನಿ ಎತ್ತಲಿಲ್ಲ. ಅವರು ಸರ್ವಾಧಿಕಾರಿಯ ಹೊಗಳುಭಟರಾಗಿದ್ದರು. ಆವಾಗ ಪ್ರಶ್ನೆ ಮಾಡಲಾಗದವರಿಗೆ ಈಗ ಸಂವಿಧಾನದ ಬಗ್ಗೆ ಮಾತನಾಡುವ ನೈತಿಕತೆ ಇಲ್ಲ. ಈಗ ಇಂದಿರಾ ಇಲ್ಲ, ಇಂಡಿಯಾ ಇದೆ. ತುರ್ತು ಪರಿಸ್ಥಿತಿ ಸಂದರ್ಭದಲ್ಲಿ ಪ್ರಜೆಗಳ ಹಕ್ಕುಗಳನ್ನು ಕಿತ್ತುಕೊಳ್ಳಲಾಯಿತು. ಸಂವಿಧಾನ ಧಿಕ್ಕರಿಸಿದ ಕಾಂಗ್ರೆಸ್ಸಿಗರು ಈಗ ಸಾಂವಿಧಾನಿಕ ಸಂಸ್ಥೆಗಳನ್ನು ವಿರೋಧಿಸುತ್ತಿದ್ದಾರೆ.**
>
> -ಸಿ.ಟಿ.ರವಿ ಮಾಜಿ ಸಚಿವ

ಸಚಿವರ ಹೆಸರು ಹೇಳಿಕೊಂಡು ವಂಚಿಸುತ್ತಿದ್ದ ವ್ಯಕ್ತಿ ಬಂದನ

ಶಿವಮೊಗ್ಗ: ಶಿಕ್ಷಣ ಸಚಿವ ಎಸ್.ಮಧು ಬಂಗಾರಪ್ಪನವರ ಹೆಸರು ದುರ್ಬಳಕೆ ಮಾಡಿಕೊಂಡು, ಸರಕಾರಿ ನೌಕರರನ್ನು ವರ್ಗಾವಣೆ ಮಾಡಿಸಿಕೊಡುವುದಾಗಿ ನಂಬಿಸಿ ವಂಚಿಸುತ್ತಿದ್ದ ಮೈಸೂರಿನ ರಘುನಾಥ್ ಎಂಬಾತನನ್ನು ಶಿವಮೊಗ್ಗದ ಜಯನಗರ ಪೊಲೀಸರು ಬಂಧನ ಮಾಡಿದ್ದಾರೆ.

ಆರೋಪಿ ಕಳೆದ ಆರು ತಿಂಗಳಿಂದ ತಾನು ಮಧು ಬಂಗಾರಪ್ಪನವರ ಅವರ ಆಪ್ತ ಸಹಾಯಕ (ಪಿ.ಎ.) ಎಂದು ಹೇಳಿಕೊಂಡು ಸರಕಾರಿ ನೌಕರರ ವರ್ಗಾವಣೆ ಹಾಗೂ ಸಾರ್ವಜನಿಕರಿಗೆ ಸರ್ಕಾರಿ ಕೆಲಸ ಕೊಡಿಸುವುದಾಗಿ ಭರವಸೆ ನೀಡಿ ಹಣ ವಸೂಲಿ ಮಾಡುತ್ತಿದ್ದ ಎಂದು ಪೊಲೀಸರು ತಿಳಿಸಿದ್ದಾರೆ. ತಾನು ಎನ್‌ಎಸ್‌ಯುಐ ಮುಖಂಡ. ಸಚಿವರ ಪಿ.ಎ. ಕೂಡಾ ಆಗಿದ್ದೇನೆ. ಸರಕಾರಿ ನೌಕರರು ಹಾಗೂ ವರ್ಗಾವಣೆ ಆದವರಿಗೆ ಹಣ ನೀಡಿದರೆ ವರ್ಗಾವಣೆ ರದ್ದು ಮಾಡಿಸುತ್ತೇನೆ ಎಂದೆಲ್ಲಾ ನಂಬಿಸಿ ಅವರಿಂದ ತನ್ನ ಖಾತೆಗೆ ಹಣ ಹಾಕಿಸಿಕೊಳ್ಳುತ್ತಿದ್ದ ಎಂದು ಪೊಲೀಸರು ಹೇಳಿದ್ದಾರೆ.

ಈತನ ಬಗ್ಗೆ ಮೊದಲು ಸಚಿವರ ವಿಶೇಷ ಅಧಿಕಾರಿ ಶ್ರೀಪತಿ ಅವರಿಗೆ ಮಾಹಿತಿ ದೊರೆತಿತ್ತು. ಅವರು ವಿಚಾರಿಸುತ್ತಿರುವಾಗಲೇ ಶಿಕ್ಷಣ ಇಲಾಖೆಯ ಜಂಟಿ ನಿರ್ದೇಶಕಿ ಭಾರತಿ ಅವರಿಗೆ ಆರೋಪಿ ಕರೆ ಮಾಡಿ ನಿಮಗೆ ವರ್ಗಾವಣೆ ಯಾಗಿದ್ದು ಸ್ಥಳ ತೋರಿಸಿಲ್ಲ. ನಾನು ಸಚಿವರ ಜತೆ ಮಾತನಾಡಿದ್ದು, ನಿಮ್ಮ ಕೆಲಸ ಮಾಡಿಕೊಡುವುದಾಗಿ ಹೇಳಿದ್ದಾನೆ. ಆದರೆ ಅಧಿಕಾರಿ ಅನುಮಾನಗೊಂಡು ಶ್ರೀಪತಿ ಅವರಿಗೆ ತಿಳಿಸಿದ್ದಾರೆ.

ಅಲ್ಲದೆ ಆರೋಪಿಯ ಮೊಬೈಲ್ ಸಂಖ್ಯೆಯನ್ನು ಪರಿಶೀಲಿಸಿದ್ದಾರೆ. ಬಳಿಕ ರಘುನಾಥ್ ಸಚಿವರ ಪಿ.ಎ. ಅಲ್ಲ ಎಂಬುದು ಸ್ಪಷ್ಟವಾಗುತ್ತಿದ್ದಂತೆ, ಕಾಂಗ್ರೆಸ್ ಮುಖಂಡ ಗಿರೀಶ್ ಅವರ ಮೂಲಕ ಜಯನಗರ ಪೊಲೀಸ್ ಠಾಣೆಯಲ್ಲಿ ದೂರು ದಾಖಲಿಸಿದ್ದಾರೆ. ಪೊಲೀಸರು ಆರೋಪಿಯನ್ನು ಬಂಧಿಸಿ ಜೈಲಿಗಟ್ಟಿದ್ದು, ನ್ಯಾಯಾಂಗ ಬಂಧನದಲ್ಲಿದ್ದಾನೆ.

..ವಾಯುಸೀಮೆಗೆ ಸ್ವದೇಶಿ ಕವಚ

← ಮೊದಲಪುಟದಿಂದ

ಈ ಸಮರಾಸ್ತ್ರವನ್ನು ದೇಶದ ಪ್ರತಿಷ್ಠಿತ 'ರಕ್ಷಣಾ ಸಂಶೋಧನೆ ಮತ್ತು ಅಭಿವೃದ್ಧಿ ಸಂಸ್ಥೆ'(ಡಿಆರ್‌ಡಿಒ) ಅಭಿವೃದ್ಧಿಪಡಿ ಸಿದ್ದು, ಒಡಿಶಾ ರಾಜ್ಯದ ಸಮುದ್ರ ತೀರದಲ್ಲಿ ಶನಿವಾರ ಮಧ್ಯಾಹ್ನ 12.30ರಲ್ಲಿ ಯಶಸ್ವಿಯಾಗಿ ಪ್ರಯೋಗ ನಡೆಸಿದೆ. ಈ ಬಗ್ಗೆ ಭಾನುವಾರ ಬೆಳಗ್ಗೆ 'ಎಕ್ಸ್' ನಲ್ಲಿ ಚಿತ್ರ ಮತ್ತು ವಿಡಿಯೊ ಸಹಿತ ಮಾಹಿತಿ ಹಂಚಿಕೊಂಡಿದೆ. 'ಐಎಡಿಡಬ್ಲ್ಯುಎಸ್' ಒಂದು ಶಕ್ತಿಶಾಲಿ 'ಬಹು ಆಯಾಮದ ವೈಮಾಂತರಿಕ್ಷ ರಕ್ಷಣಾ ವ್ಯವಸ್ಥೆ' ಆಗಿದೆ. ಭೂಮಿಯಿಂದ ಚಿಮ್ಮಿ ಆಕಾಶ ಮಾರ್ಗದಲ್ಲಿ ದಾಳಿ ಮಾಡುವ ಕ್ಷಿಪಣಿಗಳು, ಕಡಿಮೆ ವ್ಯಾಪ್ತಿಯ ವಾಯು ರಕ್ಷಣಾ ವ್ಯವಸ್ಥೆ (ವಿಎಸ್‌ಎಚ್‌ಒಆರ್ ಎಡಿಎಸ್) ಕ್ಷಿಪಣಿಗಳು ಮತ್ತು ಹೆಚ್ಚಿನ ಶಕ್ತಿಯ ಲೇಸರ್ ಆಧಾರಿತ ನಿರ್ದೇಶಿತ ಶಕ್ತಿ ಶಸ್ತ್ರಾಸ್ತ್ರಗಳು (ಡಿಇಡಬ್ಲ್ಯು) ವ್ಯವಸ್ಥೆಯನ್ನು ಈ ಹೊಸ ಸಮಗ್ರ ವಾಯು ರಕ್ಷಣಾ ಶಸ್ತ್ರಾಸ್ತ್ರ ವ್ಯವಸ್ಥೆಯು ಒಳಗೊಂಡಿದೆ ಎಂದು ಡಿಆರ್‌ಡಿಒ ವಿಜ್ಞಾನಿಗಳು ಹೇಳಿದ್ದಾರೆ.

ಐಎಡಿಡಬ್ಲ್ಯುಎಸ್ ಬಲು ಸಮರ್ಥ

ವಾಯು ಮಾರ್ಗದ ದಾಳಿಗಳನ್ನು ಸಮರ್ಥವಾಗಿ ನಾಶಪಡಿಸಲೆಂದೇ ಇಂಟಿಗ್ರೇಟೆಡ್ ಏರ್ ಡಿಫೆನ್ಸ್ ವೆಪನ್ ಸಿಸ್ಟಂ(ಐಎಡಿಡಬ್ಲ್ಯುಎಸ್) ವಿನ್ಯಾಸಗೊಳಿಸಲಾಗಿದೆ. ಈ ವ್ಯವಸ್ಥೆಯಲ್ಲಿ ರಾಡಾರ್, ಮಿಸೈಲ್ ಲಾಂಚರ್, ಗುರಿ ನಿಗದಿ ಮತ್ತು ಮಾರ್ಗದರ್ಶನ ವ್ಯವಸ್ಥೆ, ಕ್ಷಿಪಣಿಗಳು ಮತ್ತು ಕಮಾಂಡ್-ಅಂಡ್-ಕಂಟ್ರೋಲ್ ಘಟಕಗಳಿವೆ. ಬೇರೆ ದೇಶಗಳಿಂದ ಆಮದು ಮಾಡಿಕೊಂಡ ವಾಯು ರಕ್ಷಣಾ ವ್ಯವಸ್ಥೆಗಿಂತಲೂ ದೇಶೀಯವಾಗಿಯೇ ಅಭಿವೃದ್ಧಿಪಡಿಸಲಾದ 'ಐಎಡಿಡಬ್ಲ್ಯುಎಸ್' ಭಿನ್ನವಾಗಿದೆ, ಅಷ್ಟೇ ಸಮರ್ಥವಾಗಿದೆ. ಆಪರೇಷನ್ ಸಿಂದೂರ್ ಸಮಯದಲ್ಲಿ ರಷ್ಯಾ ನಿರ್ಮಿತ 'ಎಸ್-400' ರಕ್ಷಣಾ ಶಸ್ತ್ರಾಸ್ತ್ರವನ್ನು ಬಳಸಿಕೊಳ್ಳಲಾಗಿತ್ತು. ಜತೆಗೆ ಭಾರತದ ಶಕ್ತಿಶಾಲಿ ಖಂಡಾಂತರ ಕ್ಷಿಪಣಿ 'ಬ್ರಹ್ಮೋಸ್' ಮತ್ತು 'ಆಕಾಶ್' ಬಳಸಲಾಗಿತ್ತು. ಈಗ ಈ ಸಾಲಿಗೆ ದೇಶೀ ನಿರ್ಮಿತ 'ಐಎಡಿಡಬ್ಲ್ಯುಎಸ್' ಸೇರ್ಪಡೆಯಾಗಿದೆ.

ಬಾನು ಮುಷ್ತಾಕ್ ದಸರಾ ಉದ್ಘಾಟನೆಗೆ ಕರೆಯಬಾರದೆಂದು ಸಂವಿಧಾನದಲ್ಲಿದೆಯೇ?

ಬಳ್ಳಾರಿ: ಬಾನು ಮುಷ್ತಾಕ್ ಅವರನ್ನು ದಸರಾ ಉದ್ಘಾಟನೆಗೆ ಕರೆಯಬಾರದೆಂದು ಸಂವಿಧಾನದಲ್ಲಿ ಇದೆಯೇ?. ಎಲ್ಲದಕ್ಕೂ ಆಕ್ಷೇಪ ಮಾಡ್ತಾ ಹೋದ್ರೆ ಏನು ಮಾಡಬೇಕು? ಎಂದು ಮಾಜಿ ಸಂಸದ ಪ್ರತಾಪ್ ಸಿಂಹ ಹೇಳಿಕೆಗೆ ಸಚಿವ ಸಂತೋಷ ಲಾಡ್ ಅಸಮಾಧಾನ ವ್ಯಕ್ತಪಡಿಸಿದ್ದಾರೆ.

ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ದೇಶದಲ್ಲಿ ಅತೀ ಹೆಚ್ಚು ದೇಣಿಗೆ ನೀಡಿದವರು ಯಾರು? ಅಜೀಂ ಪ್ರೇಮ್ ಜಿ ಫೌಂಡೇಶನ್‌ನಿಂದ ಎರಡುವರೆ ಲಕ್ಷ ಕೋಟಿ ಹಣ ನೀಡಿದ್ದಾರೆ. ಅವರು ಯಾವ ಸಮಾಜದವರು. ಬಡವರ ಅನುಕೂಲಕ್ಕೆ ಹಣ ಕೊಟ್ಟವರು ಯಾವ ಸಮಾಜದವರು. ಸಂವಿಧಾನದಲ್ಲಿ ಯಾರನ್ನೂ ಮಾಡಬಾರದು ಎಂದಿಲ್ಲ, ಸರಕಾರದ ತೀರ್ಮಾನವನ್ನು ಎಲ್ಲರೂ ಸ್ವಾಗತ ಮಾಡಬೇಕು. ಈ ರೀತಿಯಲ್ಲಿ ಮಾತನಾಡುವುದು ಸರಿಯಲ್ಲ ಎಂಬುದು ನನ್ನ ಅಭಿಪ್ರಾಯ ಎಂದಿದ್ದಾರೆ.

ಸಿಎಂ ಸಿದ್ದರಾಮಯ್ಯ ಹಿಂದೂ ವಿರೋಧಿಗಳನ್ನು ಉದ್ಘಾಟನೆಗೆ ಕರೆಸುತ್ತಾರೆ ಎಂಬ ಹೇಳಿಕೆ ಕುರಿತು ಪ್ರತಿಕ್ರಿಯಿಸಿದ ಅವರು, ಅಬ್ದುಲ್ ಕಾಲಂ ರಾಷ್ಟ್ರಪತಿಯಾಗಿದ್ದಾಗ ನಾವು ವಿರೋಧ ಮಾಡಿದ್ವಾ? ಕಲಾಂ ಹಿಂದೂ ವಿರೋಧಿಯಲ್ಲ ಎಂದು ಸಮರ್ಥನೆ ಮಾಡ್ತಾರೆ. ಬಾನು ಮುಷ್ತಾಕ್ ಹೇಗೆ ಹಿಂದೂ ವಿರೋಧಿಯಾಗ್ತಾರೆ? ಎಂದರು. ಡಿಸಿಎಂ ಡಿ. ಕೆ.ಶಿವಕುಮಾರ್ ಅವರು ಆರ್‌ಎಸ್‌ಎಸ್ ಹಾಡು ಹಾಡಿರುವುದರ ಬಗ್ಗೆ ಗೊತ್ತಿಲ್ಲ. ಇದು ಅವರ ವೈಯಕ್ತಿಕ ವಿಚಾರ ಎಂದಿದ್ದಾರೆ.

ಬಿಜೆಪಿ ದ್ವಂದ್ವ ನಿಲುವು ಪ್ರದರ್ಶನ: ಧರ್ಮಸ್ಥಳ ಪ್ರಕರಣದ ಕುರಿತು ಮಾತನಾಡಿದ ಅವರು, ಧರ್ಮಸ್ಥಳ ವಿಚಾರದಲ್ಲಿ ಬಿಜೆಪಿ ದ್ವಂದ್ವ ನಿಲುವು ಪ್ರದರ್ಶನ ಮಾಡ್ತಿದೆ. ಮೊದಲು ಎಸ್‌ಐಟಿ ಸ್ವಾಗತ ಎಂದ್ರು, ಈಗ ಧಾರ್ಮಿಕ ಸ್ಥಳಕ್ಕೆ ಅಪಮಾನ ಎನ್ನುತ್ತಿದ್ದಾರೆ. ಎಸ್‌ಐಟಿ ಮಾಡಿದಾಗ ಆತಂಕವಿತ್ತು, ಒಂದಷ್ಟು ಅನುಮಾನದಿಂದಲೇ ನೋಡುವಂತಿತ್ತು. ಕಾನೂನಾತ್ಮಕವಾಗಿ ಸರಕಾರ ಎಸ್‌ಐಟಿ ರಚನೆ ಮಾಡಿದೆ. ಶವ ಸಿಗದೇ ಇದ್ದಾಗ ಕಾಂಗ್ರೆಸ್ ಮೇಲೆ ಗೂಬೆ ಕೂರಿಸಿದ್ರು. ಶವ ಸಿಕ್ಕಿದ್ರೆ ಬಿಜೆಪಿಯವರು ಏನು ಮಾಡ್ತಿದ್ರು? ಎಸ್‌ಐಟಿ ಯನ್ನು ಮೊದಲೇ ವಿರೋಧ ಮಾಡಬೇಕಿತ್ತು. ಶವ ಸಿಗದೇ ಹೋದಾಗ ರಾಜಕಾರಣ ಪ್ರಾರಂಭಿಸಿದರು ಎಂದರು.

ಅತ್ತೆಯನ್ನು ಕೊಂದ ಸೊಸೆ: ಆರೋಪಿಗಳ ಬಂಧನ

ಚಿಕ್ಕಮಗಳೂರು: ಒಳಸಂಚು ರೂಪಿಸಿ ಊಟದಲ್ಲಿ ನಿದ್ರೆ ಮಾತ್ರೆ ಬೆರೆಸಿ ಅತ್ತೆಯನ್ನು ಕೊಲೆ ಮಾಡಿ ಚಿನ್ನಾಭರಣ, ಹಣ ದೋಚಿದ್ದ ಪ್ರಕರಣಕ್ಕೆ ಸಂಬಂಧಿಸಿದಂತೆ ಸೊಸೆ ಹಾಗೂ ಇನ್ನೊಬ್ಬ ಆರೋಪಿಯನ್ನು ಜಿಲ್ಲೆಯ ಪೊಲೀಸರು ಬಂಧಿಸುವಲ್ಲಿ ಯಶಸ್ವಿಯಾಗಿದ್ದಾರೆ.

ಈ ಕುರಿತು ಪೊಲೀಸ್ ವರಿಷ್ಠಾಧಿಕಾರಿ ವಿಕ್ರಂ ಅಮಟೆ ಅವರು ಮಾತನಾಡಿದ್ದು, ಆ. 20 ರಂದು ದಾವಣಗೆರೆ ಡಾಲರ್ಸ್ ಕಾಲೋನಿ ನಿವಾಸಿ ವೀಣಾ ರಾಮಚಂದ್ರಪ್ಪ ಎಂಬುವರು ಠಾಣೆಗೆ ಹಾಜರಾಗಿ ತನ್ನ ಅತ್ತಿಗೆ ಅಶ್ವಿನಿ ಅವರು ಸ್ನೇಹಿತ ಆಂಜನೇಯನ ಜತೆ ಸೇರಿ ಮನೆಯಲ್ಲಿದ್ದ 20 ಲಕ್ಷ ರು.ಬೆಲೆ ಬಾಳುವ ಬಂಗಾರದ ಆಭರಣ ಮತ್ತು 65,000 ರು. ನಗದು ಕಳವು ಮಾಡಿದ್ದಾರೆ ಎಂದು ದೂರು ನೀಡಿದ್ದರು ಎಂದು ತಿಳಿಸಿದರು. ಅಲ್ಲದೆ, ತಾಯಿ ದೇವಿರಮ್ಮನವರ ಗಮನಕ್ಕೆ ಬಾರದ ರೀತಿಯಲ್ಲಿ ಆ.10 ರಂದು ರಾತ್ರಿ ಊಟದಲ್ಲಿ 20 ನಿದ್ರೆ ಮಾತ್ರೆಗಳನ್ನು ಬೆರೆಸಿದ್ದಾರೆ. ಅದನ್ನು ದೇವಿರಮ್ಮ ಊಟ ಮಾಡಿದ ನಂತರ ಸುಸ್ತಾದರೂ ಸಾಯಿಸುವ ಉದ್ದೇಶದಿಂದಲೇ ಆಸ್ಪತ್ರೆಗೆ ಹೋಗಲು ತಡ ಮಾಡಿ ಸಕಾಲದಲ್ಲಿ ಚಿಕಿತ್ಸೆ ಕೊಡಿಸದಿದ್ದರಿಂದಾಗಿ ಅವರು ಮೃತಪಟ್ಟಿದ್ದಾರೆ ಎಂದು ದೂರಿನಲ್ಲಿ ಉಲ್ಲೇಖಿಸಿದ್ದರು ಎಂದು ಮಾಹಿತಿ ನೀಡಿದರು.

ಸಮಾಚಾರ ಸಣ್ಣದಲ್ಲ

₹25 ಲಕ್ಷಕ್ಕೆ ಬೇಡಿಕೆ: ಯೂಟ್ಯೂಬರ್ ಸೆರೆ

ತುಮಕೂರು: ಕುಣಿಗಲ್ ತಾಲೂಕಿನ ಹಂಗರಹಳ್ಳಿ ವಿದ್ಯಾ ಚೌಡೇಶ್ವರಿ ಮಠದ ಬಾಲ ಮಂಜುನಾಥ ಸ್ವಾಮಿಗೆ ಬೆದರಿಕೆ ಹಾಕಿ 25 ಲಕ್ಷ ರು.ಗೆ ಬೇಡಿಕೆ ಇಟ್ಟ ಆರೋಪದಲ್ಲಿ ತುಮಕೂರಿನ ಯೂಟ್ಯೂಬರ್ ಸುಧೀಂದ್ರ ಎಂಬಾತನನ್ನು ಪೊಲೀಸರು ಬಂಧಿಸಿದ್ದಾರೆ. ಸುಧೀಂದ್ರ ಜನವರಿ 21 ರಿಂದಲೂ ಹಣಕ್ಕೆ ಬೇಡಿಕೆ ಇಡುತ್ತಿದ್ದ. ಜೂನ್ 28ರಂದು ಮಠದ ಸಿಬ್ಬಂದಿ ಅಭಿಲಾಷ್, ಸುರೇಶ್ ಮತ್ತು ಭಕ್ತರಾದ ಬೀಚನಹಳ್ಳಿ ಕರಿಗೌಡ ಅವರನ್ನು ಸಂಪರ್ಕಿಸಿ ಮಠಕ್ಕೆ ಸಂಬಂಧಿಸಿದಂತೆ ಹಲವು ವಿಷಯಗಳನ್ನು ಹೊಂದಿದ್ದು, ಅವುಗಳನ್ನು ಪ್ರಕಟಿಸಿದರೆ ಮಠದ ಹೆಸರು ಹಾಳಾಗುತ್ತದೆ. ಇದನ್ನು ಪ್ರಸಾರ ಮಾಡದಿರಲು 25 ಲಕ್ಷ ರು. ನೀಡಿ ಎಂದು ಬೆದರಿಕೆ ಹಾಕಿದ್ದ ಎಂದು ಸ್ವಾಮೀಜಿ ದೂರಿದ್ದಾರೆ. ಹಣ ನೀಡದ ಕಾರಣ ಜುಲೈ 10ರಂದು ಸುಧೀಂದ್ರ ತನ್ನ ಯೂಟ್ಯೂಬ್ ಚಾನಲ್‌ನಲ್ಲಿ ಪುಣ್ಯ ಕ್ಷೇತ್ರ– ಕ್ಷೇತ್ರ ಪಾಪಿ ಬಾಲ ಮೌಢ್ಯ ಲೀಲೆ– ಭಾಗ–1 ನಂತರ 17ರಂದು ಭಾಗ– 2 ಪ್ರಸಾರ ಮಾಡಿದ್ದಾನೆ. ಇವೆಲ್ಲವೂ ಕಲ್ಪಿತ ಮತ್ತು ಆಧಾರ ರಹಿತ ಆರೋಪ. ಆತನ ವಿರುದ್ಧ ಕ್ರಮ ಕೈಗೊಳ್ಳಬೇಕು ಎಂದು ಬಾಲ ಮಂಜುನಾಥ ಸ್ವಾಮೀಜಿ ನೀಡಿದ್ದ ದೂರಿನ ಮೇರೆಗೆ ಪೊಲೀಸರು ಆರೋಪಿಯನ್ನು ಬಂಧಿಸಿದ್ದಾರೆ.

ಗೂಡ್ಸ್ ವಾಹನ ಡಿಕ್ಕಿ: ಇಬ್ಬರು ಸಾವು

ಬೀದರ್: ಬೈಕ್ ಗೆ ಹಾಲು ಸಾಗಿಸುವ ಗೂಡ್ಸ್ ವಾಹನ ಡಿಕ್ಕಿ ಹೊಡೆದ ಪರಿಣಾಮ ತಾಯಿ ಮತ್ತು ಮಗಳು ಮೃತಪಟ್ಟಿರುವ ಘಟನೆ ಬಸವಕಲ್ಯಾಣ ತಾಲೂಕಿನ ಉಮಾಪುರ ಗ್ರಾಮದ ಬಳಿ ಸಂಭವಿಸಿದೆ. ಭೋಸಗಾ ಗ್ರಾಮದ ತುಕ್ಕಮ್ಮಾ ಕಿಶನ ಜಾಧವ (55) ಮತ್ತು ಆಕೆಯ ಮಗಳು ಸುರೇಖಾ ಗುಂಡಪ್ಪ ಮಾನೆ (30) ಮೃತಪಟ್ಟ ಬೈಕ್ ಸವಾರರು. ಮಹಾರಾಷ್ಟ್ರದ ಬಾಸರ ಬಾಲಕುಂದಾ ಗ್ರಾಮದಿಂದ ಸ್ವಗ್ರಾಮ ಭೋಸಗಾಗೆ ಬರುವಾಗ ಉಮಾಪುರ ಬಳಿ ಗೂಡ್ಸ್ ವಾಹನ ಡಿಕ್ಕಿ ಹೊಡೆದಿದೆ. ಬಸವಕಲ್ಯಾಣ ಗ್ರಾಮೀಣ ಠಾಣೆಯ ಪೊಲೀಸರು ಸ್ಥಳಕ್ಕೆ ಭೇಟಿ ನೀಡಿ ಪ್ರಕರಣ ದಾಖಲಿಸಿಕೊಂಡಿದ್ದಾರೆ.

ಅಶ್ಲೀಲ ವಿಡಿಯೊ ಬೆದರಿಕೆ: ಬಂಧನ

ಕಾರವಾರ: ಭಟ್ಕಳದ ತರಕಾರಿ ವ್ಯಾಪಾರಿ ಯನ್ನು ಹೆದರಿಸಿ 20 ಲಕ್ಷ ರು. ಸುಲಿಗೆ ಮಾಡಲು ಯತ್ನಿಸಿದ ಮೂವರನ್ನು ಶಹರ ಪೊಲೀಸರು ಪತ್ತೆಹಚ್ಚಿ ಜೈಲಿಗಟ್ಟಿದ್ದಾರೆ. ಮೊಹಮ್ಮದ ಫಾರಿಸ್, ಮೊಹಮ್ಮದ ಅರ್ಶದ್, ಅಮನ್ ಬಂಧಿತ ಆರೋಪಿಗಳು. ಭಟ್ಟಗಾಂವ್, ಕಿದ್ವಾಯಿ ರಸ್ತೆಯ ನಿವಾಸಿಯೊಬ್ಬ ಅಂಗಡಿಯಲ್ಲಿ ಇದ್ದಾಗ, ಆ.16 ರ ರಾತ್ರಿ ಒಬ್ಬ ಅಪರಿಚಿತನಿಂದ ಕರೆ ಬಂದು, ನಿನ್ನ ಮಗಳ ಖಾಸಗಿ ಫೋಟೊ, ವಿಡಿಯೊ ನನ್ನ ಬಳಿ ಇದೆ. ತಕ್ಷಣ 20 ಲಕ್ಷ ಕೊಡಬೇಕು. ಇಲ್ಲವಾದರೆ ಎಲ್ಲರಿಗೂ ಕಳುಹಿಸಿ ನಿನ್ನ ಮಾನ ಹಾಳು ಮಾಡುತ್ತೇನೆ' ಎಂದು ಬೆದರಿಕೆ ಹಾಕಿದ್ದ. ನಂತರ ಆ. 18 ಮತ್ತು 19ರಂದು ವ್ಯಾಪಾರಿಯ ಪತ್ನಿಯ ಮೊಬೈಲ್‌ಗೆ ಕರೆ ಮಾಡಿ, '15 ಲಕ್ಷ ಆದರೂ ಕೊಡಬೇಕು' ಎಂದು ಒತ್ತಾಯಿಸಿದ್ದ. ಬೆದರಿಕೆ ಗಳಿಂದ ಕಂಗಾಲಾದ ವ್ಯಾಪಾರಿ ಪೊಲೀಸರಿಗೆ ದೂರು ನೀಡಿದ್ದರು. ಇನ್ಸ್‌ಪೆಕ್ಟರ್ ದಿವಾಕರ ಹಾಗೂ ಪಿಎಸ್‌ಐ ನವೀನ್ ನಾಯ್ಕ ನೇತೃತ್ವದ ಪ್ರತ್ಯೇಕ ತಂಡ ಬಂಧಿಸಿದೆ.

ವಿಶ್ವವಾಣಿ ಕ್ಲಬ್ ಹೌಸ್
25.08.2025
ಸಂಜೆ: 06.55 ರಿಂದ 08.05 ರವರೆಗೆ
ಸೋಮವಾರದ ಅತಿಥಿ

ಶ್ರೀ ರವಿಕುಮಾರ್ ಚಿತ್ರದುರ್ಗ
ವಿಷಯ
ಸೋಮೇಶ್ವರ ಶತಕ
ಭಾಗ - 3
vishwavani.news

ನಾಡ ಸಮಸ್ಯೆಗೆ ಸಿಎಂ ಪರಿಹಾರ



- **ಸ್ಥಳ : ಬೆಂಗಳೂರು**

ಸಮಸ್ಯೆಯೇನು..?: ವಿಧಾನಸೌಧ ಮುಂಭಾಗದ ರಸ್ತೆ ಹಾಗೂ ಮೆಟ್ರೋ ನಿಲ್ದಾಣದ ಬಳಿ ಕಸ ವಿಲೇವಾರಿ ಬಗ್ಗೆ

- **ಪರಿಹಾರ:** ವಿಧಾನಸೌಧ ಮುಂಭಾಗದ ಫುಟ್‌ಪಾತ್ ರಸ್ತೆ, ಮೆಟ್ರೋ ನಿಲ್ದಾಣದ ಸುತ್ತಮುತ್ತಲಿನಲ್ಲಿ ತಿಂಡಿ ತಿನಿಸುಗಳ ತ್ಯಾಜ್ಯ ಬಿದ್ದಿದೆ. ಬಿನ್‌ಗಳಲ್ಲಿ ತುಂಬಿದ ಕಸವನ್ನು ವಿಲೇವಾರಿ ಮಾಡಿಲ್ಲ ಎಂದು ಸ್ಥಳೀಯರೊಬ್ಬರು ಬಿಬಿಎಂಪಿಗೆ ಟ್ವಿಟ್‌ನಲ್ಲಿ ಟ್ಯಾಗ್ ಮಾಡಿದ್ದರು. ಬಿಬಿಎಂಪಿ ಸ್ಥಳ ಪರಿಶೀಲನೆ ನಡೆಸಿ, ಬಿನ್‌ಗಳಲ್ಲಿ ತುಂಬಿದ ಕಸ ವಿಲೇವಾರಿ ಮಾಡಿಸಿದ್ದಾರೆ. ಅಲ್ಲದೇ ರಸ್ತೆ ಮೇಲೆ ತ್ಯಾಜ್ಯ ಹಾಕದಂತೆ ಸೂಕ್ತ ಕ್ರಮ ವಹಿಸಿದ್ದಾರೆ.

ದೆಹಲಿಯಲ್ಲಿನ ಪ್ರಭಾವಿತರ ಸೂಚನೆಯಂತೆ ಸುಳ್ಳು ಹೇಳಿದ್ದ ಚಿನ್ನಯ್ಯ | ಎಸ್‌ಐಟಿ ವಿಚಾರಣೆ ವೇಳೆ ಬಾಯ್ಬಿಟ್ಟ ಮಾಸ್ಕ್‌ಮ್ಯಾನ್

ದಿಲ್ಲಿಗೂ ಹೋಗಿ ಬಂದಿದ್ದ ಬುರುಡೆ ಗ್ಯಾಂಗ್

ವಿಶ್ವವಾಣಿ ಸುದ್ದಿಮನೆ ಬೆಂಗಳೂರು

ಭಾರಿ ವಿವಾದಕ್ಕೆ ಕಾರಣವಾಗಿರುವ ಧರ್ಮಸ್ಥಳ 'ಬುರುಡೆ' ಪ್ರಕರಣದ ಹಿಂದೆ ಕೇವಲ ಕರ್ನಾಟಕದವರು ಮಾತ್ರವಲ್ಲದೇ, ರಾಷ್ಟ್ರ ರಾಜಧಾನಿ ದೆಹಲಿಯ ನಂಟಿದೆ ಎನ್ನುವ ವಿಷಯ ಬಹಿರಂಗವಾಗಿದೆ. ಆ ನಿಟ್ಟಿನಲ್ಲಿ ಎಸ್‌ಐಟಿ ಅಧಿಕಾರಿಗಳು ತನಿಖೆ ಆರಂಭಿಸಿದ್ದಾರೆ.

ಧರ್ಮಸ್ಥಳದಲ್ಲಿ ನೂರಾರು ಶವ ಹೂತ್ತಿಟ್ಟಿರುವ ಬುರುಡೆ ಬಿಟ್ಟಿದ್ದ ಚಿನ್ನಯ್ಯ ಹಾಗೂ ತಂಡದವರ ವಿಚಾರಣೆ ವೇಳೆ ಈ ಎಲ್ಲ ರಹಸ್ಯಗಳು ಬಯಲಾಗುತ್ತಿದೆ. ಆದರೆ ಚಿನ್ನಯ್ಯ ತಂದಿದ್ದ ಬುರುಡೆ ಬಗ್ಗೆ ಈವರೆಗೆ ಮಾಹಿತಿ ಬಹಿರಂಗವಾಗಿಲ್ಲ. ಆದರೆ ಈ ಬುರುಡೆಯನ್ನು ಚಿನ್ನಯ್ಯ ಹಾಗೂ ಗ್ಯಾಂಗ್ ತೆಗೆದುಕೊಂಡು ದೇಶದ ರಾಜಧಾನಿ ದೆಹಲಿಗೆ ಹೋಗಿ ಬಂದಿದ್ದರು ಎನ್ನಲಾಗಿದೆ. ವಿಚಾರಣೆ ವೇಳೆ ಚಿನ್ನಯ್ಯ ತಂದಿದ್ದ ಬುರುಡೆ ಧರ್ಮಸ್ಥಳ ಪ್ರವೇಶಿಸುವ ಮುನ್ನವೇ ದೆಹಲಿಗೆ ಹೋಗಿ ಬಂದಿರುವುದನ್ನು ಬಾಯ್ಬಿಟ್ಟಿದ್ದಾನೆ.

ದೆಹಲಿಯಲ್ಲಿ ಯಾರೊಂದಿಗೆ ಈ ವಿಷಯದ ಬಗ್ಗೆ ಚರ್ಚಿಸಿದ್ದಾರೆ ಎನ್ನುವ ಬಗ್ಗೆ ಸ್ಪಷ್ಟನೆ ಇಲ್ಲವಾದರೂ, ಷಡ್ಯಂತ್ರದ ಗ್ಯಾಂಗ್ ಚಿನ್ನಯ್ಯನ ಸಮೇತ ಬುರುಡೆಯನ್ನು ದೆಹಲಿಗೆ ತೆಗೆದುಕೊಂಡು ಹೋಗಿ ಅಲ್ಲಿ ಪ್ರತಿಷ್ಠಿತ ವ್ಯಕ್ತಿಗಳನ್ನು ಭೇಟಿಯಾಗಿ ಬುರುಡೆಯನ್ನು ತೋರಿಸಿದ್ದಾನೆ. ಅಲ್ಲಿ ಬುರುಡೆ ಸಮೇತ ಇಡೀ ಪ್ರಕರಣದ ಕತೆಯನ್ನು ಹೇಳಲಾಗಿತ್ತು. ಈ ವೇಳೆ ಗ್ಯಾಂಗ್‌ಗೆ ಬಹುದೊಡ್ಡ ಪ್ರಮಾಣದ 'ಆರ್ಥಿಕ' ಲಾಭದ ಭರವಸೆ ಸಿಕ್ಕಿತ್ತು. ಆದ್ದರಿಂದಲೇ, ದೆಹಲಿಯಿಂದ ಧರ್ಮಸ್ಥಳಕ್ಕೆ ವಾಪಸಾದ ಬಳಿಕ, ನೂರಾರು ಶವಗಳನ್ನು ಹೂತ್ತಿಟ್ಟಿದ್ದಾಗಿ ಹೇಳಿಕೊಂಡಿದ್ದ ಎನ್ನಲಾಗಿದೆ. ಈ ಬುರುಡೆಯನ್ನೇ ಮುಂದಿಟ್ಟುಕೊಂಡು ನ್ಯಾಯಾಲಯದಿಂದ ಸಾಕ್ಷಿ ಸಂರಕ್ಷಣಾ ಕಾಯ್ದೆಯಡಿ ಭದ್ರತೆ ಪಡೆದುಕೊಂಡಿದ್ದನು. ಆದ್ದರಿಂದ ಚಿನ್ನಯ್ಯ ನೀಡಿದ ಹೇಳಿಕೆಯನ್ನು ಎಸ್‌ಐಟಿ ಕೇಳುತ್ತಿತ್ತು. ಅದರಂತೆ ಚಿನ್ನಯ್ಯ ತೋರಿಸಿದ 17 ಜಾಗಗಳಲ್ಲಿ ಗುಂಡಿ ತೋಡಿದ ಬಳಿಕ ಮೂಲ ಬುರುಡೆಯ ಬಗ್ಗೆ ಎಸ್‌ಐಟಿ ಅಧಿಕಾರಿಗಳು ಪ್ರಶ್ನೆ ಮಾಡಿದ್ದರು. ಈ ವೇಳೆ ಆತ ಒಂದೊಂದು ಜಾಗದ ಹೆಸರನ್ನು ಹೇಳಿದ್ದ. ಒಂದು ಸಾರಿ ಬೋಲಿಯಾರ್ ಮತ್ತೊಮ್ಮೆ ಕಲ್ಲೇರಿ, ಮಗದೊಮ್ಮೆ ಇನ್ನೊಂದು ಜಾಗದ ಹೆಸರನ್ನು ಬಾಯ್ಬಿಟ್ಟಿದ್ದ. ಆದರೆ, ಬುರುಡೆಯಲ್ಲಿದ್ದ ಮಣ್ಣು ಧರ್ಮಸ್ಥಳ ಪರಿಸರದ್ದೇ ಅಲ್ಲ ಎಂಬ ಮಾಹಿತಿಯೂ ವಿಧಿ–ವಿಜ್ಞಾನ ಪ್ರಯೋಗಾಲಯದಿಂದಲೂ ಖಚಿತ ಪಟ್ಟಿದೆ.

ಎರಡು ವರ್ಷದಿಂದಲೂ ಪ್ಲಾನ್: ಧರ್ಮಸ್ಥಳದ ವಿರುದ್ಧದ ಈ ಷಡ್ಯಂತ್ರ 2023ರಿಂದಲೇ ಆರಂಭವಾಗಿತ್ತು ಎನ್ನುವುದು ಇದೀಗ ಬಹಿರಂಗವಾಗಿದೆ. ಧರ್ಮಸ್ಥಳದಲ್ಲಿ ನೂರಾರು ಶವಗಳನ್ನೂ ಹೂತಿಟ್ಟಿರುವ ಪ್ರಕರಣದಲ್ಲಿ ಎಸ್‌ಐಟಿ ಕಪಿಮುಷ್ಠಿಯಲ್ಲಿರುವ ಚಿನ್ನಯ್ಯ, ಗ್ಯಾಂಗ್‌ನಿಂದ ಎರಡು ಲಕ್ಷ ರು. ಪಡೆದು ಆರಂಭದಲ್ಲಿ ನಾಟಕವಾಡಿದ್ದ ಎಂಬ ಅಂಶ ಬೆಳಕಿಗೆ ಬಂದಿದೆ. ಈ ಗ್ಯಾಂಗ್‌ನಲ್ಲಿ ಪ್ರಮುಖವಾಗಿ ಮಹೇಶ್ ಶೆಟ್ಟಿ ತಿಮರೋಡಿ, ಗಿರೀಶ್ ಮಟ್ಟಣನವರ್ ಹೆಸರನ್ನು ಹೇಳಿದ್ದಾನೆ ಎಂದು ತಿಳಿದುಬಂದಿದೆ.

- ಇನ್ನಷ್ಟು ಆಳದ ತನಿಖೆಗೆ ಇಳಿದ ವಿಶೇಷ ತನಿಖಾ ತಂಡ
- ಧರ್ಮಸ್ಥಳದ ವಿರುದ್ಧದ ಈ ಷಡ್ಯಂತ್ರ 2023ರಿಂದಲೇ ಆರಂಭ
- ಎರಡು ಲಕ್ಷ ರು. ಪಡೆದು ಚಿನ್ನಯ್ಯ ನಾಟಕ ಆರಂಭ
- ಬುರುಡೆ ಸಮೇತ ದೆಹಲಿಗೆ ಚಿನ್ನಯ್ಯ ತೆರಳಿದ್ದನಂತೆ

ಸೂತ್ರಧಾರಿಗಳಿಗೂ ನೋಟಿಸ್?

ಈ ಕಟ್ಟುಕತೆ ಕಟ್ಟಿದ ಚಿನ್ನಯ್ಯನ ಹಿಂದಿರುವ ಸೂತ್ರಧಾರಿಗಳಿಗೆ ನೋಟಿಸ್ ಕೊಡಲು ಎಸ್‌ಐಟಿ ಸಿದ್ಧತೆ ನಡೆಸುತ್ತಿದೆ. ವಿಚಾರಣೆ ಸಂದರ್ಭದಲ್ಲಿ ಎಸ್‌ಐಟಿ ಅಧಿಕಾರಿಗಳ ಮುಂದೆ ಈ ಪ್ರಕರಣದಲ್ಲಿ ನಾನು ಕೇವಲ ಪಾತ್ರಧಾರಿ. ಸೂತ್ರಧಾರಿಗಳು ಬೇರೆ ಇದ್ದಾರೆ ಎಂದು ಹೇಳಿದ್ದಾನೆ. ಈ ಹಿನ್ನೆಲೆಯಲ್ಲಿ ಅವರಿಗೆಲ್ಲ ವಿಚಾರಣೆಗೆ ಹಾಜರಾಗುವಂತೆ ನೋಟಿಸ್ ನೀಡಲು ಎಸ್‌ಐಟಿ ನಿರ್ಧರಿಸಿದೆ ಎಂದು ತಿಳಿದುಬಂದಿದೆ. ಕಳೆದ ಒಂದು ವಾರದಿಂದ ಉತ್ಖನನ ನಿಲ್ಲಿಸಿದ ಎಸ್‌ಐಟಿ, ಚಿನ್ನಯ್ಯನನ್ನು ವಿವಿಧ ದೃಷ್ಟಿಕೋನಗ' ಳಲ್ಲಿ ವಿಚಾರಣೆಗೊಳಪಡಿಸಿದಾಗ ಸತ್ಯ ಬೆಳಕಿಗೆ ಬಂದಿದೆ. ಖುದ್ದು ಎಸ್‌ಐಟಿ ಮುಖ್ಯಸ್ಥರಾದ ಡಿಜಿಪಿ ಪ್ರಣವ್ ಮೊಹಾಂತಿ ಅವರು ಆತನನ್ನು ತೀವ್ರ ವಿಚಾರಣೆಗೊಳಪಡಿಸಿದಾಗ ಮತ್ತಷ್ಟು ವಿಷಯಗಳು ಬೆಳಕಿಗೆ ಬಂದಿವೆ.

ಮನೆಯಲ್ಲಿಯೇ ವಿಚಾರಣೆ?

ಇನ್ನು ಅನನ್ಯ ಭಟ್ ಎನ್ನುವ 'ಕಾಲ್ಪನಿಕ' ಯುವತಿಯ ಹೆಸರನ್ನು ಮುಂದಿಟ್ಟುಕೊಂಡು ದಿನಕ್ಕೊಂದು ಹೇಳಿಕೆ ನೀಡುತ್ತಿರುವ ಸುಜಾತ ಭಟ್ ಅವರನ್ನು ಎಸ್‌ಐಟಿ ಅಧಿಕಾರಿಗಳು ಶೀಘ್ರದಲ್ಲಿಯೇ ಸುಜಾತ ನಿವಾಸದಲ್ಲಿಯೇ ವಿಚಾರಣೆ ನಡೆಸುವ ಸಾಧ್ಯತೆಯಿದೆ. ಮಾಧ್ಯಮವೊಂದಕ್ಕೆ ನೀಡಿದ ಸಂದರ್ಶನವೊಂದರಲ್ಲಿ ಸುಜಾತ ಭಟ್ ಅವರು ಮಣಿಪಾಲ್‌ನಲಿ ನನ್ನ ಅಜ್ಜನ ಆಸ್ತಿ ಇತ್ತು. ಆ ಆಸ್ತಿಯನ್ನು ನಮ್ಮ ಕುಟುಂಬದವರು ಧರ್ಮಸ್ಥಳದ ಧರ್ಮಾಧಿಕಾರಿಗಳಿಗೆ ನೀಡಿದ್ದಾರೆ. ಆ ಸಂದರ್ಭದಲ್ಲಿ ಕಾಗದ ಪತ್ರಕ್ಕೆ ನನ್ನ ಸಹಿ ತೆಗೆದುಕೊಂಡಿರಲಿಲ್ಲ. ಹೀಗಾಗಿ ನಾನು ಈ ರೀತಿಯ ಸುಳ್ಳು ಹೇಳಬೇಕಾಯಿತು ಎಂದಿದ್ದರು. ಅವರು ಈ ಹೇಳಿಕೆ ನೀಡಿದ ಮರುದಿನವೇ ಮತ್ತೊಂದು ಮಾಧ್ಯಮವೊಂದರಲ್ಲಿ ನನ್ನ ಆ ಸಂದರ್ಶನ ಬರೀ ಸುಳ್ಳು ಒಂದು ಚಾನಲ್‌ನವರು ಬಲವಂತವಾಗಿ ನನ್ನಿಂದ ಅಂತಹ ಹೇಳಿಕೆ ಪಡೆದುಕೊಂಡಿದ್ದರು ಎಂಬ ಬಾಂಬ್ ಹಾಕಿದ್ದರು. ಸುಜಾತ ಭಟ್ ಅವರ ಈ ಗೊಂದಲ ಹೇಳಿಕೆಯಿಂದ ಎಸ್‌ಐಟಿ ಪೊಲೀಸರು ಖುದ್ದು ವಿಚಾರಣೆಗೆ ಹಾಜರಾಗಿ ಘಟನೆಯ ಸಂಪೂರ್ಣ ವಿವರ ನೀಡುವಂತೆ ನೋಟಿಸ್ ಜಾರಿ ಮಾಡಿದ್ದರು. ಆದರೆ, ಆಕೆ ಹಾಜರಾಗಿರಲಿಲ್ಲ. ಆದ್ದರಿಂದ ಮತ್ತೊಂದು ನೋಟಿಸ್ ನೀಡಿದಾಗ ಅವರು ನನಗೆ ತೀರಾ ವಯಸ್ಸಾಗಿದೆ ಜೊತೆಗೆ ನನಗೆ ಪ್ರಾಣ ಬೆದರಿಕೆ ಇರುವುದರಿಂದ ನಾನು ಎಸ್‌ಐಟಿ ಕಚೇರಿಗೆ ವಿಚಾರಣೆಗೆ ಬರಲು ಸಾಧ್ಯವಿಲ್ಲ ಎಂಬ ಉತ್ತರ ನೀಡಿದ್ದರು. ಹೀಗಾಗಿ ಅವರ ಹೇಳಿಕೆಯನ್ನು ಗಂಭೀರವಾಗಿ ಪರಿಗಣಿಸಿ ಬನಶಂಕರಿಯಲ್ಲಿರುವ ಅವರ ನಿವಾಸಕ್ಕೆ ಪೊಲೀಸ್ ಭದ್ರತೆ ಒದಗಿಸಲಾಗಿದೆ. ಇನ್ನೆರೆಡು ದಿನಗಳಲ್ಲಿ ಸುಜಾತಾ ಭಟ್ ಅವರ ನಿವಾಸಕ್ಕೆ ತೆರಳಿ ವಿಚಾರಣೆ ನಡೆಸಿ ಅವರು ನೀಡಿರುವ ಹೇಳಿಕೆಗಳ ಸತ್ಯಾಸತ್ಯತೆ ಪರಿಶೀಲನೆ ನಡೆಸಲು ಎಸ್‌ಐಟಿ ಪೊಲೀಸರು ನಿರ್ಧರಿಸಿದ್ದಾರೆ.ಎಸ್‌ಐಟಿ ವಿಚಾರಣೆ ನಡೆಸಿದ ನಂತರ ಅನನ್ಯ ಭಟ್ ನಾಪತ್ತೆಯಾಗಿದ್ದಾರಾ, ಇಲ್ಲವಾ, ಇದು ಕಟ್ಟುಕಥೆಯೇ ಎಂಬುದು ಬೆಳಕಿಗೆ ಬರಲಿದೆ.

ನನಗೂ ಆರ್‌ಎಸ್‌ಎಸ್ ಗೀತೆ ಪರಿಚಯವಿದೆ

ಯಾದಗಿರಿ: ಸದನದಲ್ಲಿ ಡಿಸಿಎಂ ಡಿಕೆ ಶಿವಕುಮಾರ್ ಆರ್‌ಎಸ್‌ಎಸ್ ಗೀತೆ ಹೇಳಿರುವ ವಿಚಾರವನ್ನು ಸಚಿವ ಸತೀಶ ಜಾರಕಿಹೊಳಿ ನನಗೂ ಗೀತೆಯ ಪರಿಚಯವಿದೆ ಎನ್ನುವ ಮೂಲಕ ಸಮರ್ಥಿಸಿಕೊಂಡಿದ್ದಾರೆ.

ಈ ಕುರಿತು ನಗರದಲ್ಲಿ ಮಾಧ್ಯಮಗಳಿಗೆ ಪ್ರತಿಕ್ರಿಯೆ ನೀಡಿರುವ ಅವರು,ಗೀತೆ ಹಾಡಿದ ತಕ್ಷಣ ಬಿಜೆಪಿಗೆ ಹೋಗ್ತಾರೆ ಅಂತ ಅನುಮಾನ ಪಡುವುದು ಸರಿಯಲ್ಲ. ನಮ್ಮ ಅಧ್ಯಕ್ಷರು ಸಂಸ್ಕೃತ ಬಲ್ಲವರಾಗಿದ್ದಾರೆ. ಅದಕ್ಕೆ ಗೀತೆಯನ್ನು ಕಲಿತಿದ್ದಾರೆ. ಕಲಿಯುವುದು ಮುಖ್ಯವಲ್ಲ ಕೌಂಟರ್ ಪಾರ್ಟ್ ಕಲಿತಿರಬೇಕು ಎಂದು ಹೇಳಿದ್ದಾರೆ.

ಒಂದು ಪಕ್ಷದ ಬಗ್ಗೆ ಸದಾ ವಿರೋಧ ಮಾಡಬೇಕೆಂದಿಲ್ಲ. ಸಂದರ್ಭಕ್ಕೆ ಅನುಗುಣವಾಗಿ ಇರಬೇಕಾಗುತ್ತದೆ. ಆರ್‌ಎಸ್‌ಎಸ್ ಗೀತೆ ಹಾಡಿದ ತಕ್ಷಣ ಡಿಕೆಶಿಗೆ ಬಿಜೆಪಿಯವರು ಸಿಎಂ ಮಾಡುವುದಾದರೆ ನಾನು ನಮ್ಮ ಶಾಸಕರು ಹಾಡ್ತೇವೆ ನಮ್ಗೆ ಮಾಡ್ತಾರಾ ಎಂದು ಪ್ರಶ್ನಿಸಿದರು. ಡಿಕೆಶಿ ಯಾಕೆ ಹೇಳಿದ್ದಾರೆ, ಏನ್ ಹೇಳಿದ್ದಾರೆ ಎನ್ನುವ ಬಗ್ಗೆ ಅವರೆ ಸ್ಪಷ್ಟೀಕರಣ ಕೊಡಬೇಕು ಈ ಎಂದಿದ್ದಾರೆ. ಸಂತೋಷ ಜೀ ಅವರಿಗೆ ಬೈದಿದ್ದಕ್ಕೆ ತಿಮರೋಡಿ ಅವರನ್ನು ಅರೆಸ್ಟ್ ಮಾಡಲಾಗಿದೆ. ಇನ್ನೂ ರಾಹುಲ್ ಗಾಂಧಿ ಅವರಿಗೆ ಬೈದ್ರೆ, ಅವರು ಪಾಸಿಟಿವ್ ಆಗಿ ತೆಗೆದುಕೊಳ್ಳುತ್ತಾರೆ. ಯಾವುದೇ ರಿವೆಂಜ್ ಪಾಲಿಟಿಕ್ಸ್ ಮಾಡಲ್ಲ. ಧರ್ಮಸ್ಥಳದ ಬಗ್ಗೆ ತನಿಖೆಗೆ ಕೋರ್ಟ್ ಆದೇಶದ್ದಂತೆ ರಾಜ್ಯ ಸರಕಾರ ಎಸ್‌ಐಟಿ ತನಿಖೆಗೆ ನೀಡಿದೆ. ಇದು ಗೊತ್ತಿದ್ದರೂ ಬಿಜೆಪಿಗರು ಮುಚ್ಚಿ ಇಡುತ್ತಿದ್ದಾರೆ ಎಂದು ಆರೋಪಿಸಿದ್ದಾರೆ. ಧರ್ಮಸ್ಥಳ ವಿರುದ್ಧ ಷಡ್ಯಂತ್ರ ಎನ್‌ಐಎ ತನಿಖೆಗೆ ಮಾಜಿ ಸಿಎಂ ಬೊಮ್ಮಾಯಿ ಆಗ್ರಹ ವಿಚಾರವಾಗಿ ಮಾತನಾಡಿ, ಎನ್‌ಐಎ ತನಿಖೆಯಾದ್ರೆ ಏನು ತಪ್ಪಿಲ್ಲ. ಅದು ಒಳ್ಳೆಯದು. ಇದರ ಹಿಂದೆ ಯಾರಿದ್ದಾರೆ ಎಂದು ಗೊತ್ತಾಗಲಿದೆ. ಇದು ಮುಕ್ತಿ ಆಗಬೇಕಾದರೆ ಎನ್‌ಐಎ ತನಿಖೆ ಇಲ್ಲವೇ ಅದಕ್ಕಿಂತ ಮೇಲೆ ದೊಡ್ಡ ತನಿಖೆ ಆಗಬೇಕು ಎಂದರು.

ಕಾನೂನು ಬಾಹಿರ ಚಟುವಟಿಕೆಗಳಿಗೆ ಸರಕಾರ ಅವಕಾಶ ಕೊಡಲ್ಲ : ಎನ್.ಎಸ್ ಬೋಸರಾಜು

ತಪ್ಪು ಮಾಡಿದವರಿಗೆ ಶಿಕ್ಷೆ

ರಾಯಚೂರು: ವೀರೇಂದ್ರ ಪಪ್ಪಿ ಇರಲಿ, ಯಾರೇ ಇರಲಿ ತಪ್ಪು ಮಾಡಿದವರಿಗೆ ಶಿಕ್ಷೆ ಆಗೇ ಆಗುತ್ತೆ. ನ್ಯಾಯಯುತವಾಗಿ ಏನು ನಡೆಯಬೇಕೋ ಅದು ನಡೆಯುತ್ತದೆ ಎಂದು ಸಣ್ಣ ನೀರಾವರಿ ಸಚಿವ ಎನ್. ಎಸ್ .ಬೋಸರಾಜು ಹೇಳಿದ್ದಾರೆ.

ಚಿತ್ರದುರ್ಗ ಕಾಂಗ್ರೆಸ್ ಶಾಸಕ ಕೆ.ಸಿ.ವೀರೇಂದ್ರ ಪಪ್ಪಿ ಅವರ ಇಡಿ ಬಂಧನ ವಿಚಾರವಾಗಿ ಮಾತನಾಡಿದ ಅವರು, ಗ್ಯಾಂಬ್ಲಿಂಗ್ ಮಾಡ್ತಾರೋ ಅಥವಾ ಮತ್ತೊಂದೋ. ಯಾರೇ ಏನೇ ಮಾಡಿರಲಿ, ಕಾನೂನುಬಾಹಿರ ಚಟುವಟಿಕೆಗಳಿಗೆ ಸರಕಾರ ಎಂದೂ ಅವಕಾಶ ಕೊಡುವುದಿಲ್ಲ. ಅವರು ಯಾರೇ ಇರಲಿ ಅವರ ಮೇಲೆ ಕ್ರಮ ತಗೆದುಕೊಳ್ಳುತ್ತೇವೆ ಎಂದಿದ್ದಾರೆ.

ಇನ್ನೂ ಧರ್ಮಸ್ಥಳದ ಪ್ರಕರಣವು ಈಗಾಗಲೇ ಒಂದು ಹಂತಕ್ಕೆ ಬಂದಿದೆ. ಎಸ್‌ಐಟಿ ರಚನೆ ಮಾಡಿ ತನಿಖೆ ನಡೆದಿರುವುಕ್ಕೆ ಹೆಗ್ಗಡೆಯವರು ಸ್ವಾಗತ ಮಾಡಿದ್ದಾರೆ. ತನಿಖೆಯಿಂದ ಸತ್ಯ ಹೊರಬರಲಿ, ಕಾಂಗ್ರೆಸ್ ಒಳ್ಳೆಯ ಕೆಲಸ ಮಾಡಿದೆ ಅಂತ ಹೆಗ್ಗಡೆಯವರು ಹೇಳಿದ್ದಾರೆ. ಯಾರು ತಪ್ಪು ಮಾಡಿದ್ದಾರೆ ಅವರ ಮೇಲೆ ಈಗಾಗಲೇ ಎಫ್‌ಐಆರ್ ಮಾಡಿ, ಬಂಧನವೂ ಆಗಿದೆ. ಯಾವುದೇ ಸರಕಾರ ಇರಲಿ ದೂರು ಬಂದರೆ ತನಿಖೆ ಮಾಡುವ ಜವಾಬ್ದಾರಿ ಇರುತ್ತದೆ. ಹಾಗಾಗಿ ಸರಕಾರ ತನ್ನ ಕರ್ತವ್ಯ ನಿರ್ವಹಿಸಿದೆ. ಈಗ ಸತ್ಯ ಹೊರ ಬರುತ್ತಿದೆ ಎಂದು ಹೇಳಿದ್ದಾರೆ.

ಬಿಜೆಪಿ ನಾಯಕರ ವಿರುದ್ಧ ಕಿಡಿ

ಬಿಜೆಪಿಯವರಿಗೆ ಮಾತನಾಡಲು ಯಾವುದೇ ವಿಷಯಗಳಿಲ್ಲ. ಎಸ್‌ಐಟಿ ಮಾಡಿ ಒಂದುವರೆ ತಿಂಗಳ ಬಳಿಕ ಎಲ್ಲಿಯೂ ಏನೂ ಸಿಕ್ಕಿಲ್ಲ ಅಂತ ಈಗ ಮಾತನಾಡುತ್ತಿದ್ದಾರೆ. ಬಿಜೆಪಿಯವರಿಗೆ ರಾಜ್ಯದ ಅಭಿವೃದ್ಧಿಗಿಂತ ರಾಜಕೀಯ ಮುಖ್ಯ. ಧರ್ಮದ ಆಧಾರದ ಮೇಲೆ ಗಲಾಟೆ ಮಾಡಿಸುವುದು ಮೊದಲಿನಿಂದ ಬಂದಿದೆ. ಬಿಜೆಪಿ ಸರಕಾರ ಇದ್ದಾಗಲೂ ಮಂಗಳೂರು, ಉಡುಪಿಯಲ್ಲಿ ಗಲಭೆಗಳಾಗಿವೆ ಎಂದು ಬೋಸರಾಜು ಟಾಂಗ್ ಕೊಟ್ಟಿದ್ದಾರೆ.

ಸೌಜನ್ಯ ಹೋರಾಟ ನಡೆಯುವಾಗ ಎಲ್ಲಿದ್ದರು?: ಸಚಿವ

ಧರ್ಮಸ್ಥಳ ಪ್ರಕರಣದಲ್ಲಿ ಬಿಜೆಪಿಗೆ ದೊಡ್ಡ ಮುಖಭಂಗ

ಮಂಡ್ಯ: ಧರ್ಮಸ್ಥಳ ಪ್ರಕರಣದಲ್ಲಿ ಬಿಜೆಪಿಯವರಿಗೆ ದೊಡ್ಡ ಮುಖಭಂಗ ಆಗಿದೆ. ಸೌಜನ್ಯ ಸತ್ತಾಗ ಆರ್. ಅಶೋಕ್ ಗೃಹ ಸಚಿವರಾಗಿದ್ದರು. ಅಂದೇ ಸೂಕ್ತ ತನಿಖೆ ಮಾಡಬಹುದಿತ್ತು. ಧರ್ಮಸ್ಥಳದ ಬಗ್ಗೆ ಮಾತನಾಡಲು ಬಿಟ್ಟಿದ್ದು ಮಹಾ ಅಪರಾಧ ಎಂದು ಕೃಷಿ ಸಚಿವ ಎನ್.ಚಲುವರಾಯಸ್ವಾಮಿ ತಿಳಿಸಿದರು.

ಸುದ್ದಿಗಾರರೊಂದಿಗೆ ಮಾತನಾಡಿ, ಧರ್ಮಸ್ಥಳದ ವಿರುದ್ಧ ಆರೋಪ ಮಾಡುತ್ತಿರುವವರ ವಿರುದ್ಧ ಕಾನೂನು ಕ್ರಮವಾಗಬೇಕು ಎಂದು ವಿಜಯೇಂದ್ರ, ಆರ್. ಅಶೋಕ್ ಈಗ ಮಾತನಾಡುತ್ತಿದ್ದಾರೆ. ಹತ್ತಾರು ವರ್ಷಗಳಿಂದ ಸೌಜನ್ಯ ಹೋರಾಟ ನಡೆಯುವಾಗ ಇವರೆಲ್ಲ ಎಲ್ಲಿ ಹೋಗಿದ್ದರು. ಇವರದೇ ಸರಕಾರವಿತ್ತಲ್ಲಾ' ಎಂದು ಹೇಳಿದರು. ಎಸ್‌ಐಟಿ ರಚನೆ ಮಾಡಿದಾಗ ಬಾಯಿ ಮುಚ್ಚಿಕೊಂಡು ಸುಮ್ಮನಿದ್ದು ಈಗ ಲಾಭ ಪಡೆಯೋಕೆ ನೋಡ್ತಿದ್ದಾರೆ. ಮುಖ್ಯಮಂತ್ರಿ ಮತ್ತು ಉಪಮುಖ್ಯಮಂತ್ರಿಯವರು ಕ್ರಮ ಆಗಬೇಕು ಎಂದಾಗ ಬಿಜೆಪಿಯವರಿಗೆ ಜ್ಞಾನೋದಯವಾಗಿದೆ. ಎಸ್‌ಐಟಿ ಮೂಲಕ ನಮ್ಮ ಸರಕಾರ ಸತ್ಯವನ್ನು ಹೊರಗೆ ತಂದಿದೆ. ಇನ್ನು ಮುಂದೆಯಾದರೂ ಬಿಜೆಪಿಯವರು ಧರ್ಮದ ವಿಚಾರದಲ್ಲಿ ರಾಜಕಾರಣ ಮಾಡೋದನ್ನು ಬಿಡಲಿ ಎಂದು ಹೇಳಿದರು.

ಡಿಕೆಶಿಗೆ ಕಾಂಗ್ರೆಸ್‌ನಲ್ಲಿ ಗಟ್ಟಿ ನೆಲೆ ಇದೆ

ಡಿ.ಕೆ.ಶಿವಕುಮಾರ್ ಬಿಜೆಪಿ ಸೇರ್ಪಡೆ ವಿಚಾರಕ್ಕೆ ಪ್ರತಿಕ್ರಿಯಿಸಿ, ಡಿ.ಕೆ.ಶಿವಕುಮಾರ್ ಬಿಜೆಪಿಗೆ ಹೋಗುವುದಾಗಿದ್ದರೆ ಎಂದೋ ಹೋಗುತ್ತಿದ್ದರು. ಕಾಂಗ್ರೆಸ್‌ನಲ್ಲಿ ಗಟ್ಟಿ ನೆಲೆ ಕಂಡುಕೊಂಡಿದ್ದಾರೆ. ಉತ್ತಮ ಕೆಪಿಸಿಸಿ ಅಧ್ಯಕ್ಷರು ಅಂತ ಹೆಸರು ಪಡೆದಿದ್ದಾರೆ. ಅವರೇಕೆ ಈಗ ಬಿಜೆಪಿಗೆ ಹೋಗುತ್ತಾರೆ. ಸಂದರ್ಭ ಬಂದಾಗ ಅವರೂ ಸಿಎಂ ಆಗುತ್ತಾರೆ. ಈ ಬಗ್ಗೆ ನಮ್ಮ ಪಕ್ಷದ ವರಿಷ್ಠರು ನಿರ್ಧಾರ ಮಾಡುತ್ತಾರೆ ಎಂದು ಕೃಷಿ ಸಚಿವ ಎನ್. ಚಲುವರಾಯಸ್ವಾಮಿ ಹೇಳಿದರು.

ದಸರಾ ಉದ್ಘಾಟನೆ ಮಾಡಿಸುವುದು ಸರಿಯಲ್ಲ ಎಂದು ಪೋಸ್ಟ್

ಬಾನು ಆಯ್ಕೆಗೆ ಯತ್ನಾಳ್ ಆಕ್ಷೇಪ

ವಿಜಯಪುರ: ಈ ಬಾರಿಯ ದಸರಾ ಉದ್ಘಾಟನೆಗೆ ಲೇಖಕಿ ಬಾನು ಮುಷ್ತಾಕ್ ಅವರನ್ನು ಆಯ್ಕೆ ಮಾಡಿರುವುದಕ್ಕೆ ಸರಕಾರದ ವಿರುದ್ಧ ಶಾಸಕ ಬಸನಗೌಡ ಪಾಟೀಲ ಯತ್ನಾಳ ಆಕ್ಷೇಪ ವ್ಯಕ್ತಪಡಿಸಿದ್ದಾರೆ.

ಈ ಬಗ್ಗೆ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಬಾನು ಮುಷ್ತಾಕ್ ಅವರನ್ನು ಲೇಖಕಿ ಹಾಗೂ ಹೋರಾಟಗಾರ್ತಿಯಾಗಿ ನಾನು ವೈಯಕ್ತಿಕವಾಗಿ ಗೌರವಿಸುತ್ತೇನೆ. ಆದರೆ, ನಾಡದೇವತೆ ಚಾಮುಂಡೇಶ್ವರಿ ದೇವಿಗೆ ಪುಷ್ಪಾರ್ಚನೆ ಸಲ್ಲಿಸಿ, ದೀಪ ಬೆಳಗುವುದರ ಮೂಲಕ ದಸರಾ ಉದ್ಘಾಟಿಸುವುದು, ಅವರ ಸ್ವಂತ ಧಾರ್ಮಿಕ ನಂಬಿಕೆಗಳಿಗೆ ವಿರುದ್ಧವಾಗಿದೆ ಎಂದು ತಮ್ಮ ಅಧಿಕೃತ ಟ್ವಿಟರ್ ಖಾತೆಯಲ್ಲಿಬರೆದುಕೊಂಡಿದಾರೆ. ಇಸ್ಲಾಂ ಧರ್ಮದ ಕುರಿತು ಹಲವು ಪ್ರಶ್ನೆಗಳನ್ನು ಕೇಳಿದ್ದಾರೆ.

ಮೂರ್ತಿ ಪೂಜೆಯನ್ನು ಧಿಕ್ಕರಿಸುವ ಇಸ್ಲಾಂ, ಒಂದು ದೇವರು ಹಾಗೂ ಒಂದು ಗ್ರಂಥವನ್ನೇ ಒಪ್ಪಿಕೊಳ್ಳುತ್ತದೆ ಎಂಬ ನಂಬಿಕೆಯಲ್ಲಿ ಅವರು ಇನ್ನೂ ಇದ್ದಾರೆಯೇ? ಎಲ್ಲಾ ಮಾರ್ಗಗಳೂ ಅಂತಿಮವಾಗಿ ಒಂದೇ ಮೋಕ್ಷಕ್ಕೆ ದಾರಿ ಮಾಡಿಕೊಡುತ್ತವೆ ಎಂದು ಅವರು ನಂಬುತ್ತಾರೆಯೇ? ಈ ಬಗ್ಗೆ ಮೊದಲು ಬಾನು ಮುಷ್ತಾಕ್ ಅವರು ಸ್ಪಷ್ಟನೆ ನೀಡುವುದು ಅಗತ್ಯವಿದೆ. ಅವರು ಈ ಪ್ರಶ್ನೆಗಳಿಗೆ ಸ್ಪಷ್ಟನೆ ನೀಡದೆ ದಸರಾ ಉದ್ಘಾಟಿಸುವುದು ಸರಿಯಲ್ಲ. ಆದರೆ, ದಸರಾ ಉತ್ಸವದ ಅಂಗವಾಗಿ ನಡೆಯುವ ಸಾಂಸ್ಕೃತಿಕ ಅಥವಾ ಕವಿಗೋಷ್ಠಿಯಂತಹ ಸಾಹಿತ್ಯ ಕಾರ್ಯಕ್ರಮಗಳನ್ನು ಉದ್ಘಾಟಿಸುವ ಅತಿಥಿಯಾಗಿ ಅವರು ಭಾಗವಹಿಸುವುದು ಸಮಂಜಸವಾಗಿದೆ ಎಂದು ಸಲಹೆ ನೀಡಿದ್ದಾರೆ.

- ಬಾನು ಮುಷ್ತಾಕ್ ಅವರನ್ನು ವೈಯಕ್ತಿಕವಾಗಿ ಗೌರವಿಸುವೆನು
- ದಸರಾ ಉದ್ಘಾಟಿಸುವುದು, ಅವರ ಸ್ವಂತ ಧಾರ್ಮಿಕ ನಂಬಿಕೆಗಳಿಗೆ ವಿರುದ್ಧವಿದೆ
- ಸಾಹಿತ್ಯ ಕಾರ್ಯಕ್ರಮಗಳ ಉದ್ಘಾಟಿಸಲಿ, ಧಾರ್ಮಿಕ ಕಾರ್ಯಕ್ರಮಗಳ ಚಾಲನೆ ಬೇಡ

ಧಾರ್ಮಿಕ ಆಚರಣೆಗೂ ಬಾನು ಮುಷ್ತಾಕ್‌ಗೇನು ಸಂಬಂಧ?: ಪ್ರತಾಪ್

ಉದ್ಘಾಟಕರ ಹೆಸರು ಮರು ಪರಿಶೀಲಿಸಿ

ಮೈಸೂರು: ಧಾರ್ಮಿಕ ಆಚರಣೆಗೂ ಬಾನು ಮುಷ್ತಾಕ್ ಅವರಿಗೆ ಏನು ಸಂಬಂಧ? ಎಂದು ಪ್ರಶ್ನಿಸಿರುವ ಮಾಜಿ ಸಂಸದ ಪ್ರತಾಪ್ ಸಿಂಹ, ದಸರಾ ಉದ್ಘಾಟಕರ ಹೆಸರಿನ ಬಗ್ಗೆ ಮರು ಪರಿಶೀಲನೆ ಮಾಡಬೇಕು ಎಂದು ಆಗ್ರಹಿಸಿದರು.

ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ದಸರಾ ನಾಡ ಹಬ್ಬ ಜಾತ್ಯಾತೀತದ ಪ್ರತೀಕ ಅಲ್ಲ ಧಾರ್ಮಿಕ ಆಚರಣೆ. ಬಾನು ಮುಷ್ತಾಕ್ ರವರ ಧರ್ಮ ಆಚರಣೆ ನಿಮ್ಮ ವೈಯುಕ್ತಿಕ. ದಸರಾ ಧಾರ್ಮಿಕತೆಯ ಪ್ರತೀಕ, ನಮ್ಮ ಹಬ್ಬ, ದುರ್ಗಾ ಪೂಜೆ , ನವರಾತ್ರಿ, ಏನು ಬೇಕಾದರೂ ಕರೆಯಿರಿ. ದಸರಾ ವಿಜಯನಗರ ಸಾಮ್ರಾಜ್ಯ ಪತನವಾದ ನಂತರ ಯದುವಂಶ ಮುಂದುವರಿಸಿಕೊಂಡು ಬಂದಿದೆ. ಇದು ಜಾತ್ಯಾತೀತ ಅಲ್ಲ ನಮ್ಮ ಧಾರ್ಮಿಕ ಆಚರಣೆ ಎಂದು ಪ್ರತಿಪಾದಿಸಿದರು.

ಬಾನು ಮುಷ್ತಾಕ್ ಅವರಿಗೆ ತಾಯಿ ಚಾಮುಂಡಿಯ ಬಗ್ಗೆ ನಂಬಿಕೆ ಇದೆಯಾ? ಭಕ್ತೆಯಾಗಿ ಎಲ್ಲಾದರೂ ತೋರಿಸಿದ್ದಾರಾ?. ನಾಡಿನ ಅಧಿದೇವತೆ ಚಾಮುಂಡಿ, ದಸರಾವನ್ನು ಭಕ್ತಿ ಭಾವದಿಂದ ಮಾಡುವುದು. ಇದು ಸರಕಾರಿ ಕಾರ್ಯಕ್ರಮವಲ್ಲ. ಇದಕ್ಕೆ ಬಾನು ಮುಷ್ತಾಕ್ ಸೂಕ್ತವಾದ ವ್ಯಕ್ತಿ ಆಗುತ್ತಾರಾ? ಎಂದು ಪ್ರಶ್ನಿಸಿದರು. ಬಾನು ಮುಷ್ತಾಕ್ ಅವರನ್ನು ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷರನ್ನಾಗಿ ಮಾಡಿ ಅಪಾರ ಗೌರವ ಕೊಡಿ. ಆದರೆ, ಧಾರ್ಮಿಕ ಆಚರಣೆಗೂ ಬಾನು ಮುಷ್ತಾಕ್ ಅವರಿಗೆ ಏನು ಸಂಬಂಧ?. ಬಾನು ಮುಷ್ತಾಕ್ ಮುಸ್ಲಿಂ ಧರ್ಮದವರು. ಅಲ್ಲಾಹು ಅವರನ್ನು ಹೊರತುಪಡಿಸಿ ಬೇರೆ ಯಾರೂ ದೇವರಿಲ್ಲ ಎಂದು ಇಸ್ಲಾಂ ಧರ್ಮದಲ್ಲಿ ಹೇಳುತ್ತದೆ. ಹಾಗಾದರೆ ಚಾಮುಂಡಿ ದೇವರನ್ನು ನಂಬುತ್ತೀರಾ?. ಸಿದ್ದರಾಮಯ್ಯ ಅನಿಷ್ಠ ಮಹಿಷ ದಸರಾ ಉದ್ಘಾಟನೆ ಮಾಡಿದ ಪರಂಪರೆ ನಿಮ್ಮದು ಎಂದು ಹರಿಹಾಯ್ದರು.

ಎಸ್‌ಡಿಪಿಐಗೂ ಧರ್ಮಸ್ಥಳಕ್ಕೂ ಏನು ಸಂಬಂಧ?

ಧರ್ಮಸ್ಥಳಕ್ಕೂ, ಸಾಬರಿಗೂ ಸಂಬಂಧ ಏನು?. ಎಸ್‌ಡಿಪಿಐಗೂ ಧರ್ಮಸ್ಥಳಕ್ಕೂ ಏನು ಸಂಬಂಧ?. ಏತಕ್ಕಾಗಿ ಅವರು ಇಷ್ಟೆಲ್ಲ ಮಾಡುತ್ತಿದ್ದಾರೆ? ಎಂದು ಮಾಜಿ ಸಂಸದ ಪ್ರತಾಪ್ ಸಿಂಹ ಪ್ರಶ್ನಿಸಿದರು. ಕಳೆದ ಒಂದು ತಿಂಗಳಿಂದ ಮಾಧ್ಯಮ, ಸಾಮಾಜಿಕ ಮಾಧ್ಯಮಗಳಲ್ಲಿ ಧರ್ಮಸ್ಥಳದ್ದೇ ಚರ್ಚೆ ಆಗಿದೆ. ಆದರೆ ಒಂದು ಕಡೆಯೂ ಸಣ್ಣ ಮೂಳೆಯೂ ಸಿಗಲಿಲ್ಲ. ಇದೆಲ್ಲಾ ವ್ಯವಸ್ಥಿತ ಪಿತೂರಿ ಅಂತ ಸ್ಪಷ್ಟವಾಗುತ್ತಿದೆ. ಅವರೇ ತಮ್ಮನ್ನು ದುರ್ಬಳಕೆ ಮಾಡಿಕೊಂಡಿದ್ದಾರೆ ಅಂತ ಒಪ್ಪಿಕೊಂಡಿದ್ದಾರೆ. ಪ್ರತಿಯೊಬ್ಬರೂ ಕ್ರಮೇಣ ಬೆತ್ತಲಾಗುತ್ತಿದ್ದಾರೆ. ಹಾಗಾಗಿ ಇದರ ಹಿಂದೆ ಯಾರಿದ್ದಾರೆ ಎಂಬುದು ಗೊತ್ತಾಗಬೇಕು. ಅದಕ್ಕಾಗಿ ಪ್ರಕರಣವನ್ನು ಎನ್‌ಐಎ ತನಿಖೆಗೆ ವಹಿಸಬೇಕು ಎಂದು ಆಗ್ರಹಿಸಿದರು.

ಅಧಿವೇಶನದ ಬಳಿಕ ದೆಹಲಿ ಭೇಟಿಯೆಂದಿದ್ದ ರಾಜಣ್ಣ | ರಾಗಾ ಪಾದಯಾತ್ರೆ ಹಿನ್ನೆಲೆ ಅವಕಾಶ ಇಲ್ಲ

ಹೈಕಮಾಂಡ್ ಭೇಟಿಗೆ ರಾಜಣ್ಣಗೆ ಸಿಗದ ಅವಕಾಶ?

ಬೆಂಗಳೂರು: ರಾಹುಲ್ ಗಾಂಧಿ ಅವರ 'ಮತಗಳ್ಳತನ' ಆರೋಪದ ವಿರುದ್ಧ ಮಾತನಾಡಿ ಸಚಿವ ಸಂಪುಟದಿಂದ ಹೊರಬಿದ್ದಿರುವ ಕಾಂಗ್ರೆಸ್ ಹಿರಿಯ ಶಾಸಕ ಕೆ.ಎನ್. ರಾಜಣ್ಣ ದೆಹಲಿ ಹೈಕಮಾಂಡ್‌ಗೆ ಭೇಟಿಗೆ ಈವರೆಗೆ ಸಮಯ ನಿಗದಿಯಾಗಿಲ್ಲ.

ಸಚಿವ ಸ್ಥಾನ ಕೈತಪ್ಪುತ್ತಿದ್ದಂತೆ ಕೆಪಿಸಿಸಿ ಅಧ್ಯಕ್ಷ ಡಿ.ಕೆ.ಶಿವಕುಮಾರ್ ವಿರುದ್ಧ ಪರೋಕ್ಷವಾಗಿ ವಾಗ್ದಾಳಿ ನಡೆಸಿ, ದೆಹಲಿಯ ಮೂರು ನಾಯಕರೇ ತಮ್ಮ ಸಚಿವ ಸ್ಥಾನ ಹೋಗಲು ಕಾರಣವೆಂದು ಹೈಕಮಾಂಡ್ ವಿರುದ್ಧವೂ ಆಕ್ಷೇಪವ್ಯಕ್ತಪಡಿಸಿದ್ದ ರಾಜಣ್ಣ, ಅಧಿವೇಶನದ ಬಳಿಕ ದೆಹಲಿಗೆ ತೆರಳಿ, ಚರ್ಚಿಸುವುದಾಗಿ ಹೇಳಿದ್ದರು. ಸಂಪುಟದಿಂದ ಹೊರಬರುತ್ತಿದ್ದಂತೆ ಈ ಹೇಳಿಕೆ ನೀಡಿದ್ದರಿಂದ ದೆಹಲಿ ನಾಯಕರನ್ನು ಭೇಟಿಯಾಗಿ ಮಾತನಾಡಲು ಚಿಂತನೆ ನಡೆಸಿದ್ದರು. ಕಾಂಗ್ರೆಸ್ ಹೈಕಮಾಂಡ್ ತೀರ್ಮಾನದ ವಿರುದ್ಧವೇ ಬಹಿರಂಗವಾಗಿ ಮಾತನಾಡಿದ್ದ, ಅದಕ್ಕೂ ಮೊದಲು ಪಕ್ಷದ ನಾಯಕರ ಎಚ್ಚರಿಕೆಯ ಹೊರತಾಗಿಯೂ ನಿರಂತರವಾಗಿ ಕೆಪಿಸಿಸಿ ಅಧ್ಯಕ್ಷರ ಬದಲಾವಣೆಗೆ ಸಂಬಂಧಿಸಿದಂತೆ ಮಾತನಾಡಿದ್ದರಿಂದ ದೆಹಲಿ ನಾಯಕರು ರಾಜಣ್ಣ ನಡೆಗೆ ಬೇಸರ ವ್ಯಕ್ತಪಡಿಸಿದ್ದಾರೆ. ಆದ್ದರಿಂದ ಭೇಟಿಗೆ ಸಮಯಾವಕಾಶವನ್ನು ಕೇಳಿದರೂ, ಒಪ್ಪಿಲ್ಲ ಎನ್ನುವ ಮಾತುಗಳು ಕೇಳಿಬರುತ್ತಿದೆ.

ರಾಜಣ್ಣ ಅವರನ್ನು ಸಂಪುಟದಿಂದ ಕೈಬಿಟ್ಟ ಆರಂಭದಲ್ಲಿ ಸತೀಶ್ ಜಾರಕಿಹೊಳಿ ಸೇರಿದಂತೆ ಕೆಲ ಶಾಸಕರು ರಾಜಣ್ಣ ಬೆಂಬಲಕ್ಕೆ ನಿಂತಿದ್ದರು. ದೆಹಲಿಗೆ ಹೋಗಿ ರಾಜಣ್ಣ ಪರವಾಗಿ ಮಾತನಾಡುವು ದಾಗಿಯೂ ಸತೀಶ್ ಜಾರಕಿಹೊಳಿ ಹೇಳಿದ್ದರು. ಆದರೆ ರಾಜಣ್ಣ ಅವರನ್ನು ಸಂಪುಟದಿಂದ ಕೈಬಿಡುವುದಷ್ಟೇ ಅಲ್ಲದೇ, ಪಕ್ಷದಿಂದಲೂ ಉಚ್ಚಾಟಿಸಬೇಕು ಎನ್ನುವ ಸೂಚನೆ ಬಂದಿತ್ತು ಎನ್ನುವ ವಿಷಯ ನಾಯಕರ ಗಮನಕ್ಕೆ ಬರುತ್ತಿದ್ದಂತೆ ಬಹುತೇಕ ನಾಯಕರು, ಮೌನಕ್ಕೆ ಶರಣಾಗಿದ್ದಾರೆ ಎನ್ನಲಾಗಿದೆ.



ಧರ್ಮಸ್ಥಳದ ಅನಾಮಿಕ ತಲೆಬುರುಡೆ ತಂದುಕೊಟ್ಟ ತಕ್ಷಣ ಆತನ ಬಗ್ಗೆ ಪೂರ್ವಪರ ವಿಚಾರಿಸದೆ, 164 ಹೇಳಿಕೆ ಪಡೆದು ಎಸ್‌ಐಟಿ ರಚಿಸಲಾಯಿತು. ತನಿಖೆಯ ಪ್ರಾರಂಭಿಕ ಹಂತದಲ್ಲಿ ಎಲ್ಲರೂ ಎಡವಿದ್ದಾರೆ . ಧರ್ಮಸ್ಥಳಕ್ಕೆ ಅಪಕೀರ್ತಿ ತರುವ ಪ್ರಯತ್ನ ನಡೆಯಿತು.

ಕೆ.ಎನ್.ರಾಜಣ್ಣ, ಮಾಜಿ ಸಚಿವ

ರಾಗಾ ಯಾತ್ರೆಯಿಂದ ತಡ

ದೆಹಲಿ ನಾಯಕರ ಸಮಯ ನಿಗದಿಯಾಗದಿರುವುದಕ್ಕೆ ರಾಹುಲ್ ಗಾಂಧಿ ಅವರು ಬಿಹಾರದಲ್ಲಿ ನಡೆಸುತ್ತಿರುವ ಯಾತ್ರೆ ಕಾರಣ ಎನ್ನುವುದು ರಾಜಣ್ಣ ಬೆಂಬಲಿಗರ ವಾದವಾಗಿದೆ. ಈ ಯಾತ್ರೆಯಲ್ಲಿ ರಾಹುಲ್ ಗಾಂಧಿ ಅವರು ಬ್ಯುಸಿಯಾಗಿರುವುದರಿಂದ, ಸಮಯ ಸಿಗುತ್ತಿಲ್ಲ. ಒಮ್ಮೆ ಯಾತ್ರೆ ಮುಗಿದ ಬಳಿಕ ರಾಜಣ್ಣ ಅವರು ದೆಹಲಿ ತೆರಳಿ ನಾಯಕರೊಂದಿಗೆ ಚರ್ಚಿಸುವ ಸಾಧ್ಯತೆಯಿದೆ. ಆದರೆ ಸದ್ಯದ ಪರಿಸ್ಥಿತಿಯಲ್ಲಿ ಇದು ಸಾಧ್ಯವೇ ಎನ್ನುವ ಪ್ರಶ್ನೆಗೆ ಕಾಂಗ್ರೆಸ್ ನಾಯಕರ ಬಳಿ ಉತ್ತರವಿಲ್ಲವಾಗಿದೆ.

ಡಿಕೆಶಿ ವಿರುದ್ಧ ವಾಗ್ದಾಳಿ

ತುಮಕೂರು: ಡಿಕೆಶಿ ಆರ್‌ಎಸ್‌ಎಸ್ ಗೀತೆ ಹಾಡಬಹುದು, ಖಾಸಗಿ ಕಾರ್ಯಕ್ರಮದಲ್ಲಿ ಬಿಜೆಪಿ ನಾಯಕ ಅಮಿತ್ ಶಾ ಜತೆಗೆ ವೇದಿಕೆ ಹಂಚಿಕೊಳ್ಳಬಹುದು. ನಾವು ಏನೂ ಮಾತಾಡುವಂತಿಲ್ಲ ಎಂದು ಮಾಜಿ ಸಚಿವ ಕೆ.ಎನ್. ರಾಜಣ್ಣ ಡಿ.ಕೆ.ಶಿವಕುಮಾರ್ ವಿರುದ್ಧ ವಾಗ್ದಾಳಿ ನಡೆಸಿದರು. ಸುದ್ದಿಗಾರರೊಂದಿಗೆ ಮಾತನಾಡಿ, ಶಿವಕುಮಾರ್ ಅಧಿವೇಶನದಲ್ಲಿ ಆರ್‌ಎಸ್‌ಎಸ್ ಗೀತೆ ಹಾಡಿದ ಬಗ್ಗೆ ಪ್ರತಿಕ್ರಿಯಿಸಿದರು. ಪ್ರಯಾಗ್‌ರಾಜ್‌ನ ಗಂಗೆಯಲ್ಲಿ ಸ್ನಾನ ಮಾಡಿದ ಮಾತ್ರಕ್ಕೆ ಬಡತನ ನಿವಾರಣೆಯಾಗುವುದಿಲ್ಲ ಎಂದು ಮಲ್ಲಿಕಾರ್ಜುನ ಖರ್ಗೆ ಹೇಳಿದ್ದರು. ಇದರ ನಂತರವೂ ಡಿ.ಕೆ.ಶಿವಕು ಮಾರ್ ಹೋಗಿ ಪುಣ್ಯ ಸ್ನಾನ ಮಾಡಿದರು. ಅಂಬಾನಿ ಮಗನ ಮದುವೆಯ ಆಮಂತ್ರಣವನ್ನು ಕಾಂಗ್ರೆಸ್ ನಾಯಕ ರಾಹುಲ್‌ಗಾಂಧಿ ಸ್ವೀಕರಿಸುವುದಿಲ್ಲ. ಅಂತಹ ಮದುವೆಗೆ ಇವರು (ಡಿಕೆಶಿ) ಕುಟುಂಬ ಸಮೇತ ಹೋಗುತ್ತಾರೆ ಎಂದು ಕಿಡಿಕಾರಿದರು.

ಆರ್‌ಎಸ್‌ಎಸ್ ಗೀತೆ ಹಾಡಿ ಹೊಗಳಿದ ಶಾಸಕ

ತುಮಕೂರು: 'ನಮಸ್ತೆ ಸದಾ ವತ್ಸಲೇ ಮಾತೃಭೂಮಿ' ಎಂಬ ಆರ್‌ಎಸ್‌ಎಸ್ ಗೀತೆಯ ಮೊದಲ ಕೆಲವು ಸಾಲುಗಳನ್ನು ಉಪ ಮುಖ್ಯಮಂತ್ರಿ ಡಿಕೆ ಶಿವಕುಮಾರ್ ಸದನದಲ್ಲಿ ಹಾಡಿದ ನಂತರ, ಆಡಳಿತಾರೂಢ ಕಾಂಗ್ರೆಸ್ ಶಾಸಕ ಎಚ್.ಡಿ ರಂಗನಾಥ್ ಕೂಡ ಭಾನುವಾರ ಆರ್‌ಎಸ್‌ಎಸ್ ಗೀತೆಯ ಆರಂಭಿಕ ಸಾಲುಗಳನ್ನು ಹಾಡಿ ಹೊಗಳಿದ್ದಾರೆ.

ಸುದ್ದಿಗಾರರೊಂದಿಗೆ ಮಾತನಾಡಿ, ಆರ್‌ಎಸ್‌ಎಸ್ ಗೀತೆ'ನಮಸ್ತೆ ಸದಾ ವತ್ಸಲೇ' ಆರಂಭಿಕ ಸಾಲುಗಳನ್ನು ಹಾಡಿದರು. ಈ ಗೀತೆ ತುಂಬಾ ಒಳ್ಳೆಯ ಹಾಡು. ವಿಧಾನಸಭೆಯಲ್ಲಿ ಡಿಸಿಎಂ ಅದನ್ನು ಹಾಡಿದ ನಂತರ ನಾನು ಅದನ್ನು ಕೇಳಿದೆ ಎಂದು ಹೇಳಿದರು. 'ನಾನು ಅದರ ಅರ್ಥವನ್ನು ಓದಿದ್ದೇನೆ. ನಾವು ಹುಟ್ಟಿದ ಭೂಮಿಗೆ ನಮಸ್ಕರಿಸಬೇಕು ಎಂದು ಅದು ಹೇಳುತ್ತದೆ. ಅದರಲ್ಲಿ ನನಗೆ ಯಾವುದೇ ತಪ್ಪಿಲ್ಲ. ನಮ್ಮದು ಜಾತ್ಯತೀತ ಪಕ್ಷ ಮತ್ತು ನಾವು ಇತರರಿಂದ ಒಳ್ಳೆಯದನ್ನು ಸ್ವೀಕರಿಸಬೇಕು. ಬಲಪಂಥೀಯರು ಜಾತಿ ಮತ್ತು ಧರ್ಮವನ್ನು ವಿಭಜಿಸಲು ಒತ್ತಾಯಿಸುತ್ತಾರೆ. ಅದನ್ನು ನಾವು ವಿರೋಧಿಸುತ್ತೇವೆ. ಆರ್‌ಎಸ್‌ಎಸ್‌ನ ಹಾಡನ್ನು ಹಾಡಿದರೆ ತಪ್ಪೇ? ಎಂದರು.

ವಿಶ್ವವಾಣಿ

ಸಂಪಾದಕೀಯ

ಬೆಲೆಯೇರಿಕೆಯ ಪವಾಡವಿದು!

ಇನ್ನೇನು ಗೌರಿ-ಗಣೇಶ ಹಬ್ಬ ಬಂದೇಬಿಟ್ಟಿತು. ಹಬ್ಬ-ಹರಿದಿನಗಳು ಬಂದರೆ ಮನೆಮಂದಿಯೆಲ್ಲಾ ಒಟ್ಟಿಗೆ ಸೇರಿ ದೇವರನ್ನು ಪೂಜಿಸಿ, ಪಂಕ್ತಿಭೋಜನ ಮಾಡಿ, ಹೊಸ ಬಟ್ಟೆಗಳನ್ನು ತೊಟ್ಟು ಸಂಭ್ರಮಿಸುವುದು ವಾಡಿಕೆ. ಭಕ್ತಿಭಾವದ ಉದ್ದೀಪನದ ಜತೆಜತೆಗೆ ಕೌಟುಂಬಿಕ ನೆಲೆಯಲ್ಲಿ ಒಗ್ಗಟ್ಟನ್ನು ಮತ್ತಷ್ಟು ಹೆಚ್ಚಿಸುವುದು ಕೂಡ ನಮ್ಮ ಹಬ್ಬಗಳ ಸದಾಶಯವಾಗಿದೆ ಎಂಬುದನ್ನು ಬಿಡಿಸಿ ಹೇಳಬೇಕಿಲ್ಲ. ಆದರೆ, ಹಬ್ಬಗಳನ್ನು ಸಂತಸದಿಂದಲೇ ಸ್ವಾಗತಿಸುವ ನಮ್ಮ ಜನ, ಅದರ ಆಸುಪಾಸಿನಲ್ಲಿ ಆಗುವ ಕೆಲವೊಂದು ಅಗತ್ಯ ವಸ್ತುಗಳ ಬೆಲೆಯೇರಿಕೆಯಿಂದ ನಿಜಕ್ಕೂ ಹೈರಾಣಾಗಿಬಿಡುತ್ತಾರೆ. ಮಿಕ್ಕ ದಿನಗಳಲ್ಲಿ ಕೈಗೆಟಕುವ ದರದಲ್ಲಿ ಸಿಗುವ ಬಗೆಬಗೆಯ ಹೂವು- ಹಣ್ಣುಗಳು, ಹಬ್ಬಗಳ ಆಸುಪಾಸಿನಲ್ಲಿ ರಾಕೆಟ್ ವೇಗದಲ್ಲಿ ಗಗನಕ್ಕೇರಿಬಿಡುತ್ತವೆ. ವರ್ಷಪೂರ್ತಿ ಬೆವರು ಸುರಿಸಿ ಹೂವು-ಹಣ್ಣು, ಧಾನ್ಯಗಳನ್ನು ಬೆಳೆಯುವ ರೈತನ ಜೇಬಿಗೆ ಈ ಹಣ ಸೇರಿದರೆ ಯಾರೂ ವಿಷಾದಿಸುವುದಿಲ್ಲ; ಆದರೆ ಹಬ್ಬದ ನೆಪದಲ್ಲಿ, ರೈತನ ಹೆಸರಲ್ಲಿ ಯಾರೋ ಮಧ್ಯವರ್ತಿಗಳು ದುಡ್ಡು ಮಾಡಿಕೊಳ್ಳುತ್ತಾರೆ ಎಂಬುದು ಕಹಿವಾಸ್ತವ. ಹೀಗಾಗಿ ಹಬ್ಬದ ವೇಳೆಯಲ್ಲಿನ ಹೂವು-ಹಣ್ಣುಗಳ ಬೆಲೆಯೇರಿಕೆಯ ಪ್ರಯೋಜನ ರೈತನಿಗೆ ದಕ್ಕುವುದಿಲ್ಲ ಎಂಬುದು ಎಷ್ಟು ಸತ್ಯವೋ, ಅವನ್ನು ಖರೀದಿಸಿ ಕೈಸುಟ್ಟುಕೊಳ್ಳುವ ಗ್ರಾಹಕರ ಕಥೆಯು ಕೊನೆಯಾಗುವುದಿಲ್ಲ ಎಂಬುದೂ ಅಷ್ಟೇ ಸತ್ಯ. ಈ ಸಲವಂತೂ ಹೂವು-ಹಣ್ಣುಗಳ ಸಾಲಿಗೆ ಹೆಸರುಕಾಳು, ಕಡಲೇಬೇಳೆಯಂಥ ಧಾನ್ಯಗಳೂ ಸೇರಿಬಿಟ್ಟಿರುವುದು ಜನರನ್ನು ಕಂಗಾಲುಮಾಡಿದೆ ಎನ್ನಬೇಕು. ಯಾವುದೇ ಪದಾರ್ಥದ ಬೇಡಿಕೆ ಮತ್ತು ಪೂರೈಕೆಯ ನಡುವೆ ಅಂತರ ಹೆಚ್ಚಾದಾಗ, ಮಾರುಕಟ್ಟೆಯಲ್ಲಿನ ಅದರ ಬೆಲೆಯಲ್ಲೂ ಹೆಚ್ಚಳವಾಗುವುದು ವಾಡಿಕೆ. ಆದರೆ ಇಂಥ ಪರಿಸ್ಥಿತಿ ಇಲ್ಲದಿರುವಾಗ ಮತ್ತು ಹಬ್ಬಗಳು ಬಂದಾಗ ಪದಾರ್ಥಗಳ ಬೆಲೆಯೇರಿಕೆ ಆಗುವುದೇಕೆ? ಎಂಬುದು ಯಕ್ಷಪ್ರಶ್ನೆ. ಸಂಬಂಧಪಟ್ಟವರು ಈ ಕಡೆಗೊಮ್ಮೆ ಗಮನಹರಿಸಿ, ಶ್ರೀಸಾಮಾನ್ಯರ ಬದುಕನ್ನು ಹಸನುಗೊಳಿಸಬಾರದೇಕೆ? ವರ್ಷಾವಧಿ ಹಬ್ಬವನ್ನು ಯಾವ ತಲ್ಲಣವಿಲ್ಲದೆಯೇ ಆಚರಿಸುವುದಕ್ಕೆ ಅನುವುಮಾಡಿಕೊಡಬಾರದೇಕೆ?

ಸೊಂಪಾದಕೀಯ

'ಧರ್ಮ'ಯುದ್ಧ

ರಾಜ್ಯದಲ್ಲಿ ಎರಡು ವಿಷಯಗಳ ಬಗ್ಗೆ ಇತ್ತೀಚೆಗೆ ಅತಿ ಹೆಚ್ಚಿನ ಚರ್ಚೆ ನಡೆಯಿತು. ಅವೆರಡೂ 'ಡಿ ಗ್ಯಾಂಗ್'ಗೆ ಸಂಬಂಧಪಟ್ಟಿದ್ದು. 'ಡಿ ಬಾಸ್' ಅಂತ ಕರೆಸಿಕೊಳ್ಳೋ ದರ್ಶನ್ ತಮ್ಮ ಅಭಿಮಾನಿ ಒಬ್ಬರನ್ನು ಕರೆಸಿ ಕೊಲ್ಲೋ ಕೆಲಸ ಮಾಡಿದ್ದರಿಂದ ಜೈಲುವಾಸ ಮಾಡ್ತಾ ಇರೋದು ಒಂದು ವಿಷಯ. ಇನ್ನೊಂದು 'ಡಿ ಗ್ಯಾಂಗ್' ಅಂದ್ರೆ 'ಧರ್ಮಸ್ಥಳ ಗ್ಯಾಂಗ್' ವಿಷಯ. ಸೌಜನ್ಯ ಕೊಲೆ ಕೇಸನ್ನ ಎತ್ತಿಕೊಂಡು ಮತ್ತೆ ಶುರುವಾಗಿದ್ದ ಈ ಹೋರಾಟ ಮತ್ತೊಮ್ಮೆ ತಣ್ಣಗಾಗುವ ಎಲ್ಲ ಲಕ್ಷಣಗಳನ್ನೂ ತೋರಿಸುತ್ತಿದೆ. ಅತ್ಲಾಗೆ ಡಿ ಬಾಸ್ ದರ್ಶನ್ 'ಇದ್ರೇ ನೆಮ್ದಿಯಾಗಿರ್ಬೇಕ್' ಅಂತ ಪರಪ್ಪನ

ಅಗ್ರಹಾರದಲ್ಲಿ ಮುದ್ದೆ ಮುರಿಯುತ್ತಾ ನಿದ್ದೆ ಮಾಡ್ತಾ ಇದ್ದಾರೆ. ಇತ್ಲಾಗೆ ಸೌಜನ್ಯ ಪರ ಹೋರಾಟ ಮಾಡ್ತಾ ಇದ್ದ ಒಬ್ಬೊಬ್ಬರಿಗೂ ಜೈಲು ದರ್ಶನ ಆಗ್ತಾ ಇದೆ. ಅವರಲ್ಲಿ ಕೆಲವರು ಜಾಮೀನಿನ ಮೇಲೆ ಬಿಡುಗಡೆ ಆಗಿ ಹೊರಬಂದಿದ್ದಾರೆ ನಿಜ. ಆದ್ರೆ ಇಲ್ಲಿ ವಿಶೇಷ ಅಂದ್ರೆ ಸೌಜನ್ಯ ಪರ ಹೋರಾಟಗಾರರು ಅನ್ನಿಸಿಕೊಂಡ ಇವ್ರಲ್ಲಿ ಯಾರೂ ಧರ್ಮಸ್ಥಳ ವಿರುದ್ಧ ಮಾತಾಡಿದ್ರು ಅನ್ನೋ ಕಾರಣಕ್ಕೆ ಅರೆಸ್ಟ್ ಆಗಿಲ್ಲ. ಬದಲಾಗಿ ಬೇರೆ ಬೇರೆ ಕಾರಣಗಳನ್ನು ಕೊಟ್ಟು ಅವರನ್ನು ಬಂಧಿಸಲಾಗಿತ್ತು. ಒಟ್ಟಿನಲ್ಲಿ ಈಗಾಗಲೇ ಧರ್ಮಸ್ಥಳ ಮತ್ತು ವೀರೇಂದ್ರ ಹೆಗ್ಗಡೆ ಕುಟುಂಬದ ಸಮರ್ಥಕರು ತಮಗೆ ಈ ಧರ್ಮಯುದ್ಧದಲ್ಲಿ ಜಯ ಸಿಕ್ಕಿದೆ ಅಂತ ಸಂಭ್ರಮಿಸುತ್ತಿದ್ದಾರೆ ಅನ್ನೋ ದಂತೂ ನಿಜ. ಇನ್ನು ಸಿನಿಮಾ ಹಾಡು ರಿಲೀಸ್ ಮಾಡ್ತೀವಿ ಅಂತ ಹೇಳಿ ದರ್ಶನ್ ಅಭಿನಯದ 'ಡೆವಿಲ್' ಚಿತ್ರತಂಡ 'ಇದ್ರೇ ನೆಮ್ದಿಯಾಗಿ ಬೇರ್ಕ್' ಅನ್ನೋ ಫ್ಯಾನ್ ಸಾಂಗ್ ರಿಲೀಸ್ ಮಾಡಿದೆ. ಎಲ್ಲರೂ 'ಅರೆಸ್ಟ್' ಆಗ್ತಾ ಇರೋ ಸಮಯದಲ್ಲಿ ಇದೊಂದ್ ಸಾಂಗ್ ಆದ್ರೂ 'ರಿಲೀಸ್' ಆಗಿದೆ ಅನ್ನೋದೇ ಸಮಾಧಾನ. ಆದ್ರೆ ಈ ಹಾಡು ಪಕ್ಕಾ ದರ್ಶನ್ ಅಭಿಮಾನಿಗಳಿಗೆ ಮಾತ್ರ ಅನ್ನೋದ್ರಲ್ಲಿ ಡೌಟಿಲ್ಲ. ಹಾಡಿನ ಸಾಹಿತ್ಯದ ಧಾಟಿಯೇ ಹಾಗಿದೆ. ದರ್ಶನ್ ಅಭಿಮಾನಿಗಳಲ್ಲದೇ ಇರೋರಿಗೆ ಈ ಹಾಡಿನಲ್ಲಿ 'ಇದ್ರೇ ನೆಮ್ದಿಯಾಗ್ ಇರ್ಬೇಕ್' ಅನ್ನೋ ಸಾಲು ಬಿಟ್ರೆ ಇನ್ನೇನೂ ಇಲ್ಲ. ಹಾಡಿನ ಸೌಂಡಿಂಗ್ ಮಾತ್ರ ಬೊಂಬಾಟ್. ಒಟ್ಟಿನಲ್ಲಿ ಒಂದು ಡಿ ಗ್ಯಾಂಗ್ ಅರೆಸ್ಟ್‌ನಿಂದ ಸುದ್ದಿ ಮಾಡಿದ್ರೆ, ಇನ್ನೊಂದು ಡಿ ಗ್ಯಾಂಗ್ ರಿಲೀಸ್‌ನಿಂದ ಸುದ್ದಿ ಮಾಡ್ತಿದೆ.

ಸಂಪಾದಕರ ಸದ್ಯಶೋಧನೆ

ಸಂಪಾದಕರು ತಲೆತಗ್ಗಿಸುವುದು ಯಾವಾಗ?

ಪತ್ರಿಕೆಗಳಲ್ಲಿ ಪ್ರಮಾದವಾಗುವುದು ಸಹಜ. ಪ್ರತಿದಿನವೂ ಎಲ್ಲ ಪತ್ರಿಕೆಗಳಲ್ಲೂ ಒಂದಿಲ್ಲೊಂದು ಪ್ರಮಾದವಾಗುತ್ತಲೇ ಇರುತ್ತವೆ. ಅದರಲ್ಲೂ ಕರಡು (Proof mistakes) ದೋಷಗಳು ಇಣುಕುವುದು ಸಾಮಾನ್ಯ. ಇಂಥ ದೋಷಗಳನ್ನು ಓದುಗರು ತೀರಾ ಗಂಭೀರವಾಗಿ ಪರಿಗಣಿಸುವುದಿಲ್ಲ. ಗಂಭೀರ ಓದುಗರು ಅಥವಾ ಭಾಷಾತಜ್ಞರು ಇಂಥ ಪ್ರಮಾದಗಳನ್ನು ಸಹಿಸುವುದಿಲ್ಲ ಎಂಬುದು ಬೇರೆ ಮಾತು. ''ಪ್ರತಿದಿನ ನಾನು ನನ್ನ ಪತ್ರಿಕೆಯನ್ನು ತಡವಾಗಿ ಓದುತ್ತೇನೆ, ಮೊದಲು ನನ್ನ ಪತ್ರಿಕೆಯನ್ನು ಎತ್ತಿಕೊಳ್ಳಲು ಧೈರ್ಯ ಸಾಕಾಗುವುದಿಲ್ಲ, ಏನಾದರೂ ಪ್ರಮಾದವಾದರೆ ಎಂಬ ಆತಂಕ ಸದಾ ಒಳಮನಸ್ಸಿನಲ್ಲಿ ನೆಲೆಸಿರುತ್ತದೆ'' ಎಂದು 'ವಾಷಿಂಗ್ಟನ್ ಪೋಸ್ಟ್' ಪತ್ರಿಕೆಯ ಸಂಪಾದಕರಾಗಿದ್ದ ಬೆಂಜಮಿನ್ ಬ್ರಾಡ್ಲಿ ಹೇಳಿದ್ದು ಎಲ್ಲ ಸಂಪಾದಕರ ಅನಿಸಿಕೆಯೂ ಇದ್ದೀತು. 2012ರಲ್ಲಿ ಪ್ರಸಿದ್ಧ ಸಿತಾರ್ ವಾದಕ ಪಂಡಿತ್ ರವಿಶಂಕರ ನಿಧನರಾದಾಗ, ಪ್ರತಿಷ್ಠಿತ ಎಂಟಿವಿ ವೆಬ್‌ಸೈಟ್ Ravishankar, Beatles Influence, Dead At 92 ಎಂಬ ಶೀರ್ಷಿಕೆಯಡಿಯಲ್ಲಿ ಶ್ರೀ ಶ್ರೀ ರವಿಶಂಕರ ಅವರ ಫೋಟೋವನ್ನು ಪ್ರಕಟಿಸಿ ದೊಡ್ಡ ಪ್ರಮಾದ ಮಾಡಿತ್ತು. ಇದು ಪಂಡಿತ್ ರವಿಶಂಕರ ಮತ್ತು ಶ್ರೀ ಶ್ರೀ ರವಿಶಂಕರ ಇಬ್ಬರಿಗೂ ಮಾಡಿದ ಅವಮಾನವೇ. ಸಾಮಾನ್ಯ ಜ್ಞಾನ ಇಲ್ಲದ ಉಪಸಂಪಾದಕನೊಬ್ಬ ಸಂಪಾದಕನ ಮರ್ಯಾದೆ ಕಳೆದಿದ್ದ. ಇಂಥ ಪ್ರಮಾದಗಳಾದಾಗ, ಸಂಪಾದಕನಿಗೆ ತಲೆತಗ್ಗಿಸಿ, 'ತಪ್ಪಾಯ್ತು, ಕ್ಷಮಿಸಿ' ಎಂದು ಹೇಳುವುದರ ಹೊರತಾಗಿ ಬೇರೆ ಯಾವ ಮಾರ್ಗವೂ ಇರುವುದಿಲ್ಲ. ಟೈಟಾನಿಕ್ ಹಡಗು ಮುಳುಗಿದಾಗ, ಅಮೆರಿಕದ 'ಸಿರಾಕ್ಯೂಸ್ ಹೆರಾಲ್ಡ್' ಪತ್ರಿಕೆ, World's Biggest Ship Crashes Into Iceberg At Night ಎಂದು ಪ್ರಿಂಟ್ ಮಾಡಿ ಯಡವಟ್ಟು ಮಾಡಿತ್ತು. ಈ ಪ್ರಮಾದ ಮಾಡಿದ್ದು ಅದೊಂದೇ ಅಲ್ಲ, 'ಒಸ್ವೇಗೋ ಡೇಲಿ ಟೈಮ್ಸ್' ಪತ್ರಿಕೆಯೂ "All Passengers Safely Transferred to Other Vessels" ಎಂಬ ಶೀರ್ಷಿಕೆ ಹಾಕಿ ಮುಜುಗರಕ್ಕೀಡಾಗಿತ್ತು. ಲಂಡನ್ನಿನ 'ದಿ ಗಾರ್ಡಿಯನ್' ಪತ್ರಿಕೆಯ ಸುದ್ದಿಮನೆಯಲ್ಲಿ, 1948ರ ನವೆಂಬರ್ 3ನೇ ತಾರೀಖಿನ ಅಮೆರಿಕದ 'ಚಿಕಾಗೋ ಡೇಲಿ ಟ್ರಿಬ್ಯೂನ್' ಪತ್ರಿಕೆಯ ಮುಖಪುಟಕ್ಕೆ ಫ್ರೇಮ್ ಕಟ್ಟಿಸಿ ಎಲ್ಲರಿಗೂ ಕಾಣುವಂತೆ ತೂಗುಹಾಕಿದ್ದಾರೆ. ಅಂದಿನ ಪತ್ರಿಕೆಯ ಲೀಡ್ ಹೆಡ್‌ಲೈನ್- DEWEY DEFEATS TRUMAN. 1948ರಲ್ಲಿ ನಡೆದ ಅಮೆರಿಕದ ಅಧ್ಯಕ್ಷೀಯ ಚುನಾವಣೆಯಲ್ಲಿ ಹ್ಯಾರಿ ಟ್ರೂಮನ್ ಮತ್ತು ಥಾಮಸ್ ಡೇವೆಯ್ ಸ್ಪರ್ಧಿಸಿದ್ದರು. 'ಚಿಕಾಗೋ ಡೇಲಿ ಟ್ರಿಬ್ಯೂನ್' ರಿಪಬ್ಲಿಕನ್ ಪಕ್ಷದ ಕಡೆ ಒಲವುಳ್ಳ ಪತ್ರಿಕೆಯೆಂದೇ ಪರಿಗಣಿತವಾಗಿತ್ತು. ಆ ಪತ್ರಿಕೆ ಒಮ್ಮೆ ಡೆಮಾಕ್ರಟಿಕ್ ಪಕ್ಷದ ಟ್ರೂಮನ್ ಅವರನ್ನು ಬೆಪ್ಪುತಕ್ಕಡಿ ಅಥವಾ ಕ್ಷುಲ್ಲಕ ವ್ಯಕ್ತಿ (nincompoops) ಎಂದು ಮೂದಲಿಸಿತ್ತು. ಪತ್ರಿಕೆಯ ಮೊದಲ ಆವೃತ್ತಿ ಮುದ್ರಣಕ್ಕೆ ಹೋಗುವ ಹೊತ್ತಿಗೆ, ಮತಗಳ ಎಣಿಕೆ ಅರ್ಧ ಮುಗಿದಿತ್ತು. ಇಬ್ಬರ ನಡುವೆ ಸಮಬಲದ ಪೈಪೋಟಿ ಏರ್ಪಟ್ಟಿತ್ತು. ಆ ದಿನಗಳಲ್ಲಿ 'ಚಿಕಾಗೋ ಡೇಲಿ ಟ್ರಿಬ್ಯೂನ್' ಪತ್ರಿಕೆಯ ಆರ್ಥರ್ ಸೇಯರ್ಸ್ ಹೆನ್ನಿಂಗ್ ಬರೆಯುವ ರಾಜಕೀಯ ವರದಿ ಪ್ರಸಿದ್ಧವಾಗಿತ್ತು. ಆತ 5 ಅಧ್ಯಕ್ಷೀಯ ಚುನಾವಣೆಗಳನ್ನು ಕರಾರುವಾಕ್ಕಾಗಿ ವರದಿ ಮಾಡಿದ್ದ. ಅಂದು ಪೂರ್ಣ ಫಲಿತಾಂಶ ಪ್ರಕಟವಾಗಿರಲಿಲ್ಲ, ಹಾಗೆಂದು ಮೊದಲ ಆವೃತ್ತಿಗೆ ಸುದ್ದಿಯನ್ನು ನೀಡಬೇಕಾದ ಧಾವಂತ. ತನ್ನ ರಾಜಕೀಯ ಲೆಕ್ಕಾಚಾರ ಮತ್ತು ಅನುಭವವನ್ನು ಬಳಸಿ, ಥಾಮಸ್ ಡೇವೆಯ್, 'ಟ್ರೂಮನ್ ಅವರನ್ನು ಸೋಲಿಸಿದರು' ಎಂದು ಬರೆದುಬಿಟ್ಟ. ಆದರೆ ಬೆಳಗಿನ ಹೊತ್ತಿಗೆ ಅಂತಿಮ ಫಲಿತಾಂಶ ಪ್ರಕಟವಾದಾಗ, ಟ್ರೂಮನ್ ಗೆದ್ದಿದ್ದರು! ಆದರೆ ಮೊದಲ ಆವೃತ್ತಿಯಲ್ಲಿ 'ಟ್ರೂಮನ್‌ಗೆ ಸೋಲು' ಎಂದು ಪ್ರಕಟವಾಗಿಬಿಟ್ಟಿತ್ತು. ಆ ಪತ್ರಿಕೆಯನ್ನು ಸ್ವತಃ ಟ್ರೂಮನ್ ಎತ್ತಿ ಹಿಡಿದು ತೋರಿಸಿದ್ದರು.

ಸಿಎಂ ಹುದ್ದೆಯ ರೇಸಿನಿಂದ ಹಿಂದೆ ಸರಿದವರು

ಮೂರ್ತಿಪೂಜೆ

ಆರ್.ಟಿ.ವಿಠ್ಠಲಮೂರ್ತಿ
vveditoped@gmail.com

ಕಳೆದ ವಾರ ವಿಧಾನಮಂಡಲ ಅಧಿವೇಶನ ನಡೆಯುತ್ತಿದ್ದ ಸಂದರ್ಭದಲ್ಲಿ ಕುತೂಹಲಕಾರಿ ವಿಷಯವೊಂದು ಹೊರಬಿತ್ತು. ಅದರ ಪ್ರಕಾರ ಕರ್ನಾಟಕದಲ್ಲಿ ಮತ್ತೊಮ್ಮೆ ದಲಿತ ಸಿಎಂ ಕೂಗು ಮೇಲೇಳಲಿದೆ. ಅಂದ ಹಾಗೆ, ಈ ವಿಷಯವನ್ನು ಆಪ್ತರೊಡನೆ ಹಂಚಿಕೊಂಡ ಪವರ್‌ಫುಲ್ ನಾಯಕರೊಬ್ಬರು, ''ಸಿದ್ದರಾಮಯ್ಯ ಸಿಎಂ ಆಗಿರುವವರೆಗೆ ದಲಿತರು ಈ ಹುದ್ದೆಗಾಗಿ ಪಟ್ಟು ಹಿಡಿಯುವುದಿಲ್ಲ. ಯಾಕೆಂದರೆ ರಾಜ್ಯದ ಅಹಿಂದ ವರ್ಗಗಳಿಗೆ ಅವರು ನಿರ್ವಿವಾದಿತ ನಾಯಕ. ಆದರೆ ಅಧಿಕಾರ ಹಂಚಿಕೆಯ ಮಾತಿಗೆ ಬ್ರೇಕ್ ಬಿದ್ದಿಲ್ಲವಲ್ಲ? ಹೀಗಾಗಿ ದಲಿತರು ತಮ್ಮ ಹಕ್ಕಿಗಾಗಿ ಪೂರ್ವ ತಯಾರಿ ಮಾಡಿಕೊಳ್ಳುವುದು ಅನಿವಾರ್ಯವಾಗಿದೆ'' ಎನ್ನುತ್ತಿದ್ದರು.

ಆ ನಾಯಕರು ಮುಂದುವರಿದು, ''ಇಂಥ ಪೂರ್ವ ತಯಾರಿಯ ಭಾಗವಾಗಿ ಅಕ್ಟೋಬರ್ ತಿಂಗಳಲ್ಲಿ ಬೃಹತ್ ದಲಿತ ಸಮಾವೇಶ ನಡೆಯಲಿದೆ ಮತ್ತು ದಾವಣಗೆರೆಯಲ್ಲಿ ನಡೆಯುವ ಈ ಸಮಾವೇಶದಲ್ಲಿ ಮೂವತ್ತು ಲಕ್ಷ ಜನ ಭಾಗವಹಿಸಲಿದ್ದಾರೆ. ಇವತ್ತು ಕರ್ನಾಟಕದ ಜನಸಂಖ್ಯೆಯಲ್ಲಿ ನಂಬರ್ ಒನ್ ಸ್ಥಾನದಲ್ಲಿರುವ ದಲಿತರು ಇದುವರೆಗೆ ಒಂದು ಬಾರಿಯೂ ಸಿಎಂ ಆಗಿಲ್ಲ. ಈ ಹಿಂದೆ ದಲಿತರು ಸಿಎಂ ಹುದ್ದೆಗೆ ಹತ್ತಿರವಾದಾಗಲೆಲ್ಲ ವ್ಯವಸ್ಥಿತವಾಗಿ ಅವರನ್ನು ಹಿಂದೆ ತಳ್ಳಲಾಗಿದೆ. ಆದರೆ ಈಗ ಅದಕ್ಕೆ ಅವಕಾಶ ನೀಡಬಾರದು ಎಂದರೆ ನಾವು ಸಂಘಟಿತರಾಗಿ ಬಲ ಪ್ರದರ್ಶಿಸಬೇಕು. ಆ ಮೂಲಕ ದಿಲ್ಲಿ ನಾಯಕರಿಗೆ ಸೂಕ್ತ ಸಂದೇಶ ರವಾನಿಸಬೇಕು'' ಎನ್ನುತ್ತಿದ್ದರು.

ಹೀಗೆ ಹೇಳಿದ ಆ ಪವರ್‌ಫುಲ್ ನಾಯಕರು, ''ಭವಿಷ್ಯದಲ್ಲಿ ನಾಯಕತ್ವ ಬದಲಾವಣೆ ಅನಿವಾರ್ಯವಾದರೆ ಇಲ್ಲಿ ದಲಿತ ಸಮುದಾಯದ ನಾಯಕರು ಸಿಎಂ ಆಗಬೇಕು. ಅದು ಮಲ್ಲಿಕಾರ್ಜುನ ಖರ್ಗೆಯವರೇ ಇರಲಿ ಅಥವಾ ಡಾ.ಜಿ.ಪರಮೇಶ್ವರ್ ಅವರೇ ಇರಲಿ'' ಎನ್ನುತ್ತಿದ್ದರು.

ಅಲ್ಲಿಗೆ ಕರ್ನಾಟಕದ ರಾಜಕಾರಣದಲ್ಲಿ ಮತ್ತೊಮ್ಮೆ ದಲಿತ ಸಿಎಂ ಕೂಗು ಏಳುವುದಷ್ಟೇ ಅಲ್ಲ, ಈ ವಿಷಯದಲ್ಲಿ ದಲಿತ ನಾಯಕರು ಅಗ್ರೆಸಿವ್ ಆಗಿದ್ದಾರೆ ಎಂಬುದನ್ನು ಇದು ಪುಷ್ಟೀಕರಿಸುತ್ತದೆ.

ಬಸವಲಿಂಗಪ್ಪ ಹಿಂದೆ ಸರಿದಿದ್ದರು

ಅಂದ ಹಾಗೆ, ಕರ್ನಾಟಕದ ರಾಜಕಾರಣದಲ್ಲಿ ದಲಿತ ಸಿಎಂ ಕೂಗು ಕೇಳುತ್ತಿರುವುದು ಹೊಸತಲ್ಲ. ಈ ಹಿಂದೆ ದೇವರಾಜ ಅರಸರು ಮುಖ್ಯಮಂತ್ರಿಯಾಗಿದ್ದ ಕಾಲದಲ್ಲಿ ದಲಿತ ನಾಯಕ ಬಿ.ಬಸವಲಿಂಗಪ್ಪ ಅವರ ಹೆಸರು ಮುಂಚೂಣಿಗೆ ಬರತೊಡಗಿತ್ತು. ಅವತ್ತು ಅರಸರ ಸಂಪುಟದಲ್ಲಿ ಸಚಿವರಾಗಿದ್ದ ಬಸವಲಿಂಗಪ್ಪನವರು ಮಲ ಹೊರುವ ಪದ್ಧತಿಯನ್ನು ನಿಷೇಧಿಸಿ ಕಾಯ್ದೆ ರೂಪಿಸಿದಾಗ ಬರೀ ಕರ್ನಾಟಕ ಮಾತ್ರವಲ್ಲ, ಇಡೀ ದೇಶವೇ ನಿಬ್ಬೆರಗಾಗಿ ನೋಡಿತ್ತು. ಇದೇ ರೀತಿ ಆಡಳಿತಾತ್ಮಕವಾಗಿ ಅತ್ಯಂತ ಬಿಗುವಾಗಿದ್ದ ಹಲವು ಸುಧಾರಣೆಗಳನ್ನು ಜಾರಿಗೆ ತಂದ ಬಸವಲಿಂಗಪ್ಪನವರು ಅವತ್ತಿನ ರಾಜಕಾರಣದಲ್ಲಿ ರೋಲ್ ಮಾಡಲ್ ಆಗಿ ಕಾಣಿಸಿಕೊಂಡಿದ್ದರು.

ಪರಿಣಾಮ? ದೇವರಾಜ ಅರಸರ ನಂತರ ಕರ್ನಾಟಕದ ಮುಖ್ಯಮಂತ್ರಿ ಹುದ್ದೆಗೆ ಬಸವಲಿಂಗಪ್ಪ ಅತ್ಯುತ್ತಮ ಆಯ್ಕೆಯಾಗಬಲ್ಲರು ಎಂಬ ಲೆಕ್ಕಾಚಾರ ದಿಲ್ಲಿಯ ಕಾಂಗ್ರೆಸ್ ವರಿಷ್ಠರಲ್ಲಿ ಮೂಡಿತ್ತು ಮತ್ತು ದಿಲ್ಲಿಯ ವರಿಷ್ಠರಲ್ಲಿದ್ದ ಈ ಲೆಕ್ಕಾಚಾರ ರಾಜ್ಯದ ಹಲವು ಕಾಂಗ್ರೆಸ್ ನಾಯಕರಿಗೂ ಗೊತ್ತಿತ್ತು. ಹೀಗಾಗಿ ಮುಂದೆ ಬಸವಲಿಂಗಪ್ಪನವರು 'ಬೂಸಾ ವಿವಾದ'ದಲ್ಲಿ ಸಿಲುಕಿದಾಗ, ಬಸವಲಿಂಗಪ್ಪ ಅವರ ವಿರುದ್ಧದ ಹೋರಾಟಕ್ಕೆ ಕೆಲ ನಾಯಕರು ತೆರೆಯ ಹಿಂದೆ ಬಲ ತುಂಬಿದ್ದರು. ಈ ಬೆಳವಣಿಗೆಯ ನಂತರ ಮಂತ್ರಿ ಪದವಿಗೆ ರಾಜೀನಾಮೆ ಕೊಟ್ಟ ಬಸವಲಿಂಗಪ್ಪ ಅವರ ಶಕ್ತಿ ಕುಗ್ಗುತ್ತಾ ಹೋಯಿತು. ಮುಂದೆ ಅರಸರು ಸಿಎಂ ಹುದ್ದೆಯಿಂದ ಕೆಳಗಿಳಿಯುವ ವೇಳೆಗೆ ಬಸವಲಿಂಗಪ್ಪ ರೇಸಿಗೆ ಬರುವ ಸ್ಥಿತಿಯಲ್ಲಿರಲಿಲ್ಲ.

ರೇಸಿನಲ್ಲಿದ್ದರು ಬಿ.ರಾಚಯ್ಯ

ಇನ್ನು ಟೆಲಿಫೋನ್ ಕದ್ದಾಲಿಕೆಯ ಆರೋಪಕ್ಕೆ ಗುರಿಯಾದ ರಾಮಕೃಷ್ಣ ಹೆಗಡೆ 1988ರಲ್ಲಿ ಮುಖ್ಯಮಂತ್ರಿ ಹುದ್ದೆಗೆ ರಾಜೀನಾಮೆ ನೀಡಿದರಲ್ಲ? ಈ ಸಂದರ್ಭದಲ್ಲಿ ಶುರುವಾದ ಸಿಎಂ ಹುದ್ದೆಯ ರೇಸಿನಲ್ಲಿ ದಲಿತ ನಾಯಕ ಬಿ.ರಾಚಯ್ಯ ಕಾಣಿಸಿಕೊಂಡಿದ್ದರು. ಅವತ್ತು ರಾಮಕೃಷ್ಣ ಹೆಗಡೆ ಅವರಿಗೆ ಪರಮಾಪ್ತರಾಗಿದ್ದ ರಾಚಯ್ಯ ಅವರಿಗೆ ಸಹಜವಾಗಿಯೇ ಗೆಲುವಿನ ನಿರೀಕ್ಷೆ ಇತ್ತು. ಯಾಕೆಂದರೆ, ಶಾಸಕಾಂಗ ಪಕ್ಷದಲ್ಲಿ ಅತ್ಯಂತ ಹೆಚ್ಚು ಶಾಸಕರು ಹೆಗಡೆ ಅವರ ಬೆಂಬಲಿಗರಾಗಿದ್ದರಿಂದ, ಅವರು ತಮ್ಮ ಜತೆ ನಿಲ್ಲುತ್ತಾರೆ ಎಂಬ ನಿರೀಕ್ಷೆ ರಾಚಯ್ಯ ಅವರಿಗಿತ್ತು.

ಹೀಗಾಗಿ ಕಣದಲ್ಲಿದ್ದ ಒಕ್ಕಲಿಗ ನಾಯಕ ಎಚ್.ಡಿ.ದೇವೇಗೌಡ, ಲಿಂಗಾಯತ ನಾಯಕ ಎಸ್.ಆರ್.ಬೊಮ್ಮಾಯಿ ಅವರಿಗಿಂತ ಹೆಚ್ಚು ಮತ ಗಳಿಸುವ ನಿರೀಕ್ಷೆ ಬಿ.ರಾಚಯ್ಯ ಅವರಿಗಿತ್ತು. ಆದರೆ ಸ್ಪರ್ಧೆ ನಡೆದು ಫಲಿತಾಂಶ ಹೊರಬಂದಾಗ ಎಸ್.ಆರ್.ಬೊಮ್ಮಾಯಿ ಅವರು ಗೆದ್ದಿದ್ದರು. ಅರ್ಥಾತ್, ಹೆಗಡೆಯವರು ಕೆಳಗಿಳಿದ ನಂತರ ಅವರ ಜಾಗದಲ್ಲಿ ಲಿಂಗಾಯತ ನಾಯಕರೊಬ್ಬರನ್ನು ನೋಡಲು ಅವರ ಬೆಂಬಲಿಗರು ಬಯಸಿದ್ದರು. ಮತ್ತದರ ಲಾಭ ಬೊಮ್ಮಾಯಿ ಅವರಿಗೆ ಸಿಕ್ಕಿತ್ತು.

ರಂಗನಾಥ್ ವಂಚಿತರಾಗಿದ್ದು ಹೇಗೆ?

ಮುಂದೆ ಕರ್ನಾಟಕದಲ್ಲಿ ಸಿಎಂ ಹುದ್ದೆಯ ರೇಸಿಗೆ ಬಂದ ದಲಿತ ನಾಯಕರೆಂದರೆ ಕೆ.ಎಚ್.ರಂಗನಾಥ್. ದಕ್ಷತೆ ಮತ್ತು ಪ್ರಾಮಾಣಿಕತೆಗೆ ಹೆಸರಾಗಿದ್ದ ಅವರು, ವ್ಯವಸ್ಥೆಯನ್ನು ಬಲಪಡಿಸಲು ಆಡಳಿತದ ಬೇರುಗಳು ಹೇಗೆ ನೆರವಾಗಬೇಕು ಅಂತ ಸಾಕಷ್ಟು ನಾಯಕರಿಗೆ ಪಾಠ ಹೇಳಿಕೊಟ್ಟರು.

ಇಂಥ ಅತ್ಯುತ್ತಮ ನಾಯಕ ಕೆ.ಎಚ್.ರಂಗನಾಥ್ ಅವರಿಗೆ ಒಂದು ಬಾರಿ ಮುಖ್ಯಮಂತ್ರಿಯಾಗುವ ಅವಕಾಶ ಬಂದಿತ್ತು. 1992ರಲ್ಲಿ ಬಂಗಾರಪ್ಪ ಮುಖ್ಯಮಂತ್ರಿ ಹುದ್ದೆಯಿಂದ ಕೆಳಗಿಳಿದರಲ್ಲ? ಆ ಸಂದರ್ಭದಲ್ಲಿ ಭವಿಷ್ಯದ ನಾಯಕನ ಸ್ಥಾನಕ್ಕೆ ಪೈಪೋಟಿ ಶುರುವಾದಾಗ ಒಕ್ಕಲಿಗ ನಾಯಕ ಎಸ್.ಎಂ. ಕೃಷ್ಣ, ಲಿಂಗಾಯತ ನಾಯಕ ಎಂ. ರಾಜಶೇಖರಮೂರ್ತಿ ಮತ್ತು ದಲಿತ ನಾಯಕ ಕೆ.ಎಚ್. ರಂಗನಾಥ್ ಅವರ ಹೆಸರುಗಳು ರೇಸಿನಲ್ಲಿ ಕಾಣಿಸಿಕೊಂಡಿದ್ದವು. ಈ ಪೈಕಿ ಎಸ್.ಎಂ. ಕೃಷ್ಣ ಅವರು ಶಾಸಕರ ಒಂದು ದೊಡ್ಡ ಗುಂಪಿನ ಬೆಂಬಲ ಹೊಂದಿದ್ದರೆ, 1990ರಲ್ಲಿ ನಡೆದ ವೀರೇಂದ್ರ ಪಾಟೀಲರ ಪದಚ್ಯುತಿ ಪರ್ವದಿಂದ ಕುದಿಯುತ್ತಿದ್ದ ಬಹುತೇಕ ಲಿಂಗಾಯತ ಶಾಸಕರು ಎಂ. ರಾಜಶೇಖರ ಮೂರ್ತಿ ಅವರ ಪರವಾಗಿ ನಿಂತಿದ್ದರು.

ಈ ಮಧ್ಯೆ ಶೋಷಿತ ವರ್ಗಗಳ ಶಾಸಕರು ಸೇರಿದಂತೆ ಹಲವರು ದಲಿತ ನಾಯಕರಾದ ಕೆ.ಎಚ್.ರಂಗನಾಥ್ ಅವರನ್ನು ಮುಖ್ಯಮಂತ್ರಿ ಹುದ್ದೆಯಲ್ಲಿ ನೋಡಲು ಬಯಸಿದ್ದರು. ಆದರೆ ನಾಯಕನ ಆಯ್ಕೆಯ ಸಂದರ್ಭ ಬಂದಾಗ ದಿಲ್ಲಿಯಿಂದ ಬಂದ ಕಾಂಗ್ರೆಸ್ ವೀಕ್ಷಕರು ಶಾಸಕಾಂಗ ಪಕ್ಷದ ಸಭೆಯಲ್ಲಿ ಲಕೋಟೆ ಬಿಚ್ಚಿದರು. ಹೀಗೆ ಬಿಚ್ಚಿದ ಲಕೋಟೆಯಲ್ಲಿ ಎಂ.ವೀರಪ್ಪ ಮೊಯ್ಲಿಯವರ ಹೆಸರಿತ್ತು. ಹೀಗೆ ವರಿಷ್ಠರ ಕೃಪೆಗೆ ಪಾತ್ರರಾದ ವೀರಪ್ಪ ಮೊಯ್ಲಿಯವರು ಮುಖ್ಯಮಂತ್ರಿಯಾದ ನಂತರ ಹಿಂದಕ್ಕೆ ಸರಿದ ಕೆ.ಎಚ್. ರಂಗನಾಥ್ ಅವರ ಹೆಸರು ಮುಂದೆ ಸಿಎಂ ಹುದ್ದೆಯ ರೇಸಿನಲ್ಲಿ ಕಾಣಿಸಿಕೊಳ್ಳಲೇ ಇಲ್ಲ.

ಎರಡು ಬಾರಿ ವಂಚಿತರಾದ ಖರ್ಗೆ

ಇನ್ನು, ಪ್ರಸ್ತುತ ಎಐಸಿಸಿ ಅಧ್ಯಕ್ಷರಾಗಿರುವ ಮಲ್ಲಿಕಾರ್ಜುನ ಖರ್ಗೆ ಅವರು ಎರಡು ಬಾರಿ ಸಿಎಂ ಹುದ್ದೆಯ ರೇಸಿನಿಂದ ಹಿಂದೆ ಸರಿದಿದ್ದರು. 1999ರಲ್ಲಿ ಮೊದಲ ಸಲ ಸಿಎಂ ಹುದ್ದೆಯ ರೇಸಿನಿಂದ ಹಿಂದೆ ಬಿದ್ದ ಮಲ್ಲಿಕಾರ್ಜುನ ಖರ್ಗೆಯವರು, 2008ರಲ್ಲಿ ಮತ್ತೊಮ್ಮೆ ಹಿಂದೆ ಸರಿದಿದ್ದರು. 1994ರಲ್ಲಿ ಜನತಾದಳ ಸರಕಾರ ಅಸ್ತಿತ್ವಕ್ಕೆ ಬಂತಲ್ಲ? ಈ ಸಂದರ್ಭದಲ್ಲಿ ವಿಧಾನಸಭೆಯ ಪ್ರತಿಪಕ್ಷ ನಾಯಕರಾಗಿದ್ದ ಮಲ್ಲಿಕಾರ್ಜುನ ಖರ್ಗೆಯವರು ಸರಕಾರದ ವಿರುದ್ಧ ನಿರಂತರ ಹೋರಾಟಗಳನ್ನು ಸಂಘಟಿಸಿದ್ದಲ್ಲದೆ, ಏಕಕಾಲಕ್ಕೆ ಸದನದ ಒಳಗೆ ಮತ್ತು ಹೊರಗೆ ಹೋರಾಟ ನಡೆಸಿ ಕಾಂಗ್ರೆಸ್ ಪಕ್ಷಕ್ಕೆ ಬಲ ತುಂಬಿದ್ದರು. ಆದರೆ 1999ರ ವಿಧಾನಸಭೆ ಚುನಾವಣೆ ಹತ್ತಿರ ಬಂದಾಗ ಪಕ್ಷದ ವರಿಷ್ಠರು ಕೆಪಿಸಿಸಿ ಅಧ್ಯಕ್ಷ ಸ್ಥಾನದಲ್ಲಿ ಎಸ್.ಎಂ. ಕೃಷ್ಣ ಅವರನ್ನು ಕೂರಿಸಿದ್ದಲ್ಲದೆ ಒಕ್ಕಲಿಗ ಪ್ಲಸ್ ಅಹಿಂದ ವರ್ಗಗಳ ಬಲದೊಂದಿಗೆ ಅಧಿಕಾರಕ್ಕೆ ಬಂದೆವು ಎಂಬ ನಿರ್ಣಯದೊಂದಿಗೆ ಅವರನ್ನೇ ಸಿಎಂ ಹುದ್ದೆಯ ಮೇಲೆ ಕೂರಿಸಿದರು. ಈ ಬೆಳವಣಿಗೆಯಿಂದ ಖರ್ಗೆ ನಿರಾಶರಾದರೂ ಪಕ್ಷದ ವರಿಷ್ಠರ ವಿರುದ್ಧ ಗುಟುರು ಹಾಕಲಿಲ್ಲ. ಮುಂದೆ 2008ರ ವಿಧಾನಸಭಾ ಚುನಾವಣೆ ನಡೆಯಿತಲ್ಲ? ಈ ಸಂದರ್ಭದಲ್ಲಿ ನೂರಾ ಹತ್ತು ಕ್ಷೇತ್ರಗಳಲ್ಲಿ ಗೆಲುವು ಗಳಿಸುವುದರೊಂದಿಗೆ ಬಿಜೆಪಿ ಅತ್ಯಂತ ದೊಡ್ಡ ಶಕ್ತಿಯಾಗಿ ಹೊರಹೊಮ್ಮಿತ್ತಾದರೂ ಕಾಂಗ್ರೆಸ್, ಜೆಡಿಎಸ್ ಮತ್ತು ಪಕ್ಷೇತರರ ಬಲ ಸೇರಿದರೆ 114ರಷ್ಟಿತ್ತು. ಈ ಸಂದರ್ಭದಲ್ಲಿ ಜೆಡಿಎಸ್ ವರಿಷ್ಠ ಎಚ್.ಡಿ.ದೇವೇಗೌಡರು ಕಾಂಗ್ರೆಸ್ ನಾಯಕರಿಗೆ ಒಂದು ಸಂದೇಶ ರವಾನಿಸಿ, ''ದಲಿತ ನಾಯಕರಾದ ಮಲ್ಲಿಕಾರ್ಜುನ ಖರ್ಗೆಯವರ ನೇತೃತ್ವದಲ್ಲಿ ಸಮ್ಮಿಶ್ರ ಸರಕಾರ ರಚಿಸೋಣ'' ಎಂಬ ಪ್ರಪೋಸಲ್ ಇಟ್ಟರು.

ಆದರೆ ದೇವೇಗೌಡರ ಪ್ರಪೋಸಲ್ಲನ್ನು ಕಾಂಗ್ರೆಸ್‌ನ ಸರ್ವೋಚ್ಚ ನಾಯಕಿ ಸೋನಿಯಾ ಗಾಂಧಿ ಒಪ್ಪಲಿಲ್ಲ. ಕಾರಣ? 2004ರಲ್ಲಿ ಅಸ್ತಿತ್ವಕ್ಕೆ ಬಂದಿದ್ದ ಕಾಂಗ್ರೆಸ್-ಜೆಡಿಎಸ್ ಮೈತ್ರಿಕೂಟ ಸರಕಾರವನ್ನು ಉರುಳಿಸಲು ದೇವೇಗೌಡರ ತಂತ್ರವೇ ಕಾರಣ. ಅವರನ್ನು ಪುನಃ ನಂಬುವುದು ತಪ್ಪು ಅಂತ ರಾಜ್ಯದ ಕೆಲ ನಾಯಕರು ಅವರ ಕಿವಿಗೆ ತುಂಬಿದ್ದರು. ಪರಿಣಾಮ? ಸಿಎಂ ಹುದ್ದೆಗೆ ಕೇಳಿ ಬಂದಿದ್ದ ಖರ್ಗೆಯವರ ಹೆಸರು ಹಿಂದೆ ಸರಿಯಿತು.

ಪರಮೇಶ್ವರ್ ಲಕ್ಕು ಕುದುರಲಿಲ್ಲ

ಇನ್ನು 2004ರ ವಿಧಾನಸಭಾ ಚುನಾವಣೆಯಲ್ಲಿ ಅತಂತ್ರ ಫಲಿತಾಂಶ ಬಂತಲ್ಲ? ಆ ಸಂದರ್ಭದಲ್ಲಿ ಕಾಂಗ್ರೆಸ್-ಜೆಡಿಎಸ್ ಕೈ ಜೋಡಿಸಿ ಸರಕಾರ ರಚಿಸಲು ತೀರ್ಮಾನಿಸಿದವು. ಆಗ ಮೈತ್ರಿಕೂಟ ಸರಕಾರದ ಮುಖ್ಯಮಂತ್ರಿ ಯಾರಾಗಬೇಕು ಎಂಬ ಚರ್ಚೆ ಶುರುವಾದಾಗ ಜೆಡಿಎಸ್ ವರಿಷ್ಠ ದೇವೇಗೌಡರ ಕಣ್ಣು ಕಾಂಗ್ರೆಸ್ಸಿನ ಡಾ.ಜಿ.ಪರಮೇಶ್ವರ್ ಅವರ ಮೇಲೆ ಬಿತ್ತು. ಹಾಗಂತಲೇ ಪರಮೇಶ್ವರ್ ಅವರಿಗೆ ಸಂದೇಶ ನೀಡಿದ ಅವರು, ''ನೀವು ಸಿಎಂ ಆಗಲು ನಮ್ಮ ಒಪ್ಪಿಗೆಯಿದೆ. ಹೀಗಾಗಿ ನಿಮ್ಮ ಪಕ್ಷದ ವರಿಷ್ಠರ ಜತೆ ನೀವು ಮಾತನಾಡಬಹುದು'' ಎಂದಿದ್ದರು.

ಆದರೆ ಈ ವಿಷಯ ತಿಳಿಯುತ್ತಲೇ ಸರ್ವಪಕ್ಷದವರಿಗೆ ಆಪ್ತರಾಗಿರುವ ನಾಯಕರೊಬ್ಬರು ದೇವೇಗೌಡರ ಜತೆ ಮಾತನಾಡಿ ಈ ತೀರ್ಮಾನ ಬದಲಾಗುವಂತೆ ನೋಡಿಕೊಂಡರು. ಅವತ್ತು ಅವರು, ''ಸರ್, ಇವತ್ತು ದಲಿತ ನಾಯಕರೊಬ್ಬರನ್ನು ಸಿಎಂ ಮಾಡಿದರೆ ಇನ್ನೈದು ವರ್ಷ ಕಾಲ ಅವರನ್ನು ಅಲುಗಾಡಿಸಲು ಸಾಧ್ಯವಿಲ್ಲ. ಹಾಗೇನಾದರೂ ಮಾಡಲು ಹೋದರೆ ನಿಮಗೆ ದಲಿತ ವಿರೋಧಿ ಹಣೆಪಟ್ಟಿ ತಗಲುತ್ತದೆ'' ಎಂದರು. ಅಷ್ಟೇ ಅಲ್ಲ, ''ಮೈತ್ರಿಕೂಟ ಸರಕಾರ ನಿಮ್ಮಿಚ್ಛೆಯಂತೆ ನಡೆಯಬೇಕೆಂದರೆ ಧರ್ಮಸಿಂಗ್ ಅವರನ್ನು ಸಿಎಂ ಮಾಡಿಸಿ. ನಾಳೆ ನೀವು ಅವರನ್ನು ಇಳಿಸಿದರೂ ಸಮಸ್ಯೆ ಇಲ್ಲ'' ಎಂದು ಸಲಹೆ ನೀಡಿದರು. ಅವತ್ತು ಈ ಆಪ್ತರು ನೀಡಿದ ಸಲಹೆ ದೇವೇಗೌಡರಿಗೂ ಇಷ್ಟವಾಯಿತು. ರಜಪೂತ ಸಮುದಾಯದ ನಾಯಕ ಧರ್ಮಸಿಂಗ್ ಪಟ್ಟಕ್ಕೇರುವಂತೆ ಅದು ಮಾಡಿತು. ಆದರೆ ಅದೇ ಕಾಲಕ್ಕೆ ದಲಿತ ನಾಯಕ ಡಾ.ಜಿ.ಪರಮೇಶ್ವರ್ ನಿರಾಶರಾಗುವಂತೆ ಮಾಡಿತು.

ಈಗ ಪುನಃ ಕರ್ನಾಟಕದ ನೆಲೆಯಲ್ಲಿ ದಲಿತ ಸಿಎಂ ಕೂಗು ಮತ್ತೊಮ್ಮೆ ಮೇಲೆದ್ದಿದೆ. ಹಾಲಿ ಸಿಎಂ ಸಿದ್ದರಾಮಯ್ಯ ಅವರ ಜಾಗಕ್ಕೆ ಯಾವ ಧಕ್ಕೆಯೂ ಬಾರದಿದ್ದರೆ ಈ ಕೂಗು ತೆರೆಯ ಹಿಂದೆ ಸರಿಯಲಿದೆ. ಇಲ್ಲದಿದ್ದರೆ ಹಿಂದೆಂದಿಗಿಂತ ಪ್ರಬಲವಾಗಿ ಮೇಲೇಳಲಿದೆ. ಹಾಗಾಗುತ್ತದಾ? ಅದನ್ನು ಕಾದು ನೋಡಬೇಕು...

ಓದುಗರ ಒಣಿ

ಓದುಗರನ್ನು ಬಿಟ್ಟು ಇಲ್ಲಿ ಯಾರಿಗೂ ಪ್ರವೇಶವಿಲ್ಲ

ಬೆಳಕು ಚೆಲ್ಲಿದೆ

ಚಕ್ರವ್ಯೂಹದಲ್ಲಿ ಅಭಿಮನ್ಯು' ಶೀರ್ಷಿಕೆಯ ಸಂಪಾದಕೀಯವು (ಆ.23) ತಮಿಳುನಾಡಿನ ರಾಜಕೀಯದ ವಿಶೇಷತೆಯ ಬಗ್ಗೆ ಒಂದಿಷ್ಟು ಬೆಳಕು ಚೆಲ್ಲಿದೆ. ಹೌದು, ತಮಿಳುನಾಡು ಅಂದರೇನೇ ವಿಚಿತ್ರ ಮತ್ತು ವಿಲಕ್ಷಣ ಚಿತ್ತಸ್ಥಿತಿಗಳ ಬೀಡು. ಅಲ್ಲಿಯ ಭಾಷಾಪ್ರೇಮ ಒಂದನ್ನೇ ತೆಗೆದುಕೊಂಡರೂ ಇದು ಸಾಬೀತಾಗುವಂತಿದೆ. ಚುರುಕು ಬುದ್ಧಿಯವರಾದ ತಮಿಳರು ಒಂದಕ್ಕಿಂತ ಹೆಚ್ಚು ಭಾಷೆಗಳನ್ನು ಬಲ್ಲವರಾಗಿದ್ದರೂ ತಮ್ಮತನವನ್ನು ಮಾತ್ರ ಎಂದೂ ಬಿಟ್ಟುಕೊಡುವುದಿಲ್ಲ.

ಇನ್ನು, ರಾಜಕೀಯಕ್ಕೆ ಸಂಬಂಧಪಟ್ಟಂತೆಯೂ ಅವರ ಪಟ್ಟು ಇದ್ದೇ ಇರುತ್ತದೆ. ತಮ್ಮ ತಮ್ಮೊಳಗೇ ಅಧಿಕಾರ ಹಂಚಿಕೆ ಇರಬೇಕು ಎಂಬ ಏಕಮಂತ್ರದ ಸೂತ್ರದಂತೆ ಅಲ್ಲಿ ಒಮ್ಮೆ ಡಿಎಂಕೆ ಅಧಿಕಾರಕ್ಕೆ ಬಂದರೆ, ಇನ್ನೊಮ್ಮೆ ಎಐಎಡಿಎಂಕೆ ಬರುತ್ತದೆ. ಅಧಿಕಾರವು ಇವೆರಡರ ಸುತ್ತಲೇ ಗಿರಕಿ ಹೊಡೆಯುತ್ತಿರುತ್ತದೆ. ರಾಷ್ಟ್ರೀಯ ಪಕ್ಷ ಎಂದು ಬೀಗುತ್ತ ಅದೆಷ್ಟೇ ಪ್ರಯತ್ನ ನಡೆಸಿದರೂ, ಕಾಂಗ್ರೆಸ್ ಮತ್ತು ಬಿಜೆಪಿ ಅಲ್ಲಿ ಒಂದಿಷ್ಟೂ ಅಸ್ತಿತ್ವ ಪಡೆಯುವಲ್ಲಿ ಯಶಸ್ಸು ಕಂಡಿಲ್ಲ. ಸದ್ಯೋಭವಿಷ್ಯದಲ್ಲಿ ಅದು ಸಾಧ್ಯ ಅಂತಲೂ ಅನಿಸುತ್ತಿಲ್ಲ.

ಕಮಲಹಾಸನ್‌ರಂಥ 'ಸಿನಿ ಸೆಲೆಬ್ರಿಟಿಗಳು' ರಾಜಕೀಯ ಅಸ್ತಿತ್ವ ಕಂಡುಕೊಳ್ಳಲು ಶಕ್ತಿಮೀರಿ ಯತ್ನಿಸುತ್ತಿದ್ದಾರೆ. ಈ ಮಧ್ಯೆ, ಮಹಾಭಾರತದ ಅಭಿಮನ್ಯುವನ್ನು ನೆನಪಿಸುವಂತೆ, ರಾಜಕೀಯ ಘಟಾನುಘಟಿಗಳ ಎದುರು ತೊಡೆತಟ್ಟಲು ನಟ ವಿಜಯ್ ಸಜ್ಜಾಗುತ್ತಿದ್ದಾರಾದರೂ ಅವರು ಅದೆಷ್ಟರ ಮಟ್ಟಿಗೆ ಯಶಸ್ಸು ಸಾಧಿಸಬಲ್ಲರು ಎಂಬುದನ್ನು ಈಗಲೇ ಹೇಳಲಾಗದು ಎಂಬ ಮಾತೂ ನಿಜ. ಏನೋ ಒಂದು ಪ್ರಯತ್ನ ಅಂದುಕೊಂಡು, ತಾವು ಹುಟ್ಟುಹಾಕಿದ ರಾಜಕೀಯ ಪಕ್ಷವನ್ನು ಮುಂಬರುವ ವಿಧಾನಸಭಾ ಚುನಾವಣೆ ವೇಳೆ ಡಿಎಂಕೆ/ಎಐಎಡಿಎಂಕೆ ಜತೆ ಹೊಂದಾಣಿಕೆ ಮಾಡಿಕೊಂಡು, ಕಾಲಕ್ರಮದಲ್ಲಿ ಹೆಚ್ಚು ಸೀಟು ಗೆದ್ದು ತಮ್ಮ ಕಾಲ ಮೇಲೇ ನಿಲ್ಲುವ ಕನಸು ಅವರದ್ದಾಗಿರಬಹುದು. ಹಾಗೆಂದುಕೊಂಡರೂ, ವಿಜಯ್ ಎಂಬ ಅಭಿಮನ್ಯುವು ಸದರಿ ರಾಜಕೀಯ ಚಕ್ರವ್ಯೂಹವನ್ನು ಪ್ರವೇಶಿಸಿ ಗೆದ್ದು ಹೊರಬರುವುದು ಅಷ್ಟು ಸುಲಭವಲ್ಲ. ಒಟ್ಟಿನಲ್ಲಿ ತಮಿಳುನಾಡಿನ ರಾಜಕೀಯವು ಕುತೂಹಲವನ್ನು ಕೆರಳಿಸಿರುವುದಂತೂ ಖರೆ!

- ಶಂಕರನಾರಾಯಣ ಭಟ್, ಮಾಡಗೇರಿ

ಆಳವಾದ ವಿಚಾರವಿದು

ವಿನಾಯಕ ವೆಂ. ಭಟ್ಟ ಅವರ 'ವಿದ್ಯಮಾನ' ಅಂಕಣ (ಆ.24) ಬಹಳ ಆಳವಾದ ವಿಚಾರವನ್ನು ಚರ್ಚಿಸಿದೆ. ಯಾವುದೇ ಕಾರ್ಯಕ್ಷೇತ್ರವಿರಲಿ, ವ್ಯಕ್ತಿಯು ತನ್ನ ಸ್ವಂತಿಕೆಯನ್ನು ಬಿಟ್ಟುಕೊಡಬಾರದು. ಆತ ಯಾವಾಗಲೂ ತನ್ನ ಆಂತರಿಕ ಮೌಲ್ಯಗಳಿಗೆ ನಿಷ್ಠನಾಗಬೇಕಿರುವುದು ಅತ್ಯಗತ್ಯ. ಇತರರ ಮೆಚ್ಚುಗೆಗಾಗಿ ಹಪಹಪಿಸುವ, ಸ್ಥಾನಮಾನ ಮತ್ತು ಹಣಗಳಿಕೆಯ ಹಿಂದೆ ಬಿದ್ದು ತಮ್ಮನ್ನೇ ಕಳೆದುಕೊಳ್ಳುವ ಹಾದಿ ಯಾವತ್ತಿಗೂ ಅಪಾಯಕಾರಿಯಾದುದು.

ತಾನೇ ತನ್ನನ್ನು ಗೌರವಿಸಿಕೊಳ್ಳುವುದು, ತನ್ನ ಮೌಲ್ಯಗಳನ್ನು ಅರಿತುಕೊಳ್ಳುವುದು ಬದುಕಿಗೆ ನಿಜವಾದ ಅರ್ಥವನ್ನು ನೀಡುತ್ತದೆ. ಆದರೆ ಈ ಲೇಖನವನ್ನು ಓದಿದ ಮೇಲೆ, ''ಇಂದಿನ ಸ್ಪರ್ಧಾತ್ಮಕ ಯುಗದಲ್ಲಿ ನಾವೆಲ್ಲರೂ ಅಗೋಚರ ವಸ್ತುವೊಂದನ್ನು ಬೆನ್ನಟ್ಟುತ್ತಾ, ಆ ಧಾವಂತದಲ್ಲಿ ನಮ್ಮ ನಿಜವಾದ ಆತ್ಮಸಾರವನ್ನು ಕಳೆದುಕೊಳ್ಳುತ್ತಿದ್ದೇವೆಯೇ?'' ಎಂಬ ಪ್ರಶ್ನೆ ಮೂಡಿದ್ದಂತೂ ದಿಟ!

- ಶಿವಯೋಗಿ ಎಂ.ವಿ., ರಾಂಪುರ

ಓದುಗರ ಒಣಿಗೆ ಭೇಟಿ ಕೊಡಿ

ನಿಮ್ಮ ಅಭಿಪ್ರಾಯಗಳನ್ನು vveditoped@gmail.comಗೆ ಮೇಲ್ ಮಾಡಬಹುದು ಅಥವಾ ಕಚೇರಿಯ ವಿಳಾಸಕ್ಕೆ ಕಳುಹಿಸಬಹುದು

ಕರಾವಳಿ ಭಾವ ಬಂದರು... ಸ್ವಲ್ಪ ದಾರಿಬಿಡಿ!

ಕರ್ನಾಟಕದ ಕರಾವಳಿ ಭಾಗದ ಹಳ್ಳಿಯೊಂದರ ಬದುಕಿನ ವೈಖರಿ ಮತ್ತು ಸಂಸ್ಕೃತಿಯನ್ನು ಅನಾವರಣಗೊಳಿಸುವ ಒಂದು ಪ್ರಾಮಾಣಿಕ ಮತ್ತು ಸಾರ್ಥಕ ಪ್ರಯತ್ನವೇ 'ಸು ಫ್ರಮ್ ಸೋ'. ಚಿತ್ರರಂಗದ 'ಕೆಲವು ಅನಿವಾರ್ಯತೆಗಳಿಗೆ' ಬಲಿಯಾಗದೆಯೇ ನೈಜತೆಯನ್ನು ಕಾಪಾಡಿಕೊಂಡಿರುವುದು ಈ ಚಿತ್ರದ ಮತ್ತೊಂದು ಪ್ಲಸ್ ಪಾಯಿಂಟ್.

ಚಿತ್ರಲಹರಿ

ರಮಾನಂದ ಶರ್ಮಾ
vveditoped@gmail.com

ಸ್ಯಾಂಡಲ್‌ವುಡ್' ಎಂದೇ ಕರೆಯಲ್ಪಡುವ ಕನ್ನಡ ಚಿತ್ರರಂಗವು ತೀರಾ ಇತ್ತೀಚಿನವರೆಗೂ 'ಬೆಂಗಳೂರು-ಕೇಂದ್ರಿತ'ವಾಗಿತ್ತು. ನಿರ್ಮಾಪಕರು, ನಿರ್ದೇಶಕರು, ತಾರೆಯರು, ಸಂಗೀತಗಾರರು, ಹಾಡುಗಾರರು, ಫೈನಾನ್ಷಿಯರ್‌ಗಳು, ಹಂಚಿಕೆದಾರರು ಎಲ್ಲರೂ ಬಹುತೇಕವಾಗಿ ಬೆಂಗಳೂರಿನವರೇ ಆಗಿರುತ್ತಿದ್ದರು. ಆಗೊಮ್ಮೆ ಈಗೊಮ್ಮೆ ಉತ್ತರ ಕರ್ನಾಟಕ, ಕರಾವಳಿ ಮತ್ತು ಮಲೆನಾಡಿನ ಭಾಷೆಗಳ ಕೆಲವು ದೃಶ್ಯಾವಳಿಗಳು ಕನ್ನಡ ಚಿತ್ರಗಳಲ್ಲಿ ಕಾಣುತ್ತಿದ್ದವು. ಈ ಭಾಷೆಗಳು ಕೇವಲ ಹಾಸ್ಯಪಾತ್ರಗಳಿಗೆ ಸೀಮಿತವಾಗಿದ್ದವೇ ಹೊರತು, ಸಂಪೂರ್ಣ ಚಲನಚಿತ್ರದಲ್ಲಿ ಪ್ರಸ್ತುತಿಗೊಂಡಿದ್ದು ವಿರಳವೇ. ಕನ್ನಡ ಚಿತ್ರರಂಗದ ಈ ಸೋಗಲಾಡಿತನದ ಬಗ್ಗೆ ಆಗಾಗ ಮೆಲುದನಿಯಲ್ಲಿ ಅಸಮಾಧಾನ ಹೊಮ್ಮಿದ್ದಿದೆ.

ಕರಾವಳಿಯವರು ಹಿಂದೆ ಸ್ಯಾಂಡಲ್‌ವುಡ್‌ನಲ್ಲಿ ಮಿಂಚಿದ್ದು ಅಪರೂಪವಾದರೂ (ಈಗ ಹಾಗಿಲ್ಲ ಎನ್ನಿ!) ದೂರದ ಬಾಲಿವುಡ್‌ನಲ್ಲಿ ಮಿಂಚಿದ್ದಾರೆ ಮತ್ತು ಮಿಂಚುತ್ತಿದ್ದಾರೆ. ಗುರುದತ್, ಫೈಟರ್ ಶೆಟ್ಟಿ, ಸುನಿಲ್ ಶೆಟ್ಟಿ, ಐಶ್ವರ್ಯಾ ರೈ, ಶಿಲ್ಪಾ ಶೆಟ್ಟಿ, ಶಮಿತಾ ಶೆಟ್ಟಿ, ದೀಪಿಕಾ ಪಡುಕೋಣೆ ಹೀಗೆ ಹುಡುಕಿ ಬರೆದರೆ ಈ ಪಟ್ಟಿ ಇನ್ನೂ ಉದ್ದವಾಗಬಹುದು. ಬಾಲಿವುಡ್‌ನಲ್ಲಿ ಸಲ್ಲುವವರು ಸ್ಯಾಂಡಲ್‌ವುಡ್‌ನಲ್ಲೇಕೆ ಸಲ್ಲುವುದಿಲ್ಲ? ಎಂಬ ಚರ್ಚೆ ನಡೆಯುತ್ತಿರುವಂತೆಯೇ ಕರಾವಳಿಗರು 'ಒಂದು ಮೊಟ್ಟೆಯ ಕಥೆ'ಯ ಮೂಲಕ ಸ್ಯಾಂಡಲ್‌ವುಡ್‌ನಲ್ಲಿ ಭರ್ಜರಿ ಮೊಟ್ಟೆ ಇಟ್ಟರು (ಇದಕ್ಕೂ ಮುಂಚೆ 'ಉಳಿದವರು ಕಂಡಂತೆ', 'ಕಿರಿಕ್ ಪಾರ್ಟಿ' ಮುಂತಾದ ಪ್ರಯತ್ನಗಳಾಗಿದ್ದವು ಎನ್ನಿ!). ಮುಂದೆ 'ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ, ಕಾಸರಗೋಡು' ಚಿತ್ರದ ಮೂಲಕ ಸ್ಯಾಂಡಲ್‌ವುಡ್‌ನಲ್ಲಿ ಒಂದೊಂದೇ ತರಗತಿಗಳನ್ನು ದಾಟುತ್ತಾ, ಮುಂದೆ 'ಕಾಂತಾರ' ಚಿತ್ರದಿಂದ 'ಕರಾವಳಿಗರು ಬರುತ್ತಿದ್ದೇವೆ, ದಾರಿಬಿಡಿ' ಎನ್ನುತ್ತಾ ಭಾರಿ ಸದ್ದು ಮಾಡಿದರು.

ಈ ಪೈಕಿ, 'ಕಾಂತಾರ' ಸೃಷ್ಟಿಸಿದ ಮೋಡಿಯು ಕನ್ನಡಿಗರ ಮನದಲ್ಲಿನ್ನೂ ಹಸಿರಾಗಿದೆ. ಈ ಚಲನಚಿತ್ರವು ಕರ್ನಾಟಕದಲ್ಲಿ ಮಾತ್ರವಲ್ಲದೆ ಭಾರತದ ಉದ್ದಗಲಕ್ಕೂ ಸುದ್ದಿ ಮಾಡಿದ್ದು ಒಂದು ವಿಶೇಷ. ಆರಂಭ ಚೆನ್ನಾಗಿದ್ದರೆ ಮುಂದಿನ ಓಟವೂ ಚೆನ್ನಾಗಿರುತ್ತದೆ ಎಂಬ ಮಾತಿದೆ. ಮೇಲೆ ಉಲ್ಲೇಖಿಸಿರುವ ಚಿತ್ರಗಳೆಲ್ಲವನ್ನೂ ನೀವಾಳಿಸಿ ತೆಗೆಯುವಂತೆ ಕರಾವಳಿಗರ ಇತ್ತೀಚಿನ ಚಿತ್ರ 'ಸು ಫ್ರಮ್ ಸೋ' ಸ್ಯಾಂಡಲ್‌ವುಡ್‌ನಲ್ಲಿ ಭಾರಿ ಅಬ್ಬರ ಮಾಡುತ್ತಿದೆ. ಕೇವಲ 5-6 ಕೋಟಿ ರುಪಾಯಿ ವೆಚ್ಚದಲ್ಲಿ ನಿರ್ಮಾಣಗೊಂಡ ಈ ಚಿತ್ರ ಈಗಾಗಲೇ ಹತ್ತತ್ತಿರ 100 ಕೋಟಿ ಗಳಿಸಿದೆ ಎನ್ನುವ ವರದಿಯು ಸ್ಯಾಂಡಲ್‌ವುಡ್‌ನಲ್ಲಿ ಅಚ್ಚರಿ ಮೂಡಿಸಿದೆ. ಈ ಚಿತ್ರವು ಬಿಡುಗಡೆಯಾಗಿ ಒಂದು ತಿಂಗಳಾದರೂ ಇನ್ನೂ ಬಿಗಿಯಾಗಿ ಕಚ್ಚಿಕೊಂಡಿರುವುದನ್ನು ನೋಡಿ ಕನ್ನಡ ಚಿತ್ರರಂಗದ ದಿಗ್ಗಜರೆಲ್ಲಾ ಎದ್ದು ಕುಳಿತು ಕಣ್ಣುಜ್ಜಿಕೊಂಡು ಬೆಕ್ಕಸ ಬೆರಗಾಗಿ ನೋಡುತ್ತಿದ್ದಾರೆ. 'ಕನ್ನಡ ಚಿತ್ರಗಳಿಗೆ ಪ್ರೇಕ್ಷಕರೇ ಬರುವುದಿಲ್ಲ' ಎಂದೇ ಗೋಳಾಡುತ್ತಿದ್ದ ಇವರು, ತಾವು ಲೆಕ್ಕಾಚಾರದಲ್ಲಿ ಸೋತಿದ್ದೆಲ್ಲಿ? ತಮ್ಮ ಸಮೀಕರಣ ಎಲ್ಲಿ ತಪ್ಪಾಗಿದೆ? ಎಂದೇ ಗಂಭೀರವಾಗಿ ಯೋಚಿಸುತ್ತಿದ್ದಾರೆ. ದಶಕಗಳಿಂದ ಚಿತ್ರರಂಗದಲ್ಲಿದ್ದವರು, ಆಜೀವ ಸದಸ್ಯರಂತೆ ಇಲ್ಲಿಯೇ ತಳ ಊರಿಕೊಂಡು ಕೂತಿದ್ದವರು ಈ ಅದ್ಭುತ ಯಶಸ್ಸನ್ನು ಕಂಡು ದಂಗಾಗಿದ್ದಾರೆ. ಈ 'ಕರಾವಳಿ ಎಕ್ಸ್‌ಪ್ರೆಸ್' ದಿನ ಬೆಳಗಾಗುವುದರೊಳಗೆ ಸ್ಯಾಂಡಲ್‌ವುಡ್‌ನಲ್ಲಿ ಠಿಕಾಣಿ ಹೂಡುತ್ತಿರುವುದನ್ನು ಕಂಡು ನಿಬ್ಬೆರಗಾಗಿದ್ದಾರೆ.

ಒಂದು ಮಾತಂತೂ ನಿಜ. 'ಸು ಫ್ರಮ್ ಸೋ' ಚಿತ್ರವಂತೂ ಸೂಪರ್‌ಹಿಟ್, ಈಗಲೂ ತುಂಬಿದ ಗೃಹಗಳ ಪ್ರದರ್ಶನವನ್ನು ಕಾಣುತ್ತಿದೆ. ಎಷ್ಟರ ಮಟ್ಟಿಗೆ ಎಂದರೆ, ಬೇರೆ ಘಟಾನುಘಟಿಗಳು ತಮ್ಮ ಚಿತ್ರದ ಬಿಡುಗಡೆಯ ದಿನಾಂಕವನ್ನು ಇದು ಮುಂದೂಡುವಂತೆ ಮಾಡಿದೆ ಎಂದು ಹೇಳಲಾಗುತ್ತಿದೆ. ಸೂಪರ್‌ಸ್ಟಾರ್ ರಜನಿಕಾಂತ್ ಅವರ 'ಕೂಲಿ' ಚಿತ್ರದ ಆರ್ಭಟಕ್ಕೂ 'ಸು ಫ್ರಮ್ ಸೋ' ಜಗ್ಗಲಿಲ್ಲ. ನಿಜ ಹೇಳಬೇಕೆಂದರೆ, ಸ್ಯಾಂಡಲ್‌ವುಡ್‌ನವರು ಹೇಳುವ ತಥಾಕಥಿತ 'ಫಾರ್ಮುಲಾ' ಅಥವಾ 'ಸಿದ್ಧಸೂತ್ರ' ಈ ಚಿತ್ರದಲ್ಲಿಲ್ಲ. ಚಾಕೊಲೇಟ್ ಮುಖದ ಹೀರೋಗಳಾಗಲೀ, ದ್ವೇಷ ಕಾರುವ ರಗಡ್ ಮುಖದ ಖಳನಾಯಕರಾಗಲೀ ಇಲ್ಲಿಲ್ಲ. ರತಿ ವರ್ಚಸ್ಸಿನ ನಾಯಕಿಯಿಲ್ಲ, ಐಷಾರಾಮಿ ಬಂಗಲೆಗಳು, ಹೈ-ಎಂಡ್ ಕಾರುಗಳು ಬೈಕುಗಳು, ಪಂಚತಾರಾ ಹೋಟೆಲುಗಳ ಪ್ರದರ್ಶನವಿಲ್ಲ. ವಿದೇಶಿ ಲೊಕೇಶನ್‌ಗಳ ಮಾತಿರಲಿ ಕಾಶ್ಮೀರ-ಊಟಿಗಳ ತಂಟೆಗೂ ಚಿತ್ರತಂಡದವರು ಹೋಗಿಲ್ಲ. ಮೈ ನವಿರೇಳಿಸುವ ಕಾರ್-ಚೇಸ್, ಅಳುಮುಂಜಿ ಅಮ್ಮಣ್ಣಿಯರು, ಒಣ ಉಪದೇಶ ಕೊಡುವ 'ಅಮೃತಾಂಜನ್' ಪಾರ್ಟಿಗಳು ಇಲ್ಲಿಲ್ಲ. ಇಲ್ಲಿ ಹೀರೋ ಹತ್ತು ಜನರೊಂದಿಗೆ ಏಕಾಂಗಿಯಾಗಿ ಹೊಡೆದಾಡುವುದಿಲ್ಲ, ಹೀರೋ-ಹೀರೋಯಿನ್ ಪಾರ್ಕ್‌ನಲ್ಲಿ ವಿಹರಿಸುತ್ತಾ ಯುಗಳಗೀತೆ ಹಾಡುವುದಿಲ್ಲ.... ಸ್ವಿಮ್ ಸೂಟು, ಐಟಂ ಸಾಂಗು, ದ್ವಂದ್ವಾರ್ಥದ ಸಂಭಾಷಣೆ, ಕರ್ಣಕಠೋರ/ಕರ್ಣಾನಂದಕರ ಹಾಡುಗಳು, ಹೀರೋಯಿಸಂ ಡೈಲಾಗುಗಳು, ಬಿಲ್ಡಪ್ಪುಗಳು ಈ ಯಾವುದೂ ಇದರಲ್ಲಿಲ್ಲ. ಅರೆ! ಎಲ್ಲವೂ ಇಲ್ಲ ಇಲ್ಲ ಅನ್ನುತ್ತಾ ಹೋದರೆ, ಈ ಚಿತ್ರದಲ್ಲಿ ಇರೋದಾದರೂ ಏನು ಹಾಗಾದರೆ?!

ಚಿತ್ರವನ್ನು ಕಟ್ಟುವಲ್ಲಿ ಪ್ರತಿಯೊಬ್ಬರೂ ತೋರಿರುವ ಶ್ರದ್ಧೆಯೇ 'ಸು ಫ್ರಮ್ ಸೋ' ಚಿತ್ರದ ಜೀವಾಳ ಹಾಗೂ ಯಶಸ್ಸಿಗೆ ಅದುವೇ ಕಾರಣ. ಒಂದಿಬ್ಬರು ಮೂವರನ್ನು ಬಿಟ್ಟರೆ ಹೆಚ್ಚಿನವರು ಮೊದಲ ಬಾರಿ ಬಣ್ಣ ಹಚ್ಚಿದಂತಿದೆ; ಆದರೂ ಅವರ ಅಭಿನಯದಲ್ಲಿ ಅನುಭವದ ಮೂಸೆ ಎದ್ದು ಕಾಣುತ್ತದೆ. ಹೀರೋಯಿನ್‌ಗೆ ಅಷ್ಟೊಂದು ಪ್ರಾಮುಖ್ಯ ಇಲ್ಲದಿರುವುದರಿಂದ, 'ಯಾರು ಹೀರೋಯಿನ್?' ಎಂಬುದು ಪ್ರೇಕ್ಷಕರಿಗೆ ಚಿತ್ರದ ಕೊನೆಯವರೆಗೂ ತಿಳಿಯದಿರುವುದು ಈ ಚಿತ್ರದ ವಿಶೇಷ. ಕಥೆಯ ಪ್ರಸ್ತುತಿಯಲ್ಲಿ ಹೀರೋಯಿನ್ ಮೇಲೆಯೇ ಕ್ಯಾಮರಾವನ್ನು ಫೋಕಸ್ ಮಾಡಿದಂತೆ ಕಾಣುವುದಿಲ್ಲ. ಪಾತ್ರಗಳನ್ನು ಕಟ್ಟಿಕೊಟ್ಟಿರುವ ಪರಿ ಹೇಗಿದೆಯೆಂದರೆ, ಪ್ರತಿಯೊಬ್ಬ ಪಾತ್ರಧಾರಿಯೂ ನಮ್ಮ ಅಕ್ಕ-ಪಕ್ಕದಲ್ಲೇ ಇರುವಂತೆ ಅಥವಾ ವಠಾರವೊಂದರ ಸಹವರ್ತಿಗಳಂತೆ-ಸಾಮಾನ್ಯರಂತೆ ಕಾಣುತ್ತಾರೆ. ಇವರೆಲ್ಲರೂ ಅಭಿನಯಕ್ಕಿಂತ ತಮ್ಮ ಮ್ಯಾನರಿಸಂ ಮೂಲಕವೇ ಪ್ರೇಕ್ಷಕರು ಕುರ್ಚಿಗೆ ಅಂಟಿಕೊಳ್ಳುವಂತೆ ಮಾಡುತ್ತಾರೆ.



ಪಾತ್ರದ ಪ್ರಸ್ತುತಿಯಲ್ಲಿ ಒಬ್ಬರು ಇನ್ನೊಬ್ಬರನ್ನು ಮೀರಿಸಿರುವುದು ಇಲ್ಲಿನ ಒಂದು ವಿಶೇಷ. ಯಾರನ್ನೂ ಅತಿರೇಕವಾಗಿ ಹೈಲೈಟ್ ಮಾಡಿಲ್ಲವಾದರೂ, ರವಿಯಣ್ಣ ಪಾತ್ರಧಾರಿ ಗಮನ ಸೆಳೆಯುತ್ತಾರೆ ಹಾಗೂ ಎಲ್ಲರ ಮೆಚ್ಚುಗೆಯನ್ನು ಗಳಿಸುತ್ತಾರೆ.

ರವಿಯಣ್ಣ ಪಾತ್ರಧಾರಿಯ 'ಎದ್ದಾಳು' ಪರ್ಸನಾಲಿಟಿ, ಗಾಂಭೀರ್ಯ, ಮ್ಯಾನರಿಸಂ, ಸ್ಕೂಟರ್ ಚಲಾಯಿಸುವ ಪರಿ, ಡೈಲಾಗ್ ಡೆಲಿವರಿ ಶೈಲಿ, ಚಿತ್ರದ ಕೊನೆಯಲ್ಲಿ ಬರುವ ಅವರ ರೊಮಾನ್ಸ್ ಅನ್ನು ಪ್ರೇಕ್ಷಕರು ಬಹುಕಾಲ ನೆನಪಿಡುತ್ತಾರೆ. ಹಾಗೆಯೇ ಊರಿನ ಸಮಿತಿಯ ಅಧ್ಯಕ್ಷನಾಗಿ ರವಿಯಣ್ಣನಿಗೆ ಎಲ್ಲಾ ಜವಾಬ್ದಾರಿ ಹೊರಿಸುವ ರಾಮದಾಸ ಮಿಮಿಯವರ ಅದ್ಭುತ ಕನ್ನಡ ಭಾಷಣ ಕಿವಿಯಲ್ಲಿ ಗುನುಗುತ್ತದೆ ಮತ್ತು ಕಣ್ಣಿಗೆ ಅಮರಿಕೊಳ್ಳುತ್ತದೆ. ''ರವಿಯಣ್ಣನಿಗೆ ಎಲ್ಲಾ ಗೊತ್ತು, ಅವರೇ ಎಲ್ಲಾ ನಿಭಾಯಿಸುತ್ತಾರೆ'' ಎನ್ನುವ ಅಧ್ಯಕ್ಷನ ಮಾತು ನೈಜತೆಗೆ ಹಿಡಿದ ಕನ್ನಡಿ. ಇಂದಿಗೂ ಈ ಮಾತು ಬಹುತೇಕ ಹಳ್ಳಿಗಳಲ್ಲಿ ಸದಾ ಕೇಳುತ್ತದೆ. ಅಂದರೆ, 'ನಮ್ಮ ಪಟೇಲರು, ಹೆಗಡೆಯವರು, ಭಟ್ಟರು, ನಾಯಕರು, ಗೌಡರು, ಪಾಟೀಲರು, ದೇಶಪಾಂಡೆಯವರು ಹೇಳಿದಂತೆ' ಎನ್ನುವ ಪರಿಪಾಠವನ್ನು ಗ್ರಾಮೀಣ ಪ್ರದೇಶಗಳಲ್ಲಿ ಈಗಲೂ ಕಾಣಬಹುದು. 'ಸು ಫ್ರಮ್ ಸೋ' ಅನ್ನು 'ಹಾಸ್ಯಚಿತ್ರ' ಎಂಬುದಾಗಿ ಪ್ರಚಾರ ಮಾಡಿದರೂ, ಇದು ನೂರಕ್ಕೆ ನೂರರಷ್ಟು ಹಾಸ್ಯಚಿತ್ರವಲ್ಲ. ಚಿತ್ರವಿಡೀ ಕರಾವಳಿ ಭಾಗದ ಭಾಷೆಯಿರುವುದರಿಂದ ಅದನ್ನು ಅನುಸರಿಸಲು ಸಾಧ್ಯವಾಗದವರಿಗೆ ಸ್ವಲ್ಪ ಗೊಂದಲವಾಗಬಹುದು, ಅಷ್ಟೇ.

''ಬಂದರೋ ಬಂದರು ಭಾವ ಬಂದರು...'' ಎಂಬುದು ಈ ಚಿತ್ರದಲ್ಲಿನ ಏಕೈಕ ಹಾಡು. ಆದರೆ ಇದು ಚಿತ್ರದ ದೆಸೆಯನ್ನೇ ತಿರುಗಿಸಿಬಿಟ್ಟಿದೆ, ರಾಜ್ಯಾದ್ಯಂತ ಜನರು ಗುನುಗುವಂತೆ ಮಾಡಿದೆ. ಇದು ಪಡ್ಡೆ ಹುಡುಗರ ನೆಚ್ಚಿನ 'ಟೈಮ್ ಪಾಸ್' ಹಾಡಾಗಿಬಿಟ್ಟಿದೆ. ಹಾಡುಗಳ ವಿಷಯದಲ್ಲಿ 'ಮುಂಗಾರು ಮಳೆ' ಮಾಡಿದ್ದ ಮೋಡಿಯನ್ನು, 'ಸು ಫ್ರಮ್ ಸೋ' ಚಿತ್ರವು ಇದೊಂದೇ ಹಾಡಿನಿಂದ ಮಾಡಿಬಿಟ್ಟಿದೆ. ಏಕೆಂದರೆ, ಇದು ಸುಮಧುರ ಹಾಡು ಅಲ್ಲದಿದ್ದರೂ ಜನರಿಗೆ ಮೆಚ್ಚುಗೆ ಆಗಿದೆ. ನರ್ಸರಿ ಹುಡುಗರು ಈ ಹಾಡನ್ನು ಹೇಳಿಕೊಂಡು ತಮಗಿಷ್ಟವಾದಂತೆ ಡಾನ್ಸ್ ಮಾಡುವುದನ್ನು ನೋಡಿದಾಗ, ಈ ಹಾಡಿನ ಜನಪ್ರಿಯತೆಯ ಮಟ್ಟ ಅರಿವಿಗೆ ಬರುತ್ತದೆ. ರಾಜಕೀಯ ವಿಡಂಬನೆ ಮತ್ತು ಜೋಕುಗಳಿಗೂ ಈ ಹಾಡು ಧಾರಾಳವಾಗಿ ಬಳಕೆಯಾಗುತ್ತಿದೆ. ನೆಟ್ಟಿಗರು ಸಾಮಾಜಿಕ ಜಾಲತಾಣಗಳಲ್ಲಿ ಇದನ್ನು ಯಥೇಚ್ಛವಾಗಿ ಬಳಸಿ ಮಜಾ ತೆಗೆದುಕೊಳ್ಳುತ್ತಿದ್ದಾರೆ.

ಕರ್ನಾಟಕದ ಕರಾವಳಿ ಭಾಗದ ಹಳ್ಳಿಯೊಂದರ ಬದುಕಿನ ವೈಖರಿ ಮತ್ತು ಸಂಸ್ಕೃತಿಯನ್ನು ಅನಾವರಣಗೊಳಿಸುವ ಒಂದು ಪ್ರಾಮಾಣಿಕ ಮತ್ತು ಸಾರ್ಥಕ ಪ್ರಯತ್ನವೇ 'ಸು ಫ್ರಮ್ ಸೋ' ಚಿತ್ರದ ರೂಪದಲ್ಲಿ ಕೆನೆಗಟ್ಟಿದೆ. ಕಥೆಗೆ ಎಲ್ಲೂ ಅಪಚಾರವಾಗದಂತೆ ಎಚ್ಚರಿಕೆ ವಹಿಸಿ ಈ ಚಿತ್ರವನ್ನು ನಿರ್ಮಿಸಲಾಗಿದೆ. ಆರಂಭದಲ್ಲಿನ ಕುಡಿಯುವ ದೃಶ್ಯ ಹಾಗೂ ಅಂತ್ಯದ ಹೊಡೆದಾಟದ ದೃಶ್ಯವನ್ನು ಸ್ವಲ್ಪ ಕಡಿತಗೊಳಿಸಬಹುದಿತ್ತು ಎಂಬ ಅಭಿಪ್ರಾಯವೂ ಪ್ರೇಕ್ಷಕರಿಂದ ಕೇಳಿಬರುತ್ತಿದೆ. ಇಷ್ಟನ್ನು ಹೊರತುಪಡಿಸಿದರೆ ಒಂದಿಡೀ ಚಿತ್ರ ರಸದೌತಣವನ್ನೇ ನೀಡುತ್ತದೆ. ಚಿತ್ರರಂಗದ 'ಕೆಲವು ಅನಿವಾರ್ಯತೆಗಳಿಗೆ' ಬಲಿಯಾಗದೆಯೇ ನೈಜತೆಯನ್ನು ಕಾಪಾಡಿಕೊಂಡಿರುವುದು ಈ ಚಿತ್ರದ ಮತ್ತೊಂದು ಪ್ಲಸ್ ಪಾಯಿಂಟ್. ವಿವಿಧ ಭಾಷೆಗಳಿಗೆ ಡಬ್ ಆಗುವ ಇಲ್ಲವೇ ರೀಮೇಕ್ ಆಗುವ ಭಾಗ್ಯವೂ 'ಸು ಫ್ರಮ ಸೋ' ಚಿತ್ರದ್ದು. ''ಕರಾವಳಿ ಜನರು ಬ್ಯಾಂಕಿಂಗ್ ಮತ್ತು ಹೋಟೆಲ್ ಬಿಜಿನೆಸ್‌ನಲ್ಲಿ ಎತ್ತಿದ ಕೈ'' ಎಂಬ ಮಾತು ಇದುವರೆಗೂ ಕೇಳಿಬರುತ್ತಿದ್ದುದುಂಟು; ಈಗ ಆ ಪಟ್ಟಿಗೆ ಚಿತ್ರರಂಗವೂ ಸೇರಿಕೊಂಡಿರುವುದು ಶ್ಲಾಘನೀಯ ಬೆಳವಣಿಗೆಯೇ ಸರಿ...

(ಲೇಖಕರು ಪ್ರಚಲಿತ ವಿದ್ಯಮಾನಗಳ ವಿಶ್ಲೇಷಕರು)

ಭಟ್ಟರ್ ಸ್ನ್ಯಾಕ್

- **ರವೀಂದ್ರ ಹೆಗ್ಗೋಡಿ, (ಇಮೇಲ್ ಮೂಲಕ)**
ಭಟ್ರೇ, ಮದುವೆಯಾಗಿ ಎಂಟು ತಿಂಗಳಾಗಿಲ್ಲ, ಆಗಲೇ ಹೆಂಡತಿ ದಬ್ಬಾಳಿಕೆ ಜಾಸ್ತಿಯಾಗಿದೆಯಲ್ಲ?
– **ಒಳ್ಳೆಯವಳು ಸಿಕ್ಕಿದ್ದಾಳೆ, ಎರಡನೇ ತಿಂಗಳಿಗೇ ಶುರುವಾಗಬೇಕಿತ್ತು!**

- **ರಾಮು ಮಲ್ಲಿಕಟ್ಟಿ, ಕೋಣಂದೂರು**
ಭಟ್ರೇ, ಧಾರಾವಾಹಿಗಳಲ್ಲಿ ಮಹಿಳಾ ವಿಲನ್‌ಗಳೇ ಜಾಸ್ತಿಯಾಗಿದ್ದಾರಲ್ಲ?
– **ಅವರಿಲ್ಲದಿದ್ದರೆ ಧಾರಾವಾಹಿಗಳನ್ನು ಯಾರು ನೋಡ್ತಾ ಇದ್ರು?!**

- **ವೇಣುಗೋಪಾಲ ಕಂಚಿತೋಟ, (ಇಮೇಲ್ ಮೂಲಕ)**
ಭಟ್ರೇ, ತಾಳಿ ಕಟ್ಟುವಾಗ ಸ್ವಲ್ಪ ಬಿಗಿಯಾಗಿ ಕಟ್ಟಿದರೆ ಡೈವೋರ್ಸ್ ಆಗುವುದಿಲ್ಲವಂತೆ?
– **ಹೂಂ.. ಆಗ ಮದುವೆಯೇ ಆಗುವುದಿಲ್ಲವಲ್ಲ?!**

- **ಸತೀಶ್ ಎಲ್.ವಿ., (ಇಮೇಲ್ ಮೂಲಕ)**
ಭಟ್ರೇ, ಮದುವೆ ಆಗದೆ ಇರುವವರನ್ನು ಅಂಕಲ್ ಅಂತ ಕರೆಯೋದು ಸರಿನಾ?
– **ಅವರನ್ನು ಏನು ಬೇಕಾದರೂ ಕರೆಯಿರಿ, ಏನೂ ವ್ಯತ್ಯಾಸ ಆಗುವುದಿಲ್ಲ!**

- **ತರ್ಲೆಸುಬ್ಬು, ಕೋಲಾರ**
ನಾಲ್ವರು ಹುಡುಗಿಯರು ನನ್ನ ಮೇಲೆ ಅತ್ಯಾಚಾರ ಮಾಡಿದ್ದಾರೆ ಅಂತ ಸಂತ್ರಸ್ತ ದೂರು ಕೊಟ್ಟಿದ್ದಾನಂತೆ?
– **ಅವನು ಸಂತ್ರಸ್ತನೋ, ಸಂತೃಪ್ತನೋ ಹೇಳೋದ್ ಕಷ್ಟ!**

- **ಸುನಿಲ್ ಕುಲಕರ್ಣಿ, ಧಾರವಾಡ**
ಈ ರಾಜಕೀಯ ಸಮಾವೇಶಗಳಿಗೆ ಬರೋರಿಗೆಲ್ಲಾ ಊಟ ಹಾಕಿಸ್ತಾರಲ್ಲ ಯಾಕೆ ಭಟ್ರೇ?
– **ಅದೊಂಥರಾ ವೋಟ್ ಮೀಲ್ಸ್!**

- **ಕವಿತಾ, ಹಾಸನ**
ಇತ್ತೀಚಿನ ಸಿನಿಮಾ ಹಾಡುಗಳ ಸಾಹಿತ್ಯದ ಬಗ್ಗೆ ನಿಮ್ಮ ಅಭಿಪ್ರಾಯ?
– **ಸಿನಿಮಾ ಟ್ಯೂನುಗಳಿಗೆ ಹಾಡು ಬರೆಯೋದು ಸುಲಭದ ಮಾತಲ್ಲ, ಅದಕ್ಕೂ 'ಮೀಟರ್' ಬೇಕು!**

ಕಲ್ಲು ಎಸೆದರೆ ಮನೆ ಕಟ್ಟಬಹುದು, ಬಾಂಬ್ ಎಸೆದರೆ...?

ಯುದ್ಧ ಅಪಾಯಕಾರಿ, ವಿನಾಶಕಾರಿ. ಯುದ್ಧ ಎಂದರೆ ಕೇವಲ ಎರಡು ದೇಶಗಳ ನಡುವೆ ಮಾತ್ರ ನಡೆಯುವಂಥದ್ದು ಎಂದು ತಿಳಿದರೆ ಮೂರ್ಖತನವಾದೀತು. ಯುದ್ಧ ಎಂದರೆ ಅಕ್ಕಪಕ್ಕದ ದೇಶಗಳ ಮೇಲೆಯೂ. ಕೆಲವೊಮ್ಮೆ ಪ್ರಪಂಚದಾದ್ಯಂತ ಪರಿಣಾಮ ಬೀರುವಂಥ ಸಂಗತಿ. ಯುದ್ಧ ಕೇವಲ ಸೈನಿಕರನ್ನು ಆ ದೇಶದ ಜನರನ್ನು ಮಾತ್ರ ಗಾಯಗೊಳಿಸುವುದಿಲ್ಲ, ಆ ದೇಶದ ಭೂಮಿಯನ್ನೂ ಘಾಸಿಗೊಳಿಸುತ್ತದೆ.

ವಿದೇಶವಾಸಿ
ಕಿರಣ್ ಉಪಾಧ್ಯಾಯ ಬಹ್ರೈನ್
dhyapaa@gmail.com

ಯಾರಾದರೂ ನಮ್ಮ ಮೇಲೆ ಕಲ್ಲು ಎಸೆದರೆ ಏನು ಮಾಡಬೇಕು? ಬೇಸರ ಮಾಡಿಕೊಳ್ಳಬಾರದು, ಅದನ್ನೆಲ್ಲ ಹೆಕ್ಕಿ ಮನೆ ಕಟ್ಟಿಕೊಳ್ಳಬೇಕು'' ಎಂಬ ಉಪದೇಶ ಇದೆ. ಸರಿ, ಯಾರಾದರೂ ನಮ್ಮ ಮೇಲೆ ಬಾಂಬ್ ಎಸೆದರೆ ಏನು ಮಾಡಬೇಕು...?

ಲಾವೋಸ್ ದೇಶದ 'ಲುವಾಂಗ್ ಪ್ರಬಾಂಗ್'ನಿಂದ ಸುಮಾರು ಮೂವತ್ತು ಕಿಲೋಮೀಟರ್ ದೂರದಲ್ಲಿರುವ 'ಕುವಾನ್ ಸಿ' ಜಲಪಾತಕ್ಕೆ ಇತ್ತೀಚೆಗೆ ಹೋಗಿದ್ದೆ. ಅದೊಂದು ಅದ್ಭುತವಾದಂಥ ಜಲಪಾತ. ಸುಮಾರು ಎರಡು ನೂರು ಅಡಿ (ಅರವತ್ತು ಮೀಟರ್) ಎತ್ತರದಿಂದ ನಾಲ್ಕು ಸ್ತರದಲ್ಲಿ ನೀರು ಹರಿದು ಕೆಳಗೆ ಬರುವ ರಮಣೀಯ ದೃಶ್ಯ. ಆ ಒಂದು ಜಲಪಾತದ ಸನ್ನಿಧಿಯಲ್ಲಿ ಗಂಟೆಗಳನ್ನೇ ಕಳೆಯಬಹುದು. ಅದು ನಮ್ಮ ಜೋಗ ಜಲಪಾತದಷ್ಟು ದೊಡ್ಡದಲ್ಲ, ಅಷ್ಟು ಎತ್ತರದಿಂದ ನೀರು ಧುಮುಕುವುದಿಲ್ಲ. ಕುವಾನ್ ಸಿ ಜಲಪಾತವು ಜೋಗ ಜಲಪಾತದ ಕಾಲುಭಾಗ ಮಾತ್ರವಿದೆ. ಆದರೂ ನಯನ ಮನೋಹರವಾಗಿರುವುದಂತೂ ನಿಜ. ತಿಳಿ ನೀಲಿ ಮತ್ತು ತಿಳಿ ಹಸಿರು ಬಣ್ಣ ಮಿಶ್ರಿತವಾದಂತೆ ಇರುವ ಬಣ್ಣ, ಸುತ್ತಲೂ ಕತ್ತಲ ಕಾನನ. ಜಲಪಾತ ಚಿಕ್ಕದಾದದ್ದರಿಂದ ಜಲಪಾತದ ಆಚೆ ಈಚೆ ದಾಟಿ ಹೋಗುವಂತೆ ನಿರ್ಮಿತವಾದ ಸಣ್ಣ ಸೇತುವೆ. ಆ ಸೇತುವೆ ಮೇಲೆಯೇ ನಿಂತು ನೀವು ಇಡೀ ಜಲಪಾತದ ಚಿತ್ರವನ್ನು, ವಿಡಿಯೋವನ್ನು ತೆಗೆದುಕೊಳ್ಳಬಹುದು. ಆ ಜಲಪಾತದ ಸಾನ್ನಿಧ್ಯದಲ್ಲಿ ಒಂದು ಗಂಟೆ ಕಳೆದದ್ದೇ ತಿಳಿಯಲಿಲ್ಲ. ಜಲಪಾತವಂತೂ ಗಮನ ಸೆಳೆಯುವಂಥದ್ದೇ ಬಿಡಿ. ಆದರೆ ಅದಕ್ಕಿಂತ ಹೆಚ್ಚಾಗಿ ಅಲ್ಲಿ ನನ್ನ ಗಮನ ಸೆಳೆದಿದ್ದು ಒಂದು ಮರ, ಜಲಪಾತದ ಮಧ್ಯದಲ್ಲಿ ಒಂಟಿಯಾಗಿ ನಿಂತ ಮರ!

ಅಂಥ ನಾಲ್ಕಾರು ಮರಗಳು ಆ ಜಲಪಾತದಲ್ಲಿವೆ. ಅವುಗಳ ವಿಶೇಷತೆ ಎಂದರೆ, ಅವು ರಭಸದಲ್ಲಿ ಧುಮುಕುವ ನೀರಿನ ಮಧ್ಯೆ ಕಲ್ಲಿನ ಮೇಲೆ ನಿಂತಂಥ ಮರಗಳು. ಅದರಲ್ಲೂ ಒಂದು ಮರದ ಗಾತ್ರ ನೋಡಿದರೆ, ಏನಿಲ್ಲವೆಂದರೂ ಇಪ್ಪತ್ತೈದು-ಮೂವತ್ತು ವರ್ಷದಿಂದ ನಿಂತಿದೆ ಎಂದು ಹೇಳಬಹುದು. ಆ ಒಂದು ದೃಶ್ಯ ನನ್ನ ಕಣ್ಣಿಗೆ ಕಟ್ಟಿ, ಮನಸ್ಸಿಗೆ ಅಚ್ಚೊತ್ತಿದ್ದಷ್ಟೇ ಅಲ್ಲ, ಹೃದಯಾಂತರಾಳದಲ್ಲಿ ಸಾಕಷ್ಟು ಪ್ರಶ್ನೆಗಳನ್ನು ಹುಟ್ಟು ಹಾಕಿತ್ತು. ಜಲತರಂಗಗಳು ಭಾವತರಂಗವನ್ನು ಕದಡಿದ್ದವು.

ಇತ್ತೀಚೆಗಂತೂ ಸಣ್ಣಪುಟ್ಟ ಮಳೆಗೇ ಗಿರಿಯು ಧರೆಗೆ ಉರುಳುವುದನ್ನು ನಾವು ನೋಡುತ್ತಿದ್ದೇವೆ. ಮುಗಿಲೆತ್ತರಕ್ಕೆ ಬೆಳೆದು ನಿಂತ ದಷ್ಟಪುಷ್ಟ ಮರಗಳು ಧರಾಶಾಹಿಯಾಗುವುದನ್ನು ಕಾಣುತ್ತಿದ್ದೇವೆ. ಇಂದಿನ ದಿನಗಳಲ್ಲಿ ಪ್ರವಾಹ, ಭೂಕುಸಿತ, ಮರ ಉರುಳುವುದು ಸರ್ವೇ ಸಾಮಾನ್ಯ ಎನ್ನುವಂತಾಗಿದೆ. ಇದಕ್ಕೆ ಉದಾಹರಣೆ ಎಂಬಂತೆ, 'ವಾಂಗ್ ವಿಯಾನ್' ಹೆಸರಿನ ಊರಿನಿಂದ ನಾವು 'ಲುವಾಂಗ್ ಪ್ರಬಾಂಗ್' ಪಟ್ಟಣಕ್ಕೆ ಹೋಗುವಾಗ, ಮಾರ್ಗ ಮಧ್ಯದಲ್ಲಿ ಗುಡ್ಡ ಕುಸಿದ ಕಾರಣದಿಂದ ಕೆಲವು ಗಂಟೆ ರಸ್ತೆಯಲ್ಲಿಯೇ ಕಳೆಯಬೇಕಾದ ಪ್ರಸಂಗವೂ ಒದಗಿ ಬಂದಿತ್ತು. ಅಂಥದ್ದರಲ್ಲಿ, ಶೈಲ ಶಿಖರದ ಮೇಲೆ, ನಿತ್ಯಪ್ರವಾಹದ ಮಧ್ಯದಲ್ಲಿ, ಜಲಧಾರೆಗೆ ಎದೆಯೊಡ್ಡಿ ನಿಂತಿದೆ ಎಂದಾದರೆ, ಆ ಏಕಪಾದುವಿನ ತಂತು ಎಷ್ಟು ಸದೃಢವಾಗಿರಬೇಕು? ಎಂದೆನಿಸಿತು.

ಲಾವೋಸ್ ದೇಶದಲ್ಲಿ ಇಂಥ ಒಂದು ಪವಾಡ ಅಥವಾ ಕಾರ್ಯ ಸಾಧ್ಯ ಎಂದು ಮನದಟ್ಟಾಗಲು ಬಹಳ ಸಮಯ ಬೇಕಾಗಲಿಲ್ಲ. ಬಹುಶಃ ಆ ಮರ ಇಡೀ ಲಾವೋಸ್ ದೇಶಕ್ಕೆ ಮಾದರಿಯಾಗಿರಬಹುದು, ಅಥವಾ ಲಾವೋಸ್ ದೇಶವೇ ಆ ಮರಕ್ಕೆ ಉದಾಹರಣೆಯಾಗಿ, ಸ್ಫೂರ್ತಿಯಾಗಿರಲೂಬಹುದು. ಏಕೆ ಎಂದು ಅರ್ಥವಾಗಬೇಕಾದರೆ, ಲಾವೋಸ್ ದೇಶದ ಇತಿಹಾಸ, ಅನುಭವಿಸಿದ ನಷ್ಟ, ಇಂದಿಗೂ ಪಡುತ್ತಿರುವ ಕಷ್ಟದ ಕತೆಯನ್ನು ನೀವು ಕೇಳಬೇಕು.

ಲಾವೋಸ್ ಕೂಡ ಒಂದು ಕಾಲದಲ್ಲಿ ಯುದ್ಧ ಮಾಡಿದ, ಬಾಂಬ್ ದಾಳಿಗೆ ಒಳಗಾದ ದೇಶವೇ. ಆದರೆ



ತಾನು ಅನುಭವಿಸಿದ ಅಂತರ್ಯುದ್ಧಕ್ಕಿಂತ ಅಮೆರಿಕ ಸುರಿಸಿದ ಬಾಂಬ್ ದಾಳಿಗೆ ಘಾಸಿಗೊಂಡದ್ದೇ ಹೆಚ್ಚು. ಲಾವೋಸ್‌ನಲ್ಲಿ 1953ರಿಂದ 1975ರವರೆಗೆ ಹಲವು ವಿಧದಲ್ಲಿ ಭೀಕರವಾದ ಯುದ್ಧಗಳು ನಡೆದವು. ಅದರಲ್ಲೂ 1964ರಿಂದ 1973ರವರೆಗೆ ಅಮೆರಿಕ ಲಾವೋಸ್ ಮೇಲೆ ಭೀಕರವಾದ ಬಾಂಬ್ ದಾಳಿ ಮಾಡಿತ್ತು. ಆ ಕಾಲದಲ್ಲಿ ಪಕ್ಕದಲ್ಲಿಯೇ ಇರುವ ವಿಯಟ್ನಾಂನಲ್ಲಿ ಯುದ್ಧ ನಡೆಯುತ್ತಿದ್ದ ಕಾರಣ, ಲಾವೋಸ್ ಮೇಲೆ ಅಂದು ಅಮೆರಿಕ ಮಾಡಿದ ದಾಳಿ ಆ ಕಾಲದಲ್ಲಿ ಸುದ್ದಿ ಆಗಲೇ ಇಲ್ಲ. ಇಲ್ಲದಿದ್ದರೆ ವಿಶ್ವ ಮಹಾಯುದ್ಧದ ಸಂದರ್ಭದಲ್ಲಿ ಜಪಾನ್ ಮೇಲೆ ನಡೆದ ದಾಳಿಗಿಂತಲೂ ಭೀಕರವಾದ ದಾಳಿ ಲಾವೋಸ್ ಮೇಲೆ ನಡೆದಿತ್ತು. ಅದೂ ತನ್ನದಲ್ಲದ ತಪ್ಪಿಗಾಗಿ! ಹೋಗಲಿ, ಒಂದೆರಡು ವರ್ಷವೇ ಅಂದರೆ ಅದೂ ಅಲ್ಲ. ಸತತ ಒಂಬತ್ತು ವರ್ಷ, ಪ್ರತಿನಿತ್ಯ, ಸರಾಸರಿ ಪ್ರತಿ ಎಂಟು ನಿಮಿಷಕ್ಕೆ ಒಮ್ಮೆ ಒಂದು ವೈಮಾನಿಕ ದಾಳಿ! ಲಾವೋಸ್‌ನ ಯಾವುದಾದರೂ ಒಂದು ಭೂಭಾಗದ ಮೇಲೆ ವೈಮಾನಿಕ ದಾಳಿ ನಡೆಯುತ್ತಿತ್ತು. ದಾಖಲೆಗಳ ಪ್ರಕಾರ, ಒಟ್ಟೂ ಆರು ಲಕ್ಷ ಬಾರಿ ಲಾವೋಸ್ ಮೇಲೆ ವೈಮಾನಿಕ ದಾಳಿಯಾಗಿದ್ದು ಇಪ್ಪತ್ತು ಲಕ್ಷ ಟನ್‌ಗಿಂತಲೂ ಹೆಚ್ಚು ಬಾಂಬ್ ಸುರಿದಿದೆ. ಅದರಲ್ಲಿ ಕೆಲವು ಸಿಡಿದಿದ್ದರೂ ಸಿಡಿಯದೆ ಉಳಿದದ್ದೇ ಹೆಚ್ಚು. ಆಗ ಸಿಡಿಯದೆ ಉಳಿದಿದ್ದ ಬಾಂಬುಗಳು ಕಾಲಾನಂತರ, ಇಂದಿನವರೆಗೂ ಆಗಾಗ ಸಿಡಿಯುತ್ತಿವೆ.

ನಾನು ಲಾವೋಸ್‌ಗೆ ಹೋದಾಗ ನೋಡಿದಂತೆ, ಈ ದೇಶದ ಬಹುಭಾಗ ಪರ್ವತಗಳಿಂದ ಆವರಿಸಿಕೊಂಡಿದೆ. ನನಗೆ ಸಿಕ್ಕ ಮಾಹಿತಿಯ ಪ್ರಕಾರ, ಅಮೆರಿಕ ಸುರಿಸಿದ ಬಾಂಬ್‌ಗಳು ಹೆಚ್ಚಿನ ಸಂಖ್ಯೆಯಲ್ಲಿ ಪರ್ವತದ ಮೇಲೆ ಬಿದ್ದಿವೆ. ವಿಮಾನ ಮತ್ತು ಪರ್ವತದ ನಡುವೆ ಅಂತರ ಕಡಿಮೆ ಇದ್ದ ಕಾರಣ, ಬಹುತೇಕ ಬಾಂಬ್‌ಗಳು ಸಿಡಿಯದೆ, ಹಾಗೆಯೇ ಅಲ್ಲಲ್ಲಿ ಉಳಿದುಕೊಂಡಿವೆ. ಕೆಲವಷ್ಟು ಬಾಂಬ್‌ಗಳು ಕೆಳಗೆ ಉರುಳಿ ಯಾವುದೋ ಮರದ ಬುಡದಲ್ಲೋ, ಹೊಂಡದಲ್ಲೋ ಸಿಕ್ಕಿಹಾಕಿಕೊಂಡಿವೆ. ಕ್ರಮೇಣ ಅವುಗಳ ಮೇಲೆ ಮಣ್ಣು ಮುಚ್ಚಿಕೊಂಡಿದೆ. ಇಂಥ ಬಾಂಬ್‌ಗಳ ಸಂಖ್ಯೆಯೇ ಲಕ್ಷದಷ್ಟಿದೆ, ಈಗ ಅದನ್ನೆಲ್ಲ ಹುಡುಕುವ ಕಾರ್ಯ ಇನ್ನೂ ಜಾರಿಯಲ್ಲಿದೆ. ಅಮೆರಿಕ ಸುರಿಸಿದ ಒಂದೊಂದು ಕ್ಲಸ್ಟರ್‌ನಲ್ಲಿನಲ್ಲಿ 600ರಿಂದ 700 ಸಣ್ಣ ಸಣ್ಣ ಬಾಂಬುಗಳು ಇದ್ದ ದಾಖಲೆ ಇದೆ.

ವಿಪರ್ಯಾಸ ಎಂದರೆ, ಯುದ್ಧದ ನಂತರದ ಬಾಂಬ್ ಸಿಡಿದು ಮೃತರಾದವರಲ್ಲಿ ಹೆಚ್ಚಿನವರು ಮಕ್ಕಳು. ಹೆಚ್ಚಿನ ಸಂಖ್ಯೆಯಲ್ಲಿ ಅಂಗಾಂಗ ಕಳೆದುಕೊಂಡವರೂ ಮಕ್ಕಳೇ. ಅದರಲ್ಲಿ ಬಹುತೇಕ ಮಕ್ಕಳು ಆಟ ಆಡಲು ಹೋದವರು. ಇನ್ನು ದೊಡ್ಡವರಲ್ಲಿ, ಕೃಷಿ ಮಾಡಲು ತೆರಳಿದವರು. ನಾವು ಚಿಕ್ಕವರಿದ್ದಾಗ, ಸಣ್ಣ ಜಾಗದಲ್ಲಿ ಕ್ರಿಕೆಟ್ ಆಡುವುದು ಮಾಮೂಲಾಗಿತ್ತು. ಆಗೆಲ್ಲ ಚೆಂಡು ದೂರ ಹೋದರೆ, ಗಿಡಗಂಟಿಗಳ ಮಧ್ಯದಿಂದ ಅದನ್ನು ಅರಸಿ, ಹೆಕ್ಕಿಕೊಂಡು ಬರುತ್ತಿದ್ದೆವು. ಲಾವೋಸ್‌ನಲ್ಲಿ ಇದೇ ರೀತಿ ಮಟ್ಟಿಯಲ್ಲಿ ಚೆಂಡು ಹುಡುಕಲು ಹೋಗಿ ಪ್ರಾಣ ಕಳೆದುಕೊಂಡ ಮಕ್ಕಳಿದ್ದಾರೆ. ಶಾಲೆಗೆ ಹೋಗುವ ದಾರಿಯಲ್ಲಿ ವಿಚಿತ್ರವಾದ ಏನೋ ಒಂದು ಲೋಹದ ವಸ್ತು ಕಾಣುತ್ತಿದೆ ಎಂದು ಕುತೂಹಲಕ್ಕೆ ಕೈಗೆತ್ತಿಕೊಂಡಾಗ ಸಿಡಿದು ಸತ್ತ ಮಕ್ಕಳಿದ್ದಾರೆ, ಕೈ ಕಳೆದುಕೊಂಡವರೂ ಇದ್ದಾರೆ. ಎಷ್ಟೋ ಜನ ಕೃಷಿಕರು ಹೊಸ ಭೂಮಿಯಲ್ಲಿ ಕೃಷಿ ಮಾಡಲೆಂದು ಭೂಮಿ ಅಗೆಯುವಾಗ ಸಿಡಿದು ಪ್ರಾಣ ಕಳೆದುಕೊಂಡಿದ್ದಾರೆ. ಈಗಲೂ ಕೆಲವೊಮ್ಮೆ ಸೂರ್ಯನ ಶಾಖ ಹೆಚ್ಚಾದಾಗ ಕೆಲವು ಬಾಂಬ್‌ಗಳು ತಮ್ಮಷ್ಟಕ್ಕೆ ತಾವೇ ಸಿಡಿಯುತ್ತವೆ.

ಲಾವೋಸ್‌ನ ಬಹುತೇಕ ಶಾಲೆಗಳಲ್ಲಿ ಮಕ್ಕಳಿಗೆ ಮೊದಲ ಪಾಠ ಭಾಷೆಯೂ ಅಲ್ಲ, ಲಿಪಿಯೂ ಅಲ್ಲ, ಸಂಖ್ಯೆಯೂ ಅಲ್ಲ. ಬದಲಾಗಿ, ಅವರ ಸುತ್ತಮುತ್ತ ಯಾವುದಾದರೂ ವಸ್ತು ಕಂಡಾಗ ಏನು ಮಾಡಬೇಕು ಎಂದು ಹೇಳಿಕೊಡುವುದು. ಯಾವುದನ್ನು ಮುಟ್ಟಬೇಕು, ಮುಟ್ಟಬಾರದು ಎಂದು ತಿಳಿಸಿಕೊಡುವುದು. ಇನ್ನೂ ನೇರಾನೇರ ಹೇಳುವುದಾದರೆ, ಬಾಂಬ್ ಹೇಗಿರುತ್ತದೆ, ಬಾಂಬ್ ಕಂಡರೆ ಏನು ಮಾಡಬೇಕು? ಯಾರನ್ನು ಸಂಪರ್ಕಿಸಬೇಕು? ಯಾರಿಗೆ ಹೇಳಬೇಕು? ಇತ್ಯಾದಿ, ಇತ್ಯಾದಿ ವಿಷಯಗಳೇ ಮೊದಲ ಮತ್ತು ಪ್ರಮುಖ ಪಾಠ. ಜೀವ ಉಳಿದರೆ ತಾನೆ ಇತರ ಪಾಠಗಳು?

ಲಾವೋಸ್‌ನ ಆಂತರಿಕ ಯುದ್ಧದ ಸಂದರ್ಭದಲ್ಲಿ, ಅಮೆರಿಕ ಲಾವೋಸ್ ಮೇಲೆ ಬಾಂಬ್ ಸುರಿಸಿದ ಸಂದರ್ಭದಲ್ಲಿ ಆದ ಜೀವಹಾನಿ ಒಂದು ಕಡೆ ಇರಲಿ. ಅಮೆರಿಕದ ಕಾರ್ಯಾಚರಣೆ ಮುಗಿದು ಇಂದಿಗೆ ಐವತ್ತು ವರ್ಷ ಕಳೆದಿದೆ. ಈ ಅವಧಿಯಲ್ಲಿ, ಭೂಮಿಯಲ್ಲಿ ಅಲ್ಲಲ್ಲಿ ಹೂತುಬಿದ್ದ ಬಾಂಬ್ ಸಿಡಿದು ಇಪ್ಪತ್ತು ಸಾವಿರಕ್ಕೂ ಹೆಚ್ಚು ಜನ ತಮ್ಮ ಪ್ರಾಣ ಕಳೆದುಕೊಂಡಿದ್ದಾರೆ. ಇನ್ನು ಕೈ, ಕಾಲು, ಕಣ್ಣು ಕಳೆದುಕೊಂಡವರು ಅದೆಷ್ಟೋ ಜನ. ಲಾವೋಸ್ ದೇಶದ ಜನರು ಕಳೆದ ಐದು ದಶಕದಿಂದ ಕೇವಲ ಮೂವತ್ತು ಪ್ರತಿಶತದಷ್ಟು ಭೂಮಿಯನ್ನು ಮಾತ್ರ ಹುಡುಕಿ, ಹೂತುಹೋದ ಬಾಂಬ್ ಹುಡುಕಿ ನಿಷ್ಕ್ರಿಯಗೊಳಿಸುವಲ್ಲಿ ಸಫಲರಾಗಿದ್ದಾರೆ. ಉಳಿದ ಎಪ್ಪತ್ತು ಪ್ರತಿಶತದಷ್ಟು ಭೂಮಿಯನ್ನು ಹುಡುಕಲು ಇನ್ನೂ ನೂರು ವರ್ಷ ಬೇಕಂತೆ! ಇಂದು ರಷ್ಯಾ ಮತ್ತು ಉಕ್ರೇನ್ ನಡುವಿನ ಯುದ್ಧದ ಬಗ್ಗೆ ಬೊಗಳೆ ಬಿಡುವ ಶಕ್ತಿಶಾಲಿ ದೇಶಗಳೆಲ್ಲ ಒಮ್ಮೆ ಲಾವೋಸ್ ಕಡೆಗೂ ತಿರುಗಿ ನೋಡಬೇಕು. ತಾವು ಮಾಡಿದ ಪಾಪಕ್ಕೆ ಪ್ರಾಯಶ್ಚಿತ್ತ ಮಾಡಿಕೊಳ್ಳಬೇಕು.

ಉಳಿದವರು ಸಹಾಯ ಮಾಡಲಿ, ಬಿಡಲಿ, ಲಾವೋಸ್ ದೇಶದ ಜನರಂತೂ ಕಷ್ಟಪಡುತ್ತಿದ್ದಾರೆ. ತಮ್ಮದೇ ದೇಶದ ಭೂಮಿಯಲ್ಲಿ ತಮ್ಮ ಉಳಿವಿಗಾಗಿ ಅಷ್ಟೇ ಅಲ್ಲ, ಮುಂದಿನ ಪೀಳಿಗೆಗಾಗಿ ಇಂದಿಗೂ ಹೋರಾಟ ನಡೆಸಿದ್ದಾರೆ. ಕುವಾನ್ ಸಿ ಜಲಪಾತದಲ್ಲಿ ಪ್ರವಾಹಕ್ಕೆ ಮೈ ಒಡ್ಡಿ ನಿಂತ ಮರದಂತೆ!

ಯುದ್ಧ ಅಪಾಯಕಾರಿ, ವಿನಾಶಕಾರಿ. ಯುದ್ಧ ಎಂದರೆ ಕೇವಲ ಎರಡು ದೇಶಗಳ ನಡುವೆ ಮಾತ್ರ ನಡೆಯುವಂಥದ್ದು ಎಂದು ತಿಳಿದರೆ ಮೂರ್ಖತನವಾದೀತು. ಯುದ್ಧ ಎಂದರೆ ಅಕ್ಕಪಕ್ಕದ ದೇಶಗಳ ಮೇಲೆಯೂ. ಕೆಲವೊಮ್ಮೆ ಪ್ರಪಂಚದಾದ್ಯಂತ ಪರಿಣಾಮ ಬೀರುವಂಥ ಸಂಗತಿ. ಯುದ್ಧ ಕೇವಲ ಸೈನಿಕರನ್ನು ಆ ದೇಶದ ಜನರನ್ನು ಮಾತ್ರ ಗಾಯಗೊಳಿಸುವುದಿಲ್ಲ, ಆ ದೇಶದ ಭೂಮಿಯನ್ನೂ ಘಾಸಿಗೊಳಿಸುತ್ತದೆ.

ಇಲ್ಲಿ ಇನ್ನೊಂದು ವಿಷಯ ಹೇಳಬೇಕು. ಲಾವೋಸ್‌ನಲ್ಲಿರುವ 'ಖಮೌನೆ' ಪ್ರದೇಶ ಕೂಡ ಇಂಥ ಒಂದು ಭೀಕರ ಬಾಂಬ್ ದಾಳಿಗೆ ಒಳಗಾಗಿತ್ತು. ಯುದ್ಧ ಮುಗಿದ ನಂತರ ಈ ಪ್ರದೇಶದಲ್ಲಿ ಬಿದ್ದ ಬಾಂಬ್‌ನ ಪಳೆಯುಳಿಕೆಗಳನ್ನು ಸ್ವಚ್ಛ ಮಾಡುವುದಾದರೂ ಹೇಗೆ? ಅದನ್ನು ಕೊಂಡು ಹೋಗಿ ಒಂದು ಕಡೆ ರಾಶಿ ಹಾಕಬೇಕು ಎಂದರೂ ಸಾಕಷ್ಟು ಖರ್ಚಾಗುತ್ತದೆ. ಹಾಗೆಯೇ ಎಕರೆಗಟ್ಟಲೆ ಭೂಮಿಯೂ ಗುಜರಿಯ ಕೊಪ್ಪೆಯಾಗುತ್ತದೆ. ಅದಕ್ಕೆ ಉಪಾಯವನ್ನು ಕಂಡುಕೊಂಡ ಖಮೌನೆ ಪ್ರದೇಶದ ಜನ ಬಾಂಬ್‌ನ ಪಳೆಯುಳಿಕೆಗಳನ್ನು ತಮ್ಮ ಮನೆಗಳಿಗೆ ಅಥವಾ ಸಾರ್ವಜನಿಕರಿಗೆ ಉಪಯೋಗವಾಗುವ ವಸ್ತುಗಳನ್ನು ತಯಾರಿಸಲು ಆರಂಭಿಸಿದರು. ಆ ಪ್ರದೇಶದಲ್ಲಿ ಇಂದಿಗೂ ಬಾಂಬ್‌ನಿಂದ ತಯಾರಿಸಿದ ಸಾಕಷ್ಟು ವಸ್ತುಗಳನ್ನು ಕಾಣಬಹುದು. ಅದು ಗೃಹೋಪಯೋಗಿ ಆಗಿರಬಹುದು, ಹೂವಿನ ಕುಂಡ ಇರಬಹುದು, ನೀರನ್ನು ಶೇಖರಿಸುವ ತೊಟ್ಟಿಯಾಗಿರಬಹುದು ಅಥವಾ ಅಲಂಕಾರಕ್ಕಾಗಿ ಬಳಸುವ ವಸ್ತುವೇ ಆಗಿರಬಹುದು. ಅಷ್ಟೇ ಅಲ್ಲದೆ, ಸಾರ್ವಜನಿಕರ ಉಪಯೋಗಕ್ಕೆ ಬರುವಂಥ ಸಣ್ಣ ದೋಣಿ, ಮಾರ್ಗದ ಬದಿಯಲ್ಲಿನ ಆಸನ ಇತ್ಯಾದಿ. ನಮ್ಮಲ್ಲಿ ತಮಾಷೆಗಾಗಿ ಒಂದು ಮಾತು ಹೇಳುತ್ತಾರೆ- ''ನಿಮಗರಿವಿಲ್ಲದಂತೆಯೇ ಹಿಂದಿನಿಂದ ಯಾರಾದರೂ ನಿಮ್ಮನ್ನು ಕೆರೆಗೆ ತಳ್ಳಿದರೆ ಭಯಪಡಬೇಡಿ, ಒಂದು ನಾಲ್ಕು ಮೀನು ಹಿಡಿದುಕೊಂಡು ಬನ್ನಿ'' ಎಂದು. ಖಮೌನೆ ಪ್ರದೇಶದ ಜನರು ಇದನ್ನು ಪ್ರತ್ಯಕ್ಷವಾಗಿ ಅನುಕರಿಸಿದ್ದಾರೆ ಎಂದೆನಿಸುತ್ತದೆ. ತಮ್ಮ ಊರಿನ ಮೇಲೆ ಬಿದ್ದ ಬಾಂಬ್‌ಗಳನ್ನೇ ಬಳಸಿಬಳಸಿ ಮನೆ ಕಟ್ಟಿಕೊಂಡಿದ್ದಾರೆ, ಊರು ಕಟ್ಟಿಕೊಂಡಿದ್ದಾರೆ.

ಹಾಗಾಗಿ, ''ಯಾರಾದರೂ ನಮ್ಮ ಮೇಲೆ ಬಾಂಬ್ ಎಸೆದರೆ ಏನು ಮಾಡಬೇಕು...?'' ಎಂಬ ಪ್ರಶ್ನೆಗೆ ಉತ್ತರ, ''ಅದನ್ನೆಲ್ಲ ಆರಿಸಿ, ಖಮೌನೆಯಂಥ ಊರು ಕಟ್ಟಿಕೊಳ್ಳಬೇಕು. ಅಲ್ಲ, ಲಾವೋಸ್‌ನಂತೆ ದೇಶ ಕಟ್ಟಿಕೊಳ್ಳಬೇಕು...!''

ಅಷ್ಟಕ್ಕೂ ಲಾವೋಸ್ ಮೇಲೆ ಒಂಬತ್ತು ವರ್ಷ ಅಮೆರಿಕ ನಿರಂತರ ಬಾಂಬ್ ದಾಳಿ ಮಾಡಿದ್ದೇಕೆ...!?

ಸಾಲ ಪಡೆಯುವುದನ್ನು ನಿಯಂತ್ರಿಸಲು ಕಾನೂನು ಇರಬೇಕೇ?

ರೂಪರೇಷೆ
ಕೆ.ವಿ.ಚಂದ್ರಮೌಳಿ
vveditoped@gmail.com

ಭಾರತದ ಲೆಕ್ಕಪರಿಶೋಧಕರು ಸಿದ್ಧಪಡಿಸಿ ಕರ್ನಾಟಕ ವಿಧಾನಸಭೆಯಲ್ಲಿ ಮಂಡಿಸಿದ ಕರ್ನಾಟಕದ ಹಣಕಾಸು ಲೆಕ್ಕಪರಿಶೋಧನಾ ವರದಿಯಲ್ಲಿ, ಐದು ಗ್ಯಾರಂಟಿ ಯೋಜನೆಗಳು 2023-24ರ ಆದಾಯ ವೆಚ್ಚದ ಶೇ.15ರಷ್ಟಿವೆ ಮತ್ತು ಅವು ರಾಜ್ಯದ ಆರ್ಥಿಕತೆಯ ಮೇಲೆ ನಕಾರಾತ್ಮಕ ಪರಿಣಾಮ ಬೀರಬಹುದು ಎಂದು ಎಚ್ಚರಿಸಲಾಗಿದೆ. ವರದಿಯು ಕರ್ನಾಟಕದ ಆರ್ಥಿಕ ಆರೋಗ್ಯದ ಬಗ್ಗೆ ಕಳವಳ ವ್ಯಕ್ತಪಡಿಸಿತು, ರಾಜ್ಯ ಸರಕಾರದ ಐದು ಗ್ಯಾರಂಟಿ ಯೋಜನೆಗಳಿಂದ ಉಂಟಾದ ಹೊರೆಯನ್ನು ಒತ್ತಿಹೇಳಿತು. 2023-24ರಲ್ಲಿ ಕರ್ನಾಟಕದ ರಶೀದಿಗಳು ಕೇವಲ ಶೇ.1.86ರಷ್ಟು ಹೆಚ್ಚಾಗಿವೆ, ಆದರೆ ವೆಚ್ಚಗಳು ಶೇ.12.54ರಷ್ಟು ಹೆಚ್ಚಾಗಿವೆ ಎಂದು ವರದಿ ಸೂಚಿಸುತ್ತದೆ, ಮುಖ್ಯವಾಗಿ ಗ್ಯಾರಂಟಿ ಯೋಜನೆಗಳಿಂದಾಗಿ. ಈ ವ್ಯತ್ಯಾಸವು 9,271 ಕೋಟಿ ರುಪಾಯಿಗಳ ಆದಾಯ ಕೊರತೆಗೆ ಕಾರಣವಾಯಿತು, ಇದು 2022-23ರಲ್ಲಿ ಕಂಡುಬಂದ ಹೆಚ್ಚುವರಿಯನ್ನು ಹಿಮ್ಮೆಟ್ಟಿಸಿತು.

ಈ ಪರಿಸ್ಥಿತಿಯು ಐದು ಗ್ಯಾರಂಟಿಗಳ ಅನುಷ್ಠಾನದಿಂದಾಗಿ ಸರಕಾರದ ಮೇಲೆ ಆರ್ಥಿಕ ಒತ್ತಡವನ್ನು ಹೆಚ್ಚಿಸಿದೆ, ಇದು ತನ್ನ ಬದ್ಧತೆಗಳನ್ನು ಪೂರೈಸಲು ಸಾಲಗಳ ಮೇಲೆ ಹೆಚ್ಚು ಅವಲಂಬಿತವಾಗುವಂತೆ ಮಾಡಿದೆ. ಕರ್ನಾಟಕ ಸರಕಾರವು 2023-24ರಲ್ಲಿ ಸುಮಾರು 63,000 ಕೋಟಿ ರು. ಸಾಲವನ್ನು ಪಡೆದುಕೊಂಡಿದೆ ಮತ್ತು ಅದರಲ್ಲಿ ಸುಮಾರು ಶೇ.15ರಷ್ಟು ಹಣವನ್ನು ಖಾತರಿಗಳಿಗಾಗಿ ಹಂಚಿಕೆ ಮಾಡಲಾಗಿದೆ ಎಂದು ವರದಿ ಹೇಳುತ್ತದೆ. ಸಿಎಜಿ ಪ್ರಕಾರ, ಕರ್ನಾಟಕದ ಹಣಕಾಸಿನ ಕೊರತೆಯು 2022-23ರಲ್ಲಿ 46,623 ಕೋಟಿಗಳಿಂದ 2023-24ರಲ್ಲಿ 65,522 ಕೋಟಿ ರು.ಗಳಿಗೆ ಏರಿತು. ಕೊರತೆಯನ್ನು ನೀಗಿಸಲು, ರಾಜ್ಯ ಸರಕಾರವು ತನ್ನ ಸಾಲಗಳನ್ನು ಹೆಚ್ಚಿಸಿತು. ಇದರ ಪರಿಣಾಮವಾಗಿ 2023-24ರಲ್ಲಿ ರಾಜ್ಯದ ನಿವ್ವಳ ಮಾರುಕಟ್ಟೆ ಸಾಲಗಳು 63,000 ಕೋಟಿ ರು.ಗಳನ್ನು ತಲುಪಿದವು. ಇದು ಹಿಂದಿನ ವರ್ಷಕ್ಕೆ ಹೋಲಿಸಿದರೆ 37,000 ಕೋಟಿ ರು.ನಷ್ಟು ಹೆಚ್ಚಾಗಿದೆ. 37,000 ಕೋಟಿ ರು. ಸಾಲದ ಕುರಿತು ಸಿಎಜಿಯ ಸಂಶೋಧನೆಗಳು ದಿನನಿತ್ಯದ ಖರ್ಚು ಮತ್ತು ಕಲ್ಯಾಣಕ್ಕೆ ಸಾಲದ ಮೂಲಕ ಹಣವನ್ನು ನೀಡಲಾಗುತ್ತಿದೆ ಎಂದು ಸೂಚಿಸಿವೆ. ಹಿಂದಿನ ವರ್ಷಕ್ಕೆ ಹೋಲಿಸಿದರೆ ಬಂಡವಾಳ ವೆಚ್ಚದಲ್ಲಿ 5,229 ಕೋಟಿ ರು. ಇಳಿಕೆಯಾಗಿದ್ದು, ಇದರ ಪರಿಣಾಮವಾಗಿ ಅಪೂರ್ಣ ಯೋಜನೆಗಳಲ್ಲಿ ಶೇ.68ರಷ್ಟು ಹೆಚ್ಚಳವಾಗಿದೆ. ಇದು ಕರ್ನಾಟಕದ ಭವಿಷ್ಯದ ಬೆಳವಣಿಗೆಯ ಸಾಮರ್ಥ್ಯದ ಮೇಲೆ ಪರಿಣಾಮ ಬೀರುವ ಪ್ರವೃತ್ತಿಯಾಗಿದೆ. ಭವಿಷ್ಯದ ಬೆಳವಣಿಗೆಯನ್ನು ಬೆಂಬಲಿಸುವ ಬದಲು ನಿಯಮಿತ ವೆಚ್ಚಗಳನ್ನು ಸರಿದೂಗಿಸಲು ಹೆಚ್ಚಿದ ಸಾಲವನ್ನು ಬಳಸಲಾಗುತ್ತಿರುವ ಪರಿಸ್ಥಿತಿಯನ್ನು ರಾಜ್ಯ ಪ್ರವೇಶಿಸಿತು.

ಗ್ಯಾರಂಟಿಗಳು ಮನೆಗಳಿಗೆ ಬೆಂಬಲವನ್ನು ಒದಗಿಸಿದವು, ಆದರೆ ಹಣಕಾಸಿನ ನಮ್ಯತೆಯನ್ನು ಸೀಮಿತಗೊಳಿಸಿದವು. ಅಸಮಾನತೆ ಮತ್ತು ಬಡತನವನ್ನು ತಗ್ಗಿಸುವಲ್ಲಿ ಕಲ್ಯಾಣ ಕಾರ್ಯಕ್ರಮಗಳು ನಿರ್ಣಾಯಕ ಪಾತ್ರ ವಹಿಸುತ್ತವೆಯಾದರೂ, ಉತ್ತಮ ಹಣಕಾಸು ನಿರ್ವಹಣೆಯನ್ನು ಕಾಯ್ದುಕೊಳ್ಳುವುದು ಅತ್ಯಗತ್ಯ. ಕರ್ನಾಟಕವು ಕಲ್ಯಾಣ ಮತ್ತು ಬೆಳವಣಿಗೆಯ ನಡುವೆ ಸಮತೋಲನವನ್ನು ಸಾಧಿಸದಿದ್ದರೆ, ಸಾಲದ ಹೊರೆ ಹೆಚ್ಚುತ್ತಲೇ ಇರುತ್ತದೆ. ರಾಜ್ಯವು ಚಿಂತನಶೀಲ ಆಯ್ಕೆಗಳನ್ನು ಮಾಡಬೇಕು; ಕಲ್ಯಾಣವು ಮುಖ್ಯ, ಆದರೆ ಬೆಳವಣಿಗೆಯಲ್ಲಿ ರಾಜಿ ಮಾಡಿಕೊಳ್ಳಬಾರದು.

ಖರ್ಚುಗಳು ನಿರಂತರವಾಗಿ ಆದಾಯವನ್ನು ಮೀರಿದಾಗ, ಸರಕಾರಗಳು ಸಾಲ ಪಡೆಯುವ ಚಕ್ರವನ್ನು ಪ್ರವೇಶಿಸಬಹುದು. ಇದು ನಂತರದ ವರ್ಷಗಳಲ್ಲಿ ಗಮನಾರ್ಹ ಮರುಪಾವತಿ ಬಾಧ್ಯತೆಗಳಿಗೆ ಕಾರಣವಾಗಬಹುದು. ಈ ಸನ್ನಿವೇಶವು ಮೂಲಸೌಕರ್ಯ ಯೋಜನೆಗಳಿಗೆ ಹಣಕಾಸು ಒದಗಿಸುವ ಸರಕಾರದ ಸಾಮರ್ಥ್ಯದ ಮೇಲೆ ಪರಿಣಾಮ ಬೀರಬಹುದು ಮತ್ತು ಉದಯೋನ್ಮುಖ ಸವಾಲುಗಳು ಮತ್ತು ಬಿಕ್ಕಟ್ಟುಗಳನ್ನು ಪರಿಹರಿಸುವ ಸಾಮರ್ಥ್ಯವನ್ನು ನಿರ್ಬಂಧಿಸಬಹುದು. ಹೆಚ್ಚುವರಿಯಾಗಿ, ವಿಶೇಷವಾಗಿ ಸಾಲ ಪಡೆಯುವ ಮೂಲಕ ಹಣಕಾಸು ಒದಗಿಸಿದಾಗ, ಹೆಚ್ಚಿದ ಕಲ್ಯಾಣ ವೆಚ್ಚವು ಪ್ರಮುಖ ಮೂಲಸೌಕರ್ಯ ಮತ್ತು ಅಭಿವೃದ್ಧಿ ಯೋಜನೆಗಳಿಗೆ ಲಭ್ಯವಿರುವ ಹಣವನ್ನು ಕಡಿಮೆ ಮಾಡಬಹುದು. ಇದು ದೀರ್ಘಕಾಲೀನ ಆರ್ಥಿಕ ಬೆಳವಣಿಗೆಗೆ ಅಡ್ಡಿಯಾಗಬಹುದು.

ಕರ್ನಾಟಕ ಸರಕಾರದ ಹೆಚ್ಚಿದ ಸಾಲಗಳ ಕುರಿತಾದ ಸಿಎಜಿ ವರದಿಯು, ಈ ವಿಧಾನವು ಮೂಲಸೌಕರ್ಯದ ಮೇಲೆ ನಕಾರಾತ್ಮಕ ಪರಿಣಾಮ ಬೀರಿದೆ ಎಂದು ಸೂಚಿಸಿದೆ. ಅಪೂರ್ಣ ಯೋಜನೆಗಳು ಬಾಕಿ ಉಳಿದಿದ್ದವು ಮತ್ತು ಕೊರತೆಗಳು ಗಮನಾರ್ಹವಾಗಿ ವಿಸ್ತರಿಸಿದವು. ರಾಜ್ಯದ ಉದ್ಯಮಗಳ ಕಾರ್ಯಕ್ಷಮತೆ ದುರ್ಬಲವಾಗಿತ್ತು. ಅಲ್ಪಾವಧಿಯ ಪರಿಹಾರ ಕ್ರಮಗಳನ್ನು ಅವಲಂಬಿಸುವ ಬದಲು ಸುಸ್ಥಿರ ದೀರ್ಘಕಾಲೀನ ಬೆಳವಣಿಗೆಗಾಗಿ ಮೂಲಸೌಕರ್ಯ, ಶಿಕ್ಷಣ ಮತ್ತು ಆರೋಗ್ಯದಲ್ಲಿ ಹೂಡಿಕೆಗಳಿಗೆ ಆದ್ಯತೆ ನೀಡುವುದು ಅತ್ಯಗತ್ಯ.

ಹಿಂದಿನ ರಾಜ್ಯ ಸರಕಾರವು ಅಲ್ಪಾವಧಿಯ ರಾಜಕೀಯ ಲಾಭಗಳಿಗಾಗಿ ಅಭಿವೃದ್ಧಿಯೇತರ ಉದ್ದೇಶಗಳಿಗಾಗಿ ಅತಿಯಾಗಿ ಸಾಲ ಮಾಡಿದರೆ, ಭವಿಷ್ಯದ ಅಗತ್ಯಗಳಿಗಿಂತ ತಕ್ಷಣದ ಲಾಭಗಳಿಗೆ ಆದ್ಯತೆ ನೀಡಿದರೆ, ನಂತರದ ಸರಕಾರವು ಗಣನೀಯ ಸವಾಲನ್ನು ಎದುರಿಸುತ್ತದೆ. ಇದು ಹೆಚ್ಚಿನ ಸಾಲದ ಹೊರೆಯನ್ನು ಆನುವಂಶಿಕವಾಗಿ ಪಡೆಯುತ್ತದೆ. ಇದು ತನ್ನದೇ ಆದ ಅಭಿವೃದ್ಧಿ ಉಪಕ್ರಮಗಳಿಗೆ ಹಣಕಾಸಿನ ಸ್ಥಳವನ್ನು ಕಡಿಮೆ ಮಾಡುತ್ತದೆ. ಪರಿಣಾಮವಾಗಿ, ರಾಜ್ಯದ ಬಜೆಟ್‌ನ ಗಮನಾರ್ಹ ಭಾಗವನ್ನು ಸಾಲ ಮತ್ತು ಅದರ ಬಡ್ಡಿಯನ್ನು ಮರುಪಾವತಿಸುವ ಕಡೆಗೆ ನಿರ್ದೇಶಿಸಬೇಕು. ಇದರ ಪರಿಣಾಮವಾಗಿ ಆರೋಗ್ಯ ರಕ್ಷಣೆ, ಶಿಕ್ಷಣ ಮತ್ತು ಮೂಲಸೌಕರ್ಯದಂಥ ಅಗತ್ಯ ವಲಯಗಳಿಗೆ ಕಡಿಮೆ ಹಣಕಾಸು ದೊರೆಯುತ್ತದೆ. ಸೀಮಿತ ಆರ್ಥಿಕ ಸಂಪನ್ಮೂಲಗಳೊಂದಿಗೆ, ಹೊಸ ಸರಕಾರವು ಹೊಸ ಅಭಿವೃದ್ಧಿ ಯೋಜನೆಗಳಲ್ಲಿ ಹೂಡಿಕೆ ಮಾಡುವ ಮತ್ತು ಉದ್ಯೋಗಾವಕಾಶಗಳನ್ನು ಸೃಷ್ಟಿಸುವ ಸಾಮರ್ಥ್ಯವನ್ನು ಗಮನಾರ್ಹವಾಗಿ ನಿರ್ಬಂಧಿಸಲಾಗುತ್ತದೆ. ಹಿಂದಿನ ಸರಕಾರವು ಅಭಿವೃದ್ಧಿಯೇತರ ಉದ್ದೇಶಗಳಿಗಾಗಿ ಮಾಡಿದ ಸಾಲವು ಅಂತಿಮವಾಗಿ ಭವಿಷ್ಯದ ಪೀಳಿಗೆಯಿಂದ ಮರುಪಾವತಿಯ ಅಗತ್ಯವಿರುತ್ತದೆ. ಇದನ್ನು ಹೆಚ್ಚಿದ ತೆರಿಗೆಗಳು ಅಥವಾ ಕಡಿಮೆ ಸಾರ್ವಜನಿಕ ಸೇವೆಗಳ ಮೂಲಕ ಸಾಧಿಸಬಹುದು. ಈ ಪರಿಸ್ಥಿತಿಯು ಹಣಕಾಸಿನ ಜವಾಬ್ದಾರಿಯುತ ರಾಜ್ಯಗಳಿಗೆ ಅನಾನುಕೂಲವನ್ನುಂಟುಮಾಡಬಹುದು. ಏಕೆಂದರೆ ಹೆಚ್ಚಿನ ಒಟ್ಟಾರೆ ಸಾಲದ ಮಟ್ಟವು ವ್ಯಾಪಕ ಹಣಕಾಸಿನ ಭೂದೃಶ್ಯದ ಮೇಲೆ ಪರಿಣಾಮ ಬೀರುತ್ತದೆ.

ಅಭಿವೃದ್ಧಿಗೆ ಲಭ್ಯವಿರುವ ಹಣವನ್ನು ಸೀಮಿತಗೊಳಿಸುವ ಮೂಲಕ, ಸಾಲದ ಪರಂಪರೆಯು ರಾಜ್ಯದ ಆರ್ಥಿಕ ಬೆಳವಣಿಗೆಗೆ ಮತ್ತು ಅದರ ನಿವಾಸಿಗಳ ಜೀವನಮಟ್ಟದ ಸುಧಾರಣೆಗೆ ಸಾಮರ್ಥ್ಯವನ್ನು ನಿರ್ಬಂಧಿಸಬಹುದು.

ಸಂವಿಧಾನದ 293ನೇ ವಿಧಿಯಲ್ಲಿ ವಿವರಿಸಿರುವಂತೆ, ಭಾರತವು ರಾಜ್ಯ ಸರಕಾರದ ಸಾಲದ ಮೇಲೆ ಶಾಸಕಾಂಗ ಅಧಿಕಾರವನ್ನು ಚಲಾಯಿಸುತ್ತದೆ. ಇದು ಹಿಂದಿನ ಸರಕಾರಗಳಿಂದ ಬಾಕಿ ಉಳಿದಿರುವ ಸಾಲಗಳಿದ್ದರೆ ಭಾರತ ಸರಕಾರವು ಸಾಲಗಳಿಗೆ ತನ್ನ ಒಪ್ಪಿಗೆಯನ್ನು ನೀಡಬೇಕು ಎಂದು ಆದೇಶಿಸುತ್ತದೆ. ರಾಜ್ಯ ಸಾಲವನ್ನು ನಿಯಂತ್ರಿಸುವ ಕೇಂದ್ರ ಸರಕಾರದ ಅಧಿಕಾರವು ಒಂದು ಪ್ರಮುಖ ಕಾರ್ಯವಿಧಾನವಾಗಿ ಕಾರ್ಯನಿರ್ವಹಿಸುತ್ತದೆ; ಆದಾಗ್ಯೂ, ಅಭಿವೃದ್ಧಿಯೇತರ ಚಟುವಟಿಕೆಗಳಿಗೆ ಸಾಲ ಪಡೆಯುವುದನ್ನು ಮೇಲ್ವಿಚಾರಣೆ ಮಾಡಲು ಮೀಸಲಾಗಿರುವ ಯಾವುದೇ ನಿರ್ದಿಷ್ಟ ಕಾನೂನುಗಳಿಲ್ಲ. ಸಾಲಗಳ ಮೇಲೆ ಮಿತಿಗಳು ಅಥವಾ ಷರತ್ತುಗಳನ್ನು ಸ್ಥಾಪಿಸುವ ಮೂಲಕ, ಕೇಂದ್ರ ಸರಕಾರವು ಅಭಿವೃದ್ಧಿ-ಕೇಂದ್ರಿತ ಪ್ರಯತ್ನಗಳ ಕಡೆಗೆ ರಾಜ್ಯದ ಹಣಕಾಸು ಕ್ರಮಗಳನ್ನು ಮಾರ್ಗದರ್ಶನ ಮಾಡಬಹುದು. ಇದರಿಂದಾಗಿ ಅನಿವಾರ್ಯವಲ್ಲದ ಅಥವಾ ಅಭಿವೃದ್ಧಿಯೇತರ ಉದ್ದೇಶಗಳಿಗಾಗಿ ಅತಿಯಾದ ಸಾಲವನ್ನು ಕಡಿಮೆ ಮಾಡಬಹುದು.

ಕೇಂದ್ರ ಸರಕಾರ ಸಾಲ ಪಡೆಯುವ ನಿರ್ಬಂಧಗಳನ್ನು ಜಾರಿಗೊಳಿಸುವುದನ್ನು ಕೇರಳ ಸುಪ್ರೀಂ ಕೋರ್ಟ್‌ನಲ್ಲಿ ಪ್ರಶ್ನಿಸಿದ್ದು, ಇದು ಹಣಕಾಸಿನ ಒಕ್ಕೂಟ ತತ್ವಕ್ಕೆ ವಿರುದ್ಧವಾಗಿದೆ ಎಂದು ಪ್ರತಿಪಾದಿಸಿದೆ. ಈ ಪ್ರಕರಣವನ್ನು 293ನೇ ವಿಧಿಯ ನಿರ್ಣಾಯಕ ವ್ಯಾಖ್ಯಾನಕ್ಕಾಗಿ ಸಂವಿಧಾನ ಪೀಠಕ್ಕೆ ಶಿಫಾರಸು ಮಾಡಲಾಗಿದೆ.

ಉಚಿತ ಕೊಡುಗೆಗಳಿಗಾಗಿ ಸಾಲ ಪಡೆಯುವುದನ್ನು ನಿಷೇಧಿಸುವ ಯಾವುದೇ ನಿರ್ದಿಷ್ಟ ಕಾನೂನು ಇಲ್ಲ. ಆದರೆ ಕಾನೂನು ಚರ್ಚೆಯು ಈ ಯೋಜನೆಗಳು ಸಾರ್ವಜನಿಕ ಉದ್ದೇಶವನ್ನು ಪೂರೈಸುತ್ತವೆಯೇ ಎಂಬುದರ ಮೇಲೆ ಕೇಂದ್ರೀಕರಿಸುತ್ತದೆ. ಚುನಾವಣೆಗಳ ಸಮಯದಲ್ಲಿ ಅಭಾಗಲಬ್ಧ ಕೊಡುಗೆಗಳನ್ನು ನೀಡುವ ಅಭ್ಯಾಸದ ಬಗ್ಗೆ ಸುಪ್ರೀಂ ಕೋರ್ಟ್ ಕಳವಳ ವ್ಯಕ್ತಪಡಿಸಿದೆ. ಇದು ಸಾರ್ವಜನಿಕ ನಿಧಿಗಳು, ಆರ್ಥಿಕ ವಿರೂಪತೆ ಮತ್ತು ನ್ಯಾಯಯುತ ಚುನಾವಣಾ ಸ್ಪರ್ಧೆಯ ಅಡ್ಡಿ ಮೇಲೆ ಸಂಭವನೀಯ ಪರಿಣಾಮಗಳನ್ನು ಎತ್ತಿ ತೋರಿಸುತ್ತದೆ. ಉಚಿತ ಕೊಡುಗೆಗಳು ಮತ್ತು ಕಾನೂನುಬದ್ಧ ಕಲ್ಯಾಣ ಕಾರ್ಯಕ್ರಮಗಳ ನಡುವೆ ಕಾನೂನು ವ್ಯತ್ಯಾಸದ ಕೊರತೆಯು ಗಮನಾರ್ಹ ಕಳವಳವಾಗಿದೆ. ಈ ವಿಷಯವನ್ನು ಪರಿಹರಿಸುವುದು ಶಾಸಕಾಂಗದ ಜವಾಬ್ದಾರಿ ಎಂದು ಸುಪ್ರೀಂ ಕೋರ್ಟ್ ಸೂಚಿಸಿದೆ.

ಸಾಲಗಳು ಪ್ರಸ್ತುತ ವೇಗದಲ್ಲಿ ಹೆಚ್ಚುತ್ತಲೇ ಇದ್ದರೆ, ಭವಿಷ್ಯದಲ್ಲಿ ರಾಜ್ಯವು ತನ್ನ ಹಣಕಾಸಿನ ಬಾಧ್ಯತೆಗಳನ್ನು ಪೂರೈಸುವಲ್ಲಿ ಗಮನಾರ್ಹ ತೊಂದರೆಗಳನ್ನು ಎದುರಿಸಬಹುದು ಮತ್ತು ನಿರ್ವಹಿಸಲಾಗದ ಸಾಲ ಮತ್ತು ಆರ್ಥಿಕ ದಿವಾಳಿತನದಲ್ಲಿ ಸಿಲುಕಿಕೊಳ್ಳಬಹುದು. ಇದರ ಪರಿಣಾಮವಾಗಿ ಅಭಿವೃದ್ಧಿಯಲ್ಲಿ ಖಚಿತವಾದ ನಿಶ್ಚಲತೆ ಉಂಟಾಗುತ್ತದೆ. ಸಾಮಾಜಿಕ ಕಲ್ಯಾಣ ಮತ್ತು ಆರ್ಥಿಕ ಸ್ಥಿರತೆ ಎರಡನ್ನೂ ಉಳಿಸಿಕೊಳ್ಳಲು ರಾಜ್ಯಕ್ಕೆ ಸಮತೋಲಿತ ವಿಧಾನವು ನಿರ್ಣಾಯಕವಾಗಿರುತ್ತದೆ. ಸರಕಾರದಲ್ಲಿ ಹಣಕಾಸಿನ ಶಿಸ್ತು ಮತ್ತು ಹಣಕಾಸಿನ ಜವಾಬ್ದಾರಿಯನ್ನು ಖಚಿತಪಡಿಸಿಕೊಳ್ಳಲು ಭಾರತದ ಸಂಸತ್ತು ಅಂಗೀಕರಿಸಿದ ಕಾನೂನಾದ ಹಣಕಾಸಿನ ಜವಾಬ್ದಾರಿ ಮತ್ತು ಬಜೆಟ್ ನಿರ್ವಹಣೆ (FRBM) ಕಾಯ್ದೆಯು ಅದರ ನಿಯಂತ್ರಕ ಗುರಿಗಳಲ್ಲಿ ಅಭಿವೃದ್ಧಿ ಮತ್ತು ಅಭಿವೃದ್ಧಿಯೇತರ ವೆಚ್ಚಗಳ ನಡುವೆ ವ್ಯತ್ಯಾಸವನ್ನು ತೋರಿಸುವುದಿಲ್ಲ; ಇದು ಹಣಕಾಸಿನ ಶಿಸ್ತು ಮತ್ತು ದೀರ್ಘಕಾಲೀನ ಹಣಕಾಸಿನ ಆರೋಗ್ಯವನ್ನು ಕಾಪಾಡಿಕೊಳ್ಳಲು ಒಟ್ಟಾರೆ ಸಾಲವನ್ನು ನಿಯಂತ್ರಿಸುವ ಗುರಿಯನ್ನು ಹೊಂದಿದೆ. ಆದ್ದರಿಂದ, ಹಣಕಾಸಿನ ಜವಾಬ್ದಾರಿಯನ್ನು ಖಚಿತಪಡಿಸಿಕೊಳ್ಳಲು, ಹೊಣೆಗಾರಿಕೆಯನ್ನು ಸುಧಾರಿಸಲು ಮತ್ತು ರಾಜ್ಯ ಸರಕಾರಗಳಿಂದ ಸಾರ್ವಜನಿಕ ನಿಧಿಗಳ ಸಮರ್ಥ ಮತ್ತು ಪರಿಣಾಮಕಾರಿ ಬಳಕೆಯನ್ನು ಉತ್ತೇಜಿಸಲು ಅಭಿವೃದ್ಧಿಯೇತರ ಚಟುವಟಿಕೆಗಳಿಗೆ ಸಾಲ ಪಡೆಯುವುದನ್ನು ನಿಯಂತ್ರಿಸುವ ಗುರಿಯನ್ನು ಹೊಂದಿರುವ ನಿರ್ದಿಷ್ಟ ಕಾನೂನು ಇರಬೇಕು.

(ಲೇಖಕರು ಬಾಯ್ಲರ್‌ಗಳ ನಿವೃತ್ತ ಉಪನಿರ್ದೇಶಕರು)

ಬ್ಯಾಂಕಿಂಗ್‌ನಲ್ಲಿ ನಾವೀನ್ಯ

ದುಡ್ಡು-ಕಾಸು
ರಾಘವೇಂದ್ರ ಜೋಯಿಸ್, ಮೈಸೂರು
vveditoped@gmail.com

ಈ ಕಾಲಘಟ್ಟದಲ್ಲಿ ತಂತ್ರಜ್ಞಾನವೆಂಬ ಶಕ್ತಿಯು ಎಲ್ಲ ಕ್ಷೇತ್ರಗಳನ್ನೂ ಬದಲಾಯಿಸುತ್ತಿದೆ. ಈ ಬದಲಾವಣೆಯ ಪ್ರಭಾವಕ್ಕೆ ಬ್ಯಾಂಕಿಂಗ್ ಕ್ಷೇತ್ರವೂ ಹೊರತಾಗಿಲ್ಲ. ಹಣಕಾಸು ಸೇವಾ ವ್ಯವಸ್ಥೆಯಲ್ಲಿ ನಡೆದುಬಂದ ಪರಂಪರಾನುಗತ ಪದ್ಧತಿಗಳ ಜತೆಗೆ ನವೀನ ತಂತ್ರಜ್ಞಾನಗಳ ಶ್ರೇಣಿಯು ಈಗ ನವೋದ್ಯಮದ ಮಾರ್ಗವನ್ನು ತೆರೆದಿದೆ. ಇದನ್ನು ನಾವು 'ಬ್ಯಾಂಕಿಂಗ್‌ನಲ್ಲಿನ ನಾವೀನ್ಯ' ಎಂದು ಹೇಳಬಹುದು. ಬ್ಯಾಂಕ್‌ನಲ್ಲಿ ಹೊಸ ಸೇವೆಗಳ ಪರಿಚಯ, ಗ್ರಾಹಕ ಅನುಭವದ ಸುಧಾರಣೆ, ಕಾರ್ಯಕ್ಷಮತೆಯ ವೃದ್ಧಿಯ ಮೂಲಕ ಇದು ವ್ಯಕ್ತವಾಗುತ್ತದೆ.

ಸುಮಾರು 25-30 ವರ್ಷದ ಹಿಂದೆ ಬ್ಯಾಂಕಿನ ಸೇವೆ ಪಡೆಯಲು ಗ್ರಾಹಕರು ಬ್ಯಾಂಕಿಗೇ ಭೇಟಿ ನೀಡಬೇಕಿತ್ತು. ಉದಾಹರಣೆಗೆ, ಖಾತೆ ತೆರೆಯಲು, ಠೇವಣಿ ಇರಿಸಲು, ಮುಂಗಡ ಪಡೆಯಲು, ಡಿಡಿ ತೆಗೆಸಲು, ಇನ್ನೊಬ್ಬರಿಗೆ ಹಣ ಕಳಿಸಲು ಹೀಗೆ ಎಲ್ಲಾ ಕೆಲಸಗಳಿಗೂ ಬಿಡುವು ಮಾಡಿಕೊಂಡು ಬ್ಯಾಂಕಿಗೇ ಹೋಗಬೇಕಿತ್ತು. ಅದನ್ನು ಕೂಡ ಬ್ಯಾಂಕು ಕಾರ್ಯನಿರ್ವಹಿಸುವ ದಿನದಂದು, ಅದರ ನಿಗದಿತ ಕಾರ್ಯಾವಧಿಯೊಳಗೇ ಮುಗಿಸಿಕೊಳ್ಳಬೇಕಿತ್ತು. ಅದೇ ರೀತಿ, ಉಳಿತಾಯ ಖಾತೆ, ಠೇವಣಿಗಳ ಮೇಲೆ ಬಡ್ಡಿ ಜಮೆ ಮಾಡುವುದು, ಸಾಲಗಳಿಗೆ ಬಡ್ಡಿ ಹಾಕುವುದು

ಸೇರಿದಂತೆ ಎಲ್ಲಾ ಕೆಲಸಗಳನ್ನೂ ಬ್ಯಾಂಕಿನ ಸಿಬ್ಬಂದಿಯೇ ಮಾಡುತ್ತಿದ್ದರು. ಇದು ಕ್ಲಿಷ್ಟಕರ ಕೆಲಸವಾಗಿತ್ತು. ಆದರೀಗ ಈ ಚಿತ್ರಣ ಬದಲಾಗಿದೆ. ನಡೆದಿರುವ-ನಡೆಯುತ್ತಲೇ ಇರುವ ತಾಂತ್ರಿಕ ಆವಿಷ್ಕಾರಗಳಿಂದಾಗಿ, ಬ್ಯಾಂಕಿನಲ್ಲಿ ದೊರೆಯುವ ಬಹುತೇಕ ಸೇವೆಗಳನ್ನು ಗ್ರಾಹಕರು ಈಗ ತಾವಿರುವ ಜಾಗದಿಂದಲೇ ಯಾವ ಸಮಯದಲ್ಲಿ ಬೇಕಾದರೂ ಪಡೆದುಕೊಳ್ಳಬಹುದು.

ಬ್ಯಾಂಕಿಂಗ್ ವಲಯದಲ್ಲಾಗಿರುವ ಒಂದಿಷ್ಟು ಆವಿಷ್ಕಾರಗಳತ್ತ ಕಣ್ಣುಹಾಯಿಸೋಣ..

- **ಮೊಬೈಲ್ ಮತ್ತು ಇಂಟರ್‌ನೆಟ್ ಬ್ಯಾಂಕಿಂಗ್:** ಈಗ ಸಾಮಾನ್ಯ ಗ್ರಾಹಕರು ಕೂಡ ತಮ್ಮ ಮೊಬೈಲ್/ಕಂಪ್ಯೂಟರ್/ಟ್ಯಾಬ್/ಲ್ಯಾಪ್‌ಟಾಪ್ ಮೂಲಕ ಹಣ ವರ್ಗಾವಣೆ, ಖಾತೆ ಪರಿಶೀಲನೆ, ಠೇವಣಿ ಖಾತೆ ತೆರೆಯುವಿಕೆ, ಠೇವಣಿ ವಾಪಸ್ ಪಡೆಯುವಿಕೆ, ಠೇವಣಿ ಮೇಲೆ ಸಾಲ ಪಡೆಯುವಿಕೆ, ಇತರ ಸಾಲಗಳಿಗೆ ಕೋರಿಕೆ ಸಲ್ಲಿಕೆ, ಬಿಲ್ ಪಾವತಿ, ಟಿಕೆಟ್ ಬುಕಿಂಗ್, ಮೊಬೈಲ್ ರೀಚಾರ್ಜ್ ಮುಂತಾದ ಸೇವೆಗಳನ್ನು ಮನೆಯಿಂದಲೇ ತಮ್ಮ ಅನುಕೂಲದ ಸಮಯದಲ್ಲಿ ಮಾಡಬಹುದು.
- **ಡಿಜಿಟಲ್ ವಾಲೆಟ್ ಮತ್ತು ಯುಪಿಐ:** ಫೋನ್‌ಪೇ, ಗೂಗಲ್‌ಪೇ, ಪೇಟಿಎಂ ಮುಂತಾದ ಸೇವೆಗಳು ವ್ಯವಹಾರಗಳನ್ನು ಸುಲಭಗೊಳಿಸಿವೆ. ಈಗ ಎಲ್ಲೇ ಏನೇ ಖರೀದಿಸಿದರೂ ಹಣವನ್ನು ಕೊಂಡೊಯ್ಯುವ ಅವಶ್ಯಕತೆಯಿಲ್ಲ. ಚಿಲ್ಲರೆಯ ಸಮಸ್ಯೆಯಿಲ್ಲ. ಸಣ್ಣ ವ್ಯಾಪಾರಸ್ಥರು ಕೂಡ ಈಗ ಗೂಗಲ್ ಪೇ ಮೂಲಕ ಹಣ ಸ್ವೀಕರಿಸಿ ಬ್ಯಾಂಕಿನಲ್ಲಿ ವ್ಯವಹಾರ ಮಾಡಲು ಪ್ರಾರಂಭಿಸಿದ್ದಾರೆ. ಇದರಿಂದ ಮುಂದೆ ಅವರಿಗೆ ತಮ್ಮ ವ್ಯಾಪಾರದ ಅಭಿವೃದ್ಧಿಗೋ ಅಥವಾ ವೈಯಕ್ತಿಕ ಅಗತ್ಯಗಳಿಗೋ ಬ್ಯಾಂಕಿನಿಂದ ಸುಲಭವಾಗಿ ಸಾಲ ಸಿಗಬಹುದು.
- **ಎಟಿಎಂ ಮತ್ತಿತರ ಸೌಲಭ್ಯಗಳು:** ಗ್ರಾಹಕರು ಸಮಯ ಮತ್ತು ಸ್ಥಳದ ನಿರ್ಬಂಧವಿಲ್ಲದೆ ತಮ್ಮ ಖಾತೆಗೆ ಎಟಿಎಂ ಮೂಲಕ ಹಣವನ್ನು ಜಮಾ ಮಾಡಬಹುದು ಮತ್ತು ಖಾತೆಯಿಂದ ಹಣವನ್ನು ಹಿಂಪಡೆಯಬಹುದು. ಇನ್ನು, V-CIP (Video based Customer Identification Process) ವ್ಯವಸ್ಥೆಯ ಮೂಲಕ ಮನೆಯಿಂದಲೇ ಖಾತೆ ತೆರೆಯುವ ಅವಕಾಶವೂ ಇದೆ. ಗ್ರಾಹಕ ಸಹಾಯಕ ಕೇಂದ್ರಗಳಲ್ಲಿ ಚಾಟ್‌ಬಾಟ್‌ಗಳು, ಡೇಟಾ ಅನಲಿಟಿಕ್ ಮುಂತಾದವುಗಳ ನೆರವಿನಿಂದ ನಿಖರವಾದ ಸೇವೆಗಳನ್ನು ಪಡೆಯಬಹುದು, ಭವಿಷ್ಯದ ನಿರ್ಧಾರಗಳನ್ನು ಕೈಗೊಳ್ಳಬಹುದು. 'ಬ್ಲಾಕ್ ಚೈನ್' ತಂತ್ರಜ್ಞಾನವು ಸುರಕ್ಷಿತ ಹಣಕಾಸು ವ್ಯವಹಾರಗಳಿಗೆ ಮತ್ತು ಡಿಜಿಟಲ್ ದಾಖಲೆಗಳ ನಿರ್ವಹಣೆಗೆ ಸಹಾಯಕವಾಗಿದೆ.

ಈ ಹೊಸ ಆವಿಷ್ಕಾರಗಳು/ತಂತ್ರಜ್ಞಾನಗಳಿಂದಾಗಿ ಬ್ಯಾಂಕಿನ ಗ್ರಾಹಕರು ಕ್ಷಿಪ್ರವಾಗಿ ಮತ್ತು ಸುಲಭವಾಗಿ ಸೇವೆಗಳನ್ನು ಪಡೆಯುವುದು ಸಾಧ್ಯವಾಗಿದೆ. ಜತೆಗೆ ಕಡಿಮೆ ವೆಚ್ಚದಲ್ಲಿ ಹೆಚ್ಚು ಸೇವೆ ನೀಡುವುದಕ್ಕೆ ಬ್ಯಾಂಕುಗಳಿಗೆ ಸಾಧ್ಯವಾಗುತ್ತಿದೆ. ಬ್ಯಾಂಕಿನ ಶಾಖೆಗಳು ಇಲ್ಲದ ಜಾಗಗಳಿಗೂ ಬ್ಯಾಂಕ್ ಸೇವೆಗಳು ಈಗ ತಲುಪುವಂತಾಗಿದೆ. ಆದರೆ, ಈ ಹೊಸ ತಂತ್ರಜ್ಞಾನಗಳ ಬಳಕೆಗೆ ದಾಂಗುಡಿಯಿಡುವ ಗ್ರಾಹಕರನ್ನು ಸೈಬರ್ ವಂಚಕರಿಂದ ರಕ್ಷಿಸಬೇಕಾದ ಜವಾಬ್ದಾರಿಯೂ ಬ್ಯಾಂಕಿನ ಮೇಲಿದೆ. ಗ್ರಾಹಕರ ಖಾತೆಯ ಡಾಟಾ ಭದ್ರತೆಯ ಬಗ್ಗೆಯೂ ಬ್ಯಾಂಕುಗಳು ಹೆಚ್ಚಿನ ಕ್ರಮ ಕೈಗೊಳ್ಳಬೇಕಾಗುತ್ತದೆ.

ಮುಂಬರುವ ದಿನಗಳಲ್ಲಿ ಇನ್ನಷ್ಟು ಹೊಸ ಆವಿಷ್ಕಾರಗಳು ಬ್ಯಾಂಕಿಂಗ್ ಕ್ಷೇತ್ರವನ್ನು ಪ್ರಭಾವಿತಗೊಳಿಸಲಿವೆ. ಆದರೆ, ಡಿಜಿಟಲ್ ಬ್ಯಾಂಕಿಂಗ್ ನಡುವೆಯೂ ಬ್ಯಾಂಕುಗಳು ತಮ್ಮ ಗ್ರಾಹಕರ ಜತೆಗೆ ಒಂದು ಸೌಹಾರ್ದಯುತ ಸಂಬಂಧವನ್ನು ಬೆಳೆಸಿಕೊಳ್ಳುವತ್ತ ಗಮನಹರಿಸಬೇಕಿದೆ.

(ಲೇಖಕರು ಬ್ಯಾಂಕ್ ಅಧಿಕಾರಿ)

ಅಚ್ಚುಕಟ್ಟು ಪ್ರದೇಶ
RNI no: 3918/59
VISHVAVANI, Printed & Published by : VISHWESHWAR BHAT, On behalf of Vishwakshara Media Private Ltd., #483/1A/2A/3 Shri Ram plaza, 3rd floor, opp to Jain college, behind Kotak Mahindra Bank, Club Road, Hubli. Printed at M/s Elegant Offset Printers Pvt. Ltd. Plot No.33/1 & 15/1(part)M.T.Sagar Industrial Estate, Gokul Road, Hubballi-580030.
Editor-in Chief : Vishweshwar Bhat. ಪ್ರಧಾನ ಸಂಪಾದಕ: ವಿಶ್ವೇಶ್ವರ ಭಟ್
CopyRight: Vishwakshara Media Private Ltd. All rights reserved. Reproduction in any manner electronic or otherwise, in whole or in part, without prior written permission is prohibited.
ನಮ್ಮ ಆವೃತ್ತಿಗಳು: ಬೆಂಗಳೂರು, ಹುಬ್ಬಳ್ಳಿ ಮಂಗಳೂರು, ಬೆಳಗಾವಿ ಕಲಬುರಗಿ, ದಾವಣಗೆರೆ
Vol:68, Issue: 112

ಸಮಾಚಾರ ಸಣ್ಣದಲ್ಲ

ಗುಜರಾತ್ ಗಡಿ ಬಳಿ 15 ಪಾಕ್ ಬೆಸ್ತರ ಸೆರೆ

ಅಹಮದಾಬಾದ್: ಗುಜರಾತ್ ರಾಜ್ಯದ ಕಚ್ ಜಿಲ್ಲೆಯಲ್ಲಿನ ಭಾರತ-ಪಾಕ್ ಗಡಿ ಬಳಿ ಪಾಕಿಸ್ತಾನದ 15 ಮೀನುಗಾರರನ್ನು ಬಂಧಿಸಿ, 1 ಯಾಂತ್ರಿಕ ದೋಣಿ ವಶಪಡಿಸಿಕೊಳ್ಳಲಾಗಿದೆ. ಗುಪ್ತಚರ ಮಾಹಿತಿ ಮೇರೆಗೆ ಗಡಿ ಭದ್ರತಾ ಪಡೆ(ಬಿಎಸ್‌ಎಫ್) 68ನೇ ಬೆಟಾಲಿಯನ್ ಕೋರಿಕ್ರೀಕ್ ಪ್ರದೇಶದಲ್ಲಿ ಕಟ್ಟೆಚ್ಚರ ವಹಿಸಿ ಪಾಕ್‌ನ ಸಿಂಧ್ ಪ್ರಾಂತ್ಯದ ಸುಜಾ ವಾಲ್ ಜಿಲ್ಲೆಯ ಮೀನುಗಾರರನ್ನು ಸೆರೆಹಿಡಿದಿದೆ.

ನ್ಯೂಯಾರ್ಕ್: 3 ಭಾರತೀಯರ ಸಾವು

ನ್ಯೂಯಾರ್ಕ್: ಅಮೆರಿಕದ 'ನ್ಯೂಯಾರ್ಕ್' ನಗರದಲ್ಲಿ ಅಪಘಾತಕ್ಕೀಡಾದ ಪ್ರವಾಸಿಗರ ಬಸ್‌ನಲ್ಲಿದ್ದವರಲ್ಲಿ ಮೂವರು ಭಾರತೀಯರು ದುರ್ಮರಣಕ್ಕೀಡಾಗಿದ್ದಾರೆ. ಮೃತರನ್ನು ಬಿಹಾರದ ಶಂಕರ್ ಕುಮಾರ್ ಝಾ(65), ಪಿಂಕಿ ಛಂಗ್ರಾನಿ(60), ಜೈನ್ ಮಿಂಗ್ಲಿ(56), ಉಳಿದಿಬ್ಬರು ಚೀನಾದ ಬೀಜಿಂಗ್‌ನವರು ಎಂದು ಗುರುತಿಸಲಾಗಿದೆ.

ಬಂಗಾಳಕೊಲ್ಲಿಯಲ್ಲಿ ಚಂಡಮಾರುತ?

ದೆಹಲಿ: ಬಂಗಾಳಕೊಲ್ಲಿಯಲ್ಲಿ ವಾಯುಭಾರ ಕುಸಿತವಾಗಿದ್ದು, ಮುಂದಿನ 24 ಗಂಟೆಗಳಲ್ಲಿ ಚಂಡಮಾರುತ ರೂಪುಗೊಳ್ಳುವ ಸಾಧ್ಯತೆ ಇದೆ. ಪೂರ್ವ ಭಾರತದ ಭಾಗದಲ್ಲಿ ಭಾರೀ ಮಳೆಯಾಗಲಿದೆ. ಬಿಹಾರ, ಉತ್ತರ ಪ್ರದೇಶ, ಪಶ್ಚಿಮ ಬಂಗಾಳ ಮತ್ತು ಜಾರ್ಖಂಡ್ ರಾಜ್ಯಗಳಲ್ಲಿ 3-4 ದಿನಗಳವರೆಗೆ ಮಳೆಯಾಗಲಿದೆ ಎಂದು ಹವಾಮಾನ ಇಲಾಖೆ ಭಾನುವಾರ ಬೆಳಗ್ಗೆ ಎಚ್ಚರಿಕೆ ನೀಡಿದೆ. ಉತ್ತರಾಖಂಡಕ್ಕೆ ಆರೆಂಜ್ ಅಲರ್ಟ್ ನೀಡಲಾಗಿದೆ. ಡೆಹರಾಡೂನ್, ತೆಹ್ರಿ, ಪೌರಿ, ಉತ್ತರಕಾಶಿ, ಚಮೋಲಿ, ರುದ್ರಪ್ರಯಾಗ, ನೈನಿತಾಲ್, ಅಲ್ಮೋರಾ ಮತ್ತು ಉಧಮ್ ಸಿಂಗ್ ನಗರ್ ಜಿಲ್ಲೆಗಳಲ್ಲಿ ಗುಡುಗು ಸಹಿತ ಭಾರೀ ಮಳೆಯಾಗುವ ಸಾಧ್ಯತೆ ಇದೆ ಎಂದು ಹವಾಮಾನ ಇಲಾಖೆ ಮುನ್ಸೂಚನೆ ನೀಡಿದೆ.

ಭಾರತ-ಅಮೆರಿಕದ ಸ್ನೇಹ ಉಳಿಸಿರಿ: ನಿಕ್ಕಿ

ವಾಷಿಂಗ್ಟನ್: ಚೀನಾದ ವಿಸ್ತರಣಾ ವಾದ, ಜಾಗತಿಕ ಮಹತ್ವಾಕಾಂಕ್ಷೆಗಳನ್ನು ನಿಯಂತ್ರಿಸಲು ನಿಜವಾಗಿಯೂ ಅಮೆರಿಕ ಬಯಸಿದ್ದೇ ಆದರೆ ಅದಕ್ಕಾಗಿ ಭಾರತದ ಜತೆಗಿನ ಸ್ನೇಹ ಸಂಬಂಧವನ್ನು ಉಳಿಸಿಕೊಳ್ಳಬೇಕಿದೆ ಎಂದು ವಿಶ್ವಸಂಸ್ಥೆಯಲ್ಲಿ ಅಮೆರಿಕದ ರಾಯಭಾರಿಯಾಗಿದ್ದ ನಿಕ್ಕಿ ಹ್ಯಾಲೆ ಹೇಳಿದ್ದಾರೆ. ವಾಷಿಂಗ್ಟನ್-ದೆಹಲಿ ಸಂಬಂಧಗಳು ಮುರಿಯುವ ಹಂತಕ್ಕೆ ಹತ್ತಿರದಲ್ಲಿವೆ. ಆ ಸಂಬಂಧವನ್ನು ಮರಳಿ ಹಳಿಗೆ ತರುವುದು ಮಹತ್ವದ್ದಾಗಿದೆ ಎಂದೂ ಅವರು ಶ್ವೇತಭವನದ ಗಮನ ಸೆಳೆದಿದ್ದಾರೆ. ಭಾರತವನ್ನು ಚೀನಾದಂತೆ ಎದುರಾಳಿಯಾಗಿ ಪರಿಗಣಿಸಬಾರದು. ಟ್ರಂಪ್ ಆಡಳಿತದ ಪ್ರತಿಸುಂಕ ಹೇರಿಕೆ ವಿಶ್ವದ 2 ದೊಡ್ಡ ಪ್ರಜಾಪ್ರಭುತ್ವ ದೇಶಗಳ ನಡುವೆ ಬಿರುಕು ಮೂಡಲು ಕಾರಣವಾಗಬಾರದು ಎಂದೂ ನಿಕ್ಕಿ ಹೇಳಿದ್ದಾರೆ. 'ರಷ್ಯಾದಿಂದ ಕಚ್ಚಾತೈಲ ಆಮದು ನಿಲ್ಲಿಸಬೇಕು' ಎಂಬ ಟ್ರಂಪ್ ಆಗ್ರಹವನ್ನು ಭಾರತ ಕೂಡಾ ಗಂಭೀರವಾಗಿ ಪರಿಗಣಿಸಬೇಕು. ಈ ದಿಸೆಯಲ್ಲಿ ಪರಿಹಾರ ಕಂಡುಕೊಳ್ಳಲು ಶ್ವೇತಭವನದ ಜತೆ ಭಾರತ ಕೆಲಸ ಮಾಡಬೇಕು ಎಂದೂ ಭಾರತಕ್ಕೆ ಕಿವಿಮಾತು ಹೇಳಿದ್ದಾರೆ.

ಹಿಂದೂಗಳ ಕ್ಷಮೆ ಕೇಳಿ: ಸಿಎಂಗೆ ಆರ್‌ಸಿ ಆಗ್ರಹ

ಕೊಚ್ಚಿ: ಸಿಪಿಐ(ಎಂ) ನೇತೃತ್ವದ ಕೇರಳ ಸರಕಾರ 'ಅಯ್ಯಪ್ಪ ಸಂಗಮಂ' ಎಂಬ ಧಾರ್ಮಿಕ ಕಾರ್ಯಕ್ರಮ ಆಯೋಜಿಸಿ ಅದಕ್ಕೆ ತಮಿಳುನಾಡು ಮುಖ್ಯಮಂತ್ರಿ ಎಂ.ಕೆ.ಸ್ಟಾಲಿನ್ ಅವರನ್ನು ಆಹ್ವಾನಿಸಿದೆ ಎಂದು ವರದಿಯಾಗಿದೆ. ಈ ಹಿನ್ನೆಲೆಯಲ್ಲಿ ಪಿಣರಾಯಿ ವಿಜಯನ್ ಮತ್ತು ಸ್ಟಾಲಿನ್ ಹಿಂದೂಗಳ ನಂಬಿಕೆ ಮತ್ತು ಶಬರಿಮಲೆಯ ಸಂಪ್ರದಾಯಗಳನ್ನು ಅವಮಾನಿಸುತ್ತಿದ್ದಾರೆ ಎಂದು ಬಿಜೆಪಿ ನಾಯಕ, ಕೇಂದ್ರದ ಮಾಜಿ ಸಚಿವ ರಾಜೀವ್ ಚಂದ್ರಶೇಖರ್ ಕಿಡಿಕಾರಿದ್ದಾರೆ. ಅಯ್ಯಪ್ಪ ಭಕ್ತರನ್ನು ಜೈಲಿಗೆ ಹಾಕಿಸಿದ, ಹಲವರ ವಿರುದ್ಧ ಕೇಸು ಹಾಕಿಸಿದ, ಅಯ್ಯಪ್ಪ ಭಕ್ತರ ಮೇಲೆ ಪೊಲೀಸ್ ದೌರ್ಜನ್ಯ ನಡೆಸಲು ಕಾರಣವಾದವರು ಪಿಣರಾಯಿ. ಈಗ ಅಯ್ಯಪ್ಪ ಸಂಗಮಂ ಕಾರ್ಯಕ್ರಮದ ಮೂಲಕ ರಾಜ್ಯದ ಜನರನ್ನು ಮೂರ್ಖರನ್ನಾಗಿಸುವ ಪ್ರಹಸನ. ಹಿಂದೂ ಸಮಾಜ ಮತ್ತು ಅಯ್ಯಪ್ಪ ಭಕ್ತರಿಗೆ ಮಾಡಿದ ಅವಮಾನ. ಅದಕ್ಕಾಗಿ ಇಬ್ಬರೂ ಸಿಎಂಗಳು ಹಿಂದೂ ಸಮುದಾಯದ ಕ್ಷಮೆ ಕೋರಬೇಕು ಎಂದು ಭಾನುವಾರ ಆಗ್ರಹಿಸಿದ್ದಾರೆ.

{ **ಕಿರಣ್ ರಿಜಿಜು** } ಕೇಂದ್ರ ಸಚಿವ

ರಾಹುಲ್ ಗಾಂಧಿ ಅವರು ಅರ್ಥವಿಲ್ಲದ ಮಾತುಗಳನ್ನಾಡುತ್ತಾರೆ. 'ಅವರ ಇಂಥ ಮಾತುಗಳಿಂದಾಗಿ ಪಕ್ಷ ದೊಡ್ಡ ಬೆಲೆ ತೆರಬೇಕಾಗುತ್ತದೆ' ಎಂದು ಅವರ ಪಕ್ಷದವರೇ ಅಸಹನೆ ವ್ಯಕ್ತಪಡಿಸುತ್ತಾರೆ. ರಾಹುಲ್ ಸಂಸತ್ತಿನಲ್ಲಿ ಆಡುವ ಮಾತುಗಳಿಂದ ಅವರದೇ ಪಕ್ಷದ ಸಂಸದರು ಮುಜುಗರಕ್ಕೆ ಒಳಗಾಗುತ್ತಾರೆ. ರಾಹುಲ್ ಒಂದರ್ಥದಲ್ಲಿ 'ಕಾಂಗ್ರೆಸ್‌ನೊಳಗಿನ ಜಾರ್ಜ್ ಸೋರೆಸ್'.

ಬಿಹಾರ: ಮತದಾರರ ಪಟ್ಟಿಯಲ್ಲಿ ಪಾಕ್ ಪ್ರಜೆ!

'ಎಸ್‌ಐಆರ್' ಪ್ರಕ್ರಿಯೆ ವೇಳೆಯೂ ಪತ್ತೆಯಾಗದ ಪ್ರಕರಣ | ಗೃಹ ಸಚಿವಾಲಯ ಸೂಚನೆಯಡಿ ಪರಿಶೀಲನೆ ವೇಳೆ ಬೆಳಕಿಗೆ | ಇಬ್ಬರೂ ಪಾಕಿಸ್ತಾನ ಮಹಿಳೆಯರ ಬಳಿ ಎಪಿಕ್ ಕಾರ್ಡ್, ಆಧಾರ್ | ವರ್ಷಗಳಿಂದ ಮತದಾನ

ಪಟನಾ: ಸದ್ಯದಲ್ಲೇ ವಿಧಾನಸಭೆ ಚುನಾವಣೆ ಎದುರಿಸಲಿರುವ ಬಿಹಾರ ರಾಜ್ಯದ ಮತದಾರರ ಪಟ್ಟಿಯಲ್ಲಿ ಇಬ್ಬರು ಪಾಕಿಸ್ತಾನದ ಮಹಿಳೆಯರ ಹೆಸರಿರುವುದು ಪತ್ತೆಯಾಗಿದೆ. ಅಲ್ಲದೇ, ಇವರಿಬ್ಬರೂ ದಶಕಗಳಿಂದಲೂ ಹತ್ತಾರು ಚುನಾವಣೆಗಳಲ್ಲಿ ಮತದಾನ ಮಾಡಿದ್ದಾರೆ ಎಂಬುದು ಆಘಾತಕ್ಕೆ ಕಾರಣವಾಗಿದೆ.

ಮತ್ತೂ ಆಘಾತಕಾರಿ ಸಂಗತಿಯೆಂದರೆ ಚುನಾವಣಾ ಆಯೋಗ ಬಿಹಾರದ ಮತದಾರರ ಪಟ್ಟಿ 'ವಿಶೇಷ ತೀವ್ರ ಪರಿಷ್ಕರಣೆ'(ಎಸ್‌ಐಆರ್) ನಡೆಸಿದಾಗಲೂ ಇಬ್ಬರೂ ಪಾಕ್ ಮಹಿಳೆಯರ ಹೆಸರು ಪಟ್ಟಿಯಲ್ಲಿಯೇ ಉಳಿದುಕೊಂಡಿದೆ.

ವೀಸಾ ಅವಧಿ ಮುಗಿದರೂ ಪಾಕ್ ಪ್ರಜೆಗಳಾದ ಇಮ್ರಾನಾ ಖಾನಮ್ ಅಲಿಯಾಸ್ ಇಮ್ರಾನಾ ಖಾತೂನ್ ಮತ್ತು ಫಿರ್ದೋಷಿಯಾ ಖಾತೂನ್ ಎಂಬವರು ಬಿಹಾರದಲ್ಲಿ ಉಳಿದುಕೊಂಡಿರುವುದು ಕೇಂದ್ರದ ಗೃಹ ಸಚಿವಾಲಯ ಇತ್ತೀಚೆಗೆ ದತ್ತಾಂಶ ಪರಿಶೀಲನೆ ವೇಳೆ ಬೆಳಕಿಗೆ ಬಂದಿವೆ.

1958ರಲ್ಲಿ 3 ತಿಂಗಳ ಅವಧಿಯ ಪ್ರವಾಸಿ ವೀಸಾ ಪಡೆದು ಭಾರತ ಪ್ರವೇಶಿಸಿದ್ದ ಇಬ್ಬರೂ ಪಾಕ್ ಮಹಿಳೆಯರು ವೀಸಾ ಅವಧಿ ಮುಗಿದ ಬಳಿಕವೂ ಬಿಹಾರದ ಭಾಗಲ್ಪುರ ಜಿಲ್ಲೆಯ ಗ್ರಾಮವೊಂದರಲ್ಲಿ ಉಳಿದುಕೊಂಡು ಮದುವೆ, ಮಕ್ಕಳು ಎಂದು ಬದುಕು ಮುಂದುವರಿಸಿದಿದ್ದಾರೆ! ಇಮ್ರಾನಾ ಖಾತೂಹ್ ಎಂಬಾಕೆ ಇಬ್‌ತುಲ್ ಹಸನ್ ಎಂಬಾತನನ್ನೂ, ಫಿರ್ದೋಷಿಯಾ ಖಾತೂನ್ ಎಂಬಾಕೆ ಮಹಮದ್ ತಫ್ಜೀಲ್ ಅಹಮದ್ ಎಂಬಾತನನ್ನೂ ಮದುವೆಯಾಗಿದ್ದಾರೆ. ಇಬ್ಬರೂ ಪಾಕ್ ಮಹಿಳೆಯರು ಭಾಗಲ್ಪುರ ಜಿಲ್ಲೆಯ ಇಶಾಕ್‌ಛಕ್ ಪೊಲೀಸ್ ಠಾಣೆ ವ್ಯಾಪ್ತಿಯಲ್ಲಿ ಬರುವ ಭಿಕಾನಪುರ್ ಗುಮ್ತಿ ನಂ.3, ಟ್ಯಾಂಕ್ ಲೇನ್‌ನಲ್ಲಿರುವ ಪ್ರತ್ಯೇಕ ನಿವಾಸಗಳಲ್ಲಿ ನೆಲೆಸಿದ್ದಾರೆ. ಇಬ್ಬರ ಬಳಿಯೂ ಆಧಾರ್, ಮತದಾರರ ಗುರುತಿನ ಚೀಟಿ ಸೇರಿದಂತೆ ಸರಕಾರದಿಂದ ಕೊಡಮಾಡುವ ಎಲ್ಲಾ ದಾಖಲೆ ಪತ್ರಗಳೂ ಇವೆ. ಸರಕಾರದ ಉಚಿತ ಸವಲತ್ತುಗಳನ್ನೂ ಪಡೆಯುತ್ತಾ ಇಬ್ಬರೂ ಪಾಕ್ ಪ್ರಜೆಗಳು ದಶಕಗಳ ಕಾಲದಿಂದಲೂ ಬಿಹಾರದಲ್ಲಿ ಅಕ್ರಮ ವಾಸ ಮುಂದುವರಿಸಿಕೊಂಡು ಬಂದಿದ್ದಾರೆ.



ಇಮ್ರಾನಾ ಖಾತೂನ್

ಇಮ್ರಾನಾ ಖಾತೂನ್‌ಗೆ ಪಾಕಿಸ್ತಾನದಲ್ಲಿ 1956ರಲ್ಲಿಯೇ ಪಾಸ್‌ಪೋರ್ಟ್ ವಿತರಣೆಯಾಗಿದೆ. 1958ರಲ್ಲಿ ಭಾರತದಿಂದ 3 ತಿಂಗಳಿಗೆ ಪ್ರವಾಸಿ ವೀಸಾ ಮಂಜೂರಾಗಿದೆ. ಆಗ ಭಾರತಕ್ಕೆ ಬಂದ ಇಮ್ರಾನಾ ಖಾತೂನ್, 3 ತಿಂಗಳ ನಂತರ ಪಾಕಿಸ್ತಾನಕ್ಕೆ ವಾಪಸಾಗಲಿಲ್ಲ. ಆಕೆಯ ಹೆಸರು 7 ದಶಕ ಮೊದಲೇ ಮತದಾರರ ಪಟ್ಟಿ ಸೇರಿದೆ. ಮತದಾರರ ಗುರುತಿನ ಚೀಟಿಯೂ ಇದೆ. ದಶಕಗಳಿಂದಲೂ ಇಮ್ರಾನಾ ಖಾತೂನ್ ಹತ್ತಾರು ಚುನಾವಣೆಗಳಲ್ಲಿ ಮತದಾನ ಮಾಡಿದ್ದಾರೆ.



7 ದಶಕಗಳಿಂದಲೂ ಮತದಾರಪಟ್ಟಿಯಲ್ಲಿ!

ಈಗ ಕೇಂದ್ರ ಗೃಹ ಸಚಿವಾಲಯದಿಂದ ಸೂಚನೆ ಬಂದ ಬಳಿಕ ಭಾಗಲ್ಪುರ ಜಿಲ್ಲಾಧಿಕಾರಿ ಡಾ.ನವಲ್ ಕಿಶೋರ್ ಚೌಧರಿ, ಇಮ್ರಾನಾ ಖಾನಮ್ ವೃದ್ಧೆಯಾಗಿದ್ದು, ಅನಾರೋಗ್ಯಕ್ಕೊಳಗಾಗಿದ್ದಾರೆ. ಆಕೆ ಮಾತನಾಡುವ ಸ್ಥಿತಿಯಲ್ಲಿಲ್ಲ. ಹಾಗಾಗಿ ಅವರ ಅರ್ಜಿಯನ್ನು ಬೂತ್ ಮಟ್ಟದ ಅಧಿಕಾರಿ ಫರ್ಝಾನಾ ಖತೂನ್ ಎಂಬವರೇ ಭರ್ತಿ ಮಾಡಿದ್ದಾರೆ ಎಂದು ಹೇಳಿದ್ದಾರೆ.

ಇಬ್ಬರೂ ಪಾಕ್ ಮೂಲದ ಮಹಿಳೆಯರ ಹೆಸರುಗಳನ್ನು ಮತದಾರರ ಪಟ್ಟಿಯಿಂದ ರದ್ದುಗೊಳಿಸಲು (ಅರ್ಜಿ ಸಂಖ್ಯೆ 7) ಚಾಲನೆ ನೀಡಲಾಗಿದೆ. ಇಬ್ಬರೂ ಮಹಿಳೆಯರಿಗೆ ನೋಟಿಸ್ ನೀಡಲಾಗಿದೆ ಎಂದಿದ್ದಾರೆ. ಆದರೆ, ಈ ಸಂಬಂಧ ಹೆಚ್ಚಿನ ಮಾಹಿತಿ ನೀಡಲು ಜಿಲ್ಲಾಧಿಕಾರಿ ಚೌಧರಿ ನಿರಾಕರಿಸಿದ್ದಾರೆ ಎಂದು ಸುದ್ದಿಸಂಸ್ಥೆ ವರದಿ ಮಾಡಿದೆ.

'ನಾನು ಇಬ್ಬರ ಮನೆ ಬಳಿಯೂ ಹೋಗಿ ಎಸ್‌ಐಆರ್ ವೇಳೆ ದಾಖಲೆ ಪರಿಶೀಲನೆ ನಡೆಸಿದಾಗ ಅವರು ಪಾಕ್ ಪ್ರಜೆಗಳು ಎಂಬುದು ತಿಳಿಯಲಿಲ್ಲ. ಕೇಂದ್ರ ಗೃಹ ಸಚಿವಾಲಯದ ಸೂಚನೆ ಆಧರಿಸಿ ಜಿಲ್ಲಾಧಿಕಾರಿ ಕಚೇರಿಯಿಂದ ಆದೇಶ ಬಂದ ಬಳಿಕವಷ್ಟೇ ಈ ಸಂಗತಿ ತಿಳಿಯಿತು. ಇಬ್ಬರ ಮನೆಗೂ ತೆರಳಿ ಅರ್ಜಿ-7 ನಾನೇ ಭರ್ತಿ ಮಾಡಿ ಅವರ ಹೆಬ್ಬೆಟ್ಟು ಗುರುತು ಪಡೆದಿರುವೆ. ಮತದಾರರ ಪಟ್ಟಿಯಿಂದ ಇಬ್ಬರ ಹೆಸರನ್ನೂ ರದ್ದುಪಡಿಸುವ ಪ್ರಕ್ರಿಯೆ ಆರಂಭಗೊಂಡಿದೆ' ಎಂದು ಬೂತ್ ಮಟ್ಟದ ಅಧಿಕಾರಿ ಫರ್ಝಾನಾ ಖಾತೂನ್ ಸುದ್ದಿಸಂಸ್ಥೆಗೆ ಪ್ರತಿಕ್ರಿಯಿಸಿದ್ದಾರೆ.

ಫಿರ್ದೋಷಿಯಾ ಖಾತೂನ್ ಪುತ್ರ ಪುತ್ರ ಮೊಹಮ್ಮದ್ ಗುಲ್ರೇಜ್ ಹೇಳುವ ಪ್ರಕಾರ, ಬೂತ್ ಮಟ್ಟದ ಅಧಿಕಾರಿ ಮಾತ್ರವೇ ಮನೆಯ ಬಳಿ ಬಂದಿದ್ದರು. ಸರಕಾರದ ಸೂಚನೆಯಲ್ಲಿರುವಂತೆ ನಿಗದಿತ 11 ದಾಖಲೆಗಳಲ್ಲಿ ನಮ್ಮ ಬಳಿ ಇದ್ದ ಕೆಲವು ದಾಖಲೆಗಳನ್ನು ನೀಡಿದೆವು. ತೆಗೆದುಕೊಂಡು ಹೋಗಿದ್ದಾರೆ. ಉಳಿದಂತೆ ಬೇರೆ ಯಾರೂ ಮನೆ ಬಂದು ಪರಿಶೀಲನೆ ನಡೆಸಿಲ್ಲ. ನಮ್ಮ ಅಮ್ಮ ದಶಕಗಳಿಂದಲೂ ಚುನಾವಣೆಗಳಲ್ಲಿ ಮತದಾನ ಮಾಡುತ್ತಾ ಬಂದಿದ್ದಾರೆ.

ಭಾರತ ಗಗನಯಾನ ಮಿಷನ್: 4 ಗಗನಯಾತ್ರಿಗಳಿಗೆ ಸನ್ಮಾನ

'ಆತ್ಮನಿರ್ಭರ ಭಾರತ'ದ ಪ್ರಮುಖ ಮೈಲುಗಲ್ಲು: ರಾಜನಾಥ್ ಸಿಂಗ್

ದೆಹಲಿ: ಶುಭಾಂಶು ಶುಕ್ಲಾ ಸೇರಿದಂತೆ ಭಾರತದ ಮುಂಬರುವ 'ಮಾನವ ಸಹಿತ ಗಗನಯಾನ' ಮಿಷನ್‌ಗೆ ಆಯ್ಕೆಯಾಗಿರುವ ನಾಲ್ವರು ಗಗನಯಾತ್ರಿಗಳನ್ನು ರಕ್ಷಣಾ ಸಚಿವ ರಾಜನಾಥ್ ಸಿಂಗ್ ಸನ್ಮಾನಿಸಿದರು.

ಭಾರತದ ಮಹತ್ವಾಕಾಂಕ್ಷೆಯ ಮಾನವ ಸಹಿತ ಗಗನಯಾನ ಮಿಷನ್‌ಗೆ ಆಯ್ಕೆಯಾಗಿರುವ ಗ್ರೂಪ್ ಕ್ಯಾಪ್ಟನ್ ಪ್ರಶಾಂತ್ ಬಾಲಕೃಷ್ಣನ್ ನಾಯರ್, ಗ್ರೂಪ್ ಕ್ಯಾಪ್ಟನ್ ಅಂಗದ್ ಪ್ರತಾಪ್, ಗ್ರೂಪ್ ಕ್ಯಾಪ್ಟನ್ ಅಜಿತ್ ಕೃಷ್ಣನ್ ಮತ್ತು ವಿಂಗ್ ಕಮಾಂಡರ್ ಶುಭಾಂಶು ಶುಕ್ಲಾ ಭಾರತೀಯ ವಾಯುಪಡೆ ದೆಹಲಿಯ ಸುಬ್ರೋತೊ ಉದ್ಯಾನದಲ್ಲಿ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ರಕ್ಷಣಾ ಸಚಿವರಿಂದ ಸನ್ಮಾನ ಸ್ವೀಕರಿಸಿ ಸಂಭ್ರಮಿಸಿದರು. 2024ರ ಫೆಬ್ರವರಿಯಲ್ಲಿ ತಿರುವನಂತಪುರಂನ ವಿಕ್ರಮ್ ಸಾರಾಭಾಯ್ ಬಾಹ್ಯಾಕಾಶ ಕೇಂದ್ರಕ್ಕೆ ಭೇಟಿ ನೀಡಿದ ಸಂದರ್ಭ ಪ್ರಧಾನಿ ನರೇಂದ್ರ ಮೋದಿ, ಈ ನಾಲ್ವರೂ ಗಗನಯಾತ್ರಿಗಳ ಹೆಸರನ್ನು ಮೊದಲು ಬಹಿರಂಗಪಡಿಸಿದ್ದರು.

ಸನ್ಮಾನ ಕಾರ್ಯಕ್ರಮ ಬಳಿಕ ಮಾತನಾಡಿದ ರಕ್ಷಣಾ ಸಚಿವರು, ಈ ನಾಲ್ವರೂ ಗಗನಯಾತ್ರಿಗಳು 'ಭಾರತದ ಅಮೂಲ್ಯ ರತ್ನಗಳು' ಎಂದು ಬಣ್ಣಿಸಿದರು. ಭಾರತದ ಮಾನವ ಬಾಹ್ಯಾಕಾಶ ಯಾನದ ಕನಸಿಗೆ ಶಕ್ತಿ ತುಂಬಲಿರುವ ನಾಲ್ವರಲ್ಲೂ ಅಪಾರ ಧೈರ್ಯ, ಬದ್ಧತೆ, ದೇಶಪ್ರೇಮವಿದೆ ಎಂದು ಪ್ರಶಂಸಿಸಿದರು.

ಇಸ್ರೊ, ನಾಸಾ, ಸ್ಪೇಸ್‌ಎಕ್ಸ್ ಮತ್ತು ಅಮೆರಿಕದ ಖಾಸಗಿ ಬಾಹ್ಯಾಕಾಶ ಸಂಸ್ಥೆಯ 'ಆಕ್ಸಿಯೊಮ್-4' ಮಿಷನ್‌ನಲ್ಲಿ ಕಾರ್ಯಾಚರಣೆಯ ಭಾಗಿಯಾಗಿದ್ದ ಭಾರತದ ಗಗನಯಾತ್ರಿ ಶುಭಾಂಶು ಶುಕ್ಲಾ, ಯಶಸ್ವಿಯಾಗಿ ಭೂಮಿಗೆ ಮರಳಿದ ನಂತರ ಸನ್ಮಾನ ಕಾರ್ಯಕ್ರಮವನ್ನು ಭಾರತೀಯ ವಾಯುಪಡೆ ಹಮ್ಮಿಕೊಂಡಿದೆ. ಭಾರತದ ಮೊದಲ ಮಾನವ ಸಹಿತ ಗಗನಯಾನ ಯೋಜನೆ 2027ರಲ್ಲಿ ಜಾರಿಯಾಗುವ ನಿರೀಕ್ಷೆ ಇದೆ. ಇದು ಭಾರತದ ಮಾನವ ಬಾಹ್ಯಾಕಾಶ ಯಾನದ ಸಾಮರ್ಥ್ಯವನ್ನು ಪ್ರದರ್ಶಿಸುವ ಗುರಿ ಹೊಂದಿದೆ. ಈ ಮಿಷನ್‌ನಲ್ಲಿ ಮೂವರು ಗಗನಯಾನಿಗಳನ್ನು 3 ದಿನಗಳ ಅವಧಿಗೆ 400 ಕಿ.ಮೀ. ದೂರದ ಕೆಳಸ್ತರದ ಭೂಕಕ್ಷೆಗೆ ಕಳುಹಿಸಲಾಗುತ್ತದೆ. ಅದಕ್ಕೂ ಮುನ್ನ ರೊಬೊವನ್ನು ಬಾಹ್ಯಾಕಾಶಕ್ಕೆ ಕಳುಹಿಸಿ ವಾಪಸ್ ಕರೆಸಲಾಗುತ್ತದೆ.



ಭಾರತ ಮಾನವ ಸಹಿತ ಗಗನಯಾನ ಮಿಷನ್ ದೇಶದ ಭವಿಷ್ಯದ ಪೀಳಿಗೆಗೆ ಭಾರೀ ಸ್ಫೂರ್ತಿ ನೀಡಲಿದೆ. ಬಾಹ್ಯಾಕಾಶ ಸಂಶೋಧನಾ ಕ್ಷೇತ್ರಲ್ಲಿ ಭಾರತದ ಸ್ಥಾನವನ್ನು ಇನ್ನಷ್ಟು ಬಲಪಡಿಸುತ್ತದೆ. ಬಾಹ್ಯಾಕಾಶಕ್ಕೆ ಮಾನವರನ್ನು ಕಳುಹಿಸಿ ಸುರಕ್ಷಿತವಾಗಿ ವಾಪಸ್ ಕರೆಸುವ ಸಾಮರ್ಥ್ಯವಿರುವ ಕೆಲವೇ ರಾಷ್ಟ್ರಗಳಲ್ಲಿ ಭಾರತಕ್ಕೂ ಪ್ರಮುಖ ಸ್ಥಾನ ಈ ಮಿಷನ್‌ನಿಂದ ಪ್ರಾಪ್ತವಾಗಲಿದೆ.

-**ರಾಜನಾಥ್ ಸಿಂಗ್** ರಕ್ಷಣಾ ಸಚಿವ

ಐಎನ್‌ಎಸ್‌ಗೆ ಜರ್ಮನಿಯ 6 ಟಿಕೆಎಂಎಸ್ ಸಬ್‌ಮರೀನ್

ಖರೀದಿ ಮಾತುಕತೆ ಮಾಸಾಂತ್ಯ ಆರಂಭ

ಆರು ಸಬ್‌ಮರೀನ್‌ಗೆ 78,575 ಕೋಟಿ ರು.

ದೆಹಲಿ: ಜರ್ಮನಿಯಿಂದ 6 ಅತ್ಯಾಧುನಿಕ ಜಲಾಂತರ್ಗಾಮಿ ಖರೀದಿಗೆ ಮಾಸಾಂತ್ಯದಲ್ಲಿ ಮಾತುಕತೆ ನಡೆಸುವುದಕ್ಕೆ ರಕ್ಷಣಾ ಸಚಿವಾಲಯ ಮತ್ತು ಸರಕಾರಿ ಒಡೆತನದ 'ಮಜಗಾನ್ ಡಾಕ್‌ಶಿಪ್ ಬಿಲ್ಡರ್ಸ್ ಲಿ.'ಗೆ ಕೇಂದ್ರ ಸರಕಾರ ಅನುಮತಿ ನೀಡಿದೆ.

ಭಾರತೀಯ ನೌಕಾಪಡೆ ಬಳಿ ಇರುವ ಹಳೆಯ 10 ಜಲಾಂತರ್ಗಾಮಿಗಳನ್ನು ಮುಂದಿನ ದಶಕದಲ್ಲಿ ಬದಲಿಸಲು ಮುಂದಾಗಿರುವ ಭಾರತೀಯ ನೌಕಾಪಡೆ, ಅವುಗಳಿಗೆ ಬದಲಾಗಿ 'ಏರ್ ಇಂಡಿಪೆಂಡೆಂಟ್ ಪ್ರೊಪಲ್ಷನ್'(ಎಐಪಿ) ವ್ಯವಸ್ಥೆಯಿರುವ ಹೊಸ ತಲೆಮಾರಿನ 'ಥ್ಯಾಸೆನ್ ಕ್ರುಪ್ ಮರೀನ್ ಸಿಸ್ಟಂ'(ಟಿಕೆಎಂಎಸ್) ಜಲಾಂತರ್ಗಾಮಿಗಳನ್ನು ಜರ್ಮನಿಯಿಂದ ಖರೀದಿಸಲು ಇಚ್ಛಿಸಿದೆ. 6 ಟಿಕೆಎಂಎಸ್ ಸಬ್‌ಮರೀನ್‌ಗಳ ಮೌಲ್ಯ 900 ಕೋಟಿ ಡಾಲರ್(78,575 ಕೋಟಿ ರು.)ಗಳಷ್ಟಾಗಲಿದೆ ಎಂದು ತಿಳಿದುಬಂದಿದೆ.

ಜರ್ಮನಿ 'ಟಿಕೆಎಂಎಸ್' ಸಬ್‌ಮರೀನ್‌ಗಳ ಟೈಪ್ 214 ಮಾದರಿಯ ಬಿಡಿಭಾಗಗಳು ಮತ್ತು ತಂತ್ರಜ್ಞಾನವನ್ನು ಒದಗಿಸಲಿದೆ. 6 ಸಬ್‌ಮರೀನ್‌ಗಳನ್ನು ಭಾರತದಲ್ಲಿಯೇ ಸರಕಾರಿ ಒಡೆತನದ 'ಮಜಗಾಂವ್ ಡಾಕ್‌ಯಾರ್ಡ್ ಲಿ.' ಘಟಕದಲ್ಲಿಯೇ ತಯಾರಿಸಲಾಗುತ್ತದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ರಕ್ಷಣೆ ಮತ್ತು ರಾಷ್ಟ್ರೀಯ ಭದ್ರತೆ ಸಂಬಂಧಿಸಿದ ಉನ್ನತ ಅಧಿಕಾರಿಗಳ ಸಭೆಯ ನಂತರ 'ಪ್ರಾಜೆಕ್ಟ್ 75 ಇಂಡಿಯ'ದಡಿ ಜರ್ಮನಿ ಸಬ್‌ಮರೀನ್ ಖರೀದಿ ಮಾತುಕತೆಗೆ ಒಪ್ಪಿಗೆ ನೀಡಲಾಗಿದೆ. ಖರೀದಿ ಒಪ್ಪಂದದ ಮಾತುಕತೆ 8 ತಿಂಗಳೊಳಗೆ ಮುಕ್ತಾಯಗೊಳಿಸಲು ಗಡುವು ವಿಧಿಸಲಾಗಿದೆ ಎಂದು ಹಿರಿಯ ರಕ್ಷಣಾ ಅಧಿಕಾರಿ ಮಾಹಿತಿ ನೀಡಿದ್ದಾರೆ.

ಎಐಪಿ ವ್ಯವಸ್ಥೆಯ ಜಲಾಂತರ್ಗಾಮಿ!

- **'ಏರ್ ಇಂಡಿಪೆಂಡೆಂಟ್ ಪ್ರೊಪಲ್ಷನ್'(ಎಐಪಿ) ವ್ಯವಸ್ಥೆಯಿರುವ ಹೊಸ ಪೀಳಿಗೆಯ 'ಥ್ಯಾಸೆನ್‌ಕ್ರುಪ್ ಮರೀನ್ ಸಿಸ್ಟಂ'(ಟಿಕೆಎಂಎಸ್) ಜಲಾಂತರ್ಗಾಮಿಯ ವಿಶೇಷತೆ ಏನೆಂದರೆ ನೀರಿನಾಳದಲ್ಲಿ ಸುದೀರ್ಘ ಅವಧಿಯವರೆಗೂ(ವಾರಗಟ್ಟಲೆ) ಇರಬಲ್ಲ ಅದರ ಸಾಮರ್ಥ್ಯ.**
- **ಜಲಾಂತರ್ಗಾಮಿಯೊಳಗೆ ಆಮ್ಲಜನಕ ಕಡಿಮೆಯಾಗಿದೆ ಎಂದು ಪದೇ ಪದೇ ಸಮುದ್ರದ ಮೇಲ್ಪದರಕ್ಕೆ ಬಂದು ಗಾಳಿಗೆ ತೆರೆದುಕೊಳ್ಳಬೇಕಾದ ಅಗತ್ಯವಿಲ್ಲ. ಏಕೆಂದರೆ ಸಬ್‌ಮರೀನ್‌ನಲ್ಲಿನ 'ಎಐಪಿ' ವ್ಯವಸ್ಥೆಯು ಅಗತ್ಯ ಪ್ರಮಾಣದ ಗಾಳಿಯನ್ನು ಜಲಾಂತರ್ಗಾಮಿಯೊಳಕ್ಕೆ ಒದಗಿಸಬಲ್ಲದಾಗಿದೆ.**
- **ಜಲಾಂತರ್ಗಾಮಿಗೆ ಲಿಥಿಯಮ್ ಬ್ಯಾಟರಿ ಜೋಡಣೆ ಆಗಿದ್ದು, ಕ್ಷಿಪ್ರಗತಿಯಲ್ಲಿ ವೇಗದ ಚಾಲನೆ ಸಾಧ್ಯವಾಗಲಿದೆ.**
- **ಅತ್ಯಾಧುನಿಕ ಸೆನ್ಸರ್ ಅಳವಡಿಸಿರುವುದರಿಂದ ಶತ್ರು ದೇಶಗಳ ದಾಳಿಕೋರ ಸಬ್‌ಮರೀನ್ ಮತ್ತು ಕ್ಷಿಪಣಿಗಳನ್ನು ದೂರದಿಂದಲೇ ಗುರುತಿಸಿ ಪ್ರತಿದಾಳಿ ನಡೆಸಬಲ್ಲಷ್ಟು ಸಮರ್ಥವಾಗಿದೆ.**

ಆರ್‌ಜೆಡಿ ತೇಜಸ್ವಿ ವಿರುದ್ಧ ಎಫ್‌ಐಆರ್

ದೆಹಲಿ: ಪ್ರಧಾನಿ ನರೇಂದ್ರ ಮೋದಿ ಅವರ ಬಗ್ಗೆ ಆಕ್ಷೇಪಾರ್ಹ ಹೇಳಿಕೆಗಳನ್ನು ನೀಡಿದ ಆರೋಪದಡಿ ಬಿಹಾರದ ಮಾಜಿ ಉಪ ಮುಖ್ಯಮಂತ್ರಿ ಮತ್ತು ಆರ್‌ಜೆಡಿ ಪಕ್ಷದ ಮುಖಂಡ ತೇಜಸ್ವಿ ಯಾದವ್‌ಗೆ ಕಾನೂನು ಸಂಕಷ್ಟ ಎದುರಾಗಿದೆ.

ತೇಜಸ್ವಿ ಯಾದವ್ ವಿರುದ್ಧ ಬಿಹಾರದ ಹಲವು ಪೊಲೀಸ್ ಠಾಣೆಗಳಲ್ಲಿ ಹಲವಾರು ದೂರುಗಳು ದಾಖಲಾಗಿವೆ. ಬಿಜೆಪಿ-ದಕ್ಷಿಣ ದೆಹಲಿ ಜಿಲ್ಲಾ ಘಟಕದ ಉಪಾಧ್ಯಕ್ಷ ಕೆ.ಎಸ್.ದುಗ್ಗಲ್ ಅವರು ದೆಹಲಿಯ ಗೋವಿಂದಪುರಿ ಪೊಲೀಸ್ ಠಾಣೆಯಲ್ಲಿ ತೇಜಸ್ವಿ ಯಾದವ್ ವಿರುದ್ಧ ದೂರು ದಾಖಲಿಸಿದ್ದಾರೆ.

ಆರ್‌ಜೆಡಿಯ ಅಧಿಕೃತ 'ಎಕ್ಸ್' ಖಾತೆಯಲ್ಲಿ ಪ್ರಧಾನಿ ಮೋದಿ ಛಾಯಾಚಿತ್ರ ಲಗತ್ತಿಸಿ ಆಕ್ಷೇಪಾರ್ಹ ಕಾಮೆಂಟ್‌ಗಳನ್ನು ಪೋಸ್ಟ್ ಮಾಡಲಾಗಿದೆ. ಇದೆಲ್ಲವೂ ತೇಜಸ್ವಿ ಅವರ ನಿರ್ದೇಶನದ ಮೇರೆಗೆ ನಡೆದಿದೆ. ಪ್ರಧಾನಿ ಕುರಿತ ಈ ಹೇಳಿಕೆಗಳಿಂದಾಗಿ ದೇಶಾದ್ಯಂತದ ಜನರ ಭಾವನೆಗಳಿಗೆ ನೋವಾಗಿದೆ. ಹಾಗಾಗಿ ಆರ್‌ಜೆಡಿ ಪಕ್ಷ ಮತ್ತು ಅದರ ಮುಖಂಡ ತೇಜಸ್ವಿ ಯಾದವ್ ವಿರುದ್ಧ ಕಾನೂನು ಕ್ರಮ ಜರುಗಿಸಬೇಕಿದೆ ಎಂದು ದುಗ್ಗಲ್ ದೂರಿನಲ್ಲಿ ಒತ್ತಾಯಿಸಿದ್ದಾರೆ.

ಎಲ್‌ಪಿಜಿ ಟ್ಯಾಂಕರ್‌ಗೆ ಬೆಂಕಿ, 7 ದುರ್ಮರಣ

ಹೋಶಿಯಾರ್‌ಪುರ: ಪಂಜಾಬ್ ರಾಜ್ಯದ ಹೋಶಿಯಾರ್‌ಪುರ ಬಳಿ ಹೆದ್ದಾರಿಯಲ್ಲಿ ಎಲ್‌ಪಿಜಿ ಬುಲೆಟ್ ಟ್ಯಾಂಕರ್‌ಗೆ ಬೆಂಕಿ ಹೊತ್ತಿಕೊಂಡಿದ್ದರಿಂದ 7 ಮಂದಿ ದುರ್ಮರಣಕ್ಕೀಡಾಗಿದ್ದಾರೆ. ಮಂಡಿಯಾಲ ಅಡ್ಡಾ ಬಳಿ ತರಕಾರಿ ಸಾಗಣೆ ವಾಹನಕ್ಕೆ ಡಿಕ್ಕಿಯಾಗಿದ್ದರಿಂದ ಎಲ್‌ಪಿಜಿ ಬುಲೆಟ್ ಟ್ಯಾಂಕರ್‌ಗೆ ಬೆಂಕಿ ಹೊತ್ತಿಕೊಂಡಿತು. ಟ್ಯಾಂಕರ್‌ನಿಂದ ಗ್ಯಾಸ್ ಸೋರಿಕೆಯಾಗಿದ್ದರಿಂದ ಬೆಂಕಿಯ ಜ್ವಾಲೆ ಸಮೀಪದಲ್ಲೇ ಇದ್ದ 15 ಅಂಗಡಿಗಳು, ನಾಲ್ಕು ಮನೆಗಳಿಗೂ ಕ್ಷಣಮಾತ್ರದಲ್ಲಿ ವ್ಯಾಪಿಸಿತು. ಅವಘಡದಲ್ಲಿ ಮೊದಲಿಗೆ ಇಬ್ಬರು ಸ್ಥಳದಲ್ಲೇ ಸಜೀವ ದಹನವಾದರು. ಉಳಿದಂತೆ 21 ಮಂದಿ ಗಾಯಗೊಂಡರು. ಗಂಭೀರ ಸ್ವರೂಪದಲ್ಲಿ ಸುಟ್ಟಗಾಯಗಳಾಗಿದ್ದವರನ್ನು ತಕ್ಷಣವೇ ಸಮೀಪದ ಆಸ್ಪತ್ರೆಗಳಿಗೆ ಕರೆದೊಯ್ದು ದಾಖಲಿಸಲಾಯಿತು. ಆದರೆ, ಶೇ.90ಕ್ಕೂ ಅಧಿಕ ಪ್ರಮಾಣದಲ್ಲಿ ಸುಟ್ಟಗಾಯಗಳಾಗಿದ್ದ ಐವರು ಚಿಕಿತ್ಸೆಗೆ ಸ್ಪಂದಿಸಲಾಗದೇ ಕೆಲ ಗಂಟೆಗಳಲ್ಲೇ ಅಸುನೀಗಿದರು. ಅವಘಡದಲ್ಲಿ ತರಕಾರಿ ಸಾಗಣೆ ವಾಹನವೂ ಹೊತ್ತಿ ಉರಿದು ಭಸ್ಮವಾಗಿದೆ. ಬೆಂಕಿ ದುರಂತದಲ್ಲಿ ತಮ್ಮವರನ್ನು ಕಳೆದುಕೊಂಡಿದ್ದರಿಂದ ರೊಚ್ಚಿಗೆದ್ದ ಮಂಡಿಯಾಲ ಗ್ರಾಮದ ಜನರು 3 ಗಂಟೆಗಳ ಕಾಲ ರಸ್ತೆ ತಡೆ ನಡೆಸಿ ಆಕ್ರೋಶ ವ್ಯಕ್ತಪಡಿಸಿದರು, ಸಂತ್ರಸ್ತ ಕುಟುಂಬಗಳಿಗೆ ಪರಿಹಾರಕ್ಕೆ ಒತ್ತಾಯಿಸಿದರು. ಬಳಿಕ ಪಂಜಾಬ್ ಸಿಎಂ ಭಗವಂತ್ ಮಾನ್, ಬೆಂಕಿ ದುರಂತದಲ್ಲಿ ಮೃತಪಟ್ಟವರ ಕುಟುಂಬದವರಿಗೆ ತಲಾ 2 ಲಕ್ಷ ರು. ಮತ್ತು ಗಾಯಾಳುಗಳಿಗೆ ಉಚಿತ ವೈದ್ಯಕೀಯ ಚಿಕಿತ್ಸೆಯ ಭರವಸೆ ನೀಡಿದ ಬಳಿಕ ಪ್ರತಿಭಟನೆ ಕೊನೆಗೊಳಿಸಿದರು.

ಬುಲೆಟ್ ಚಲಾಯಿಸಿದ ರಾಹುಲ್ ಕೆನ್ನೆಗೆ ಯುವಕನ ಮುತ್ತು!

'ಮತದಾರರ ಅಧಿಕಾರ ಯಾತ್ರೆ'ಯಲ್ಲಿ ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಮತ್ತು ಆರ್‌ಜೆಡಿ ಮುಖಂಡ ತೇಜಸ್ವಿ ಯಾದವ್ ಬಿಹಾರದ ಪುರ್ನಿಯಾ ಜಿಲ್ಲೆಯಲ್ಲಿ ಭಾನುವಾರ ಬುಲೆಟ್ ಬೈಕ್ ಚಲಾಯಿಸಿದರು. ಈ ವೇಳೆ ಯುವಕನೊಬ್ಬ ಥಟ್ಟನೆ ರಾಹುಲ್ ಕೆನ್ನೆಗೆ ಮುತ್ತಿಟ್ಟ. ತಕ್ಷಣವೇ ಭದ್ರತಾ ಸಿಬ್ಬಂದಿ ಯುವಕನ ಕೆನ್ನೆಗೆ ಭಾರಿಸಿ ದೂರ ತಳ್ಳಿದರು. ರಾಹುಲ್ 8 ದಿನಗಳಲ್ಲಿ 1,300 ಕಿ.ಮೀ. ಯಾತ್ರೆ ನಡೆಸಿದ್ದಾರೆ.

ಪತ್ನಿಗೆ ಬೆಂಕಿಯಿಟ್ಟ ದುಷ್ಟ ಪತಿ ಕಾಲಿಗೆ ಗುಂಡು

36 ಲಕ್ಷ ರು. ವರದಕ್ಷಿಣೆಗೆ ಪತಿ ಒತ್ತಾಯ | ಅಮ್ಮನಿಗೆ ಬೆಂಕಿ ಹಚ್ಚಿದರು: ಮಗು ಸಾಕ್ಷಿ

ದೆಹಲಿ: 36 ಲಕ್ಷ ರು. ವರದಕ್ಷಿಣೆ ತರುವಂತೆ ಒತ್ತಾಯಿಸಿ ಪತ್ನಿಗೆ ಹೊಡೆದು ಹಿಂಸಿಸಿ ಬಳಿಕ ತಾಯಿಯ ಜತೆಗೂಡಿ ಪತ್ನಿಗೆ ಪೆಟ್ರೋಲ್ ಸುರಿದು ಬೆಂಕಿ ಹಚ್ಚಿ ಕೊಲೆ ಮಾಡಿ ತಲೆ ಮರೆಸಿಕೊಂಡಿದ್ದ ಗ್ರೇಟರ್ ನೊಯಿಡಾ ನಿವಾಸಿ ಪತಿ ವಿಪಿನ್ ಭಟಿ ಕಾಲಿಗೆ ಗುಂಡು ಹೊಡೆದು ಪೊಲೀಸರು ಭಾನುವಾರ ಬಂಧಿಸಿದ್ದಾರೆ.

ಅಮ್ಮನಿಗೆ ತಂದೆ ಹೊಡೆಯುತ್ತಿದ್ದುದು, ಮನೆಯಲ್ಲಿಯೇ ಕೂಡಿಹಾಕಿ ಬೆಂಕಿ ಹಚ್ಚಿದ್ದನ್ನು ನೋಡಿದ್ದ ಪುಟ್ಟ ಮಗುವೇ ಪ್ರಕರಣದ ಪ್ರತ್ಯಕ್ಷ ಸಾಕ್ಷಿಯಾಗಿದ್ದು, ಪೊಲೀಸರಿಗೆ ಹೇಳಿಕೆ ನೀಡಿದೆ.

ದೆಹಲಿಯ ಸಫ್ದರ್‌ಜಂಗ್ ಆಸ್ಪತ್ರೆಗೆ ತೀವ್ರ ಸುಟ್ಟಗಾಯಗಳೊಂದಿಗೆ ಮಹಿಳೆ ನಿಕ್ಕಿ ಭಟ್ಟಿ ಗುರುವಾರ ದಾಖಲಾಗಿ ಚಿಕಿತ್ಸೆ ಫಲಿಸದೇ ಅಸುನೀಗಿದ್ದರು. ವರದಕ್ಷಿಣೆ ಕಿರುಕುಳ- ಹತ್ಯೆ ಪ್ರಕರಣ ದಾಖಲಿಸಿಕೊಂಡ ಪೊಲೀಸರು, ತನಿಖೆ ನಡೆಸುತ್ತಿದ್ದಾರೆ.

ಪತ್ನಿ ಸಾವಿನ ಸುದ್ದಿ ಕೇಳುತ್ತಲೇ ತಲೆಮರೆಸಿಕೊಂಡ ಪತಿ ವಿಪಿನ್ ಭಟಿಯನ್ನು ಭಾನುವಾರ ಬೆಳಗ್ಗೆ ಪತ್ತೆ ಹಚ್ಚಿದ ಪೊಲೀಸರು ಬಂಧಿಸಿದರು. ಪೊಲೀಸ್ ಕಸ್ಟಡಿಯಿಂದ ತಪ್ಪಿಸಿಕೊಳ್ಳಲು ಓಡಲಾರಂಭಿಸಿದ ವಿಪಿನ್ ಕಾಲಿಗೆ ಪೊಲೀಸರು ಗುಂಡು ಹಾರಿಸಿ ಮತ್ತೆ ಸೆರೆಹಿಡಿದರು. ಪ್ರಕರಣದಲ್ಲಿ ಆರೋಪಿಗಳಾಗಿರುವ ವಿಪಿನ್ ತಾಯಿ ದಯಾ, ತಂದೆ ಸತ್ಯವೀರ್, ಸೋದರ ರೋಹಿತ್ ಸದ್ಯ ತಲೆಮರೆಸಿಕೊಂಡಿದ್ದಾರೆ. ವಿಪಿನ್‌ಗೆ ಮದುವೆ ಸಂದರ್ಭದಲ್ಲಿ ಸ್ಕಾರ್ಪಿಯೊ ಕಾರು, ಬುಲೆಟ್ ಬೈಕ್, ಗ್ರಾಂಗಟ್ಟಲೆ ಚಿನ್ನ ನೀಡಲಾಗಿತ್ತು. ಹಾಗಿದ್ದರೂ ಆತನ ಧನದಾಹ ತೀರಿರಲಿಲ್ಲ. ನಿಕ್ಕಿ ವರದಕ್ಷಿಣೆ ಕಿರುಕುಳ ಕೊಡುತ್ತಿದ್ದರು ಎಂದು ನಿಕ್ಕಿ ಸಹೋದರಿ ಪೊಲೀಸರಿಗೆ ತಿಳಿಸಿದ್ದಾರೆ.

ಸೋದರಿ ದೂರು: ಪತಿ ಮತ್ತು ಅತ್ತೆ-ಮಾವ ಅಕ್ಕನನ್ನು 36 ಲಕ್ಷ ರು. ವರದಕ್ಷಿಣೆ ಹಣಕ್ಕಾಗಿ ಕೊಂದುಬಿಟ್ಟರು. ತವರಿನಿಂದ ಹಣ ತರುವಂತೆ ಮೂವರೂ ಅಕ್ಕನಿಗೆ ಹಲವು ದಿನಗಳಿಂದ ಹಿಂಸೆ ನೀಡುತ್ತಿದ್ದರು. ಅಕ್ಕನ ಕುತ್ತಿಗೆಗೆ, ತಲೆಗೆ ಬಲವಾಗಿ ಹೊಡೆದು ಕಡೆಗೆ ಪೆಟ್ರೋಲ್ ಸುರಿದು ಬೆಂಕಿ ಹಚ್ಚಿದರು. ನನ್ನಿಂದ ಅವರನ್ನು ತಡೆಯಲು ಆಗಲಿಲ್ಲ ಎಂದು ಮೃತ ಮಹಿಳೆ ನಿಕ್ಕಿ ಭಟಿಯ ಸೋದರಿ ಕಾಂಚನಾ ಪೊಲೀಸರಿಗೆ ಹೇಳಿಕೆ ನೀಡಿದ್ದಾರೆ. ಜತೆಗೆ ಅಕ್ಕನಿಗೆ ಬೆಂಕಿ ಹಚ್ಚಿದ್ದನ್ನು ಮೊಬೈಲ್‌ನಲ್ಲಿ ಚಿತ್ರೀಕರಿಸಿದ್ದಾರೆ. ಕಾಂಚನಾ ಕೂಡ ಭಟಿ ಕುಟುಂಬಕ್ಕೆ ಸೇರಿದ ವ್ಯಕ್ತಿಯನ್ನೇ ವಿವಾಹವಾಗಿದ್ದಾರೆ.

ಸಮಾಚಾರ ಸಣ್ಣದಲ್ಲ

ರಕ್ತದಾನ ಮಾಡಿದ 30ಕ್ಕು ಹೆಚ್ಚು ಜನ

ಹೊಸಪೇಟೆ: ರಾಜಯೋಗಿನಿ ದಾದಿ ಪ್ರಕಾಶಮಣಿ ಜೀ ಅವರ ಪವಿತ್ರ ಸ್ಮರಣಾರ್ಥ ಹಾಗೂ ವಿಶ್ವ ಬಂಧುತ್ವ ದಿನ ಅಂಗವಾಗಿ ಶನಿವಾರ ಇಲ್ಲಿನ ಬಸವಣ್ಣ ಕಾಲುವೆ ಸಮೀಪದ ಬ್ರಹ್ಮಕುಮಾರೀಸ್ ಸಭಾಂಗಣದಲ್ಲಿ 30 ಮಂದಿ ರಕ್ತದಾನ ಮಾಡಿದರು. 100ಕ್ಕೂ ಹೆಚ್ಚು ಮಂದಿ ರಕ್ತದಾನ ಮಾಡಲು ಬಂದಿದ್ದರು. ವಿವಿಧ ಪರೀಕ್ಷೆಗಳು, ರಕ್ತದೊತ್ತಡ, ಮಧುಮೇಹ ಪರೀಕ್ಷೆ ನಡೆಸಿದ ಬಳಿಕ 30 ಮಂದಿ ರಕ್ತದಾನ ಮಾಡಲು ಅರ್ಹರು ಎಂಬುದು ಕಂಡುಬಂತು. ಹೀಗಾಗಿ ಅವರಿಂದ ಮಾತ್ರ ರಕ್ತ ಪಡೆಯಲಾಯಿತು. ರಕ್ತದಾನ ಮಾಡಿದವರಲ್ಲಿ ಬಹುತೇಕರು ಇದೇ ಪ್ರಥಮ ಬಾರಿಗೆ ರಕ್ತದಾನ ಮಾಡಿದ್ದಾರೆ ಎಂದು ಪ್ರಜಾಪಿತ ಬ್ರಹ್ಮಕುಮಾರಿ ಈಶ್ವರೀಯ ವಿಶ್ವವಿದ್ಯಾಲಯದ ಸಂಚಾಲಕರಾದ ಮಾನಸ ಅಕ್ಕ ತಿಳಿಸಿದರು. ರಕ್ತದಾನ ಶಿಬಿರದ ಉದ್ಘಾಟನಾ ಸಮಾರಂಭದಲ್ಲಿ ಪತಂಜಲಿ ಯೋಗ ಸಮಿತಿ ಯುವಭಾರತ ರಾಜ್ಯ ಪ್ರಭಾರಿ ಕಿರಣ್ ಕುಮಾರ್, ರೆಡ್‌ಕ್ರಾಸ್ ಸಂಸ್ಥೆಯ ಅನ್ನಪೂರ್ಣಾ ಸದಾಶಿವ, ಟಿ.ಬಿ.ಡ್ಯಾಂ ಠಾಣೆಯ ಇನ್‌ಸ್ಪೆಕ್ಟರ್ ಮೊಹಮ್ಮದ್ ಗೌಸ್, ಸರಕಾರಿ 100 ಹಾಸಿಗೆ ಆಸ್ಪತ್ರೆಯ ಡಾ.ಐಶ್ವರ್ಯಾ ಇದ್ದರು. ಆಸ್ಪತ್ರೆಯ ಬ್ಲಡ್‌ಬ್ಯಾಂಕ್ ಉಸ್ತುವಾರಿ ಶಿವಮೂರ್ತಿ, ಸಿಬ್ಬಂದಿ ವೆಂಕಟೇಶ್ ಸಹಕರಿಸಿದರು.

ಮಸ್ಕಿಯಲ್ಲಿ ಪೊಲೀಸ್ ಸಿಬ್ಬಂದಿ ಪರೇಡ್

ಮಸ್ಕಿ: ಗಣೇಶ ಉತ್ಸವ, ಈದ್ ಮಿಲಾದ್ ಹಿನ್ನೆಲೆಯಲ್ಲಿ ಪಟ್ಟಣದ ಮುಖ್ಯ ವೃತ್ತ ಗಳ ಬಳಿ ಪೊಲೀಸರು ರೂಟ್ ಮಾರ್ಚ್ ನಡೆಸಿ ಸಾರ್ವಜನಿಕರ ಗಮನ ಸೆಳೆದರು. ಇಲ್ಲಿಯ ಠಾಣೆ ಬಳಿಯಿಂದ ಆರಂಭ ಗೊಂಡ ರೂಟ್ ಮಾರ್ಚ್ ಹಳೆ ಬಸ್ ನಿಲ್ದಾಣ, ಪುರಸಭೆ ಕ್ರಾಸ್, ಡಾ.ಖಲೀಲ್ ವೃತ್ತ, ಡಿಕೆ ಸರ್ಕಲ್, ತೇರ್ ಬಜಾರ್, ಕನಕ ವೃತ್ತ ಮೂಲಕ ಸಾಗಿ ಠಾಣೆ ತಲುಪಿತು. ಪೊಲೀಸರ ರೂಟ್ ಮಾರ್ಚ್ ವೀಕ್ಷಿಸಲು ದಾರಿ ಉದ್ದಕ್ಕೂ ಸಾರ್ವಜನಿಕರು ನೆರೆದಿದ್ದರು. ಲಿಂಗಸುಗೂರು ಡಿವೈಎಸ್ಪಿ ದತ್ತಾತ್ರೇಯ ಕರ್ನಾಡ್, ಸಿಪಿಐ ಬಾಲ ಚಂದ್ರ ಲಕ್ಕಂ, ಲಿಂಗಸುಗೂರು ಸಿಪಿಐ ಪುಂಡಲೀಕ, ಹಟ್ಟಿ ಚಿನ್ನದ ಗಣಿ ಪಿಐ ಹೊಸಗೇರಪ್ಪ, ಮಸ್ಕಿ ಪಿಎಸ್ ಐ ರಂಗಯ್ಯ, ಮುದಗಲ್ ಪಿಎಸ್ ಐ ವೆಂಕಟೇಶ ಹಾಗೂ ಪೊಲೀಸರು ಪಾಲ್ಗೊಂಡಿದ್ದರು.

ಮಹಿಳಾ ಸಬಲೀಕರಣಕ್ಕೆ ಆರ್ಥಿಕ ಸ್ವಾವಲಂಬನೆ

ಕುಷ್ಟಗಿ: ಆರ್ಥಿಕ ಸ್ವಾವಲಂಬನೆ ಮಹಿಳಾ ಸಬಲೀಕರಣದ ಮೊದಲ ಹೆಜ್ಜೆ ಎಂದು ಎಸ್ ವಿ ಸಿ ಶೈಕ್ಷಣಿಕ ಮತ್ತು ಗ್ರಾಮೀಣ ಅಭಿವೃದ್ಧಿ ಸಂಸ್ಥೆ ಕಾರ್ಯದರ್ಶಿಯಾದ ಬಸವರಾಜ್ ಚಂದ್ರಶೇಖರ್ ಹೇಳಿದರು. ರಿಚ್ ಮಚ್ ಹೈಯರ್ ಅಕಾಡೆಮಿಕ್ ಫೌಂಡೇಶನ್, ಬೆಂಗಳೂರು, ಇಂಟೆಲ್ ಸಂಸ್ಥೆ, ಬೆಂಗಳೂರು, ಎಸ್ ವಿ ಸಿ ಶೈಕ್ಷಣಿಕ ಮತ್ತು ಗ್ರಾಮೀಣ ಅಭಿವೃದ್ಧಿ ಸಂಸ್ಥೆ, ಕುಷ್ಟಗಿ, ಹಾಗೂ ಸಿವಿಸಿ ಫೌಂಡೇಶನ್, ಕೊಪ್ಪಳ, ಜಂಟಿಯಾಗಿ ಆಯೋಜಿಸಿದ್ದ ಒಂದು ತಿಂಗಳ ಉಚಿತ ಬ್ಯೂಟಿಷಿಯನ್ ತರಬೇತಿ ಕಾರ್ಯಗಾರವನ್ನು ಉದ್ಘಾಟಿಸಿ ಅವರು ಮಾತನಾಡಿದರು. ಖಾಸಗಿಯಾಗಿ ಬ್ಯೂಟಿಷಿಯನ್ ಕೋರ್ಸ್ ಕಲಿಯಲು ತುಂಬಾ ಶುಲ್ಕ ತೆರಬೇಕು. ಅದನ್ನು ಇಲ್ಲಿ ಉಚಿತವಾಗಿ ಕಲಿಸಿಕೊಡಲಾಗುತ್ತದೆ. ತರಬೇತಿ ನಂತರ ಒಂದು ತಿಂಗಳ ಪಾರ್ಲರ್ ಭೇಟಿ ಆಯೋಜಿಸಲಾಗುವುದು. ಆದ್ದರಿಂದ ಶಿಬಿರಾರ್ಥಿಗಳು ಯಶಸ್ವಿಯಾಗಿ ತರಬೇತಿ ಮುಗಿಸಿದರೆ ಮಾತ್ರ ಉಚಿತ ಕೊಡುಗೆ ಅರ್ಥಪೂರ್ಣವಾಗಿರುತ್ತದೆ ಎಂದು ಎಸ್ ವಿ ಸಿ ಪ್ರೌಢ ಪ್ರಾಥಮಿಕ ಮತ್ತು ಪ್ರೌಢ ಶಾಲೆಯ ಮುಖ್ಯೋಪಾಧ್ಯಾಯರಾದ ಭೀಮರಾವ್ ಕುಲಕರ್ಣಿ ಹೇಳಿದರು.

ಕಟ್ಟಡ ಕಾರ್ಮಿಕರ 5ನೇ ಸಮ್ಮೇಳನಕ್ಕೆ ಚಾಲನೆ

ಕೊಪ್ಪಳ: ನಗರದ ಮೇಘರಾಜ ಕಲ್ಯಾಣ ಮಂಟಪದಲ್ಲಿ ಎರಡು ದಿನ ನಡೆಯಲಿರುವ ಕಟ್ಟಡ ಹಾಗೂ ಇತರೇ ನಿರ್ಮಾಣ ಕಾರ್ಮಿಕರ 5ನೇ ರಾಜ್ಯ ಮಟ್ಟದ ಸಮ್ಮೇಳನಕ್ಕೆ ಭಾನುವಾರ ಚಾಲನೆ ನೀಡಲಾಯಿತು. ಸಿಐಟಿಯು ರಾಜ್ಯ ಕಾರ್ಯದರ್ಶಿ ಮೀನಾಕ್ಷಿ ಸುಂದರಂ ಸಮೇಳನದ ಬಹಿರಂಗ ಸಭೆಯಲ್ಲಿ ಮಾತನಾಡಿ, ಮುಂದಿನ 3 ವರ್ಷ ಕಾರ್ಮಿಕರ ಭವಿಷ್ಯ ನಿರ್ಧರಿಸುವ ನಿಟ್ಟಿನಲ್ಲಿ ಸಮ್ಮೇಳನ ಯಶಸ್ವಿಯಾಗಬೇಕು. ಕಟ್ಟಡ ಕಾರ್ಮಿಕರಿಗೆ ಆರೋಗ್ಯ, ಮಕ್ಕಳ ಶಿಕ್ಷಣ, ಭವಿಷ್ಯಕ್ಕಾಗಿ ಕಲ್ಯಾಣ ಮಂಡಳಿ ರಚನೆಯಾಗಿದೆ. ಹಟ್ಟಿ ಚಿನ್ನದ ಗಣಿ ಸಿಬ್ಬಂದಿ ಹಾಗೂ ಕಾರ್ಮಿಕ ಸಂಘದ ಪ್ರಧಾನ ಕಾರ್ಯದರ್ಶಿ ಎಸ್.ಎಂ.ಶಫಿ, ಫೆಡರೇಶನ್ ಜಿಲ್ಲಾ ಪ್ರಧಾನ ಕಾರ್ಯದರ್ಶಿ ಖಾಸಿಂ ಸರದಾರ ಮಾತನಾಡಿದರು. ಸಿಐಟಿಯು ಜಿಲ್ಲಾಧ್ಯಕ್ಷ ನಿರುಪಾದಿ ಬೆಣಕಲ್, ಸ್ವಾಗತ ಸಮಿತಿಯ ಇಸ್ಮಾಯಿಲ್ ಇಟಗಿ, ಜಿ.ನಾಗರಾಜ, ಹುಸೇನಪ್ಪ, ಬಾಳಪ್ಪ ಹುಲಿಹೈದರ, ಅಮರೇಶ ಕಡಗದ, ರಂಗಪ್ಪ ದೊರೆ, ಮಂಜುನಾಥ ಡಗ್ಗಿ ಇದ್ದರು.

{ನಿಖಿಲ್ ಕುಮಾರಸ್ವಾಮಿ} ರಾಜ್ಯಾಧ್ಯಕ್ಷ

ಕಾಂಗ್ರೆಸ್‌ನವರೇ ದಯಮಾಡಿ ಎಚ್ಚರಿಕೆಯಿಂದ ಇರಿ. ಸಿದ್ದರಾಮಣ್ಣವರ ರಾಜಕಾರಣದ ಇತಿಹಾಸ ನಿಮಗೆಲ್ಲರಿಗೂ ಗೊತ್ತಿದೆ. ಅವರು ಉಂಡ ಮನೆಗೆ ದ್ರೋಹ ಬಗೆಯುತ್ತಾರೆ. ನೀವೇನಾದ್ರೂ ಮುಖ್ಯಮಂತ್ರಿ ಕುರ್ಚಿ ಸ್ವಲ್ಪ ಅಲುಗಾಡುತ್ತಿದೆ ಅಂದರೆ ಅಲ್ಲಾಡಿಸಿ ಮಲಗ್ಸಿ ಸಿದ್ರಾಮಯ್ಯ ಹೊರಟು ಹೋಗ್ತಾರೆ.

ಕೆ.ಇ.ಚಿದಾನಂದಪ್ಪ ನೇತೃತ್ವದಲ್ಲಿ ಬಳ್ಳಾರಿಯಲ್ಲಿ ಗ್ಯಾರಂಟಿ ಯೋಜನೆಗಳ ಪ್ರಗತಿ ಪರಿಶೀಲನಾ ಸಭೆ

ಪಂಚ ಗ್ಯಾರಂಟಿಗಳು ಉತ್ತಮ ಅನುಷ್ಠಾನ

ಬಳ್ಳಾರಿ: ಕರ್ನಾಟಕ ಸರಕಾರವು ಜಾರಿಗೆ ತಂದಿರುವ ಪಂಚ ಗ್ಯಾರಂಟಿ ಯೋಜನೆಗಳು ಜನರಲ್ಲಿ ಉತ್ತಮ ಪ್ರತಿಕ್ರಿಯೆ ಪಡೆದಿದ್ದು, ಬಳ್ಳಾರಿ ಜಿಲ್ಲೆಯಾದ್ಯಂತ ಮಹತ್ತರ ಪ್ರಮಾಣದಲ್ಲಿ ಅನುಷ್ಠಾನಗೊಳಿಸಲಾಗಿದೆ ಎಂದು ಜಿಲ್ಲಾ ಗ್ಯಾರಂಟಿ ಯೋಜನೆಗಳ ಅನುಷ್ಠಾನ ಪ್ರಾಧಿಕಾರದ ಅಧ್ಯಕ್ಷ ಕೆ.ಇ.ಚಿದಾನಂದಪ್ಪ ಹೇಳಿದರು.

ನಗರದ ಕೋಟೆ ಪ್ರದೇಶದ ಜಿಪಂ ನಜೀರ್ ಸಭಾಂಗಣದಲ್ಲಿ ಆಯೋಜಿಸಿದ್ದ ಐದು ಗ್ಯಾರಂಟಿ ಯೋಜನೆಗಳ ಜಿಲ್ಲಾ ಪ್ರಗತಿ ಪರಿಶೀಲನಾ ಸಭೆಯ ಅಧ್ಯಕ್ಷತೆವಹಿಸಿ ಮಾತನಾಡಿ, ಜಿಲ್ಲೆಯಲ್ಲಿ ಐದು ಗ್ಯಾರಂಟಿ ಯೋಜನೆಗಳ ಪ್ರಗತಿ ಉತ್ತಮವಾಗಿದೆ ಎಂದರು.

ಗೃಹಲಕ್ಷ್ಮಿ ಯೋಜನೆಯಡಿ ಜಿಲ್ಲೆಯ ಒಟ್ಟು 54.49 ಲಕ್ಷ ಫಲಾನುಭವಿಗಳಿಗೆ ಸಹಾಯಧನ ನೆರವು ತಲುಪಿದ್ದು, ಈ ಯೋಜನೆಯಡಿ ಜಿಲ್ಲೆಗೆ 1089.80 ಕೋಟಿ ರು. (2025ರ ಫೆಬ್ರವರಿ ಮತ್ತು ಮಾರ್ಚ್ ಮಾಹೆ ಹೊರತುಪಡಿಸಿ) ಸರಕಾರ ಪಾವತಿಸಿದೆ. ಇದೊಂದು ಮಹತ್ತರ ಮೈಲಿಗಲ್ಲಾಗಿದೆ ಎಂದರು.

ಅನ್ನಭಾಗ್ಯ ಯೋಜನೆಯಡಿ ಜಿಲ್ಲೆಯ ಒಟ್ಟು 1.81 ಕೋಟಿ ಪಡಿತರ ಚೀಟಿಗಳ ಫಲಾನುಭವಿಗಳಿಗೆ ಒಟ್ಟು 292.29 ಕೋಟಿ ರು. ಡಿಬಿಟಿ ಮೂಲಕ ಹಣ ಪಾವತಿಸಲಾಗಿದ್ದು, 2025 ರ ಫೆಬ್ರವರಿ ತಿಂಗಳಿನಿಂದ ಹಣ ಬದಲಾಗಿ, ಪಡಿತರ ಅಕ್ಕಿ, ಬದಲಾಗಿ ಜೋಳ ಸಹ ವಿತರಿಸಲಾಗುತ್ತಿದೆ ಎಂದು ಆಹಾರ ಇಲಾಖೆಯ ಉಪನಿರ್ದೇಶಕರಾದ ಸಕೀನ ಅವರು ಸಭೆಗೆ ತಿಳಿಸಿದರು.

ಗೃಹಜ್ಯೋತಿ ಯೋಜನೆಯಡಿ ನೋಂದಾಯಿಸಿಕೊಂಡ 2.86 ಲಕ್ಷ ಮನೆಗಳಿಗೆ ಉಚಿತ ವಿದ್ಯುತ್ ಪ್ರಯೋಜನ ತಲುಪಿದ್ದು, ಪ್ರಗತಿ ಪ್ರಮಾಣ ಶೇ.95 ಪ್ರಗತಿಯಾಗಿದೆ. ಈ ಯೋಜನೆಗೆ ರೂ.322 ಕೋಟಿ ಜಿಲ್ಲೆಯ ಅರ್ಹ ಫಲಾನುಭವಿಗಳಿಗೆ ವೆಚ್ಚವಾಗಿದೆ ಎಂದು ಜೆಸ್ಕಾಂ ಅಧಿಕಾರಿಗಳು ಸಭೆಗೆ ತಿಳಿಸಿದರು. ಈ ಸಂದರ್ಭದಲ್ಲಿ ಬಳ್ಳಾರಿ ತಾಲ್ಲೂಕು ಗ್ಯಾರಂಟಿ ಯೋಜನೆಗಳ ಅಧ್ಯಕ್ಷ ಗೋನಾಳ್ ಎಂ.ನಾಗಭೂಷಣ ಗೌಡ, ಕುರುಗೋಡು ತಾಲ್ಲೂಕು ಅಧ್ಯಕ್ಷ ಜಿ. ಬಸವನಗೌಡ, ಕಂಪ್ಲಿ ತಾಲ್ಲೂಕು ಅಧ್ಯಕ್ಷ ಶ್ರೀನಿವಾಸ್ ರಾವ್, ಸಿರುಗುಪ್ಪ ತಾಲ್ಲೂಕು ಅಧ್ಯಕ್ಷ ಮಾರುತಿ ವರಪ್ರಸಾದ್ ರೆಡ್ಡಿ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ಉಪನಿರ್ದೇಶಕ ರಾಮಕೃಷ್ಣ ಸೇರಿದಂತೆ ತಾಪಂ ಇಒಗಳು ಹಾಗೂ ಇತರರು ಉಪಸ್ಥಿತರಿದ್ದರು.

ನಗರದ ಕೋಟೆ ಪ್ರದೇಶದ ಜಿಪಂ ನಜೀರ್ ಸಭಾಂಗಣದಲ್ಲಿ ಆಯೋಜಿಸಿದ್ದ ಐದು ಗ್ಯಾರಂಟಿ ಯೋಜನೆಗಳ ಜಿಲ್ಲಾ ಪ್ರಗತಿ ಪರಿಶೀಲನಾ ಸಭೆಯಲ್ಲಿ ಚಿದಾನಂದಪ್ಪ ಮಾತನಾಡಿದರು.

ಪಂಚ ಗ್ಯಾರಂಟಿ ಯೋಜನೆಗಳ ಸಕಾಲಿಕ ಜಾರಿಗೆ ಜನರಿಂದ ಉತ್ತಮ ಪ್ರತಿಕ್ರಿಯೆ ದೊರಕಿದ್ದು, ಸರಕಾರದ ಕಲ್ಯಾಣ ಕಾರ್ಯಗಳು ತಲುಪುತ್ತಿರುವುದಕ್ಕೆ ಇದೊಂದು ಸಾಕ್ಷಿಯಾಗಿದೆ. ಅದೇರೀತಿಯಾಗಿ ತಾಪಂ ಮಟ್ಟದಲ್ಲಿಯೂ ಪ್ರಗತಿ ಪರಿಶೀಲನಾ ಸಭೆ ನಡೆಸಬೇಕು ಎಂದು ಸರಕಾರದ ನಿರ್ದೇಶನವಿದ್ದು, ತಾಲೂಕು ಅಧ್ಯಕ್ಷರ ನೇತೃತ್ವದಲ್ಲಿ ಎಲ್ಲಾ ತಾಲೂಕಿನಲ್ಲಿ 3-4 ಗ್ರಾಪಂ ಫಲಾನುಭವಿಗಳ ಸಮಸ್ಯೆ ಕುರಿತು ಗ್ರಾಮ ಸಭೆ ಅಥವಾ ಇನ್ನಿತರೆ ಪೂರಕ ಸಭೆ ಜರುಗಿಸಲು ಸೂಕ್ತ ಕಾರ್ಯಯೋಜನೆ ರೂಪಿಸಬೇಕು. ತಾಲೂಕು ಸಮಿತಿ ರಚಿಸಬೇಕಿದೆ.

-ಕೆ.ಇ.ಚಿದಾನಂದಪ್ಪ, ಗ್ಯಾರಂಟಿ ಜಿಲ್ಲಾಧ್ಯಕ್ಷ

ಶಕ್ತಿ ಯೋಜನೆ ಶೇ. 100 ರಷ್ಟು ಯಶಸ್ವಿ

ಅದೇ ರೀತಿ ಶಕ್ತಿ ಯೋಜನೆಯಡಿ ಮಹಿಳೆಯರಿಗೆ ಉಚಿತ ಬಸ್ ಪ್ರಯಾಣ ಸೌಲಭ್ಯ ಒದಗಿಸಲಾಗಿದ್ದು, 5.36 ಕೋಟಿ ಪ್ರಯಾಣಗಳು ದಾಖಲಾಗಿವೆ. ಈ ಯೋಜನೆಯು ಕೂಡ ಶೇ.100 ರಷ್ಟು ಯಶಸ್ವಿಯಾಗಿ ಅನುಷ್ಠಾನಗೊಂಡಿದ್ದು, ಯೋಜನೆ ಜಾರಿಯಾದಾಗಿನಿಂದ ಇಲ್ಲಿಯವರೆಗೆ ರು.207.20 ಕೋಟಿ ವೆಚ್ಚವಾಗಿದೆ ಎಂದು ಕೆಕೆಆರ್‌ಟಿಸಿ ಬಳ್ಳಾರಿ ವಿಭಾಗದ ಅಧಿಕಾರಿಗಳು ಸಭೆಗೆ ತಿಳಿಸಿದರು.

ವಿಶೇಷ ಶಿಬಿರ ಆಯೋಜಿಸಿ

ಜಿಲ್ಲೆಯಲ್ಲಿ ಗೃಹಲಕ್ಷ್ಮೀ ಯೋಜನೆಯಡಿ ನೋಂದಾಯಿಸಿಕೊಂಡ ಫಲಾನುಭವಿಗಳಿಗೆ ವಿವಿಧ ಕಾರಣಗಳಿಂದ ಹಣ ಪಾವತಿಯಾಗುತ್ತಿಲ್ಲ ಎಂದು ದೂರು ಕೇಳಿ ಬರುತ್ತಿವೆ. ಅವರಿಗೆ ಸೂಕ್ತ ಮಾಹಿತಿ ನೀಡಲು ಹಾಗೂ ಇತ್ಯರ್ಥಕ್ಕೆ ಗ್ರಾಪಂ ವ್ಯಾಪ್ತಿಯಲ್ಲಿ ವಿಶೇಷ ಶಿಬಿರ ಆಯೋಜಿಸಬೇಕು ಎಂದು ತಾಪಂ ಇಒ ಗಳಿಗೆ ನಿರ್ದೇಶನ ನೀಡಿದ ಅವರು, ಎನ್‌ಸಿಪಿಐ ಲಿಂಕ್ ಮಾಡಿಸದೇ ಇರುವ 1098 ಮತ್ತು ಆಧಾರ್ ಇ-ಕೈವೈಸಿ ಮಾಡಿಸದೇ ಇರುವ 109 ಫಲಾನುಭವಿಗಳ ಮಾಹಿತಿ ಪಡೆದು ಕೂಡಲೇ ಪರಿಹರಿಸಬೇಕು ಎಂದು ಹೇಳಿದರು.

ಜಿಲ್ಲೆಯಲ್ಲಿ ಆಯೋಜಿಸಲಾಗುವ ಉದ್ಯೋಗ ಮೇಳಗಳಲ್ಲಿ ಯುವ ನಿಧಿ ಯೋಜನೆ ಕುರಿತು ಹೆಚ್ಚು ಪ್ರಚಾರ ನೀಡಬೇಕು.

-ಮಹಮ್ಮದ್ ಹ್ಯಾರೀಸ್ ಸುಮೈರ್, ಜಿಪಂ ಮುಖ್ಯ ಕಾರ್ಯನಿರ್ವಾಹ ಅಧಿಕಾರಿ

ವಿಜೃಂಭಣೆಯಿಂದ ಜರುಗಿದ ಲಕ್ಷ್ಮೀದೇವಿ ಜಾತ್ರೆ

ಕಾರಟಗಿ: ತಾಲೂಕಿನ ನಾಗನಕಲ್ ಗ್ರಾಮದ ಆರಾಧ್ಯ ದೈವ ಶ್ರೀ ಲಕ್ಷ್ಮೀದೇವಿ ಜಾತ್ರೆ ವಿಜೃಂಭಣೆಯಿಂದ ಶನಿವಾರ ಜರುಗಿತು.

ಬೆನಕನ ಅಮವಾಸ್ಯೆ ದಿನ ನಡೆಯುವ ಜಾತ್ರೆ ಮಹೋತ್ಸವದ ನಿಮಿತ್ತ ದೇವಸ್ಥಾನದಲ್ಲಿ ಹರ ಚರ ಗುರು ಮೂರ್ತಿಗಳ ಸಾನ್ನಿಧ್ಯದಲ್ಲಿ ಅರ್ಚಕರು ಲಕ್ಷ್ಮೀದೇವಿ ಮೂರ್ತಿಗೆ ವಿಶೇಷ ಅಭಿಷೇಕ ನೆರವೇರಿಸಿದರು. ವಿವಿಧ ಧಾರ್ಮಿಕ ಆಚರಣೆ ನೆರವೇರಿಸಿದರು. ನಂತರ ವಿವಿಧ ವಾದ್ಯ, ಮೇಳ, ಭಾಜಾ ಭಜಂತ್ರಿಯೊಂದಿಗೆ ಸುಮಂಗಲೆಯರು ಕುಂಭಕಳಸದೊಂದಿಗೆ ಗಂಗೆ ಸ್ಥಳಕ್ಕೆ ತೆರಳಿ ಪೂಜೆ ಸಲ್ಲಿಸಿ ದೇವಸ್ಥಾನಕ್ಕೆ ಆಗಮಿಸಿದರು.

ದೇವಸ್ಥಾನದಲ್ಲಿ ದೇವಿಗೆ ಅಲಂಕಾರ, ನೈವೆದ್ಯ ಮಹಾ ಮಂಗಳಾರತಿ ನಡೆಸಿ ಭಕ್ತರಿಗೆ ತೀರ್ಥ ಪ್ರಸಾದದೊಂದಿಗೆ ಮಹಾ ಅನ್ನಸಂತರ್ಪಣೆ ನಡೆಯಿತು. ಸಾವಿರಾರು ಭಕ್ತರು ಸಂಜೆ ವರೆಗೂ ದೇವಿಯ ಮಹಾ ಅನ್ನ ಪ್ರಸಾಧ ಸ್ವೀಕರಿಸಿ ದೇವಿಯ ಕೃಪೆಗೆ ಪಾತ್ರರಾದರು. ಸಂಜೆ ಶ್ರೀ ಲಕ್ಷ್ಮೀದೇವಿಯ ರಥಕ್ಕೆ ಪ್ರಧಾನ ಅರ್ಚಕರು ಪೂಜೆ ಸಲ್ಲಿಸಿದ ಬಳಿಕ ಹರಚರಗುರು ಮೂರ್ತಿಗಳ ಮಂತ್ರ ಪಠಣೆ ಹಾಗೂ ಭಕ್ತ ಸಮೂಹದ ಜಯ ಘೋಷದೊಂದಿಗೆ ಮಹಿಳೆಯರಿಂದ ಅದ್ದೂರಿಯಾಗಿ ರಥೋತ್ಸವ ನಡೆಯಿತು.

ಭಕ್ತರು ರಥಕ್ಕೆ ಹಣ್ಣು ಕಾಯಿ ಕರ್ಪೂರ ಅರ್ಪಿಸಿ ಕೃತಾರ್ಥರಾದರು. ನವಲಿ ಕಾರಟಗಿ ಮುಖ್ಯ ರಸ್ತೆ ಇಳಿಸಂಜೆಯಲ್ಲ ವೀರಾಜಮಾನವಾಗಿ ಹೊರಟ ದೇವಿಯ ರಥೋತ್ಸವಕ್ಕೆ ಭಕ್ತರು ಬಾಳೆ ಹಣ್ಣು, ಉತ್ತತ್ತಿ ಎಸೆದು ಭಕ್ತಿ ಮೆರೆದರು. ರಥೋತ್ಸವ ಪಾದಗಟ್ಟೆ ತಲುಪಿ ಮರಳಿ ದೇವಸ್ಥಾನದ ಬಳಿಯ ಸ್ವಸ್ಥಾನಕ್ಕೆ ತಲುಪಿತು. ದೇವಸ್ಥಾನ ಸಮಿತಿ ಪದಾಧಿಕಾರಿಗಳು, ಗ್ರಾಮದ ಪ್ರಮುಖರು, ಗ್ರಾಮಸ್ಥರು ಇದ್ದರು.

ಕಾರಟಗಿ ಸಮೀಪದ ನಾಗನಕಲ್ ಹೊರ ವಲಯದಲ್ಲಿ ಲಕ್ಷ್ಮೀದೇವಿ ಜಾತ್ರಾಮಹೋತ್ಸವ ನಿಮಿತ್ತ ರಥೋತ್ಸವ ವಿಜೃಂಭಣೆಯಿಂದ ಜರುಗಿತು.

ವಿಕಾಸ್ ಬ್ಯಾಂಕ್: ಶೇ. 18% ರಷ್ಟು ಲಾಭಾಂಶ

ಹೊಸಪೇಟೆ: ವಿಕಾಸ ಸೌಹಾರ್ದ ಕೋ ಆಪರೇಟಿವ್ ಬ್ಯಾಂಕಿನ 30ನೇ ಸರ್ವ ಸದಸ್ಯರ ವಾರ್ಷಿಕ ಮಹಾಸಭೆ ತನ್ನ ಸದಸ್ಯರಿಗೆ ಶೇ 18% ಲಾಭಾಂಶವನ್ನು ಹಂಚಿಕೆ ಮಾಡಿಕೊಡಲು ಒಪ್ಪಿಗೆ ನೀಡಿದೆ ಎಂದು ಬ್ಯಾಂಕ್ ಅಧ್ಯಕ್ಷ ವಿಶ್ವನಾಥ ಚ.ಹಿರೇಮಠ ಹೇಳಿದರು.

ನಗರದ ಹೋಟೆಲ್ ಮಲ್ಲಿಗೆ ಸಭಾಂಗಣದಲ್ಲಿ ಶನಿವಾರ ನಡೆದ ಮಹಾಸಭೆಯಲ್ಲಿ ಸದಸ್ಯರಿಗೆ ಶೇಕಡಾ 18ರಷ್ಟು ಲಾಭಾಂಶದ ಘೋಷಣೆಯ ಜತೆಯಲ್ಲಿಯೇ ಬ್ಯಾಂಕ್ ಕಳೆದ ವರ್ಷದಲ್ಲಿ ಬ್ಯಾಂಕ ಮಾಡಿದ ಸಾಧನೆ ಹಾಗೂ ಮುಂದಿನ ಯೋಜನೆಗಳ ಕುರಿತಾಗಿ ಬ್ಯಾಂಕಿನ ಸದಸ್ಯರಿಗೆ ಮಾಹಿತಿ ನೀಡಿದರು.

ಡಿಜಿಟಲ್ ಬ್ಯಾಂಕಿಂಗನ್ನು ಸುರಕ್ಷಿತವಾಗಿಸುವ ನಿಟ್ಟಿನಲ್ಲಿ ಭಾರತೀಯ ರಿಜರ್ವ್ ಬ್ಯಾಂಕ್ ಮಾರ್ಗದರ್ಶಿ ಸೂತ್ರದಂತೆ ವಿಕಾಸ ಬ್ಯಾಂಕಿನ ವೆಬ್‌ಸೈಟನ್ನು. com ನಿಂದ bank.in ಜಾಲಕ್ಕೆ ಸ್ಥಾನಾಂತರಗೊಂಡಿದ್ದು ರಾಜ್ಯದಲ್ಲೇ ಈ ಪ್ರಕ್ರಿಯೆ ಸಂಪೂರ್ಣಗೊಳಿಸಿದ ಮೊದಲ ಸಹಕಾರಿ ಬ್ಯಾಂಕ ಆಗಿದೆ ಎಂದರು. ವ್ಯವಸ್ಥಾಪನಾ ಮಂಡಳಿ ಅಧ್ಯಕ್ಷ ಬಿ.ಜೆ.ಕುಲಕರ್ಣಿ, ವ್ಯವಸ್ಥಾಪಕ ನಿರ್ದೇಶಕ ಪ್ರಸನ್ನ ಹಿರೇಮಠ, ಛಾಯಾದಿವಾಕರ, ರಮೇಶ ಪುರೋಹಿತ, ಲಲಿತ ಪ್ರಸನ್ನ, ಎಂ. ವೆಂಕಪ್ಪ, ಪದ್ಮಾ, ಕೆ.ಉಷಾ, ಕೆ.ವಿಕಾಸ ಆಡಳಿತ ಮಂಡಳಿ ಸದಸ್ಯರು, ಬ್ಯಾಂಕಿನ ಸದಸ್ಯರು ಹಾಗೂ ಸಿಬ್ಬಂದಿಗಳು ಕಾರ್ಯಕ್ರಮದಲ್ಲಿ ಇದ್ದರು.

ಹೊಸ ಬ್ಯಾಂಕ್ ವಿಲೀನ

ಆಳಂದದ ಶ್ರೀ ಶಿವಯೋಗಿ ಸಿದ್ಧರಾಮೇಶ್ವರ ಸಹಕಾರಿ ಬ್ಯಾಂಕ್ ವಿಲೀನ ಪ್ರಕ್ರಿಯೆ ಭಾರತೀಯ ರಿಜರ್ವ್ ಬ್ಯಾಂಕ್ ಮುಂದಿದ್ದು ಶುಕ್ರವಾರ ವಷ್ಟೇ ನಡೆದ ಆಡಳಿತ ಮಂಡಳಿಯ ಸಭೆಯಲ್ಲಿ ದಾವಣಗೆರೆಯ ಸಿಟಿ ಕೋ ಆಪರೇಟಿವ್ ವಿಲೀನಕ್ಕೆ ಬಂದ ಪ್ರಸ್ತಾವನೆಯನ್ನು ಒಪ್ಪಕೊಂಡಿದ್ದು ಅದಕ್ಕೂ ಪ್ರಸ್ತಾವನೆಯನ್ನು ಕಳುಹಿಸಲು ಮುಂದಾಗುತ್ತೇವೆ ಎಂದರು.

ಹಿಂದೂ ವಿರೋಧಿಗಳಿಗೆ ಉಗ್ರ ಶಿಕ್ಷೆ ಕೊಡಬೇಕು

ಹೂವಿನಹಡಗಲಿ: ಹಿಂದೂ ಶ್ರದ್ಧಾ ಕೇಂದ್ರಗಳನ್ನು ಅವಮಾನಿಸುವ ವಿರೋಧಿಗಳಿಗೆ ಉಗ್ರ ಶಿಕ್ಷೆ ಕೊಡಬೇಕು ಎಂದು ಬಿಜೆಪಿ ಮಂಡಲ ಅಧ್ಯಕ್ಷ ಮಲ್ಲಿಕಾರ್ಜುನ ಪೂಜಾರ್ ಹೇಳಿದರು.

ಪಟ್ಟಣದ ಲಾಲ್ ಬಹದ್ದೂರ್ ಶಾಸ್ತ್ರಿ ವೃತ್ತದಲ್ಲಿ ಬಿಜೆಪಿ ಮಂಡಲ ಹಾಗೂ ವಿವಿಧ ಸಂಘಟನೆಗಳ ಸಹಯೋಗದಲ್ಲಿ ಧರ್ಮಸ್ಥಳದ ಬಗ್ಗೆ ಅಪಪ್ರಚಾರವನ್ನು ಖಂಡಿಸಿ ಹಮ್ಮಿಕೊಂಡಿದ್ದ ಪ್ರತಿಭಟನೆ ನಂತರ ಅವರು ಮಾತನಾಡಿದರು.

ಧರ್ಮಸ್ಥಳದ ಮಂಜುನಾಥ ಸ್ವಾಮಿ ದೇವಸ್ಥಾನ ಹಿಂದೂ ಧರ್ಮದ ಧಾರ್ಮಿಕ ಶ್ರದ್ಧಾ ಕೇಂದ್ರವಾಗಿದೆ. ಕೆಲ ಕಿಡಗೇಡಿಗಳು ಈ ಬಗ್ಗೆ ಇಲ್ಲ ಸಲ್ಲದ ಹೇಳಿಕೆ ನೀಡಿ, ಅಪಪ್ರಚಾರ ಮಾಡುತ್ತಿರುವುದನ್ನು ದೇಶದ ಜನತೆ ನೋಡಿದೆ. ಶ್ರದ್ಧಾ ಭಕ್ತಿ ಕೇಂದ್ರವನ್ನು ಅತ್ಯಂತ ನಿಕೃಷ್ಟವಾಗಿ ಬಿಂಬಿಸುತ್ತಿರುವ ದೊಡ್ಡ ಹುನ್ನಾರ ನಡೆದಿದೆ. ಈ ಕುರಿತು ಕಾಂಗ್ರೆಸ್ ಸರಕಾರ ಕ್ರಮಕ್ಕೆ ಮುಂದಾಗಿಲ್ಲ.

-ನಂದಿಹಳ್ಳಿ ಹಾಲಪ್ಪ, ಮಾಜಿ ಶಾಸಕ

ಧರ್ಮಸ್ಥಳದ ಬಗ್ಗೆ ಅನಾಮಿಕ ವ್ಯಕ್ತಿಯೊಬ್ಬ ಆಧಾರಗಳಿಲ್ಲದೇ ಮಾಡಿದ ಆರೋಪಕ್ಕೆ ರಾಜ್ಯ ಸರಕಾರ ಲಕ್ಷಾಂತರ ಹಣ ಖರ್ಚುಮಾಡಿ ಆತ ಹೇಳಿದ ಕಡೆಗಳಲ್ಲಿ ಗುಂಡಿ ತೊಡಿಸಿದ್ದಾರೆ. ಅನಾಮಿಕನ ಹಿಂದಿರುವ ವ್ಯಕ್ತಿಗಳನ್ನು ಗುರುತಿಸಿ ಬಂಧಿಸಬೇಕು. ಇಲ್ಲಿ ನಡೆಯುತ್ತಿರುವ ಸಂಚುಗಳ ಬಗ್ಗೆ ಕಾಂಗ್ರೆಸ್ ಸರಕಾರ ಈವರೆಗೂ ಯಾವ ಮಾಹಿತಿ ನೀಡುತ್ತಿಲ್ಲ ಎಂದರು.

ಹಿಂದಿನಿಂದಲ್ಲೂ ಕಾಂಗ್ರೆಸ್ ಸರಕಾರ ಹಿಂದೂ ಭಕ್ತಿ ಭಾವನೆಗಳಿಗೆ ಧಕ್ಕೆ ತರುವ ಹುನ್ನಾರ ನಿರಂತರವಾಗಿ ಮಾಡುತ್ತಾ ಬಂದಿದೆ. ಇಂತಹ ದುಷ್ಕೃತ್ಯವನ್ನು ತಡೆಯುವಲ್ಲಿ ಸರಕಾರ ವಿಫಲವಾಗಿದೆ, ಈ ಕೂಡಲೇ ಮುಖ್ಯಮಂತ್ರಿಗಳು ಮತ್ತು ಗೃಹ ಸಚಿವರು ರಾಜ್ಯ ಜನತೆಯ ಕ್ಷಮೆ ಕೇಳಬೇಕೆಂದು ಒತ್ತಾಯಿಸಿದರು. ಮಲ್ಲನಕೆರೆ ಮಠದ ಚೆನ್ನಬಸವ ಸ್ವಾಮೀಜಿ, ರಾಮದೇವರ ದೇವಸ್ಥಾನದ ಧರ್ಮಕರ್ತ ರಾಮಸ್ವಾಮಿ ರಾಕೇಶಯ್ಯ, ಬಾವಿಮನಿ ಕೊಟ್ರೇಶ, ಪುನೀತ್ ದೊಡ್ಮನಿ, ಸುಭಾಷ ಸೇರಿದಂತೆ ಇತರರು ತಹಸೀಲ್ದಾರರಿಗೆ ಮನವಿ ಪತ್ರ ಸಲ್ಲಿಸಿದರು.



ಪಟ್ಟಣದ ಲಾಲ್ ಬಹದ್ದೂರ್ ಶಾಸ್ತ್ರಿ ವೃತ್ತದಲ್ಲಿ ಬಿಜೆಪಿ ಮಂಡಲ ಹಾಗೂ ವಿವಿಧ ಸಂಘಟನೆಗಳ ಸಹಯೋಗದಲ್ಲಿ ಧರ್ಮಸ್ಥಳದ ಬಗ್ಗೆ ಅಪಪ್ರಚಾರವನ್ನು ಖಂಡಿಸಿ ಹಮ್ಮಿಕೊಂಡಿದ್ದ ಪ್ರತಿಭಟನೆ.

ಮಣ್ಣಿನ ಗಣಪತಿ ಸ್ಪರ್ಧೆಯಲ್ಲಿ ನೂರಾರು ವಿದ್ಯಾರ್ಥಿಗಳು ಭಾಗಿ

ರಾಯಚೂರು: ನೀರನಲ್ಲಿ ಕರಗದೇ ಪರಿಸರಕ್ಕೆ ಹಾನಿಯುಂಟು ಮಾಡುವ ಪಿಒಪಿ ಗಣೇಶಗಳನ್ನು ನಿಯಂತ್ರಿಸಲು ಮಕ್ಕಳಿಗೆ ಗಣೇಶ ಮೂರ್ತಿ ಸಿದ್ದಪಡಿಸುವ ಕಾರ್ಯಗಾರ ಆಯೋಜಿಸುವ ಮೂಲಕ ಬದಲಾವಣೆಗೆ ಮಹಾನಗರ ಪಾಲಿಕೆ ಕಾರಣವಾಗಿರುವುದು ಶ್ಲಾಘನೀಯವಾಗಿದೆ ಎಂದು ಸಣ್ಣ ನೀರಾವರಿ ಸಚಿವ ಎನ್. ಎಸ್.ಬೋಸರಾಜು ಹೇಳಿದರು.

ನಗರದ ಮಹಾತ್ಮಗಾಂಧಿ ಕ್ರೀಡಾಂಗಣದಲ್ಲಿ ಮಹಾನಗರ ಪಾಲಿಕೆ ಮತ್ತು ಗ್ರೀನ್ ರಾಯಚೂರಗಳ ಸಹಯೋಗದಲ್ಲಿ ಯೂಥ್ ಫಾರ್ ಸಿಟಿ, ಸಿಟಿ ಫಾರ್ ಯೂಥ್ ಘೋಷಣೆಯೊಂದಿಗೆ ಶಾಲಾ ವಿದ್ಯಾರ್ಥಿಗಳಿಂದ ಮಣ್ಣಿನ ಗಣಪತಿ ಸಿದ್ದಪಡಿಸುವ ಕಾರ್ಯಾಗಾರ ಉದ್ಘಾಟಿಸಿ ಮಾತನಾಡಿದರು. ಪರಿಸರಕ್ಕೆ ಹಾನಿಕಾರವಾಗಿರುವ ಪಿಒಪಿ ಮೂರ್ತಿಗಳನ್ನು ರಾಜ್ಯ ಸರಕಾರ ನಿಷೇಧಿಸಿದೆ. ಸರಕಾರ ಜನಪರವಾಗಿರುವ ನಿರ್ಧಾರ ಕೈಗೊಂಡಿದ್ದು, ಜನರು ಸಹಕರಿಸುವ ಮೂಲಕ ಯಶಸ್ವಿಗೊಳಿಸಬೇಕಿದೆ. ಸ್ವಯಂಸೇವಾ ಸಂಸ್ಥೆಗಳೊಂದಿಗೆ ಸೇರಿ ಪಾಲಿಕೆ ಮಣ್ಣಿನ ಗಣೇಶ ಮೂರ್ತಿ ಸಿದ್ದಪಡಿಸುವ ಕಾರ್ಯ ಪ್ರಾರಂಭಿಸಿದೆ. ವೇದಿಕೆಯಲ್ಲಿ ಮಹಾನಗರ ಪಾಲಿಕೆ ಅಧ್ಯಕ್ಷೆ ನರಸಮ್ಮ ನರಸಿಂಹಲು ಮಾಡಿಗಿರಿ, ಜಿ. ಶಿವಮೂರ್ತಿ, ರುದ್ರಪ್ಪ ಅಂಗಡಿ, ನರಸಿಂಹಲು ಮಾಡಗಿರಿ, ಗ್ರೀನ್ ರಾಯಚೂರಿನ ಸ್ವರಸ್ವತಿ ಕಿಲಕಿಲೆ, ರಾಜೇಂದ್ರ ಶಿವಾಳೆ, ಅಭಿವೃದ್ಧಿ ಆಯುಕ್ತ ಸಂತೋಷರಾಣಿ, ಜೈಪಾಲರೆಡ್ಡಿ ಸೇರಿದಂತೆ ಅನೇಕರು ಭಾಗವಹಿಸಿದ್ದರು. ನೂರಾರು ಮಕ್ಕಳು ಮಣ್ಣಿನ ಗಣಪನ್ನು ಸಿದ್ದಪಡಿಸಿದರು.

ಪರಿಸರ ಸ್ನೇಹಿ ಗಣೇಶ ಹಬ್ಬ ಆಚರಣೆ ಮಾಡುವುದೊಂದು ಸವಾಲಾಗಿ ಪರಿಣಮಿಸಿದೆ. ಪಿಒಪಿ ಗಣೇಶ ಮೂರ್ತಿಯನ್ನು ತಡೆದು ಮಣ್ಣಿನ ಗಣೇಶ ಬಳಸುವ ಕಾರ್ಯಕ್ಕೆ ಪಾಲಿಕೆ ಆಯುಕ್ತರು ಹೊಸತನ ಪ್ರಯತ್ನಕ್ಕೆ ಮುಂದಾಗಿದ್ದಾರೆ. ಎಳೆ ಮಕ್ಕಳಲ್ಲಿ ಮಣ್ಣಿನ ಗಣೇಶ ಸಿದ್ದಪಡಿಸುವ ಕಲೆಯನ್ನು ಬೆಳಸುವ ಜತೆಗೆ ಮಣ್ಣಿನಲ್ಲಿ ಬೀಜಗಳನ್ನು ಹಾಕಿ ಪರಿಸರ ಉಳಿಸುವ ಪ್ರಯೋಗ ಶ್ಲಾಘನೀಯವಾಗಿದೆ. ಮಣ್ಣಿನಲ್ಲಿ ದೇವರನ್ನು ಕಾಣುವ ಕೆಲಸವಾಗಲಿ.

-ಜಯಣ್ಣ, ಪಾಲಿಕೆ ಹಿರಿಯ ಸದಸ್ಯ

ಅಭಿವೃದ್ಧಿ ಕಾಮಗಾರಿಗೆ ಚಾಲನೆ

ರಾಯಚೂರು: ನಗರದ ವಾರ್ಡ ನಂ.34ರ ಬಂದೇನವಾಜ ಕಾಲೋನಿ, ದೇವರಾಜ ಅರಸ್ ಕಾಲೋನಿ, ಹಾದಿ ಕಾಲೋನಿ ಹಾಗೂ ಶಾಂತಿ ಕಾಲೋನಿಯ ವಿವಿದ ಬಡಾವಣೆಗಳಲ್ಲಿ ಸಿಸಿ ರಸ್ತೆ ನಿರ್ಮಾಟಣಕ್ಕೆ ಸುಮಾರು ಮೂರು ಕೋಟಿ ರು ಅಲ್ಪಸಂಖ್ಯಾತರ ಕಾಲೋನಿ ಅಭಿವೃದ್ಧಿ ಯೋಜನೆಯ ಅನುದಾನದಡಿಯಲ್ಲಿ ಕಾಮಗಾರಿ ಅಡಿಗಲ್ಲು ಕಾರ್ಯಕ್ರಮವನ್ನು ಕೆಪಿಸಿಸಿ ಕಾರ್ಯಾಧ್ಯಕ್ಷರು, ವಿಧಾನ ಪರಿಷತ್ ಸದಸ್ಯ ಎ.ವಸಂತಕುಮಾರ ಹಾಗೂ ನಗರ ವಿಧಾನಸಭಾ ಕ್ಷೇತ್ರದ ಶಾಸಕ ಡಾ.ಶಿವರಾಜ ಪಾಟೀಲ್ ನೆರವೇರಿಸಿದರು.

ಸದರಿ ಬಡಾವಣೆಗಳಲ್ಲಿ ದಶಕಗಳಿಂದ ಮೂಲಭೂತ ಸೌಕರ್ಯಗಳಿಲ್ಲದೇ ಜನತೆ ಸಂಕಷ್ಟ ಅನುಭವಿಸುತ್ತಿರುವುದನ್ನು ಗಮನಿಸಿ ಸರಕಾರದಿಂದ ಅಲ್ಪಸಂಖ್ಯಾತ ಕಾಲೋನಿ ಅಭಿವೃದ್ಧಿ ಯೋಜನೆಯಡಿಯಲ್ಲಿ ಸುಮಾರು ಮೂರು ಕೋಟಿ ರು ಅನುದಾನ ಮಂಜೂರು ಮಾಡಿ, ಕಾಮಗಾರಿ ಕೈಗೊಳ್ಳಲು ಅಡಿಗಲ್ಲು ನಡೆಸಲಾಯಿತು.

ಈ ಸಂದರ್ಭದಲ್ಲಿ ಮಾತನಾಡಿದ ಎ.ವಸಂತಕುಮಾರ ಅವರು ರಾಯಚೂರು ನಗರದಲ್ಲಿ ಹಲವಾರು ಬಡಾವಣೆಗಳು ಮೂಲಭೂತ ಸೌಕರ್ಯಗಳಿಂದ ವಂಚಿತಗೊಂಡಿವೆ, ಆದ್ದರಿಂದ ಹಂತ ಹಂತವಾಗಿ ಮೂಲಭೂತ ಸೌಕರ್ಯ ಒದಗಿಸುವ ಕಾರ್ಯ ಮಾಡಲಾಗುವುದು ಎಂದು ಹೇಳಿದರು. ಈ ಸಂದರ್ಭದಲ್ಲಿ ಮಹಾನಗರ ಪಾಲಿಕೆ ಸದಸ್ಯ ತಿಮ್ಮಪ್ಪ ನಾಯಕ,ಬಸವರಾಜ ಪಾಟೀಲ ದರೂರು, ಕೆಪಿಸಿಸಿ ಮಾದ್ಯಮ ವಕ್ತಾರ ಡಾ.ರಝಾಕ ಉಸ್ತಾದ, ರಾಯಚೂರು ನಗರಾಭಿವೃದ್ಧಿ ಪ್ರಾಧಿಕಾರದ ಮಾಜಿ ಅಧ್ಯಕ್ಷ ಅಬ್ದುಲ್ ಕರೀಮ, ಮೊಹಮ್ಮದ ಉಸ್ಮಾನ, ಮುರಳಿ ಯಾದವ, ಶ್ರೀನಿವಾಸ ಶಿಂದೆ, ಅಂಜಿನಯ್ಯ ಹಾಗೂ ಸ್ಥಳಿಯ ನಿವಾಸಿಗಳು ಉಪಸ್ಥಿತರಿದ್ದರು.

ಬ್ಯಾಂಕ್ ಏಳಿಗೆಗೆ ನಿಸ್ವಾರ್ಥ ಸೇವೆ ಅವಶ್ಯ

ಮುದಗಲ್: ಪ್ರತಿಯೊಬ್ಬರು ನಿಸ್ವರ್ಥ ಸೇವೆಯಿಂದ ಸೇವೆ ಸಲ್ಲಿಸಿದಾಗ ಮಾತ್ರ ಬ್ಯಾಂಕಗಳು ಏಳಿಗೆ ಕಾಣಲು ಸಾಧ್ಯವೆಂದು ಮುದಗಲ್ ಅರ್ಬನ್ ಕೋ-ಆಪರೇಟಿವ್ ಬ್ಯಾಂಕ್ ಅಧ್ಯಕ್ಷ, ಹಾಗೂ ವಿಧಾನ ಪರಿಷತ್ ಸದಸ್ಯ ಶರಣಗೌಡ ಪಾಟೀಲ್ ಬಯ್ಯಾಪುರ ಭಾನುವಾರ ಹೇಳಿದರು.

ಪಟ್ಟಣದ ಕಿಲ್ಲಾದಲ್ಲಿರುವ ಐತಿಹಾಸಿಕ ಶ್ರೀ ರಾಮಲಿಂಗೇಶ್ವರ ದೇವಸ್ಥಾನದಲ್ಲಿ ಹಮ್ಮಿಕೊಂಡಿದ್ದ ಅರ್ಬನ್ ಕೋ ಆ ಬ್ಯಾಂಕ್ 29ನೇ ವಾರ್ಷಿಕ ಮಹಾ ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿದ ಅವರು ಪ್ರಸಕ್ತ ಸಾಲಿನಲ್ಲಿ ಮುಕೋ ಬ್ಯಾಂಕ್ 1ಕೋಟಿ 80 ಲಕ್ಷ, ರು.ಗೂ ಆಧಿಕ ಲಾಭವಾಗಿದೆ. ಬ್ಯಾಂಕಿನ ಆರ್ಥಿಕ ಸ್ಥಿತಿ ಗತಿ ಕುರಿತು ಮಾತನಾಡಿದರು. ಬ್ಯಾಂಕ ಅಭಿವೃದ್ಧಿಗೆ ಎಲ್ಲರ ಸಹಕಾರ ಅತ್ಯವಶ್ಯಕವಾಗಿದೆ. ಗ್ರಾಹಕರು ಬ್ಯಾಂಕ್ ವ್ಯವಹಾರದೊಂದಿಗೆ ಉತ್ತಮ ಭಾಂದವ್ಯದಿಂದ ವ್ಯವಹರಿಸಬೇಕು. ಸದಸ್ಯರ ಹಾಗೂ ಗ್ರಾಹಕರು ಸಾಲದ ಯೋಜನೆಗಳ ಲಾಭ ಪಡೆಯಬೇಕು.

ಡಾ. ಗುರುರಾಜ ದೇಶಪಾಂಡೆ ಮಾತನಾಡಿ ನೂತನ ಮುಕೋ ಬ್ಯಾಂಕ್ ಸ್ವಂತ ಕಟ್ಟಡಕ್ಕೆ ಇಂದು ಅಡಿಪಾಯಕ್ಕೆ ಪೂಜೆ ಸಲ್ಲಿಸಲಾಗಿದೆ. ಬ್ಯಾಂಕನ ವ್ಯವಹಾರದ 29ನೇ ವರ್ಷದ ಸಾಧನೆಗೆ ಎಲ್ಲರ ಸಹಕಾರದಿಂದ ನಮ್ಮ ಬ್ಯಾಂಕ್ ಸಾಧನೆ ಮಾಡಿದೆ ಎಂದು ಹೇಳಿದರು. ಮುಖ್ಯಕಾರ್ಯ ನಿರ್ವಾಹಕಿ ಶಾಂತಾ ಕರಡಕಲ್ ಪ್ರಸಕ್ತ ವರ್ಷದ ವಾರ್ಷಿಕ ವರದಿ ಮಂಡನೆ ಮಾಡಿದರು. ಕಾರ್ಯಕ್ರಮದ ನಿರೂಪಣೆ ಶಾಖಾ ವ್ಯವಸ್ಥಾಪಕ ಶ್ರೀನಿವಾಸ ಪತ್ತಾರ ಹಾಗೂ ವಂದನಾರ್ಪನೆ ಹನುಮಂತ ತೊಂಡಿಹಾಳ ನೆರವೇರಿಸಿದರು.

ನಿರ್ದೇಶಕ ಸುರೇಶ ಕುಮಾರ ಜೈನ್, ಟಿ. ಶೇಷಣ್ಣ, ವೃತ್ತಿ ಪರ ಕರಿಯಪ್ಪ ಕನಕೇರಿ, ಪ್ರೀಯಾ ಎಲೆಕ್ಟ್ರಿಕಲ್ ವೆಂಕಟೇಶ, ವ್ಯಾಸನಂದಿಹಾಳ ಶರಣಗೌಡ ಪಾಟೀಲ್, ಹನುಮಂತಪ್ಪ ಕಂದಗಲ್ಲ, ರಾಜಕುಮಾರ ಪಾಟೀಲ್ ಮಿರ್ಜಾ ಬಂದೇಲಿಬೇಗ್ ಉಸ್ತಾದ್ ಸೇರಿದಂತೆ ಇತರರಿದ್ದರು.

ಪಟ್ಟಣದ ಕಿಲ್ಲಾದಲ್ಲಿರುವ ಐತಿಹಾಸಿಕ ಶ್ರೀ ರಾಮಲಿಂಗೇಶ್ವರ ದೇವಸ್ಥಾನದಲ್ಲಿ ಹಮ್ಮಿಕೊಂಡಿದ್ದ ಅರ್ಬನ್ ಕೋ ಆ ಬ್ಯಾಂಕ್ 29ನೇ ವಾರ್ಷಿಕ ಮಹಾ ಸಭೆಯಲ್ಲಿ ಮಾತನಾಡಿದರು.

ಧರ್ಮಸ್ಥಳ ವಿರುದ್ಧ ಅಪಪ್ರಚಾರ ನಿಲ್ಲಲಿ

ಹರಪನಹಳ್ಳಿ: ಧರ್ಮಸ್ಥಳದ ಬಗ್ಗೆ ಅಪಪ್ರಚಾರ ಮಾಡುತ್ತಿರುವವರ ವಿರುದ್ಧ ಸೂಕ್ತ ಕಾನೂನು ಕ್ರಮ ಜರುಗಿಸುವಂತೆ ಆಗ್ರಹಿಸಿ ಮಾಜಿ ಸಚಿವ ಜಿ.ಕರುಣಾಕರ ರೆಡ್ಡಿ ನೇತೃತ್ವದಲ್ಲಿ ಬಿಜೆಪಿ ಮುಖಂಡರು ಹಾಗೂ ಕಾರ್ಯಕರ್ತರು ಶನಿವಾರ ಪಟ್ಟಣದಲ್ಲಿ ಪ್ರತಿಭಟನೆ ನಡೆಸಿದರು. ಪಟ್ಟಣದ ಹಳೇ ಬಸ್ ನಿಲ್ದಾಣದಿಂದ ಆರಂಭವಾದ ಪ್ರತಿಭಟನಾ ಮೆರವಣಿಗೆ ಐ.ಬಿ ವೃತ್ತದವರೆಗೂ ತೆರಳಿ ಬಹಿರಂಗ ಸಭೆ ನಡೆಸಿದರು.

ಪ್ರತಿಭಟನೆ ನೇತೃತ್ವ ವಹಿಸಿದ್ದ ಮಾಜಿ ಸಚಿವ ಜಿ.ಕರುಣಾಕರರೆಡ್ಡಿ ಮಾತನಾಡಿ ನೂರಾರು ವರ್ಷಗಳ ಇತಿಹಾಸವನ್ನು ಹೊಂದಿರುವ, ನಾಡಿನ ಕೋಟ್ಯಂತರ ಭಕ್ತರ ಶ್ರದ್ಧಾಕೇಂದ್ರವಾಗಿರುವ ಪವಿತ್ರ ಶ್ರೀಕ್ಷೇತ್ರ ಧರ್ಮಸ್ಥಳದ ಕುರಿತು ಕೆಲವು ವ್ಯಕ್ತಿಗಳು ಸಾಮಾಜಿಕ ಜಾಲತಾಣಗಳಲ್ಲಿ ಮತ್ತು ಸಾರ್ವಜನಿಕವಾಗಿ ನಿರಂತರವಾಗಿ ಸುಳ್ಳು ಸುದ್ದಿ ಮತ್ತು ಕಲ್ಪಿತ ಆರೋಪಗಳನ್ನು ಹರಡುತ್ತಿವೆ, ಈ ವ್ಯವಸ್ಥಿತ ಅಪಪ್ರಚಾರದಿಂದಾಗಿ ಪವಿತ್ರ ಸ್ಥಳಕ್ಕೆ ಧಕ್ಕೆ ಉಂಟಾಗುತ್ತಿದೆ ಕೆಲವು ದುಷ್ಟರು ಮಾಡುವ ಕೃತ್ಯಕ್ಕೆ ಲಕ್ಷಾಂತರ ಭಕ್ತರ ಧಾರ್ಮಿಕ ಭಾವನೆಗಳಿಗೆ ತೀವ್ರ ನೋವುಂಟಾಗಿದೆ ಎಂದು ಹೇಳಿದರು.

ಹಿಂದೂ ಧಾರ್ಮಿಕ ಕೇಂದ್ರಗಳನ್ನು ಗುರಿಯಾಗಿಸಿಕೊಂಡು ಅಪಪ್ರಚಾರ ಮಾಡುವುದು ಹೆಚ್ಚಾಗಿದೆ, ಅನೇಕರು ಸಾಮಾಜಿಕ ಜಾಲತಾಣಗಳಲ್ಲಿ ಧರ್ಮಸ್ಥಳದ ವಿರುದ್ದ ಸುಳ್ಳು ಸುದ್ದಿಗಳನ್ನು ಹರಿಬಿಡುತ್ತಿದ್ದಾರೆ, ಅನಾಮಿಕ ವ್ಯಕ್ತಿ ತೋರಿಸಿದ ಸ್ಥಳದಲ್ಲಿ ಯಾವುದೇ ಶವಗಳು ಪತ್ತೆಯಾಗಿಲ್ಲ, ಹಣದ ಆಸೆಗೆ ಆ ವ್ಯಕ್ತಿ ಈ ರೀತಿ ಮಾಡುತ್ತಿದ್ದಾನೆ, ಈ ಷಡ್ಯಂತ್ರದ ಹಿಂದೆ ಯಾರಿದ್ದಾರೆ ಎಂಬುದನ್ನು ಸರಕಾರ ಕೂಡಲೇ ಬಹಿರಂಗಪಡಿಸಬೇಕು ತಪ್ಪಿತಸ್ಥರ ವಿರುದ್ಧ ಕ್ರಮ ಜರುಗಿಸಬೇಕು, ಸಿಎಂ, ಡಿಸಿಎಂ, ಗೃಹಮಂತ್ರಿ ಕೂಡಲೇ ಕ್ಷೇಮೆ ಕೇಳಬೇಕು ಎಂದು ಒತ್ತಾಯಿಸಿದರು.

ಮುಖಂಡರಾದ ಆರ್.ಲೋಕೇಶ್, ಕಲ್ಲನಗೌಡ, ಎಂ.ಮಲ್ಲೇಶ, ಪುರಸಭೆ ಕಿರಣ್ ಶ್ಯಾನಬೋಗ, ಎಂ.ಜಾವೀದ್, ವಿನಯ್‌ಗೌಳಿ, ವಾಗೀಶ, ಗಂಗಾನಾಯ್ಕ್, ಬಸವನಗೌಡ, ತಿಮ್ಮಣ್ಣ, ಪಂಪನಾಯಕ್, ಸಿದ್ದೇಶ, ಪ್ರಸನ್ನ, ಮಹಾಂತೇಶ, ಶಿವಕುಮಾರ್, ಬಸವರಾಜ, ಕೆ.ಪ್ರಕಾಶ, ಮಾಬುಸಾಬ್, ವಿಜಯಪ್ಪ, ನಾಗರಾಜ, ಸಿದ್ದೇಶರೆಡ್ಡಿ ಸೇರಿದಂತೆ ಧರ್ಮಸ್ಥಳ ಸಂಘದ ಪ್ರತಿನಿಧಿಗಳು ಕಾರ್ಯಕರ್ತರು ಪ್ರತಿಭಟನೆಯಲ್ಲಿ ಭಾಗವಹಿಸಿದ್ದರು.

ಹರಪನಹಳ್ಳಿ ಧರ್ಮಸ್ಥಳದ ಬಗ್ಗೆ ಅಪಪ್ರಚಾರ ಮಾಡುತ್ತಿರುವವರ ವಿರುದ್ಧ ಕಾನೂನು ಕ್ರಮ ಜರುಗಿಸುವಂತೆ ಆಗ್ರಹಿಸಿ ಬಿಜೆಪಿ ಕಾರ್ಯಕರ್ತರು ಪಟ್ಟಣದಲ್ಲಿ ಪ್ರತಿಭಟನೆ ನಡೆಸಿದರು.

ಸಮಾಚಾರ ಸಣ್ಣದಲ್ಲ

ಪ್ರಾಯೋಜಕತ್ವದಿಂದ ಡ್ರೀಮ್11 ಹಿಂದಕ್ಕೆ?

ಮುಂಬಯಿ: ಆನ್‌ಲೈನ್ ಫ್ಯಾಂಟಸಿ ಗೇಮಿಂಗ್ ಫ್ಲಾಟ್‌ಫಾರ್ಮ್ ಡ್ರೀಮ್11ಅನ್ನು ಭಾರತ ಕ್ರಿಕೆಟ್ ತಂಡದೊಂದಿಗಿನ ಪ್ರಾಯೋಜಕತ್ವ ಒಪ್ಪಂದ ವನ್ನು ತೊರೆಯಲಿದೆ ಎಂದು ವರದಿಯಾಗಿದೆ. ಹಣ ಹೂಡಿ ಆಡುವ ಎಲ್ಲ ರೀತಿಯ ಆನ್‌ಲೈನ್ ಗೇಮ್‌ಗಳು, ಇಸ್ಪೋರ್ಟ್ಸ್ ಗಳು ಮತ್ತು ಆನ್‌ಲೈನ್ ಸೋಷಿಯಲ್ ಗೇಮ್‌ಗಳನ್ನು ನಿಷೇಧಿಸುವ ಮಹತ್ವದ ಮಸೂದೆಗೆ ಸಂಸತ್ತು ಸಮ್ಮತಿ ನೀಡಿತ್ತು. ಇದರ ಬೆನ್ನಲ್ಲೇ ಈ ಮಹತ್ವದ ಬೆಳವಣಿಗೆ ಕಂಡುಬಂದಿದೆ ಎಂದು ವರದಿ ಆಗಿದೆ. ಬಿಸಿಸಿಐನೊಂದಿಗೆ ಬರೋಬ್ಬರಿ 358 ಕೋಟಿ ಮೊತ್ತದ ಜೆರ್ಸಿ ಪ್ರಾಯೋಜಕತ್ವ ಒಪ್ಪಂದ ವನ್ನು ಡ್ರೀಮ್11 ಹೊಂದಿದೆ. ಮುಂಬರುವ ಏಷ್ಯಾ ಕಪ್ ಟೂರ್ನಿಗೂ ಮುನ್ನ ಒಪ್ಪಂದವನ್ನು ಕೊನೆಗೊಳಿಸಲು ಡ್ರೀಮ್11 ಮುಂದಾಗಿದ್ದು, ಈ ಸಂಬಂಧ ಬಿಸಿಸಿಐ ಅಧಿಕಾರಿಗಳೊಂದಿಗೆ ಮಾತುಕತೆ ಆರಂಭಿಸಿದೆ ಎನ್ನಲಾಗಿದೆ. 2023ರಲ್ಲಿ ಮೂರು ವರ್ಷಗಳ ಅವಧಿಗೆ ಡ್ರೀಮ್11 ಒಪ್ಪಂದ ಮಾಡಿಕೊಂಡಿತ್ತು. ಅಲ್ಲದೆ ಟೀಮ್ ಇಂಡಿಯಾದ ಜೆರ್ಸಿಯಲ್ಲಿ ತನ್ನ ಲೋಗೊವನ್ನು ಮುದ್ರಿಸಿತ್ತು.

ಅಗ್ರ 3 ಬ್ಯಾಟರ್‌ಗಳಿಂದ ಭರ್ಜರಿ ಶತಕ

ಮೆಕೆ: ದಕ್ಷಿಣ ಆಫ್ರಿಕಾ ವಿರುದ್ಧ ನಡೆಯುತ್ತಿರುವ ಮೂರು ಪಂದ್ಯಗಳ ಏಕದಿನ ಸರಣಿಯ ಅಂತಿಮ ಪಂದ್ಯದಲ್ಲಿ ಆಸ್ಟ್ರೇಲಿಯಾ ತಂಡ ಅಬ್ಬರಿಸಿ ಬೊಬ್ಬರಿದಿದೆ. ಅಕ್ರಮಾಂಕದ ಮೂವರು ಬ್ಯಾಟರ್‌ಗಳು ಶತಕ ಸಿಡಿಸುವ ಮೂಲಕ ಹರಿಣರ ಮೇಲೆ ಸವಾರಿ ಮಾಡಿದರು. ಭರ್ಜರಿ ಆಟದಲ್ಲಿ ಆಸೀಸ್ ಪರ ಒಟ್ಟು 18 ಸಿಕ್ಸರ್ ಹಾಗೂ 36 ಬೌಂಡರಿಗಳು ದಾಖಲಾದವು. ಆಸ್ಟ್ರೇಲಿಯಾದ ಮೆಕೆಯಲ್ಲಿರುವ ಗ್ರೇಟ್ ಬ್ಯಾರಿಯರ್ ರೀಫ್ ಅರೆನಾ ಕ್ರೀಡಾಂಗಣದಲ್ಲಿ ನಡೆದ ಕೊನೇ ಪಂದ್ಯದಲ್ಲಿ ಟಾಸ್ ಗೆದ್ದು ಮೊದಲು ಬ್ಯಾಟಿಂಗ್ ಮಾಡಿದ ಆಸ್ಟ್ರೇಲಿಯಾ ತಂಡ 50 ಓವರ್‌ಗಳಲ್ಲಿ ಕೇವಲ 2 ವಿಕೆಟ್ ನಷ್ಟಕ್ಕೆ 431 ರನ್ ಗಳಿಸಿದೆ. ಇದು 19 ವರ್ಷಗಳ ಬಳಿಕ ಏಕದಿನ ಕ್ರಿಕೆಟ್‌ನ ಇನ್ನಿಂಗ್ಸ್‌ವೊಂದರಲ್ಲಿ ಆಸೀಸ್ ಗಳಿಸಿದ 2ನೇ ಗರಿಷ್ಠ ರನ್ ಆಗಿದೆ. 2006ರಲ್ಲಿ ದಕ್ಷಿಣ ಆಫ್ರಿಕಾ ವಿರುದ್ಧವೇ ಆಸ್ಟ್ರೇಲಿಯಾ 434 ರನ್ ಸಿಡಿಸಿತ್ತು. ಆದ್ರೆ ಆ ಪಂದ್ಯದಲ್ಲಿ ಸೋಲು ಕಂಡಿತ್ತು. ಇಂದಿಗೂ ಇದೊಂದು ಐತಿಹಾಸಿಕ ಪಂದ್ಯವಾಗಿದೆ.

ವಿರಾಮ
ಪ್ರತಿ ಭಾನುವಾರ

ಜಾಲತಾಣದಲ್ಲಿ ಭಾವುಕ ಪೋಸ್ಟ್ | **ಮೂರು ಮಾದರಿಯ ಕ್ರಿಕೆಟ್‌ಗೆ ಪೂಜಾರ ವಿದಾಯ** | ಶುಭಕೋರಿದ ಬಿಸಿಸಿಐ

ಅದ್ಭುತ ಟೆಸ್ಟ್ ಆಟಗಾರ ಪೂಜಾರ ನಿವೃತ್ತಿ

ಮುಂಬಯಿ: ಟೆಸ್ಟ್ ಕ್ರಿಕೆಟ್‌ನ ಅಗ್ರ ಆಟಗಾರ ಚೇತೇಶ್ವರ ಪೂಜಾರ ಅವರು ಎಲ್ಲ ಮೂರು ಮಾದರಿಯ ಕ್ರಿಕೆಟ್‌ಗೆ ಭಾನುವಾರ ನಿವೃತ್ತಿ ಘೋಷಣೆ ಮಾಡಿದ್ದಾರೆ.

ಈ ಕುರಿತು ತಮ್ಮ ಇನ್ಸ್ಟಾದಲ್ಲಿ ಪೂಜಾರ ಭಾವನಾತ್ಮಕ ಸಂದೇಶವನ್ನು ಹಂಚಿಕೊಂಡಿದ್ದು, ತಮ್ಮ ಸುದೀರ್ಘ ಕ್ರಿಕೆಟ್ ಜೀವನದಲ್ಲಿ ತಮಗೆ ಸಹಕಾರ ನೀಡಿದ ಎಲ್ಲಾ ಸಹ ಆಟಗಾರರು ಹಾಗೂ ತರಬೇತುದಾರರಿಗೆ ಸದಾ ಋಣಿಯಾಗಿರುತ್ತೇನೆ. ಟೀಂ ಇಂಡಿಯಾ ಜೆರ್ಸಿಯನ್ನ ಧರಿಸಿ ರಾಷ್ಟ್ರಗೀತೆ ಹಾಡುವುದು, ಪ್ರತಿ ಬಾರಿ ಮೈದಾನಕ್ಕಿಳಿದಾಗ ನನ್ನ ಅತ್ಯುತ್ತಮ ಪ್ರಯತ್ನ ಮಾಡುವುದು ಇದೆಲ್ಲವೂ ಪದಗಳಲ್ಲಿ ವರ್ಣಿಸಲು ಅಸಾಧ್ಯ. ಆದರೆ ಎಲ್ಲ ಒಳ್ಳೆ ವಿಷಯಗಳೂ ಎಂದಾದರೂ ಕೊನೆಗೊಳ್ಳಬೇಕಲ್ಲವೇ ಅದೇ ರೀತಿ ನಾನು ಎಲ್ಲಾ ಮಾದರಿಯ ಕ್ರಿಕೆಟ್‌ನಿಂದ ನಿವೃತ್ತಿ ಹೊಂದಲು ನಿರ್ಧರಿಸಿದ್ದೇನೆ. ಎಲ್ಲರ ಪ್ರೀತಿ ಮತ್ತು ಬೆಂಬಲಕ್ಕೆ ಧನ್ಯವಾದಗಳು ಎಂದು ಬರೆದುಕೊಂಡಿದ್ದಾರೆ.

ಈ ವರ್ಷ ದಿಗ್ಗಜರ ನಿವೃತ್ತಿ

ರೋಹಿತ್ ಶರ್ಮಾ (ಟೆಸ್ಟ್), ವಿರಾಟ್ ಕೊಹ್ಲಿ (ಟೆಸ್ಟ್), ರವಿಚಂದ್ರನ್ ಅಶ್ವಿನ್ (ಎಲ್ಲಾ ಮಾದರಿ) ಬಳಿಕ ಈಗ ಪೂಜಾರ ಎಲ್ಲ ಮಾದರಿಯ ಕ್ರಿಕೆಟ್‌ಗೆ ನಿವೃತ್ತಿ ಘೋಷಿಸಿದ್ದಾರೆ. ಈ ವರ್ಷ ದಿಗ್ಗಜ ಕ್ರಿಕೆಟಿಗರೆ ಸಾಲು ಸಾಲಾಗಿ ನಿವೃತ್ತಿ ಘೋಷಣೆ ಮಾಡಿದ್ದು, ಕ್ರಿಕೆಟ್ ಪ್ರೇಮಿಗಳಿಗೆ ಬೇಸರ ತರಿಸಿದೆ.

ಟೆಸ್ಟ್ ಕ್ರಿಕೆಟ್‌ನಲ್ಲಿ ಟೀಮ್ ಇಂಡಿಯಾವನ್ನು ಪ್ರತಿನಿಧಿಸಿದ ಅತ್ಯಂತ ಧೀಮಂತ ಮತ್ತು ಅತ್ಯುತ್ತಮ ಆಟಗಾರರಲ್ಲಿ ಚೇತೇಶ್ವರ ಪೂಜಾ ಕೂಡ ಒಬ್ಬರು. ಟೀಂ ಇಂಡಿಯಾದಲ್ಲಿ ಪೂಜಾರ ಟೆಸ್ಟ್ ಆಟ ಇತಿಹಾಸ ಪುಟ ಸೇರಿದೆ. ಅವರ ಮುಂದಿನ ದಾರಿಗೆ ಶುಭವಾಗಲಿ.

-ಬಿಸಿಸಿಐ

103 ಟೆಸ್ಟ್ ಪಂದ್ಯ ಆಡಿರುವ ಪೂಜಾರ

ರಾಜ್‌ಕೋಟ್‌ನಲ್ಲಿ ಜನಿಸಿದ 37 ವರ್ಷದ ಪೂಜಾರ, 2010ರಲ್ಲಿ ಟೀಂ ಇಂಡಿಯಾಕ್ಕೆ ಪದಾರ್ಪಣೆ ಮಾಡಿದರು. ಟೀಂ ಇಂಡಿಯಾದಲ್ಲಿ ಅತಿ ಹೆಚ್ಚು ರನ್ ಗಳಿಸಿದ 8ನೇ ಟೆಸ್ಟ್ ಬ್ಯಾಟರ್ ಎನಿಸಿಕೊಂಡಿದ್ದರು. ಇದುವರೆಗೆ 103 ಟೆಸ್ಟ್, 5 ಏಕದಿನ ಪಂದ್ಯಗಳನ್ನು ಆಡಿದ್ದಾರೆ. ಟೀಂ ಇಂಡಿಯಾ ಪರ 103 ಟೆಸ್ಟ್ ಪಂದ್ಯಗಳಲ್ಲಿ 43.60 ಸರಾಸರಿಯಲ್ಲಿ 7,195 ರನ್ ಗಳಿಸಿದ್ದಾರೆ. ಇದರಲ್ಲಿ 19 ಶತಕಗಳು ಮತ್ತು 35 ಅರ್ಧಶತಕಗಳು ಸೇರಿವೆ. ತವರಿನಲ್ಲಿ ನಡೆದ ಒಟ್ಟು ಟೆಸ್ಟ್‌ನಲ್ಲಿ 3,839 ರನ್ ಗಳಿಸಿದ್ದಾರೆ. ಟೆಸ್ಟ್ ಕ್ರಿಕೆಟ್‌ನಲ್ಲಿ ಅತ್ಯಂತ ವಿಶ್ವಾಸಾರ್ಹ ಬ್ಯಾಟರ್ ಆಗಿದ್ದ ಪೂಜಾರ, ಸ್ವದೇಶಿ ಮತ್ತು ವಿದೇಶಗಳಲ್ಲಿ ನಡೆದ ಟೆಸ್ಟ್ ಪಂದ್ಯಗಳ ಗೆಲುವಿನಲ್ಲಿ ಪ್ರಮುಖ ಪಾತ್ರ ವಹಿಸಿದ್ದರು. ಕಳೆದ ಕೆಲ ವರ್ಷಗಳಿಂದ ಪೂಜಾರ ಅವರು ಕಳಪೆ ಫಾರ್ಮ್ ಹೊಂದಿದ್ದರು. ಸದಾ ಟೆಸ್ಟ್‌ನಲ್ಲಿ ಸ್ಥಾನ ಪಡೆಯುತ್ತಿದ್ದ ಪೂಜಾರ ಕಳೆದ ಕೆಲ ವರ್ಷಗಳಿಂದ ಟೆಸ್ಟ್‌ನಿಂದಲೇ ದೂರ ಉಳಿದಿದ್ದರು.

ಆಸ್ಟ್ರೇಲಿಯಾ ವಿರುದ್ಧ ಕೊನೆ ಟೆಸ್ಟ್ ಪಂದ್ಯ: 2025 ರಲ್ಲಿ ಆಸ್ಟ್ರೇಲಿಯಾ ವಿರುದ್ಧ ಪೂಜಾರರನ್ನು ತಂಡಕ್ಕೆ ಆಯ್ಕೆ ಮಾಡಲಾಗುತ್ತದೆ ಎಂದು ಹೇಳಲಾಗಿತ್ತು. ಆದರೆ, ಆಯ್ಕೆ ಸಮಿತಿ ಭವಿಷ್ಯದ ದೃಷ್ಟಿಯಿಂದ ಕಿರಿಯ ಆಟಗಾರರತ್ತ ಒಲವು ತೋರುತ್ತಿರುವುದರಿಂದ ಅವರು ನಿರ್ಧಾರ ತೆಗೆದುಕೊಂಡಿದ್ದಾರೆ ಎನ್ನಲಾಗಿದೆ. ಈಗಾಗಲೇ ಭಾರತದ ತಂಡದ ಹಿರಿಯ ಆಟಗಾರರಾದ ವಿರಾಟ್ ಕೊಹ್ಲಿ, ರೋಹಿತ್ ಶರ್ಮಾ ಮತ್ತು ರವಿಚಂದ್ರನ್ ಅಶ್ವಿನ್ ಟೆಸ್ಟ್ ಕ್ರಿಕೆಟ್‌ನಿಂದ ದೂರ ಸರಿದ ನಂತರ, ಪೂಜಾರ ರಾಷ್ಟ್ರೀಯ ತಂಡಕ್ಕೆ ಮರಳುವುದು ಕಷ್ಟಸಾಧ್ಯ ಎಂದೇ ಹೇಳಲಾಗಿತ್ತು. ಪೂಜಾರ 2023 ರ ಕೆನ್ನಿಂಗ್ಟನ್ ಓವಲ್‌ನಲ್ಲಿ ಆಸ್ಟ್ರೇಲಿಯಾ ವಿರುದ್ಧದ ಪಂದ್ಯದಲ್ಲಿ ತಮ್ಮ ಕೊನೆಯ ಟೆಸ್ಟ್ ಪಂದ್ಯ ಆಡಿದ್ದರು, ಈ ನಡುವೆ ಟೀಮ್ ಇಂಡಿಯಾ ಆಟಗಾರರ ಕಳಪೆ ಪ್ರದರ್ಶನದ ಹೊರತಾಗಿಯೂ ಪೂಜಾರ ಆಯ್ಕೆಯ ಬಗ್ಗೆ ಆಡಳಿತ ಮಂಡಳಿ ಮನಸ್ಸು ಮಾಡಿರಲಿಲ್ಲ.

ಮಾದರಿ	ಪಂದ್ಯ	ಇನ್ನಿಂಗ್ಸ್	ಒಟ್ಟು ರನ್	ಅತಿ ಹೆಚ್ಚು ರನ್
ಟೆಸ್ಟ್	103	176	7195	206*
ಏಕದಿನ	5	5	51	27
ಟಿ20	71	63	1556	100*
ಎಫ್.ಸಿ	278	457w	21301	352

- **2010ರಲ್ಲಿ ಟೀಂ ಇಂಡಿಯಾ ಪರ ಅಂತಾರಾಷ್ಟ್ರೀಯ ಕ್ರಿಕೆಟ್‌ಗೆ ಪದಾರ್ಪಣೆ**
- **103 ಟೆಸ್ಟ್ ಪಂದ್ಯಗಳಿಂದ 7,195 ರನ್ ಗಳಿಕೆ, 206 ಟೆಸ್ಟ್‌ನ ಅತಿ ಹೆಚ್ಚು ರನ್**
- **ಕೆನ್ನಿಂಗ್ಟನ್ ಓವಲ್‌ನಲ್ಲಿ ಆಸ್ಟ್ರೇಲಿಯಾ ವಿರುದ್ಧ ಪೂಜಾರ ಕೊನೆ ಟೆಸ್ಟ್ ಪಂದ್ಯ ಆಡಿದ್ದರು**
- **ಟೀಂ ಇಂಡಿಯಾದಲ್ಲಿ ಅತಿ ಹೆಚ್ಚು ರನ್ ಗಳಿಸಿದ 8ನೇ ಟೆಸ್ಟ್‌ಮ್ಯಾಚ್ ಬ್ಯಾಟರ್**

ಆಸೀಸ್ ಮಹಿಳಾ ಎ ತಂಡ ವಿರುದ್ಧ ಭಾರತಕ್ಕೆ ಸೋಲು

ಬ್ರಿಸ್ಬೇನ್: ಇಲ್ಲಿ ನಡೆದ ಅನಧಿಕೃತ ಟೆಸ್ಟ್‌ನ ನಾಲ್ಕನೇ ಮತ್ತು ಅಂತಿಮ ದಿನದಂದು ಭಾರತ ಎ ಮಹಿಳಾ ತಂಡವನ್ನು 6 ವಿಕೆಟ್‌ಗಳಿಂದ ಮಣಿಸಿ ಆಸ್ಟ್ರೇಲಿಯಾ ಎ ಮಹಿಳಾ ತಂಡ ಗೆದ್ದಿದೆ. ಭಾರತ ಸೋಲುವ ಮೂಲಕ ರಾಘ್ವಿ ಬಿಸ್ಟ್ ಅವಳಿ ಅರ್ಧ ಶತಕ ವ್ಯರ್ಥವಾಯಿತು.

ಗೆಲುವಿಗಾಗಿ 281 ರನ್‌ಗಳ ಗುರಿ ಬೆನ್ನಟ್ಟಿದ ಆಸೀಸ್ ಇನ್ನಿಂಗ್ಸ್ ಕಟ್ಟಿತು. 85.3 ಓವರ್‌ಗಳಲ್ಲಿ 4 ವಿಕೆಟ್‌ಗೆ 283 ರನ್ ಬಾರಿಸಿ ಗುರಿ ತಲುಪಿದರು. ದಿನದಾಟ ಆರಂಭವಾದಾಗ ಆಸ್ಟ್ರೇಲಿಯಾ ಎ ತಂಡ ಭಾರತ ಎ ತಂಡವನ್ನು ತನ್ನ ಎರಡನೇ ಇನ್ನಿಂಗ್ಸ್‌ನಲ್ಲಿ 286 ರನ್‌ಗಳಿಗೆ ಆಲೌಟ್ ಮಾಡಿತು. ಚೇಸಿಂಗ್ ವೇಳೆ ಆಸೀಸ್ ಪರ ಆರಂಭಿಕ ಆಟಗಾರ್ತಿ ರಾಚೆಲ್ ಟ್ರೆನಾಮನ್(64) ವಿಲ್ಸನ್ ಅವರನ್ನು (46) ರನ್ ಗಳಿಸಿ ಉತ್ತಮ ಆರಂಭ ಒದಗಿಸಿದರು. ಮಧ್ಯಮ ಕ್ರಮಾಂಕದಲ್ಲಿ ಅನಿಕಾ ಲಿಯರಾಯ್ಡ್(72), ಮ್ಯಾಡಿ ಡಾರ್ಕೆರ್ (68)ರನ್ ಗಳಿಸಿದರು. ಭಾರತ ಪರ ಸೈಮಾ ಠಾಕೋರ್ 2 ವಿಕೆಟ್ ಉರುಳಿಸಿದರು.

ಸಂಕ್ಷಿಪ್ತ ಸ್ಕೋರ್

ಮೊದಲ ಇನಿಂಗ್ಸ್: ಭಾರತ 'ಎ' ತಂಡ:89.1 ಓವರ್‌ಗಳಲ್ಲಿ 299 ಆಲೌಟ್. ರಾಘ್ವಿ ಬಿಸ್ಟ್ (93), ವಿಜೆ ಜೋಶಿತಾ (51); ಜಾರ್ಜಿಯಾ ಪ್ರೆಸ್ಟ್‌ವಿಡ್ಜ್ (3/37); ಮೈಟ್ಲಾನ್ ಬ್ರೌನ್ (3/65).

ಆಸ್ಟ್ರೇಲಿಯಾ 'ಎ' ತಂಡ: 76.2 ಓವರ್‌ಗಳಲ್ಲಿ 305 ಆಲೌಟ್. ಸಿಯಾನಾ ಜಿಂಜರ್ (103), ನಿಕೋಲ್ ಫಾಲ್ಟಮ್ (54); ಸೈಮಾ ಠಾಕೋರ್ (3/21), ರಾಧಾ ಯಾದವ್ (2/68)

ದ್ವಿತೀಯ ಇನಿಂಗ್ಸ್: ಭಾರತ 'ಎ': 81.4 ಓವರ್‌ಗಳಲ್ಲಿ 286 ಆಲೌಟ್. ರಾಘ್ವಿ ಬಿಸ್ಟ್ (86), ಶಫಾಲಿ ವರ್ಮಾ (52); ಆಮಿ ಎಡ್ಗರ್ (5/57), ಜಾರ್ಜಿಯಾ ಪ್ರೆಸ್ಟ್‌ವಿಡ್ಜ್ (3/47).

ಆಸ್ಟ್ರೇಲಿಯಾ 'ಎ':85.3 ಓವರ್‌ಗಳಲ್ಲಿ 283/4. ಅನಿಕಾ ಲಿರಾಯ್ಡ್ (72), ಮ್ಯಾಡಿ ಡಾರ್ಕೆ (68); ಸೈಮಾ ಠಾಕೋರ್ (2/63).

ಪ್ರಿಟೋರಿಯಾ ಕ್ಯಾಪಿಟಲ್ಸ್ ತಂಡಕ್ಕೆ ಗಂಗೂಲಿ ಕೋಚ್

ಸೆಂಚುರಿಯನ್: ದಕ್ಷಿಣ ಆಫ್ರಿಕಾ ಟ್ವೆಂಟಿ-20 ಕ್ರಿಕೆಟ್‌ನ ಫ್ರಾಂಚೈಸಿ ಪ್ರಿಟೋರಿಯಾ ಕ್ಯಾಪಿಟಲ್ಸ್ ತಂಡದ ಮುಖ್ಯ ಕೋಚ್ ಆಗಿ ಭಾರತ ಕ್ರಿಕೆಟ್ ತಂಡದ ಮಾಜಿ ನಾಯಕ, ಬಿಸಿಸಿಐ ಮಾಜಿ ಅಧ್ಯಕ್ಷ ಸೌರವ್ ಗಂಗೂಲಿ ಅವರು ನೇಮಕಗೊಂಡಿದ್ದಾರೆ.

ಸೆಂಚುರಿಯನ್ ಮೂಲದ ಪ್ರಿಟೋರಿಯಾ ಕ್ಯಾಪಿಟಲ್ಸ್, ಮುಂಬರುವ 2026ರ ಋತುವಿಗೆ ಮುನ್ನ ದಾದಾ ಅವರನ್ನು ಮುಖ್ಯ ತರಬೇತುದಾರರಾಗಿ ನೇಮಕ ಮಾಡಿದೆ. ಇಂಗ್ಲೆಂಡ್‌ನ ಮಾಜಿ ಆಟಗಾರ ಜಾನಥಾನ್ ಟ್ರಾಟ್ ಅವರ ಸ್ಥಾನವನ್ನು ಗಂಗೂಲಿ ತುಂಬಲಿದ್ದಾರೆ.

ಇದೇ ಮೊದಲ ಬಾರಿಗೆ ಕ್ರಿಕೆಟ್ ತಂಡವೊಂದರ ಮುಖ್ಯ ಕೋಚ್ ಹುದ್ದೆಯನ್ನು ಗಂಗೂಲಿ ವಹಿಸುತ್ತಿದ್ದಾರೆ. ಐಪಿಎಲ್‌ನಲ್ಲಿ 2018 ಹಾಗೂ 2019ರ ಅವಧಿಯಲ್ಲಿ ಡೆಲ್ಲಿ ಕ್ಯಾಪಿಟಲ್ಸ್ ತಂಡದ ನಿರ್ದೇಶಕರಾಗಿ ಕಾರ್ಯ ನಿರ್ವಹಿಸಿದ್ದರು.

ಡೆಲ್ಲಿ ಕ್ಯಾಪಿಟಲ್ಸ್ ತಂಡದ ಸಹ ಮಾಲೀಕತ್ವ ಹೊಂದಿರುವ ಜೆಎಸ್‌ಡಬ್ಲ್ಯು ಸಂಸ್ಥೆಯು, ಪ್ರಿಟೋರಿಯಾ ಕ್ಯಾಪಿಟಲ್ಸ್ ತಂಡದ ಮಾಲೀಕತ್ವವನ್ನು ಹೊಂದಿದೆ.

ಕಳೆದ ವರ್ಷವಷ್ಟೇ ಜೆಎಸ್‌ಡಬ್ಲ್ಯು ಸ್ಪೋರ್ಟ್ಸ್‌ನ ಕ್ರಿಕೆಟ್ ನಿರ್ದೇಶಕರಾಗಿ ಗಂಗೂಲಿ ನೇಮಕ ಗೊಂಡಿದ್ದರು.

2025ರ ಆವೃತ್ತಿಯಲ್ಲಿ ಕಳಪೆ ಪ್ರದರ್ಶನ ನೀಡಿದ್ದ ಪ್ರಿಟೋರಿಯಾ ಕ್ಯಾಪಿಟಲ್ಸ್ 10 ಪಂದ್ಯಗಳ ಪೈಕಿ ಎರಡರಲ್ಲಷ್ಟೇ ಗೆಲುವು ದಾಖಲಿಸಿತ್ತು. ಅಲ್ಲದೆ ಆರು ತಂಡಗಳ ಟಿ20 ಲೀಗ್‌ನಲ್ಲಿ ಐದನೇ ಸ್ಥಾನಕ್ಕೆ ತೃಪ್ತಿಪಟ್ಟುಕೊಂಡಿತ್ತು.

ಪ್ರೋ ಕಬಡ್ಡಿ ನಿಯಮ ಬದಲು: ಹೊಸ ಮಾದರಿ ಅಳವಡಿಕೆ

ಮುಂಬೈ: ಪ್ರೋ ಕಬಡ್ಡಿ ಲೀಗ್‌ನಲ್ಲಿ ಮಹತ್ವದ ಬದಲಾವಣೆಗಳನ್ನು ಮಾಡಿದೆ. ಈ ಬಾರಿ 8 ತಂಡಗಳಿಗೆ ಪ್ಲೇಆಫ್ ಆಡುವ ಅವಕಾಶವನ್ನು ಒದಗಿಸಲಾಗಿದೆ. ಈ ಮೊದಲು 6 ತಂಡಗಳಿಗೆ ಅವಕಾಶ ನೀಡಲಾಗಿತ್ತು. 12ನೇ ಆವೃತ್ತಿಯ ವೇಳೆ ಆಟದಲ್ಲಿ ಸ್ಪರ್ಧಾತ್ಮಕತೆ ಮತ್ತು ರೋಚಕತೆಯನ್ನು ಹೆಚ್ಚು ಮಾಡಲು ಪ್ಲೇಆಫ್ ಮಾದರಿಯಲ್ಲಿ ಬದಲಾವಣೆ ಮಾಡಿರುವುದಾಗಿ ತಿಳಿಸಲಾಗಿದೆ. ಈ ಬಾರಿ ಲೀಗ್ ಹಂತ ದಲ್ಲಿ ಒಟ್ಟು 108 ಪಂದ್ಯಗಳು ನಡೆಯಲಿದ್ದು, ಪ್ರತಿ ತಂಡವೂ 18 ಪಂದ್ಯ ಆಡಲಿದೆ.

ಎಲ್ಲಾ ಪಂದ್ಯಗಳಿಗೂ ಟೈ ಬ್ರೇಕರ್: ಪಿಕೆಎಲ್ 12ನೇ ಆವೃತ್ತಿ ಎಲ್ಲಾ ಲೀಗ್ ಹಂತದ ಪಂದ್ಯಗಳಿಗೆ ಗೋಲ್ಡನ್ ರೈಡ್ ಸ್ವರೂಪ ಸೇರಿ ಸಮಗ್ರ ಟಬ್ರೇಕರ್ ನಿಯಮ ಅಳವಡಿಸಲಾಗು ತ್ತದೆ. ಹೀಗಾಗಿ ಎಲ್ಲಾ ಪಂದ್ಯಗಳಲ್ಲೂ ಫಲಿತಾಂಶಗಳು ಬರಲಿವೆ.

ಸರಳ ಅಂಕಪಟ್ಟಿ: ಈ ಬಾರಿ ಗೆಲುವು ಮತ್ತು ಸೋಲಿಗೆ ಮಾತ್ರ ಅಂಕಗಳನ್ನು ನಿಗದಿಪಡಿಸ ಲಾಗುತ್ತಿದೆ. ಹೀಗಾಗಿ ಹೆಚ್ಚಿನ ಗೊಂದಲ ವನ್ನು ಇದು ತಪ್ಪಿಸುತ್ತದೆ. ಗೆದ್ದ ತಂಡಕ್ಕೆ 2 ಅಂಕ ಹಾಗೂ ಸೋತ ತಂಡಕ್ಕೆ ಯಾವುದೇ ಅಂಕ ದೊರೆಯುವುದಿಲ್ಲ.

ಪ್ಲೇ ಇನ್‌ಗಳ ಪರಿಚಯ: 12ನೇ ಆವೃತ್ತಿ ಯಲ್ಲಿ 8 ತಂಡಗಳಿಗೆ ಪ್ಲೇ ಆಫ್ ಅವಕಾಶ ನೀಡಿರುವುದರಿಂದ ಪ್ಲೇ ಇನ್ ಹಾಗೂ ಮಿನಿ ಕ್ವಾಲಿ ಕ್ವಾಲಿಫಯರ್ ಎಂಬ ಹಂತಗಳನ್ನು ಅಳವಡಿಸಲಾಗಿದೆ. 5ರಿಂದ 8ನೇ ಸ್ಥಾನದಲ್ಲಿರುವ ತಂಡಗಳು ಪ್ಲೇ ಇನ್ ಆಡಿದರೆ 3 ಮತ್ತು 4ನೇ ಸ್ಥಾನ ದಲ್ಲಿರುವ ತಂಡಗಳು ಮಿನಿ ಕ್ವಾಲಿಫಯರ್ ಆಡಲಿವೆ.

ಹೀಗಿರಲಿದೆ ಪ್ಲೇಆಫ್ ಮಾದರಿ

ಅಂಕಪಟ್ಟಿಯಲ್ಲಿ 5 ಮತ್ತು 8ನೇ ಸ್ಥಾನದಲ್ಲಿನ ತಂಡಗಳು ಮೊದಲ ಪ್ಲೇಇನ್ ಹಾಗೂ 6 ಮತ್ತು 7ನೇ ಸ್ಥಾನದಲ್ಲಿರುವ ತಂಡಗಳು 2ನೇ ಪ್ಲೇ ಇನ್‌ನಲ್ಲಿ ಆಡಲಿವೆ. ಇಲ್ಲಿ ಗೆದ್ದ ತಂಡಗಳು ಮೊದಲ ಎಲಿಮಿನೇಟರ್ ಆಡಲಿವೆ. 3 ಮತ್ತು 4ನೇ ಸ್ಥಾನದಲ್ಲಿರುವ ತಂಡಗಳು ಮಿನಿ ಕ್ವಾಲಿಫೈಯರ್ ಆಡಲಿದ್ದು, ಗೆದ್ದ ತಂಡ 3ನೇ ಎಲಿಮಿನೇಟರ್‌ಗೆ ಪ್ರವೇಶಿಸಲಿದೆ. ಸೋತ ತಂಡ 2ನೇ ಎಲಿಮಿನೇಟರ್ ಆಡಲಿದೆ. 2ನೇ ಎಲಿಮಿನೇಟರ್ ಹಾಗೂ ಮಿನಿ ಕ್ವಾಲಿಫೈಯರ್ ಗೆದ್ದ ತಂಡಗಳು 3ನೇ ಎಲಿಮಿನೇಟರ್ ಆಡಲಿದ್ದು, ಗೆದ್ದ ತಂಡ 2ನೇ ಕ್ವಾಲಿಫೈಯರ್ ಪ್ರವೇಶಿಸಲಿದೆ. 1, 2ನೇ ಸ್ಥಾನದಲ್ಲಿರುವ ತಂಡಗಳು ಮೊದಲ ಕ್ವಾಲಿಫೈಯರ್ ಆಡಲಿದ್ದು ಸೋತ ತಂಡ 2ನೇ ಕ್ವಾಲಿಫೈಯರ್ ಪ್ರವೇಶಿಸಿದರೆ ಗೆದ್ದ ತಂಡ ಫೈನಲ್‌ಗೇರಲಿದೆ.

ಬಸವಲಿಂಗ ಪಟ್ಟದ್ದೇವರ ಜನ್ಮದಿನ | ಸುದೈವಿ ಮಕ್ಕಳ ಜನ್ಮದಿನವನ್ನಾಗಿ ಘೋಷಿಸಲು ಭಕ್ತರ ಹಕ್ಕೊತ್ತಾಯ

ಅನಾಥರ ಪಾಲಿನ ಸಂತನಿಗೆ 75ರ ಸಂಭ್ರಮ

ತಮ್ಮ ಬದುಕನ್ನೇ ಸಮಾಜಕ್ಕೆ ಮುಡುಪಾಗಿಟ್ಟ ಬೀದರ ಜಿಲ್ಲೆಯ ಭಾಲ್ಕಿ ಹಿರೇಮಠ ಸಂಸ್ಥಾನದ ನಾಡೋಜ ಡಾ.ಬಸವಲಿಂಗ ಪಟ್ಟದ್ದೇವರು ಇಂದು (ಆ.25) 75ನೇ ವರ್ಷದ ಸಂಭ್ರಮದಲ್ಲಿದ್ದಾರೆ. ಅವರು ಕೈಗೊಂಡಿರುವ ಸಾಮಾಜಿಕ, ಶೈಕ್ಷಣಿಕ, ಧಾರ್ಮಿಕ, ಪ್ರಗತಿಪರ, ದಲಿತೋದ್ಧಾರಕ, ಅನಾಥ ಮಕ್ಕಳ ರಕ್ಷಕರಾಗಿ ಕೈಗೊಂಡಿರುವ ಕಾರ್ಯಗಳು ಅಸಂಖ್ಯ. ಅವರ ಮಾನವೀಯ, ಸಮಾಜಮುಖಿ ಕೆಲಸಗಳು ಸಮಾಜದ ಸರ್ವ ರಿಗೂ ಮಾದರಿ ಮತ್ತು ದಾರಿ ದೀಪ. ನೂರಾರು ಅನಾಥ ಮಕ್ಕಳ ಪಾಲಿಗೆ ಬೆಳಕಾದ ಅವರ ಜನ್ಮದಿನ ವನ್ನು ಸುದೈವಿ (ಅನಾಥ) ಮಕ್ಕಳ ಜನ್ಮದಿನವನ್ನಾಗಿ ಘೋಷಿಸಬೇಕೆನ್ನುವುದು ಭಕ್ತರ ಆಗ್ರಹ.

ಬೀದರ್: ಬಸವಲಿಂಗ ಪಟ್ಟದ್ದೇವರ ಮಾನವೀಯ, ಸಮಾಜಮುಖಿ, ಶೈಕ್ಷಣಿಕ ಕಾರ್ಯಗಳು ಸಮಾಜದ ಎಲ್ಲರಿಗೂ ಮಾದರಿ. ಸರಕಾರ ಆ.25ರಂದು ಸುದೈವಿ (ಅನಾಥ) ಮಕ್ಕಳ ಜನ್ಮದಿನವನ್ನಾಗಿ ಘೋಷಿಸಬೇಕು. ಬೀದರ ಜಿಲ್ಲೆಯ ಭಾಲ್ಕಿ ಹಿರೇಮಠ ಸಂಸ್ಥಾನದ ನಾಡೋಜ ಡಾ.ಬಸವಲಿಂಗ ಪಟ್ಟದ್ದೇವರು ತಮ್ಮ ಜೀವನದುದ್ದಕ್ಕೂ ಕೈಗೊಂಡಿರುವ ಸಾಮಾಜಿಕ, ಶೈಕ್ಷಣಿಕ, ಧಾರ್ಮಿಕ, ಪ್ರಗತಿಪರ, ದಲಿತೋದ್ಧಾರಕ, ಅನಾಥ ಮಕ್ಕಳ ರಕ್ಷಕರಾಗಿ ಕೈಗೊಂಡಿರುವ ಅಸಂಖ್ಯ ಮಾನವೀಯ, ರಚನಾತ್ಮಕ ಕಾರ್ಯಗಳು ಸಮಾಜದ ಸರ್ವರಿಗೂ ಮಾದರಿ ಮತ್ತು ದಾರಿ ದೀಪವಾಗಿವೆ.

ಬಸವಲಿಂಗ ಪಟ್ಟದ್ದೇವರು ಬಸವಾದಿ ಶರಣರು ತೋರಿರುವ ಮಾರ್ಗ ಮತ್ತು ತತ್ವಗಳಲ್ಲಿ ನಂಬಿಕೆ ಇಟ್ಟು, ಶರಣತತ್ವವನ್ನೇ ತಮ್ಮ ಉಸಿರಾಗಿಸಿಕೊಂಡು ಬದುಕುತ್ತಿರುವ ಮಹಾನ್ ಕರುಣಾಮಯಿ, ಹೃದಯವಂತ ಶ್ರೇಷ್ಠ ಸ್ವಾಮೀಜಿ. ಅವರು ಹಿರೇಮಠದ ಪೀಠಾಧಿಪತಿ ಆದಾಗಿನಿಂದ ತಮ್ಮ ಎಪ್ಪತ್ತೈದನೇ ವರ್ಷದುದ್ದಕ್ಕೂ ಕೈಗೊಂಡಿರುವ ಕಾರ್ಯಗಳು ಅಸಂಖ್ಯ.

ಅವರ ಪ್ರತಿಯೊಂದು ಕೆಲಸಗಳು ಸಮಾಜಮುಖಿ ಆಗಿವೆ. ಶೈಕ್ಷಣಿಕ ಚಿಂತಕರಾಗಿ ನಮ್ಮ ಭಾಗದಲ್ಲಿ ಅವರು ಕೈಗೊಂಡಿರುವ ಶೈಕ್ಷಣಿಕ ಕ್ರಾಂತಿ ನಮ್ಮ ಭಾಗದ ಕಡೆ ಎಲ್ಲರೂ ಚಿತ್ತವಿಟ್ಟು ನೋಡುವಂತಾಗಿವೆ. ಅನಾಥ, ನಿರ್ಗತಿಕ ಮಕ್ಕಳ ಪಾಲನೆ, ಪೋಷಣೆ ಮತ್ತು ಈ ಮಕ್ಕಳ ಬದುಕು ರೂಪಿಸಲು ಅವರು ಪಟ್ಟಿರುವಂತಹ ಪರಿಶ್ರಮ ಜಗ ಮೆಚ್ಚುವಂತಹದ್ದು.

ಹೆತ್ತವರು, ಸಮಾಜ ಯಾವ ಮಕ್ಕಳನ್ನು ಬೇಡವೆಂದು ತಿಪ್ಪೆಗುಂಡಿ, ದೇವಾಲಯ, ರಸ್ತೆ ಅಕ್ಕಪಕ್ಕ ಸೇರಿದಂತೆ ಇತರ ಸ್ಥಳಗಳಲ್ಲಿ ಎಸೆದ ನವಜಾತ ಶಿಶುಗಳನ್ನು ಡಿಸಿಪಿಒ ಅವರು ಹಿರೇಮಠ ಸಂಸ್ಥಾನದ ಸ್ವದೇಶಿ ದತ್ತು ಕೇಂದ್ರಕ್ಕೆ ನಿಯಮಾನುಸಾರ ಒಪ್ಪಿಸಿದ ಮಕ್ಕಳಿಗೆ ತಮ್ಮಲ್ಲಿರುವ ಇರುವಷ್ಟು ದಿನ ಅನ್ನ ಆಶ್ರಯ, ಗುಣಾತ್ಮ ಕ ಶಿಕ್ಷಣ ನೀಡುವ ಮೂಲಕ ಸುಂದರ ಬದುಕು ರೂಪಿಸುತ್ತಿದ್ದಾರೆ. ಬದುಕು ರೂಪಿಸುವುದೇ ನಿಜವಾದ ಮಾನವೀಯ ಕಾರ್ಯ. ಇದೇ ಶರಣ ಧರ್ಮ ಎಂದು ಅರಿತ ಬಸವಲಿಂಗ ಪಟ್ಟದ್ದೇವರು, ಮಕ್ಕಳ ಬಾಳಿನಲ್ಲಿ ಯಾವತ್ತೂ ನಾನು ಅನಾಥ ಎಂಬ ಭಾವ ಬರಬಾರದೆಂದು ಪ್ರತಿವರ್ಷ ತಮ್ಮ ಜನ್ಮದಿನವನ್ನು ಸುದೈವಿ (ಅನಾಥ) ಮಕ್ಕಳ ಜನ್ಮದಿನವಾಗಿ ಆಚರಿಸುವ ಮೂಲಕ ಸಮಾಜಕ್ಕೆ ಉತ್ತಮ ಸಂದೇಶ ರವಾನಿಸಿದ್ದಾರೆ.

ಕಾರಾ ಗೈಡ್ ಲೈನ್ಸ್ ಪ್ರಕಾರ ಹಾಗೂ ದತ್ತು ಪ್ರಕ್ರಿಯೆ ನಿಯಮಗಳ ಪ್ರಕಾರ ಸ್ವದೇಶಿ ದತ್ತು ಕೇಂದ್ರದಲ್ಲಿನ ಸುಮಾರು ನೂರು ಮಕ್ಕಳನ್ನು ಅರ್ಹ ಪೋಷಕರಿಗೆ ನ್ಯಾಯಾಧೀಶರ ಹಾಗೂ ಜಿಲ್ಲಾಧಿಕಾರಿ ಮುಖಾಂತರ ನೀಡಿರುವುದು ವಿಶೇಷ. ಅದೇ ರೀತಿಯಾಗಿ ವಿಶೇಷಚೇತನ ಮಕ್ಕಳ ಉಪಚಾರದ ಜತೆಗೆ ವಿಶೇಷ ಬುದ್ಧಿಮಾಂದ್ಯ ಮಕ್ಕಳ ವ್ಯಕ್ತಿತ್ವ ವಿಕಸನಕ್ಕೆ ಸಹಕರಿಸುವ ನಿಟ್ಟಿನಲ್ಲಿ ಬೆಂಗಳೂರಿನ ಖ್ಯಾತ ಮನೋವೈದ್ಯ ಸಿ.ಆರ್.ಚಂದ್ರಶೇಖರ್ ಅವರಿಂದ ಸಕಾಲದಲ್ಲಿ ಆಪ್ತ ಸಮಾಲೋಚನೆ ಮಾಡಿಸುತ್ತಿರುವ ಕಾರ್ಯ ಅತ್ಯಂತ ಮಹತ್ವದ್ದು.

ಸುದೈವಿ ಮಗು ದಿವ್ಯಾಂಜಲಿ ಝೀ ಟಿವಿಯ ಮಹಾನಟಿ ಸ್ಪರ್ಧೆಗೆ ಆಯ್ಕೆ ಆಗುವುದರ ಮೂಲಕ ಪಟ್ಟದ್ದೇವರ ಮಾನವೀಯ, ಸಾಮಾಜಿಕ ಕಾರ್ಯ ಎಂತಹವು ಎನ್ನುವುದಕ್ಕೆ ಅವಳೇ ತಾಜಾ ನಿದರ್ಶನ ಆಗಿದ್ದಾಳೆ. ಮತ್ತು ಅವಳೇ ತನ್ನ ಜೀವನ ಅನುಭವದ ಮಾತುಗಳ ಮೂಲಕ ಅವಳ ಬದುಕು ವ್ಯಕ್ತಿತ್ವ ಜೀವನ ರೂಪಿಸುವಲ್ಲಿ ಬಸವಲಿಂಗಪಟ್ಟದೇವರ ಮಾನವೀಯ ಸಾಮಾಜಿಕ ಶೈಕ್ಷಣಿಕ ಸಾಂಸ್ಕೃತಿಕ ಕಾರ್ಯಗಳು ಯಾವ ರೀತಿಯಾಗಿ ಅವಳ ಸಹಾಯಕ್ಕೆ ನೆರವಿಗೆ ನಿಂತಿವೆ ಎನ್ನುವುದನ್ನು ಅವಳೇ ತನ್ನ ಮಾತಿನಲ್ಲಿ ಇಡೀ ನಾಡಿಗೆ ಪರಿಚಯ ಮಾಡಿಕೊಟ್ಟಿದ್ದಾಳೆ.

ಬಸವಲಿಂಗ ಪಟ್ಟದ್ದೇವರ ಸಾಮಾಜಿಕ, ಮೇರು ವ್ಯಕ್ತಿತ್ವದ ಮಾನವೀಯ, ಶೈಕ್ಷಣಿಕ, ಸಾಮಾಜಿಕ, ಧಾರ್ಮಿಕ ದಲಿತೋದ್ಧಾರಕ, ಪ್ರಗತಿಪರ ಕಾರ್ಯಗಳಿಗೆ ಗುಲ್ಬರ್ಗ ವಿವಿ ಗೌರವ ಡಾಕ್ಟರೇಟ್, ಸರಕಾರದಿಂದ ರಾಜ್ಯೋತ್ಸವ ಪ್ರಶಸ್ತಿ, ರಾಷ್ಟ್ರೀಯ ಬಸವ ಪುರಸ್ಕಾರ, ಕರ್ನಾಟಕ ಏಕೀಕರಣ ಪ್ರಶಸ್ತಿ, ಅನೇಕ ಸಂಘ, ಸಂಸ್ಥೆಗಳ ಪ್ರಶಸ್ತಿಗಳು ಬಂದಿವೆ.

ಹಂಪಿ ಕನ್ನಡ ವಿಶ್ವವಿದ್ಯಾಲಯ ಆವರಣದಲ್ಲಿ ನುಡಿ ಹಬ್ಬ ಕಾರ್ಯಕ್ರಮದಲ್ಲಿ ಡಾ. ಬಸವಲಿಂಗ ಪಟ್ಟದೇವರಿಗೆ ಕುಲಪತಿಗಳಾದ ಡಾ.ಎಂ.ಸಿ. ಸುಧಾಕರ ಅವರು ನಾಡೋಜ ಪ್ರಶಸ್ತಿ ಪ್ರದಾನ ಮಾಡಿದ ಸಂದರ್ಭ.

ಈಚೆಗೆ ಹಂಪಿ ವಿಶ್ವವಿದ್ಯಾಲಯವೂ ಕೂಡ ಬಸವಲಿಂಗ ಪಟ್ಟದ್ದೇವರಿಗೆ ನಾಡೋಜ ಪ್ರಶಸ್ತಿ ಗೌರವ ನೀಡುವುದರ ಮೂಲಕ ಆ ಪ್ರಶಸ್ತಿಯ ಘನತೆಯನ್ನು ಇನ್ನಷ್ಟು ಎತ್ತರಕ್ಕೆ ಹೆಚ್ಚುವಂತೆ ಮಾಡಿದೆ ಎಂದರೆ ತಪ್ಪಾಗಲಿಕ್ಕಿಲ್ಲ. ಬಸವಲಿಂಗ ಪಟ್ಟದ್ದೇವರು ಬದುಕನ್ನು ಸಾರ್ಥಕಗೊಳಿಸುವ ನಿಟ್ಟಿನಲ್ಲಿ ಬದುಕಿರುವ ರೀತಿ ಸಮಾಜದ ಸರ್ವರಿಗೂ ಮಾದರಿ ಮತ್ತು ದಾರಿ ದೀಪವಾಗಿದೆ.

-ಶಶಿಧರ ಕೋಸಂಬೆ ರಾಜ್ಯ ಮಕ್ಕಳ ಹಕ್ಕುಗಳ ರಕ್ಷಣಾ ಆಯೋಗದ ಸದಸ್ಯರು, ಬೆಂಗಳೂರು

ಹಾರಕೂಡ ಹಿರೇಮಠದಿಂದ ಡಾ.ಬಸವಲಿಂಗ ಪಟ್ಟದೇವರಿಗೆ ಬಸವ ಭಾನು ಪುರಸ್ಕಾರ ನೀಡಿ ಗೌರವಿಸಿದ ಚಿತ್ರ.

ನದಿಗೆ ಅಪಾರ ಪ್ರಮಾಣದ ನೀರು ಬಿಡುಗಡೆ | ಸ್ಮಾರಕಗಳು ಜಲಾವೃತ

ಹಂಪಿ ಸುತ್ತ ಪ್ರವಾಸಿಗರ ದಂಡು

ಅನಂತ ಪದ್ಮನಾಭ ರಾವ್, ಹೊಸಪೇಟೆ

ಒಂದೆಡೆ ಸರಣಿ ರಜೆಯಿಂದ ಹಂಪಿ, ಡ್ಯಾಂ ವೀಕ್ಷಿಸಲು ಪ್ರವಾಸಿಗರ ತಂಡೋಪ ತಂಡವಾಗಿ ಬರುತ್ತಿದ್ದರೆ, ಮತ್ತೊಂದೆಡೆ ಮೇಲ್ಭಾಗ ಹಾಗೂ ಜಲಾಶಯ ಸುತ್ತಮುತ್ತಲಿನ ಪ್ರದೇಶಗಳಲ್ಲಿ ನಿರಂತರ ಮಳೆಯಾಗುತ್ತಿದೆ. ಇದರಿಂದ ಜಲಾಶಯದಿಂದ ಅಪಾರ ಪ್ರಮಾಣದಲ್ಲಿ ನದಿಗೆ ನೀರು ಬಿಡುಗಡೆ ಮಾಡಲಾಗಿದ್ದು ಹಂಪಿ ಸ್ಮಾರಕಗಳು ಜಲಾವೃತಗೊಂಡಿವೆ.

ಹಂಪಿಗೆ ಪ್ರವಾಸಿಗರ ದಂಡು: ಹೌದು, ಸರಣಿ ರಜೆ ಹಿನ್ನೆಲೆ ದಕ್ಷಿಣ ಕಾಶಿ, ವಿಶ್ವವಿಖ್ಯಾತ ಹಂಪಿಗೆ ಪ್ರವಾಸಿಗರ ದಂಡು ಹರಿದು ಬಂದಿದೆ. ವಿಜಯನಗರ ಜಿಲ್ಲೆ ಹೊಸಪೇಟೆ ತಾಲೂಕಿನ ವಿಶ್ವಪ್ರಸಿದ್ಧ ಹಂಪಿ ಕಳೆದೆರಡು ದಿನಗಳಿಂದ ಪ್ರವಾಸಿ ಗರಿಂದ ತುಂಬಿ ತುಳುಕುತ್ತಿದೆ. ವಿಜಯ-ವಿಠ್ಠಲ ದೇಗುಲ, ಕಲ್ಲಿನ ತೇರು ಹಾಗೂ ವಿರೂಪಾಕ್ಷೇಶ್ವರ ದೇವಸ್ಥಾನದ ಬಳಿ ಸಹಸ್ರಾರು ಪ್ರವಾಸಿಗರು ಸೇರಿದ ಕಾರಣ ಹೆಚ್ಚಿನ ಜನದಟ್ಟಣೆಯಿಂದ ಹಲವೆಡೆ ಟ್ರಾಫಿಕ್ ಕಿರಿಕಿರಿ ಉಂಟಾಗಿತ್ತು.

ಸರಣಿ ರಜೆ ಕಾರಣ: ಹಂಪಿಯ ಸ್ಮಾರಕಗಳ ಬಳಿ ಜನಸಾಗರವೇ ಹರಿದು ಬಂದಿ ದರೂ ಬ್ಯಾಟರಿ ಚಾಲಿತ ವಾಹನಗಳಿಲ್ಲದೇ ಪ್ರವಾಸಿಗರು ಪರದಾಡಿದರು. ಇತ್ತ ಸರಣಿ ರಜೆ ಹಿನ್ನೆಲೆ ಹೆಚ್ಚಿನ ಸಂಖ್ಯೆಯಲ್ಲಿ ಪ್ರವಾಸಿಗರು ಬಂದಿದ್ದರಿಂದ ಜನಸಂದಣಿ ನಿಯಂತ್ರಿಸಲು ಪೊಲೀಸರ ಹರಸಾಹಸಪಟ್ಟರು.

ಅಪಾರ ಒಳ ಹರಿವು: ಮಲೆನಾಡು ಸೇರಿದಂತೆ ತುಂಗಭದ್ರಾ ಜಲಾನಯನ ಪ್ರದೇಶದಲ್ಲಿ ಭಾರಿ ಮಳೆಯಾಗುತ್ತಿರುವ ಹಿನ್ನೆಲೆ ತುಂಗಭದ್ರಾ ಜಲಾಶಯಕ್ಕೆ ಅಪಾರ ಪ್ರಮಾಣದ ನೀರು ಹರಿದು ಬರುತ್ತಿದೆ. ಸದ್ಯ ಜಲಾಶಯಕ್ಕೆ 75,500 ಕ್ಯೂಸೆಕ್ ಒಳಹರಿವು ಇರುವುದರಿಂದ ಜಲಾಶಯದಿಂದ 86,631 ಕ್ಯೂಸೆಕ್ ನೀರು ಬಿಡುಗಡೆ ಮಾಡಲಾಗಿದೆ. 105 ಟಿಎಂಸಿ ನೀರು ಸಂಗ್ರಹ ಸಾಮರ್ಥ್ಯದ ಜಲಾಶಯದಲ್ಲಿ ಸದ್ಯ 77 ಟಿಎಂಸಿ ಸಂಗ್ರಹವಾಗಿದೆ.

ಸಾಲು ರಜೆ, ಪ್ರವಾಸಿಗರ ಹಂಪಿಯತ್ತ

ಸತತ ರಜೆಯಿದ್ದ ಕಾರಣ ಹಂಪಿ ಸುತ್ತಮುತ್ತಲಿನ ಪ್ರದೇ ಶದಲ್ಲಿನ ಪ್ರವಾಸಿ ತಾಣಗಳ ವೀಕ್ಷಿಸಲು ಬಂದಿದ್ದೇವೆ. ನದಿಗೆ ನೀರು ಹರಿಸಿರುವುದು ನೋಡುವುದೇ ಒಂದು ಚೆಂದ. ತುಂಗಭದ್ರಾ ನದಿ ಮೈದುಂಬಿ ಹರಿಯುತ್ತಿದ್ದಾಳೆ. ಇಂತಹ ಸೊಬಗನ್ನು ನೋಡುವುದೇ ವಿಶಿಷ್ಟ ಅನುಭೂತಿ ನೀಡಲಿದೆ. ಮಳೆಯಲ್ಲಿಯೂ ಹಂಪಿ ಸ್ಮಾರಕಗಳ ಸೊಬಗು ಕಾಣುವುದೇ ಒಂದು ಬಗೆ ಖುಷಿ ಎಂದು ಸಂತೋಷ ಹಂಚಿಕೊಳ್ಳುತ್ತಿದ್ದಾರೆ ಹೊರ ಜಿಲ್ಲೆಗಳಿಂದ ಬಂದ ಪ್ರವಾಸಿಗರು.

1 ಲಕ್ಷ ಕ್ಯೂಸೆಕ್ ನೀರು ನದಿಗೆ: ಕಳೆದ ವರ್ಷ ಕೊಚ್ಚಿ ಹೋಗಿದ್ದ 19ನೇ ಗೇಟ್‌ಗೆ ತಾತ್ಕಾಲಿಕ ಗೇಟ್ ಅಳವಡಿಕೆ ಮಾಡಿರೋದ್ರಿಂದ ಮುಂಜಾಗ್ರತಾ ಕ್ರಮವಾಗಿ 80 ಟಿಎಂಸಿ ನೀರು ಮಾತ್ರ ಶೇಖರಿಸಿಟ್ಟುಕೊಳ್ಳಲು ಟಿಬಿ ಬೋರ್ಡ್ ತೀರ್ಮಾನಿಸಿದೆ. ತುಂಗಾ, ಭದ್ರಾ, ಹಾಗೂ ವರದಾ ನದಿಗಳಿಂದ ಅಪಾರ ಪ್ರಮಾಣದ ನೀರು ಜಲಾಶಯಕ್ಕೆ ಹರಿದು ಬರುತ್ತಿದೆ. ಹೀಗಾಗಿ ಸಂಜೆ ವೇಳೆಗೆ 1 ಲಕ್ಷ ಕ್ಯೂಸೆಕ್ ನೀರು ನದಿಗೆ ಬಿಡುಗಡೆ ಮಾಡುವ ಸಾಧ್ಯತೆ ಇದೆ.

ಸ್ಮಾರಕಗಳು ಮುಳುಗಡೆ: ಹಂಪಿಯ ಕೆಲ ಸ್ಮಾರಕಗಳು ಮುಳುಗಡೆಯಾಗಲಿವೆ. ಅಲ್ಲದೇ ಬಳ್ಳಾರಿ-ಗಂಗಾವತಿ ಸಂಪರ್ಕ ಕಲ್ಪಿಸುವ ಕಂಪ್ಲಿ ಸೇತುವೆ ಕೂಡಾ ಮುಳುಗಡೆಯ ಭೀತಿಯಲ್ಲಿದೆ. ಇನ್ನೂ ನದಿಗೆ ಹೆಚ್ಚಿನ ಪ್ರಮಾಣದ ನೀರು ಬಿಡುಗಡೆ ಮಾಡಿದರೆ ಪ್ರವಾಹ ಎದುರಾಗುವ ಆತಂಕ ಶುರುವಾಗಿದೆ. ಪ್ರವಾಹದ ಭೀತಿ ಎದುರಾಗವುದರಿಂದ ನದಿ ತೀರಕ್ಕೆ ಜನ ಜಾನುವಾರು ತೆರಳದಂತೆ ಟಿಬಿ ಬೋರ್ಡ್ ಅಧಿಕಾರಿಗಳು ನದಿ ಪಾತ್ರದ ಜನರಿಗೆ ಎಚ್ಚರಿಕೆ ನೀಡಿದ್ದಾರೆ.